'ವಂದೇಮಾತರಂ'

ನವ ಭಾರತ

(ಇದರಲ್ಲಿ 'ಕಾಂಗ್ರೆಸ್ ಬುಲೆಟಿನ್' ಸಮಾವೇಶವಾಗಿದೆ)

ಉಜ್ವಲ · ರಾಷ್ಟ್ರೀಯ ವಾರ ಪತ್ರಿಕೆ.

ವಾರ್ಷಿಕ ಪೋಷಕ ದ್ರವ್ಯ.
ರಾಜ ಪೋಷಕರು, 10–0–0
ಪೋಷಕರು, 5–0–0

ಸಂಪಾದಕ:— ಟಿ. ಬಿ. ಕೇಶವರಾವ್.

ವಾರ್ಷಿಕ ಚಂದಾ
ಪರಸ್ಥಳದವರಿಗೆ, 2–0–0
ಬಳ್ಳಾರಿಯವರಿಗೆ, 1–8–0

ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ.

ಸಂಚಿಕೆ ೧| ಬಳ್ಳಾರಿ, ಫೆಬ್ರವರಿ 18 ನೇ ಶನಿವಾರ 1939. |ಪ್ರತಿ ೩೦

[ಶ್ರೀ ಸುಭಾಸ ಚಂದ್ರ ಬೋಸರು]

ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಗೆ ಈ ವರ್ಷ ಆರಿಸಿಬಂದ ಶ್ರೀ ಸುಭಾಸಚಂದ್ರ ಬೋಸರು ಮಹಾತ್ಮ ಗಾಂಧಿಯವರೊಡನೆ ಎರಡು ದಿನಗಳು ಸಂಭಾಷಿಸಿ ಕಲ್ಕತ್ತೆಗೆ ತೆರಳಿದರು. ರಾಜಕೀಯ ವಾತಾವರಣದಲ್ಲಿ ಶಾಂತಿಯುಂಟಾಗಿದೆ. 22 ನೇ ತಾ॥ ವಾರ್ಧಾದಲ್ಲಿ ವರ್ಕಿಂಗ್ ಕಮಿಟೀ ಸಭೆಯು ಕೂಡಿದಾಗ ಜನತೆಗೆ ಹೆಚ್ಚಿನ ವಿವರಗಳು ತಿಳಿಯುವು

ಆಯುರ್ವೇದ ಪ್ರಚಾರ

ಕಾಯಕಲ್ಪ ನಿಪುಣರಾದ ತಪಶೀಬಾಬಾರವರು ಬರಲಿಲ್ಲ

16ನೇ ತಾ॥ ಸಾಯಂಕಾಲ ವಾರ್ತಾಲಾ ಭವನದಲ್ಲಿ ಮದ್ರಾಸ್ ಮದ್ಯನಿಷೇಧ ಕಾಯ್ದೆಯ ಕೆಲ ಭಾಗಗಳನ್ನು ನಿಷೇಧಿಸಲು, ಡಾ॥ ಶ್ರೀ ನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಆಯುರ್ವೇದಾಭಿಮಾನಿಗಳ ಸಭೆಯು ನೆರೆದಿದ್ದಿತು. ಪ· ಮಾಲವೀಯರ ಮೇಲೆ ಕಾಯಕಲ್ಪ ಪ್ರಯೋಗವನ್ನು ನಡೆಸಿ ಯಶಸ್ವಿಗಳಾದ ತಪಶೀಬಾಬಾರವರು ಬರುವರೆಂದು ನೋಟೀಸುಗಳಲ್ಲಿ ಪ್ರಕಟವಾಗಿದ್ದ ಕಾರಣ ಬಹುಜನರು ನೆರೆದಿದ್ದರು. ಆದರೆ ಅವರು ಬರಲಿಲ್ಲ. ಚಾಲಕರು ಸರಿಯಾಗಿ ತಿಳಿದು ಪ್ರಕಟಿಸಬೇಕಾಗಿತ್ತು. ಲಾಹೋರಿನ ಪಂಡಿತ ಶಿವ ಶರ್ಮ, ಕಲ್ಕತ್ತೆಯ ಮುಖರ್ಜಿ, ಪೂನಾದ ಪರಂಜಪೆ, ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರಾದ ಪಿ. ವರದರಾಜುಲು ನಾಯ್ಡು ಇವರು ಮದ್ಯನಿಷೇಧ ಕಾಯ್ದೆಯನ್ನು ನಿಬಂಧನೆಗಳಿಂದ ಅಸವಾರಿಷ್ಟ ಔಷಧಗಳಿಗೆ ತೊಂದರೆಯಾಗುವ ಅಂಶಗಳನ್ನು ಹೇಳಿ ಈ ಅರ್ಥದ ಕೆಲ ನಿರ್ಣಯಗಳನ್ನು ಮಾಡಿದರು. ಭಾಷಣಕಾರರು ಕಾಂಗ್ರೆಸ್ ಮಂತ್ರಿಗಳನ್ನು ಕಟುತರವಾಗಿ ಟೀಕಿಸಿದರು. ತಮ್ಮ ಆಶಯವು ನೆರವೇರದಿದ್ದರೆ ಸತ್ಯಾಗ್ರಹದ ಬೆದರಿಕೆ ಹಾಕಿದರು.

ಕಾನ್ಪುರದಲ್ಲಿ ಹಿಂದೂ-ಮುಸಲ್ಮಾನರ ಭಯಂಕರ ಹೊಡೆದಾಟ

11ನೇ ತಾ॥ ಸಾಯಂಕಾಲ ಹಿಂದೂಗಳ ಮದುವೆಯ ಮೆರವಣಿಗೆಯು ತಡೆಯಲ್ಪಟ್ಟು ಆ ಸಾಯಂಕಾಲದಿಂದ ಭಯಂಕರ ದೊಂಬಿಗಾರಂಭವಾಯಿತು. ಸರ್ಕಾರವವರು ಕೂಡಲೇ ದಂಗೆಯನ್ನಡಗಿಸಲು ಯತ್ನಿಸಿ ನೂರಾರು ಜನರನ್ನು ಬಂಧಿಸಿದರು. ಹಿಂದೂ-ಮುಸಲ್ಮಾನರ ಪರಸ್ಪರ ಅಂಗಡಿ ಮನೆಗಳನ್ನು ಸುಡುತ್ತಲೂ ಜನರನ್ನು ಕೊಲ್ಲುತ್ತಲೂ ಇರುವರು. ಇದು ಬಹುಮಟ್ಟಿಗೆ ತಹಬಂದಿಗೆ ಬಂದಿದೆ. ಆದರೂ ಭಯಾನಕ ವಾತಾವರಣವು ತೊಲಗಿಲ್ಲ. ಇಲ್ಲಿಯವರೆಗೆ 40 ಜನರು ಸತ್ತಿರುವರು. 350 ಜನರಿಗೆ ಘಾಯವಾಗಿದೆ

ಬಳ್ಳಾರಿ ಸಮಾಚಾರಗಳು.

ಹಿಂದೀ ಪರೀಕ್ಷೆಗಳು

ಫೆಬ್ರವರಿ 12 ರಲ್ಲಿ ನಡೆದ ಮದ್ರಾಸಿನ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಸಾಧಾರಣಿಕ, ಮಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳಿಗೆ ಬಳ್ಳಾರಿಗೆ ಕೇಂದ್ರದಿಂದ 57 ವಿದ್ಯಾರ್ಥಿಗಳೂ, 16 ವಿದ್ಯಾರ್ಥಿನಿಯರೂ ಕೂತಿದ್ದರು.

ತಾಲೂಕು ಕಾಂಗ್ರೆಸ್ ಪ್ರಚಾರ ಕಾರ್ಯಕ್ಕೆ ದ್ರವ್ಯ ಸಹಾಯ

ಶ್ರೀಮಾನ್ ಸತ್ಯನಾಲ ವೀರಣ್ಣನವರು ತಮ್ಮ ಮಗಳ ವಿವಾಹ ಕಾಲದಲ್ಲಿ 20 ರೂ. ಗಳನ್ನೂ, ಅವರ ಬೀಗರಾದ ಶ್ರೀ ದೊಂತಿ ಭೀಮಯ್ಯ ಶೆಟ್ಟಿಯವರು 30 ರೂ. ಗಳನ್ನು ತಾಲ್ಲೂಕ್ ಕಾಂಗ್ರೆಸ್ ಪ್ರಚಾರ ಕಾರ್ಯಕ್ಕೆ ಕೊಟ್ಟಿದ್ದರು.

ಸರ್ಕಾರ್ ಜಿಲ್ಲೆಗಳ ಬಿರುಗಾಳಿ ಪೀಡಿತರಿಗೆ ಸಹಾಯ

ಬಳ್ಳಾರಿ ಜಿಲ್ಲಾ ಬರಗಾಲ ನಿವಾರಣಾ ಸಮಿತಿಯವರು, ತಮ್ಮಲ್ಲು ಕದ ಹಣದಿಂದ ಸರ್ಕಾರ ಜಿಲ್ಲೆಗಳ ಬಿರುಗಾಳಿಯಿಂದ ಕಷ್ಟ ನಷ್ಟ ಹೊಂದಿದವರಿಗೆ 150 ದ್ರವ್ಯ ಸಹಾಯ ಮಾಡಿದರು.

ಬಳ್ಳಾರಿ ಮುನಿಸಿಪಾಲಿಟಿಯ ಶಾಲೆಗಳಲ್ಲಿ ಹರಿಜನರಿಗೆ ಉಚಿತ ವಿದ್ಯಾಭ್ಯಾಸ.

ಬಳ್ಳಾರಿ ಜಿಲ್ಲಾ ಹರಿಜನ ಸಲಹೆ ಕಮಿಟಿಯಲ್ಲಿ ನಿಶ್ಚಯವಾದ ನಿರ್ಣಯದಂತೆ ಜಿಲ್ಲಾ ಕಲೆಕ್ಟರವರು ಹರಿಜನ ಬಾಲಕರಿಗೆ ಮ್ಯು. ಹೈಸ್ಕೂಲಿನಲ್ಲಿ ಉಚಿತ ವಿದ್ಯಾಭ್ಯಾಸವನ್ನು ಕೊಡಬೇಕೆಂದು ಬರೆದಿದ್ದರು. 14 ನೇ ತಾರೀಖು ಕೂಡಿದ ಮುನಸಭೆಯಲ್ಲಿ ಕಲೆಕ್ಟರವರ ಪತ್ರವು ಪರಿಶೀಲಿಸಲ್ಪಟ್ಟು ಹರಿಜನ ಬಾಲಕರಿಗೆ 1939-40ರಲ್ಲಿ ಉಚಿತ ವಿದ್ಯಾಭ್ಯಾಸವನ್ನು ಕೊಡಬೇಕೆಂಬ ನಿರ್ಣಯವು ಸ್ವೀಕೃತವಾಯಿತು.

ಬಳ್ಳಾರಿ ಜಿಲ್ಲೆಯಲ್ಲಿ ಗ್ರಾಮೋದ್ಯೋಗ ಕೇಂದ್ರ

ಭಾರದ್ವಾಜ ಆಶ್ರಮದ ಸ್ಥಾಪನೆ.

ಬಳ್ಳಾರಿ ಜಿಲ್ಲಾ ಆದವಾನಿ ತಾಲೂಕಿನ ದೊಡ್ಡ ಕಡಬೂರು ಎಂಬ ಗ್ರಾಮದಲ್ಲಿ ವಿವಿಧವಾದ ಗ್ರಾಮೋದ್ಯೋಗಗಳ ಕೇಂದ್ರವು ಪ್ರಾರಂಭವಾಗಲಿದೆ. ಅಲ್ಲಿ ಆಶ್ರಮವು ಸ್ಥಾಪಿತವಾಗಿ 27 ಎಕರೆ ಬಣಜ ಮಿನು ಮತ್ತು 3 ಎಕರೆ ನೀರಾವರಿ ಜಮೀನು ಕೆಲ ಮಹನೀಯರಿಂದ ಕೊಡಲ್ಪಟ್ಟಿದೆ. ಈ ಆಶ್ರಮಕ್ಕೆ ಶ್ರೀಮತಿ ರಾಮಲಿಂಗಮ್ಮ, ಎ. ವೆಂಕಟರೆಡ್ಡಿ ಮತ್ತು ಎಂ. ಭೀಮಸೇನರಾಯರು ಟ್ರಸ್ಟಿಗಳಾಗಿ ನಿರ್ವಹಿಸುವರು. ಆಶ್ರಮದ ಕಾರ್ಯವನ್ನು ನಡೆಸಲು 6 ಜನ ಡೈರೆಕ್ಟರುಗಳು ನಿಯಮಿತರಾಗಿರುವರು. ಈ ಕೆಳಗಿನ 4 ಜನ ಮಹನೀಯರು ತಮ್ಮ ಸಮ್ಮತಿಯನ್ನಿತ್ತಿರುವರು.

1. ಶ್ರೀ ಬೆಲ್ಲೋಣಿ ಭೀಮರಾಯರು, 2. ಎಚ್. ಸೀತಾರಾಮರೆಡ್ಡಿ, 3. ಶ್ರೀ ಲೋಕರೆಡ್ಡಿ, 4. ಡಾಕ್ಟರ್ ನಾಗನಗೌಡ.

ಶ್ರೀ ವಸುಸಾಲಪ್ಪ ಮತ್ತು ಕೋಸಿಗೆ ಹನುಮಪ್ಪ ನಾಯ್ಕರಿಗೆ ಆಹ್ವಾನಗಳು ಹೋಗಿವೆ.

ಈ ಭರದ್ವಾಜಾಶ್ರಮದಲ್ಲಿ ಅಖಿಲ ಭಾರತ ಚರಖಾ ಸಂಘ ಮತ್ತು ಗಾಂಧೀ ಸೇವಾ ಸಂಘದವರ ಕಾರ್ಯ ಪ್ರಣಾಲಿಯು ಅನುಸರಿಸಲ್ಪಟ್ಟು ಆಯಾ ಕಾರ್ಯಗಳು ಪ್ರಾರಂಭಿಸಲಾಗುವುವು ಇಲ್ಲಿಯೇ ಮದ್ರಾಸ್ ಸರ್ಕಾರದವರು ಒಂದು ಶಿಕ್ಷಣಕೇಂದ್ರವನ್ನು (ಗ್ರಾಮೋದ್ಯೋಗ) ತೆರೆಯಲಿರುವರು. ಅವರಿಗೆ ವೇತನವನ್ನು ಕೊಡಲಾಗುವುದು. ಚರಖಾ ಸಂಘದವರು ಪದ್ಯಕ್ಕೆ 300 ಚರಖಾಗಳನ್ನು ಹಾಕಲಿರುವರು 4500 ರೂ. ಬಂಡವಾಳವು ಇದಕ್ಕಾಗಿ ಕೊಡಲ್ಪಡುತ್ತದೆ ಆಂಧ್ರ ಸ್ವಾಂತಿಕ ಕಾಂಗ್ರೆಸ್ಸಿನವರ ಸಹಾಯವು ಬಯಲಿದೆ ಒಂದು ಭಾವಿಯನ್ನು ತೆಗೆಸಲು 900 ರೂ. ಮುಂಜೂರ ಮಾಡಿದ್ದಾರೆ. ಆಂಧ್ರ ಕರ್ನಾಟಕ ಭೇದವಿಲ್ಲದೆ ಎಲ್ಲರಿಗೂ ಶಿಕ್ಷಣಕ್ಕವಕಾಶವಿದೆ. ಆದರೆ ವೇತನವನ್ನು ನಿಯಮಿತ ಸಂಪೆಗೊಳಪಟ್ಟು ಕೊಡುವರು. ಮಾರ್ಚ್ ತಿಂಗಳು 1ನೇ ತಾರೀಖಿನಿಂದ ಕಾರ್ಯ ಪ್ರಾರಂಭವಾಗಲಿದೆ. ಆದವಾನಿ ನಗರದಿಂದ ದೊಡ್ಡ ಕಡಬೂರು 13 ಮೈಲುಗಳ ಅಂತರದಲ್ಲಿದೆ.

ಕುರುವತ್ತಿ ಜಾತ್ರೆ

ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲೂಕು ಕುರುವತ್ತಿಯಲ್ಲಿ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಜಾತ್ರೆ ಅನಂತರ ದಿನಗಳ ಸಂತೆ 21-2-39 ರಿಂದ 3-3-39 ರ ವರೆಗೂ ಜರುಗುವದು. ಸುಮಾರು 30000 ಜನರು, ಸಾವಿರಾರು ದನಗಳು ಸೇರುವರು. ಒಂದು ಕಮಿಟಿಯಿಂದ ಚುನಾಯಿಸಲ್ಪಡುವ ಆರೋಗ್ಯಕರವಾದ ಮತ್ತು ಬಲಿಷ್ಠವಾದ ಎತ್ತುಗಳಿಗೂ ಮತ್ತು ಆಕಳುಗಳಿಗೂ ಬಳ್ಳಾರಿ ಜಿಲ್ಲಾ ಬೋರ್ಡಿನಿಂದ ಈ ಕೆಳಗೆ ಕಂಡ ಪ್ರಕಾರ ಬೆಳ್ಳಿಯ ಪದಕಗಳು ಬಹುಮಾನವಾಗಿ 28-2-39ನೇ ದಿವಸ ಹಂಚಲ್ಪಡುವವು. ಆದ್ದರಿಂದ ಹೆಚ್ಚಾಗಿ ದನಗಳನ್ನು ಆ ಸಮಯಕ್ಕೆ ಪ್ರದರ್ಶನ ಮಾಡಲು ಏರ್ಪಾಟಾಗಿದೆ.

ಬೀಜದ ಹೋರಿ— ಹಳ್ಳಿಕಾರ
,, ಜವಾರಿ
ಆಕಳ
4 ವರ್ಷ ಕೆಳಗಿನ ಉತ್ತಮ ಜತೆ.
4 ವರ್ಷ ಮೇಲಿನ ಉತ್ತಮ ಜತೆ.

ಮುನಿಸಿಪಲ್ ನೌಕರರ ಸಂಬಳ ಕಡಿತ.

ಹೈಸ್ಕೂಲು ಉಪಾಧ್ಯಾಯರ ಮೊರೆ.

ಪುರಸಭೆ

ಈ ತಿಂಗಳು ೬-೭ನೇ ತಾ|| ಗಳಲ್ಲಿ ಪುರಸಭೆಯು ೧೯೩೯-೪೦ನೇ ವರ್ಷದ ಆಯ ವ್ಯಯ ಪಟ್ಟಿಯನ್ನು ವಿಮರ್ಶಿಸಲು ನೆರೆದಿದ್ದಿತು. ಪುರ ಸಭೆಯ ಸದ್ಯದ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕೆಂಬುದೇ ಎಲ್ಲಾ ಸದಸ್ಯರ ಇಚ್ಛೆಯಿದ್ದಿತು. ಆದರೆ ಅದನ್ನು ಯಾವರೀತಿಯಿಂದ ಮಾಡಬೇಕೆಂಬುದರ ಬಗ್ಗೆ ಮತಭೇದವಿದ್ದಿತು. ಆಯ ವ್ಯಯ ಪಟ್ಟಿಯಲ್ಲಿ ಸೂಚಿಸಿದ ಅಂಶಗಳಿಗೆ ಬೆಂಬಲವನ್ನು ಸರ್ವಸದಸ್ಯರೂ ಕೊಡುವಂತೆ ತೋರುತ್ತಿದ್ದಿತು. ಶ್ರೀ ಡಿ. ಎಸ್ ಹನುಮಂತರಾಯರು ಅಧ್ಯಕ್ಷರನ್ನು ಆವರ ಆಯ ವ್ಯಯ ಪಟ್ಟಿಗಾಗಿ ವಂದಿಸಿದರು. ಕಾಂಗ್ರೆಸ್ ಸದಸ್ಯರಾದ ಶ್ರೀ ಜಿ. ತಿಮ್ಮಪ್ಪನವರು ಪುರಸಭೆಯ ಸದ್ಯದ ಆರ್ಥಿಕ ಪರಿಸ್ಥಿತಿಯನ್ನು ಸಮಗ್ರವಾಗಿ ವಿವರಿಸಿ ಆ ದೃಷ್ಟಿಯಿಂದ ಕಡಿತವು ಸಾಲದೆಂದು ಹೇಳಿ ಹೈಸ್ಕೂಲ್ ಉಪಾಧ್ಯಾಯರ ವ್ಯಕ್ತಿವೇತನವು Personal allowance] ಪೂರಾ ಹೋಗಬೇಕೆಂದೂ, ಅದು ಅನ್ಯಾಯವಾದ್ದೆಂತಲೂ ವಿವರಿಸಿದರು- ವ್ಯಾಟೀ ಸೋದರರೂ, ಹನುಮಂತರಾಯರೂ. ಇದು ಅಕ್ರಮವೆಂತಲೂ, ಬಡ್ಜೆಟ್ ಸೂಚನೆಯ ಪ್ರಕಾರ ಶೇಕಡ ೫೦ ಕಡಿತಕ್ಕೆ ಒಪ್ಪಬೇಕೆಂತಲೂ ವಾದಿಸಿದರು ಶ್ರೀ ಗಂಗಪ್ಪನವರು ೧೯೩೯-೪೦ರಲ್ಲಿ ಮುನಿಸಿಪಲ್ ನೌಕರರ ವ್ಯಕ್ತಿ ವೇತನವು ಪೂರಾ ಕೊಡಲ್ಪಡಬಾರದೆಂಬರ್ಥವುಳ್ಳ ನಿರ್ಣಯವನ್ನು ತಂದರು. ಅದು ಶ್ರೀ ಜಿ ತಿಮ್ಮಪ್ಪನವರಿಂದ ಸಮರ್ಥಿತವಾಯಿತು. ಶ್ರೀ ಡಿ. ಎಸ್. ಹನುಮಂತರಾಯರು ಈ ವರ್ಷಕ್ಕೆ ಶೇಕಡ ೫೦ ಮಾತ್ರ ಕಡಿಯಬೇಕೆಂದು ಉಪಸೂಚನೆ ತಂದರು. ಉಪಸೂಚನೆಯು ಬಿದ್ದು ಹೋಯಿತು. ಮೂಲ ನಿರ್ಣಯವು ೧೫ ವಿರುದ್ಧ ೫ ಮತಗಳಿಂದ ಮುಂಜೂರಾಯಿತು. ಶ್ರೀ ಶಿವಾಚಪ್ಪನವರು ಯಾವ ಪರವೂ ಇಲ್ಲದೆ ಸ್ತಬ್ಧರಾಗಿದ್ದರು ಸರ್ಕಾರವರು ಹೈಸ್ಕೂಲು ಖರ್ಚಿಲ್ಲಾ ಕೊಡದಿದ್ದರೆ, ಅದನ್ನು ಮುಚ್ಚಬೇಕೆಂದು ಸಲಹೆ ನೂಡಿದರು.

ಈ ನಿರ್ಣಯದಿಂದ ಕಡಿತಕ್ಕೊಳಪಟ್ಟ ಮು. ನವಕರರಲ್ಲಿ ಕಳವಳ ಉಂಟಾಗಿದೆ ಮು. ಹೈಸ್ಕೂಲಿನಲ್ಲಿ ೨೦ ಜನ ಉಪಾಧ್ಯಾಯರಿಗೆ ೭೦ ಗಳಿಂದ ೨೪ ವರಿಗೂ ಕಡಿತವಾಗಿದೆ

ಪೂರ್ಣ ಕಡಿತವನ್ನು ವಿರೋಧಿಸಿದ ಸದಸ್ಯರಲ್ಲಿ ಕೆಲವರು ಇದು ಸಕ್ರಮವಾದ್ದಲ್ಲವೆಂದು ಕಾರಣ ತೋರಿಸಿ ಅಸಮ್ಮತಿ ಪತ್ರವನ್ನು ಕಳುಹಿಸಿರುತ್ತಾರೆ.

ಸಾರ್ವಜನಿಕ ಸಭೆಯ ಬೆಂಬಲ

೧೫ನೇ ತಾ|| ಸಾಯಂಕಾಲ ಅಗಡೀ ಮರೆಪ್ಪ ಶಿದ್ದಪ್ಪ ಇವರ ಕಲ್ಯಾಣ ಮಂದಿರದಲ್ಲಿ ಶ್ರೀ ಮಹಾಬಲೇಶ್ವರಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ನೆರೆದಿದ್ದಿತು. ಅದಕ್ಕೆ ಪುರ ಸಭಾಧ್ಯಕ್ಷರಾದ ರಾವುಫ್ ಸಾಹೇಬರೂ, ಇತರ ಅನೇಕ ಮಾನ್ಯನೀಯರೂ ಹಾಜರಿದ್ದರು. ಅಧ್ಯಕ್ಷರು ಪ್ರಾರಂಭ ಭಾಷಣದಲ್ಲಿ ರೇಟ್ ಪೇಯರ್‌ರ ಹಿತವನ್ನು ಬಯಸಿ ಆ ದೃಷ್ಟಿಯಿಂದ ಕಡಿತವು ಅವಶ್ಯಕವೆಂದೂ ಪುರ ಸಭೆಯ ಬಹುಸಂಖ್ಯಾಕ ಸದಸ್ಯರಿಗೆ ಬೆಂಬಲ ಕೊಡುವುದು ಅಗತ್ಯವೆಂದರು.

ಶ್ರೀ ಜಿ. ತಿಮ್ಮಪ್ಪ ಇವರು ತಮ್ಮ ದೀರ್ಘಭಾಷಣದಲ್ಲಿ ಮುನಿಸಿಪಾಲಿಟಿ ಹಣಕಾಸಿನ ಸಾಮ್ಯಂತವಿವರಗಳನ್ನು ಹೇಳಿ ಪೂರಾ ಕಡಿತವು ಅವಶ್ಯಕವೆಂದು-

'ನಮ್ಮ ಸ್ಥಿತಿನೋಡಿ ನಮಗೆ ೮೫೦೦೦ ಸಾಲವನ್ನು ಸರ್ಕಾರವವರು ಕೊಟ್ಟಿರುತ್ತಾರೆ- ಅದು ಹೇಗೆ ತೀರಬೇಕು? ಬಳ್ಳಾರಿಯ ಟ್ಯಾಕ್ಸ್ ನುದ್ಯಾಸು, ಪ್ರಾಂತದೆಲ್ಲೂ ಇಲ್ಲ. ಪ್ರಾಂತ್ಯದ ಸರಾಸರಿ ೨-೧೪-೦ ಇದ್ದರೆ, ನಮ್ಮೂರಿನದು ೩-೬-೪ ಮಿಲಿಟರಿ ಆದಾಯದ ಆಕೆ ಆಕಾಶ ಪುಷ್ಪವಿದ್ದಂತೆ. ೧೯೩೩ರಿಂದ ೧೯೩೪ರ ವಳಗೆ ೧೫೦೦೦ ಕೊಟ್ಟಿದ್ದಾರೆ. ಈ ಉಪಾಧ್ಯಾಯರಿಗೆ ಸಾಮಾನ್ಯ, ಸರಂಜಾಮಿ ಎಲ್ಲಾ ಅಗ್ಗ. ನಮಗೆ ಸಂಕಟಕಾಲ ಬೊದಗಿದಾಗ ಈ ಕಡಿತಗಳನ್ನು ಸುಧಾರಿಸಿ ಕೊಳ್ಳಬೇಕು ವಗೈರೆ ಹೇಳಿದರು

ಜನಾಬ್ ರಾವುಫ್ ಸಾಹೇಬರು.

ಆದಾಯ ೩೫೦೦೦ ಇದೆ. ಖರ್ಚು ೩೪೮೦೦ ಇದೆ. ಇದರ ಮೇಲೆ ಪುರಸಭೆಗೆ ೧೦ ಲಕ್ಷ ಸಾಲವಿದೆ. ಅಲ್ಲದೆ ೮೫ ಸಾವಿರ ಸಾಲವನ್ನು ೧೦ ಕಂತುಗಳಲ್ಲಿ ತೀರಿಸಲೇ ಬೇಕಾಗಿದೆ. ಉಪಾಧ್ಯಾಯರಿಗೆ ಇಷ್ಟೇ ಕೊಡಬೇಕೆಂದು ಸರ್ಕಾರದವರು ನಿಶ್ಚಯಿಸಿರುತ್ತಾರೆ. ಅದರ ಮೇಲಿನ ಭಾಗವನ್ನು ಮಾತ್ರ ಕತ್ತರಿಸಲಾಗಿದೆ. ಈ ವಿಷಯವನ್ನು ಎಲ್ಲರೂ ಸಹಾನುಭೂತಿಪರ ಆಲೋಚಿಸಬೇಕು.

ಶ್ರೀ ಜುಂಜರಂಪಲ್ಲಿ ಮರೆಪ್ಪ,

(ವರ್ತಕ ಸಂಘದ ಅಧ್ಯಕ್ಷರು) ಅಧ್ಯಕ್ಷರೂ, ಶ್ರೀ ತಿಮ್ಮಪ್ಪನವರೂ ಹೇಳಿದಂಶಗಳನ್ನು ಆಲೋಚಿಸಿ, ಅವರಿಗೆ ಬೆಂಬಲ ಕೊಡುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಶ್ರೀ ಎಸ್. ಆರ್. ಗಂಗಾವತಿ

ನಮ್ಮ ಕುಂದುಕೊರತೆಗಳನ್ನು ವಿಚಾರಿಸಿ ನಿವರ್ತಿಸಲು ಒಂದು ರೇಟ್ ಪೇಯರ್ ಸಂಘವಿಲ್ಲ. ಆದಾಯಕ್ಕೆಷ್ಟೋ ಮೂಗ ಗಳಿದ್ದರೂ, ಅವನ್ನು ಬಿಟ್ಟು ಉಪಾಧ್ಯಾಯರ ಸಂಬಳ ಕತ್ತರಿಸಿ ಇತರ ಬಡವರನ್ನು ತೆಗೆದು ಹಾಕಿರುವುದು ಬಹಳ ಮಃಖ ಸ್ರವವಾದ ವಿಷಯ. ವಿದ್ಯಾಭ್ಯಾಸ ಆಸ್ಪತ್ರೆಗಳಿಂದ ಲಾಭವು ಹೇಗಾಗುತ್ತದೆ? ಇಂಥಾ ಕಡಿತವನ್ನು ನಾನು ವಿರೋಧಿಸುತ್ತೇನೆ. ಬರಬೇಕಾದ್ದನ್ನು ಸರಿಯಾಗಿ ವಸೂಲ್ಮಾಡಲಿ. ಅನೇಕ ಕೌನ್ಸಿಲರುಗಳೇ ಬಹಳ ಹಣ ಕೊಡಬೇಕು ಎಂದು ಹೇಳಿದರು

ಜನಾಬ್ ರಾವುಫ್ ಸಾಹೇಬರು

ಬರುವ ಬಾಕಿಯನ್ನೆಲ್ಲಾ ಗಣನೆಗೆ ತೆಗೆದು ಕೊಂಡೇ ಆಯ ವ್ಯಯ ಪಟ್ಟಿಯು ತಯಾರಿಸಲಾಗಿದೆ ಎಂದರು.

ಗಂಗಾವತಿಯವರಿಗೆ ತಿಮ್ಮಪ್ಪನವರೂ ಸಮಾಧಾನ ಕೊಟ್ಟರು.

ಯಜಮಾನ್ ಶಾಂತರುದ್ರಪ್ಪನವರು

ಕಡಿತವು ಅತಿ ಆವಶ್ಯಕವೆಂದೂ, ಮುನಿಸಿಪಾಲಿಟಿಯವರ ಸೂಚನೆಗಳಿಗೆ ಸಕಲರೂ ಬೆಂಬಲ ಕೊಡಬೇಕೆಂದೂ ಹೇಳಿದರು.

[ಗಂನೇ ಪುಟವನ್ನು ನೋಡಿರಿ]

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಕಮಿಟೀ ಸಭೆ.

ಹರಪನಹಳ್ಳಿ, ೧೨-೨-೩೯

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ವಾರ್ಷಿಕ ಸಭೆಯು ಹರಪನಹಳ್ಳಿಯಲ್ಲಿ ಶ್ರೀ ಸು. ರಾಘವೇಂದ್ರರಾಯರಧ್ಯಕ್ಷತೆಯಲ್ಲಿ ನಿನ್ನೆ ತಾ|| ಭಾನುವಾರ ಮಧ್ಯಾಹ್ನ ೨ ಗಂಟೆಗೆ ಕೂಡಿದ್ದಿತು.

ಸೆಂಟ್ರಿಗಳಾಗಿದ್ದ ರಾಮನ್ ಮೇನನ್‌ರವರ ಮತ್ತು ಬಳ್ಳಾರಿಯ ಶ್ರೀ ಗೋಪಾಲಸ್ವಾಮಿಯವರ ನಿಧನಕ್ಕಾಗಿ ದುಃಖಸೂಚಕ ನಿರ್ಣಯವು ಪಾಸಾಯಿತು. ಪಾರ್ಲಿಕವರದಿ, ಜಿಲ್ಲಾ ಚುನಾವಣೆ ಸಮಿತಿ, ಬಳ್ಳಾರಿ, ಹೊಸಪೇಟೆ ನಗರ ಚುನಾವಣೆ ಸಮಿತಿಗಳ ಲೆಕ್ಕಗಳು ಮುಂತಾದವು, ಸಂತರ ಅಧಿಕಾರಿ ವರ್ಗದವರ ಚುನಾವಣೆಯು ಸರ್ವಾನು ಮತದಿಂದಾಯಿತು.

ಅಧ್ಯಕ್ಷರು— ಶ್ರೀ ವಸುವಾಲಸ್ಪ ಇಜಾರಿ
ಉಪಾಧ್ಯಕ್ಷ— ಶ್ರೀ ಡಿ. ಯಸ್. ಹನುಮಂತರಾವ್, ಶ್ರೀ ಡಾ|| ರಾಮರಾವ್.
ಕಾರ್ಯದರ್ಶಿಗಳು— ಶ್ರೀ ಪಿ. ಎಂ ಗಿರಿ
ಶ್ರೀ ಭ. ಪಣ್ಣಾರುದ್ರಪ್ಪ.
ಕೋಶಾಧ್ಯಕ್ಷ- ಶ್ರೀ ಸತ್ಯನಾರಾಯಣ ಭಟ್ಟರ್ಪ.

ಕಾರ್ಯಕಾರಿಣೀ ಸಮಿತಿ —

೧] ಶ್ರೀ ಎಂ. ರಾಘವೇಂದ್ರರಾವ್, ೨] ಶ್ರೀ ಭಂಗಾರಶೆಟ್ರು, ೩) ಶ್ರೀ ಸೈ. ಸುಬ್ಬಣ್ಣ, ೪) ಶ್ರೀ ಶಿವರುದ್ರಪ್ಪ, ೫] ಶ್ರೀ ಬಸವನಗೌಡ, ೬[ಶ್ರೀ ಡಿ. ಶ್ರೀನಿವಾಸರಾವ್, ೭] ಶ್ರೀ ಎ. ವೀರಸ್ವಾಮಿ.

ಬಾಬು ಸುಭಾಷಚಂದ್ರ ಬೋಸರನ್ನು ಅಭಿನಂದಿಸುವ, ಮಹಾತ್ಮ ಗಾಂಧಿಯವರ ನಾಯಕತ್ವದಲ್ಲಿ ಸಂಪೂರ್ಣ ಸ್ವರಾಜ್ಯವನ್ನು ಸ್ಥಾಪಿಸುವ ನಿರ್ಣಯಗಳು ಸರ್ವಾನುಮತದಿಂದ ಪಾಸಾದವು. ತುಂಗಭದ್ರಾ ಯೋಜನೆಯನ್ನು ತೀಕ್ಷ್ರವಾಗಿ ಕಾರ್ಯರೂಪದಲ್ಲಿ ತರಬೇಕೆಂದು ಈ ವರ್ಷದ ಬಜೆಟ್ಟಿನಲ್ಲಿ ಹಣವನ್ನು ಒದಗಿಸಬೇಕೆಂತಲೂ ನಿರ್ಣಯವಾಯಿತು ಬಳ್ಳಾರಿ, ಸಿರುಗುಪ್ಪ ತಾಲೂಕುಗಳಲ್ಲಿ ಸೋನವರ್ಷ ಸಸ್ಯೆಂಡಾವ ಹಣವನ್ನು ಈ ವರ್ಷವೂ ವಸೂಲ್ಮಾಡಬಾರದೆಂದೂ, ಬಳ್ಳಾರಿ ಜಿಲ್ಲೆಯ ಈ ವರ್ಷದ ತಕ್ಕವಿ ಕಂತುಗಳನ್ನು ವಸೂಲ್ಮಾಡುವುದು ನಿಲ್ಲಿಸಬೇಕೆಂದೂ ನಿರ್ಣಯವಾಯಿತು.

ಬಳ್ಳಾರಿ ಜಿಲ್ಲಾ [ಆಂಧ್ರ-ಕರ್ನಾಟಕ ಕಲೆತು] ಚುನಾವಣಾ ಸಮಿತಿಗೆ ಕರ್ನಾಟಕದ ವರನಾಗಿ ಶ್ರೀ ಹೊಳಗುಂದಿ ನಿವ್ವಣ್ಣನವರು, ಶ್ರೀ ಎ. ವೀರಾಸ್ವಾಮಿ ಶ್ರೀ ಬಿ. ಭೀಮರಾವ್ ಇವರು ಸದಸ್ಯರಾಗಿ ಆರಿಸಲ್ಪಟ್ಟರು. ಉಳಿದ ಇಬ್ಬರು ಸದಸ್ಯರು ಆಂಧ್ರ ಸಮಿತಿಯಿಂದ ಆರಿಸಲ್ಪಡಬೇಕಾಗಿದೆ. ಬಳ್ಳಾರಿ ಜಿಲ್ಲಾ ಸ್ಥಾನೀಕ ಸಂಸ್ಥೆಗಳ ಕಾರ್ಯವನ್ನು ನಿರೀಕ್ಷಿಸಲು ನಿರ್ಧರಿಸಲು, ಪರೀಕ್ಷಿಸಿ ಸಲಹೆಕೊಡಲು ಒಂದು ಸಲಹೆ ಸಮಿತಿಯು ಏರ್ಪಟ್ಟಿತು.

ಹರಪನಹಳ್ಳಿ ತಾ|| ನೆಲ್ಲುದ್ರಿ ಗ್ರಾಮದ ಹರಿಜನರ ಮೊರೆ.

[ಶ್ರೀ ಶಿವದೇಕಾಯಿಯವರಿಂದ]

ಈ ಗ್ರಾಮವಲ್ಲಿ ೨೦೦ ಜನ ಸಂಪೆ ಇದ್ದು ಮನೆ ಕಟ್ಟಿಕೊಳ್ಳಲು ಜಾಗವಿಲ್ಲ. ಹಾಲಿ ಇರುವ ಕೇರಿ ಹಗರಿಗೆ ಲಗತ್ತಿರುವದರಿಂದ ಪ್ರವಾಹಕಾಲದಲ್ಲಿ ಬಹಳ ಲುಕ್ಸಾನಾಗುತ್ತದೆ. ಈ ವಿಷಯವನ್ನು ಸಂಬಂಧಿಸಿದ ಅಧಿಕಾರಿಗಳಿಗೆಲ್ಲಾ ತಿಳಿಸಲಾಗಿದೆ. ಕೇರಿಗೆ ಲಗತ್ತು ಸಾಕಷ್ಟು ಗ್ರಾಮವನತ್ತವಿದೆ. ಜನರಿಗೆ ಜಾಗ ಕೊಡಿಸಲು ಸಂಬಂಧಿಸಿದವರು ಪ್ರಯತ್ನ ಮಾಡಬೇಕೆಂದು ಕೋರಿಕೆ.

ಹುಬ್ಬಳ್ಳಿ ಗ್ಯಾಝಿಟ್.

ಇದು ಹುಬ್ಬಳ್ಳಿ ನಗರದಲ್ಲಿ ಸುಪ್ರಸಿದ್ಧ ಕರ್ನಾಟಕ ದೇಶಭಕ್ತ ಡಾ. ಹರ್ಡೀಕರರವರ ಸಂಪಾದಕತ್ವದಲ್ಲಿ ಹೊರಡುವ ಪಕ್ಷಪತ್ರಿಕೆ. ಹುಬ್ಬಳ್ಳಿ ಪುರಸಭೆಯ ಹೊಲಸು ಅಡಳಿತದಿಂದ ಕೆಟ್ಟು ಕೊಳೆಯುತ್ತಿದ್ದ ನಗರವನ್ನು ಸುಧಾರಿಸಲು ಈ ಪುಢಾರಿಯರು ಬದ್ಧಕಂಕಣರಾಗಿ ಈ ಪಕ್ಷಪತ್ರಿಕೆಯ ಮೂಲಕ ಜನತೆಯ ನ್ಯಾಯಬದ್ಧ ಬೇಡಿಕೆಗಳನ್ನ ವ್ಯಕ್ತಪಡಿಸುವರು "**ಹುಬ್ಬಳ್ಳಿಯು ಆರೋಗ್ಯಕರ ಸುಂದರ, ಹಾಗು ವೈಭವ ಸಂಪನ್ನವಾಗಬೇಕೆಂಬ ನಮ್ಮ ಕನಸು ನಿಜವಾಗುವಂತೆ ನೆರವಾಗಲು ಬೇಡಿಕೊಳ್ಳುವೆವು**" ಎಂದು ತಮ್ಮ ಸಂಪಾದಕೀಯದಲ್ಲಿ ಹೇಳಿರುವರು. ಈ ಕನಸು ನಿಜವಾಗಲೆಂದು ನಮ್ಮ ಹಾರೈಕೆ.

ಬಡವರಿಗೂ, ಭಾಗ್ಯವಂತರಿಗೂ - ಏಮೆನುವಾಡಲು
ಹೆಚ್ಚಿನ ಸೌಕರ್ಯಗಳುಂಟು.
ಪದ್ಧತಿಗಳಲ್ಲಿ ನಾವೀನ್ಯತೆ ಸುಲಭ ದರದ ಕಂತುಗಳವಿಶೇಷತೆ,
ಯುಳ್ಳ
ಅಶ್ವತ್ಥಮ ಸಂಸ್ಥೆ
ದಿ
ಸಿಟಿಯನ್ ಅಶೂರೆನ್ಸ್ ಕಂಪನಿ,
ಲಿಮಿಟೆಡ್.
[ಹಿಂದೂಸ್ಥಾನದಲ್ಲಿ ಸ್ಥಾಪಿತ 1910]
ಹೆಡ್ ಆಫೀಸ್— ಬಾಲಾರ್ಡ್ ಎಸ್ಟೇಟ್ ಫೋರ್ಟ್, ಮುಂಬೈ.
ಅಪಾಯ ಸಂಭವಿಸಿದ ಕಾಲದಲ್ಲಿ, ಸಂಸಾದಿಸಲಾಗದ ಪರಿಸ್ಥಿತಿಯಲ್ಲಿ, ವೈದ್ಯಾವ್ಯದಲ್ಲಿ ನಿಮಗೆ ಸಹಾಯ ಬೇಕಲ್ಲವೇ? ಹಾಗಾದರೆ ನಿಮ್ಮ ಪರಿಸ್ಥಿತಿಗೆ ಅನುಕೂಲಿಸುವ ಪಾಲಿಸಿಗೆ ಏರ್ಪಡಿಸಲು ನಾವು ಸಿದ್ಧರಿದ್ದೇವೆ. ಭಾರತೀಯರು ಹೆಮ್ಮೆಪಡಬಹುದುದಾದ, ಬಲವತ್ತರವಾದ ಆರ್ಥಿಕ ಭದ್ರತೆಯುಳ್ಳ ವಿಮಾಸಂಸ್ಥೆ. ವಿವರಗಳಿಗೆ ಬರೆಯಿರಿ.
ಬ್ರಾಹ್ಮಣರ ಬೀದಿ, ಬಳ್ಳಾರಿ.
ಎ. ಪಾರ್ಥಸಾರಥಿ, ಬಿ. ಎ.
ಜೋನ್-ಅಗರ್ನೈಜರ್

ಈ ವಾರದಿಂದ ಕಾಂಗ್ರೆಸ್ ಬುಲೆಟಿನ್ ಪತ್ರಿಕೆಯು ಇದರಲ್ಲಿ ಸಮಾವೇಶವಾಯಿತು. ಪೂರ್ವದ ಚಂದಾದಾರರಿಗೂ, ಜಾಹೀರಾತುದಾರರಿಗೂ ಈ ಪತ್ರಿಕೆಯು ದೊರೆಯುವುದು. ಚಂದಾದಾರರು ತಮ್ಮ ಚಂದಾ ಹಣವನ್ನು ಕೈಪೆಯಿಟ್ಟು ಮನಿಆರ್ಡರ್ ಮೂಲಕ ಕಳುಹಿಸಿದರೆ ವಿ. ಪಿ. ಯ ಬಹಳ ಖರ್ಚು ಉಳಿಯುವುದು.

ವ್ಯವಸ್ಥಾಪಕ
'ನವ ಭಾರತ'
ಮಹಬೂಬ್ ಬಿಲ್ಡಿಂಗ್ಸ್ ಬಳ್ಳಾರಿ.

ನವಭಾರತ

ಶನಿವಾರ ಫೆಬ್ರವರಿ 18, 1939.

ವಾಚಕರಿಗೆ.

ಕಾಂಗ್ರೆಸ್ ಬುಲೆಟಿನ್ ವಾಚಕರಿಗೆ ಪತ್ರಿಕೆಯ ಹೆಸರಿನಲ್ಲಿ ಬದಲಾವಣೆಯಾಗುವ ಅಂಶವು ಕೆಲ ತಿಂಗಳಿಂದಲೂ ತಿಳಿದಿದ್ದಿತು. ಈಗ ಕಾಂಗ್ರೆಸ್ ಬುಲೆಟಿನ್ ಪತ್ರಿಕೆಯು ನವ ಭಾರತ ದಲ್ಲಿ ಈ ವಾರದಿಂದ ಸಮಾವೇಶವಾಗಿದೆ.

ಅಖಿಲ ಭಾರತ ಕಾಂಗ್ರೆಸ್ ಮುಖ್ಯ ಕಛೇರಿಯಿಂದಲೂ, ಪ್ರಾಂತೀಯ ಕಛೇರಿಯಿಂದಲೂ, ಅಧಿಕೃತ ಪ್ರಕಟನೆಗಳು ಆಗಾಗ್ಯೆ ಹೊರಬೀಳುತ್ತಲಿವೆ. ಕಾಂಗ್ರೆಸ್ ತತ್ವಗಳು ಪ್ರಚಾರಕಾರ್ಯಕ್ಕೆ ಅಂಥಾ ಪತ್ರಿಕೆಯು ಈ ಜಿಲ್ಲೆಯಲ್ಲಿ ಅವಶ್ಯಕವೆಂದು ತಿಳಿದು ಜಿಲ್ಲಾ ಕಾಂಗ್ರೆಸ್ ಸಮಿತಿಯವರು ಅಲ್ಪಕಾಲದಲ್ಲಿ ಇದರ ಜವಾಬ್ದಾರಿಯನ್ನು ತೆಗೆದುಕೊಳ್ಳುವರೆಂದು ನಿರೀಕ್ಷಿಸಿ ಕಾಂಗ್ರೆಸ್ ಬುಲೆಟಿನ್ ನಾಮಧೇಯವು ಕೆಲ ಮಿತ್ರರಿಂದ ಸೂಚಿಸಲ್ಪಟ್ಟು ಈ ವಾರ ಪತ್ರಿಕೆಯ ಜನ್ಮವಾಯಿತು. ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ, ಕಾರ್ಯದರ್ಶಿಗಳೂ, ಇತರ ಮುಖ್ಯರೂ

'ನಾವು ವಾರಪತ್ರಿಕೆಯ ಜವಾಬ್ದಾರಿಯನ್ನು ಕೈಕೊಳ್ಳಲಾರೆವು. ಕಾಂಗ್ರೆಸ್ ನೀತಿಯನ್ನು ಅನುಸರಿಸಿ ನೀವೇ ವಾರ ಪತ್ರಿಕೆಯನ್ನು ನಡೆಸಿಕೊಳ್ಳಿರಿ. ನಮ್ಮ ಆಶೀರ್ವಾದವೂ, ಬೆಂಬಲವೂ ಸದಾ ನಿಮಗೆ ದೊರೆಯುವುದೆಂದು ಭರವಸೆ ಕೊಡುತ್ತೇವೆ' ಎಂದು ವ್ಯವಸ್ಥಾಪಕರಿಗೆ ತಿಳುಹಿಸಿಬಿಟ್ಟರು.

ಕಾಂಗ್ರೆಸ್ ಅಧಿಕಾರವಾಣಿಯಿಂದ ಬರುವ ಪ್ರಕಟನೆಯು ಇದೆಂಮುಜನರಲ್ಲಿ ತಪ್ಪು ತಿಳುವಳಿಕೆಗೆ ಕಾರಣವಾಗುವ ಸಂದರ್ಭಗಳುತ್ಪನ್ನವಾಗುವುದನ್ನು ದೂರಮಾಡಲು ಹೆಸರಿನಲ್ಲಿ ಬದಲಾವಣೆಯೊಗಬೇಕಾಯಿತು

ಕಾಂಗ್ರೆಸ್ ಬುಲೆಟಿನ್ ಪತ್ರಿಕೆಯು ಸಮಾವೇಶವಾದ ಈ ನವ ಭಾರತ ವುಬಡ ರೈತರು,ಕೂಲಿಕಾರರು ರಿಶ್ಯಮಿಗಳು, ಹರಿಜನರು ಮತ್ತು ಸಾರ್ವಜನಿಕರು ಇವರ ಅನ್ಯಾಯಗಳನ್ನು ದೂರನಾಡಲು ಅನಿತರ್ಯೆ ಯರ್ದಿಂದ ನಿರ್ದಾಕ್ಷಿಣ್ಯದಿಂದ ಹೋರಾಡುವುದು. ಅಖಿಲ ಭಾರತ ರಾಷ್ಟ್ರೀಯ ಸಂಸ್ಥೆ [Indian National Congress] ಯು ನಡೆಸಿರುವ ಸ್ವತಂತ್ರ ಯುದ್ಧದ ಯಾವ ಕಾರ್ಯಕ್ರಮಕ್ಕಾದರೂ, ಪೂರ್ಣ ಬೆಂಬಲವನ್ನೀಯುವುದು. ನಟ್ಟನಲ್ಲಿ ಕಾಂಗ್ರೆಸ್ ನೀತಿಯೇ ಪತ್ರಿಕೆಯ ನೀತಿಯಾದರೂ ಮಂತ್ರಿವರ್ಗದ ಕಾರ್ಯಕ್ರಮದಿಂದ ಕಾಂಗ್ರೆಸ್ ಕಾರ್ಯಕರ್ತರಲ್ಲಿ ತನ್ಮೂಲಕ ಸಂಸ್ಥೆಗಳಲ್ಲಿ ಹೊಕ್ಕಿರುವ ಅನಾಚಾರ ಸ್ವಾರ್ಥರೂಪೀ ಕುಟೀಲಗಳನ್ನು ಕಾಂಗ್ರೆಸ್ ಹಿತದೃಷ್ಟಿಯಿಂದಲೇ ಬಯಲಿಗಿಡುವ ಕಾರ್ಯವನ್ನು ಈ ಪತ್ರಿಕೆಯು ಮಾಡುವುದು. ಇದಕ್ಕೆ ನುರಿತ ಕಾಂಗ್ರೆಸ್ ಜನರೆಲ್ಲಾ ಸಹಾಯಮಾಡಿ ಕಾಲಕಾಲಕ್ಕೆ ವರದಿಗಳನ್ನು ಹೇಳಿಕೆಗಳನ್ನು ಕೊಟ್ಟು ಆಗಾಗ್ಯೆ ಜನತೆಯಲ್ಲಿ ಹಬ್ಬುವ ಅನಾದಾರವನ್ನು ಕಡಿಮೆ ಮಾಡಬೇಕೆಂದು ಕೋರಿಕೆ.

ದೇಶ ಹಿತೈಷಿಗಳೆಲ್ಲಾ ಈ ಪತ್ರಿಕೆಯನ್ನು ಸರ್ವಾಂಗ ಸುಂದರ ಮಾಡಲು, ಜನತೆಯ ಧ್ವನಿಯನ್ನಾಗಿ ಮಾಡಲು, ಸರ್ವ ವಿಧಗಳಿಂದಲೂ ಸಹಾಯ ಮಾಡಲು ನಮ್ಮ ಬೇಡಿಕೆ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವುದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ, ಸುಲಭದರದಲ್ಲಿ ವಿತರುತ್ತೇವೆ. ಗ್ಯಾರಂಟಿಯೊಡನೆ ಕ್ರೂಕ್ಸ್ ಕನ್ನಡಿಗಳು ಸರಿಯೂದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ 'ಕಟ್ಟು' (ಫ್ರೇಂ) ನಮ್ಮಲ್ಲಿವೆ. ಒಂದ್ಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

ಹೆಚ್. ಯಸ್. ಅಂಡ್ ಸನ್ಸ್.
ಬೆಂಗಳೂರು ರೋಡ್ ಬಳ್ಳಾರಿ.

ಪಂ|| ಜವಾಹರಲಾಲರ ಸಿಂಹಗರ್ಜನೆ.

ಭಾರತೀಯರೇ! ಏಳಿರಿ!! ಜಾಗೃತರಾಗಿರಿ.

'ಕಾಂಗ್ರೆಸ್ ಅಧ್ಯಕ್ಷ ಚುನಾವಣೆಗೆ ಸಂಬಂಧಿಸಿದ ಎಲ್ಲ ಅಂಶಗಳನ್ನಾಗಲಿ ಅಥವ ಅದರ ಹಿನ್ನೆಲೆಯನ್ನಾಗಲಿ ಅರಿತಿರುವವರು ಬಹು ಅಲ್ಪ ಸಂಖ್ಯೆಯಾದರೂ ಈ ಚುನಾವಣೆಯು ಬಹಳ ಮಂದಿಯು ಗಮನವನ್ನು ಸೆಳೆದಿದೆ. ಹಾಗಾಗಬೇಕಾದುದೇ ಸರಿ.

'ಹಲವು ಮಂದಿ ಒಟ್ಟಾಗಿಯೂ, ಹಲವರು ವೈಯಕ್ತಿಕವಾಗಿಯೂ ಹೊರಡಿಸಿರುವ ಹೇಳಿಕೆಗಳು ಪತ್ರಿಕೆಗಳಲ್ಲಿ ತುಂಬಿಹೋಗಿವೆ. 'ಲೆಫ್ಟಿಸ್ಟ್ಸ್' (ಉಗ್ರವಾದಿಗಳು) 'ರೈಟಿಸ್ಟ್ಸ್' (ಮಂದಗಾಮಿಗಳು) ಈ ಪದಗಳ ನಿಜವಾದ ಅರ್ಥವನ್ನು ಗಣನೆದೆ ಸಿಕ್ಕಾಪಟ್ಟೆ ಬಳಸುತ್ತಿರಲಾಗಿದೆ. ಈ ಚುನಾವಣೆಯ ದೆಸೆಯಿಂದ ನಾವೆಲ್ಲ ಭಾರತದ ಮತ್ತು ಹೊರಗಿನ ಸರಿಸ್ಥಿತಿಯನ್ನು ಕುರಿತು ತೀವ್ರವಾಗಿ ವಿಚಾರಮಾಡುವಂತಾದರೆ ಅದರಿಂದ ಒಂದು ಒಳ್ಳೆಯ ಕೆಲಸ ಸಖಾದರೂ ಸೆರನೇರಿದಂತಾಗುತ್ತದೆ. ಸಿಕ್ಕಾಪಟ್ಟೆ ಮಾತನಾಡುವುದರಿಂದ ಅಥವಾ ಗಟ್ಟಿಯಾಗಿ ಟೀಕೆ ಮಾಡುವುದರಿಂದ ಒಬ್ಬರು 'ಲೆಫ್ಟಿಸ್ಟ್' ಆಗಲಾರರು, ಇಲ್ಲವೆ 'ರೈಟಿಸ್ಟ್' ಆಗಲಾರರು. ಹಾಗೆ ಮಾಡುವುದರಿಂದ ಒಂದು ನೀತಿಯನ್ನು ರೂಪಿಸಲು ಕೂಡ ಸಹಾಯವಾಗುವುದಿಲ್ಲ. ಆದ್ದರಿಂದ ಈ ಮಾತುಗಳೂ ಮತ್ತು ಟೀಕೆಗಳೂ ನ್ಯಾಯದ ಮತ್ತು ನಿಜಾಂಶದ ಪಥವನ್ನು ಹಿಡಿಯಬೇಕು. ಅದರ ಫಲವಾಗಿ ನಮ್ಮ ನೀತಿಯು ಸ್ಪಷ್ಟವಾಗುವಂತಾಗಬೇಕು. ಆ ನೀತಿಯನ್ನು ಆಧಾರವಾಗಿಟ್ಟುಕೊಂಡು ಮುಂದಿನ ಕಾರ್ಯಕ್ರಮವನ್ನು ಗೊತ್ತುಮಾಡಬೇಕು. ಈಗ ನಮ್ಮ ಮುಂದೆ ಭರತಖಂಡದಲ್ಲಿ ಐಕಮತ್ಯದಿಂದ ಕೂಡಿದ ಮತ್ತು ಸ್ವತಂತ್ರವಾದ ಸ್ವಜಾಪ್ರಭುತ್ವ ರಾಜ್ಯಾಂಗವನ್ನು ನೆಲೆಗೊಳಿಸುವ ಸಮಸ್ಯೆಯು ಎದ್ದು ನಿಂತಿದೆ. ಈ ದೃಷ್ಟಿಯಿಂದ ಮಿಕ್ಕೆಲ್ಲ ವಿಚಾರಗಳನ್ನೂ ನಿರ್ಧರಿಸಬೇಕಾಗಿದೆ. ಹೀಗಿದ್ದರೂಕೂಡ ನಾವು ಸಾಮಾನ್ಯ ವಿಚಾರಗಳ ಮೇಲೆ ವಾಗ್ವಾದ ನಡೆಸುತ್ತಿದ್ದೇವೆ. ಅಧಿಕಾರ ಸ್ಥಾನಗಳ ವಿಚಾರವಾಗಿ ಆಲೋಚನೆ ಮಾಡುತ್ತಿದ್ದೇವೆ.

'ಈ ಮಧ್ಯೆ ಪ್ರಪಂಚವು ಅಸಾಧ್ಯ ವೇಗದಿಂದ ಮುಂದೆ ಉರುಳುತ್ತಿದೆ. ಇದಕ್ಕೆ ಮಹಾವಿಪತ್ತು ಒದಗಿದೆ. ಈ ಮಧ್ಯೆ ಭರತಖಂಡವು ಅಗಾಧ ಪ್ರಜಾಚಳುವಳಿಗಳಿಂದ ಮತ್ತೆ ಅಲ್ಲಾಡಿ ಹೋಗಿದೆ. ಇದೇ ಕಾಲದಲ್ಲೇ ಪ್ರತಿಕೂಲ ಶಕ್ತಿಗಳು ಸಹ ತಲೆ ಯೆತ್ತುತ್ತಿವೆ. ಇದನ್ನು ನಾವು ಯೆದುರಿಸುವುದೆಂತು ?

'ಇಂದಿನ ಸಮಸ್ಯೆಗಳಲ್ಲೆಲ್ಲ ದೇಶೀಯ ಸಂಸ್ಥಾನಗಳ ಮತ್ತು ಅವುಗಳ ಪ್ರಜೆಗಳ ಸಮಸ್ಯೆಯು ದೊಡ್ಡ ಸಮಸ್ಯೆಯಾಗಿ ಕೂತಿದೆ. ಸಂಸ್ಥಾನಗಳ ಜನರು ಈಗಾಗಲೆ ಬಹು ದೀರ್ಘಕಾಲದಿಂದ ನಿರಂಕುಶ ಪ್ರಭುತ್ವದಲ್ಲಿ ನರಳುತ್ತ ಬಂದಿದ್ದಾರೆ. ಅವರಿನ್ನೆಂದಿಗೂ ಇಂತಹ ಪ್ರಭುತ್ವಕ್ಕೆ ತಲೆಬಾಗಲಾರರು. ಉತ್ತರದಲ್ಲಿರುವ ಹಿಮಾಲಯಾ ಪರ್ವತದಿಂದ ದಕ್ಷಿಣದಲ್ಲಿರುವ ಕನ್ಯಾಕುಮಾರಿಯವರೆಗೆ ಸಂಸ್ಥಾನಗಳಲ್ಲಿರತಕ್ಕಂತಹ ಕೋಟ್ಯಾಂತರ ಮಂದಿ ಪ್ರಜೆಗಳು ಈಗ ಯೆಚ್ಚೆತ್ತು ತಮಗೆ ಇಷ್ಟು ದಿನವೂ ವಂಚನೆ ಮಾಡಿರತಕ್ಕಂತಹ ಸ್ವಾತಂತ್ರ್ಯದಕವಿಗೆ ನುಗ್ಗುತ್ತಿದ್ದಾರೆ. ಇಂದು ಬ್ರಿಟಿಷ್ ಸಾಮ್ರಾಜ್ಯತ್ವದ ಅಸಹ್ಯಕರವಾದಂತಹ ಒಂದು ಮುಖವನ್ನು ನಾವು ನೋಡುತ್ತಿದ್ದೇವೆ. ಸಂಸ್ಥಾನಗಳಲ್ಲಿ ನಿರಂಕುಶ ಪ್ರಭುತ್ವಕ್ಕೆ ಮತ್ತು ಜನರು ಗುಲಾಮಗಿರಿಯಲ್ಲಿ ನರಳುತ್ತಿರುವ ಪ್ರಕೃತಿಗೆ ಸಾಮ್ರಾಜ್ಯ ಸರ್ಕಾರವು ಬೆಂಬಲ ಕೊಡುತ್ತಿರುವುದೇ ಅದು. **ಹಿಂದಿನಂತೆ ಇಂದೂಕೂಡ ಈ ಸಾಮ್ರಾಜ್ಯತ್ವವನ್ನು ಎದುರಿಸಬಲ್ಲವರು ಗಾಂಧೀಜಿಯವರೆ. ಭಾರತದ ಮೃದುವಾದ, ಆದರೆ ಕಬ್ಬಿಣದಂತೆ ದೃಢವಾದ ಪ್ರತಿಭಟನೆಯನ್ನು ವ್ಯಕ್ತಪಡಿಸುವವರು ಅವರೆ.** ಗಾಂಧೀಜಿಯವರೀಗ ಈ ಮಹಾ ಸಂಗ್ರಾಮಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಾರೆ ಈ ಸಂಗ್ರಾಮದಲ್ಲಿ ವಿಕ್ಕೆಲ್ಲ ವಿಚಾರಗಳೂ ಅಷ್ಟು ಸ್ಯಾಮುಖ್ಯವಲ್ಲವೇ ಅಲ್ಲ. ಫೆಡರೇಷನ್ ಪ್ರಾಂತೀಯ ಸ್ವಾತಂತ್ರ್ಯ ಮುಂತಾದುವೆಲ್ಲ - ನಮ್ಮ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿರುವುವು - ಇದರೊಡನೆ ನಿಕ್ಯವಾಗಿ ಹೋಗುವವು

ಈಗಾಗಲೇ ರಾಜಕೋಟೆಯಲ್ಲಿ ಯುದ್ಧವಾರಂಭವಾಗಿದೆ. ಕಸ್ತೂರಿಬಾಯಿ ಗಾಂಧಿಯವರು ತಮ್ಮ ವೈದ್ಧಾಪ್ಯದಲ್ಲಿ ಸೆರೆಮನೆ ಸೇರಿದ್ದಾರೆ. ಜಯಪುರವು ಕೂಡ ಸಾಮ್ರಾಜ್ಯತ್ವದ ರಕ್ಷಣೆಗೆ ನಿಂತಿದೆ. ಭಾರತದ ನಂಬಿಕೆಯ ಸೇನಕರೆನಿಸಿದ ಸೇಂಟ್ ಜಮ್ಸ್ ಲಾಲರು ಸೆರೆಮನೆಯಲ್ಲಿ ಕುಳಿತಿದ್ದಾರೆ. ಬರಿಸ್ತಾದಲ್ಲಿ ಬ್ರಿಟಿಷ್ ಸಾಮ್ರಾಜ್ಯವು ತನ್ನ ಸೈನ್ಯವನ್ನು ತೀಕ್ಷ್ಣಗೊಳಿಸಿ, ಯೆಚ್ಚೆತ್ತಿರುವ ಪ್ರಜೆಗಳನ್ನು ಮಟ್ಟ ಹಾಕಲು ಹೊರಟಿದೆ. ತಿರುವಾಂಕೂರು ನಿರಂಕುಶ ವರ್ತನೆಯಿಂತೂ 'ಫ್ಯಾಸಿಸ್ಟ್' ಬಣ್ಣವನ್ನು ತಾಳಿದೆ. ಮೈಸೂರಿನಲ್ಲಿ ಇನ್ನೊಂದು ಹೊಡೆದಾಟವು ಆರಂಭವಾಗುವಂತಿದೆ. ಹೈದರಾಬಾದು ಮತ್ತು ಕಾಶ್ಮೀರಗಳಲ್ಲಿ ಮತ್ತೆ ಹೊಡೆದಾಟದ ಆರಂಭವಾಗಿದೆ. ಜಾತೀಯ ಭಾವನೆಯ ಚಳುವಳಿಯೆಂಬ ನೆವದಿಂದ ಪ್ರಜಾಚಳುವಳಿಗಳನ್ನು ಮಟ್ಟ ಹಾಕುತ್ತಿರಲಾಗಿದೆ.

'ನನ್ನ ತಲೆಯಲ್ಲೀಗ ಚಿಲ್ಲರೆ ಯೋಚನೆಗಳು ತಲೆಹಾಕಿವೆ. ನನ್ನ ದೊಡ್ಡ ಸಮಸ್ಯೆಗಳನ್ನೇ ನಾವು ಮರೆತಿದ್ದೇವೆ. ಆದರೆ ಮತ್ತೆ ಭಾರತದ ಕೂಗು ಕೇಳಿ ಬರುತ್ತಿದೆ. ಭಾರತದ ಈ ಕೂಗು ದೊಡ್ಡದಾಗುತ್ತಿದೆ. ಯೇ ಕಸ್ಕಾರವಾಗಿ ಕೇಳಿ ಬರುತ್ತಿದೆ. **ಭಾರತದ ಸ್ತ್ರೀ ಪುರುಷರೇ! ಯೆಚ್ಚರಾಗಿ!! ಯೆಚ್ಚರಾಗಿ!! ಮುಂದೆ ಹೊರಡುವ ಕಾಲ ಬರುತ್ತಿದೆ. ಈಗಲೇ ಸಿದ್ಧರಾಗಿ ನಿಲ್ಲಿ.**"

ಸ್ವರಾಜ್ಯದಲ್ಲಿ ಅಂತರ್ಗತವಾದ ಮೂಲಭೂತ ಹಕ್ಕುಗಳು.

೧. ಸಭಾಸ್ವಾತಂತ್ರ್ಯ, ಭಾಷಣ ಸ್ವಾತಂತ್ರ್ಯ, ಸಂಘಸ್ವಾತಂತ್ರ್ಯ ಮತ್ತು ಮುದ್ರಣ ಸ್ವಾತಂತ್ರ್ಯ.

೨. ಧಾರ್ಮಿಕ ಸ್ವಾತಂತ್ರ್ಯ

೩. ಎಲ್ಲ ಸಂಸ್ಕೃತಿ, ಭಾಷೆ ಹಾಗು ಲಿಪಿಗಳ ಸಂರಕ್ಷಣೆ

೪. ಲಿಂಗಬೇಧವಿಲ್ಲದೆ ಎಲ್ಲರಿಗೂ ಸಮಾನ ಹಕ್ಕು ಬಾಧ್ಯತೆಗಳು

೫. ನ್ಯಾಪಾರೋದ್ಯೋಗ, ಸಾರ್ವಜನಿಕ ನೌಕರಿ, ಹಾಗೂ ಅಧಿಕಾರದ ಅಥವಾ ಮಾನದ ಸ್ಥಳಗಳನ್ನು ಹೊಂದಲು ಎಲ್ಲ ನಾಗರಿಕರಿಗೂ ಅವರ ಧರ್ಮ, ಮತ, ಪಂಗಡ ಅಥವಾ ಲಿಂಗಗಳ ಕಾರಣದಿಂದ ನಿರ್ಬಂಧವಿರಕೂಡದು.

೬. ಸಾರ್ವಜನಿಕ ಬೀದಿ, ಭಾವಿ, ಶಾಲೆ ಹಾಗೂ ಬೇರೆ ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲ ನಾಗರಿಕರಿಗೂ ಸಮಾನ ಹಕ್ಕುಗಳಿರಬೇಕು.

೭. ಕೆಲ ನಿಯಮಗಳಿಗನುಸರಿಸಿ ಶಸ್ತ್ರಗಳನ್ನು ಹಿಡಿಯುವ ಅಧಿಕಾರ

೮. ಕಟ್ಟಳೆಗೆ ವಿರುದ್ಧವಾಗಿ ಯಾವನೊಬ್ಬನ ಸ್ವಾತಂತ್ರ್ಯವನ್ನು ಇಲ್ಲವೇ ಆಸ್ತಿಯನ್ನು ಅಪಹರಿಸಕೂಡದು

೯. ಸರ್ಕಾರವು ಧಾರ್ಮಿಕ ವಿಷಯದಲ್ಲಿ ತಟಸ್ಥವೃತ್ತಿಯನ್ನು ಸ್ವೀಕರಿಸತಕ್ಕದ್ದು.

೧೦. ವಯಸ್ಸಿಗೆ ಬಂದವರೆಲ್ಲರಿಗೂ ಮತಾಧಿಕಾರವಿರಬೇಕು.

೧೧. ಎಲ್ಲರಿಗೂ ಧರ್ಮಾರ್ಥವಾಗಿ ಸ್ವಾಧಮಿಕ ಶಕ್ತಿ ಶಿಕ್ಷಣವು ದೊರೆಯಲೇಬೇಕು.

೧೨. ಯಾರಿಗೂ ಪದವಿಗಳನ್ನು [Titles] ಕೊಡಬಾರದು.

೧೩. ದೇಹಾಂತ ಶಿಕ್ಷೆಯು ತೆಗೆದು ಹಾಕಲ್ಪಡಬೇಕು.

೧೪. ಎಲ್ಲರಿಗೂ ಬೇ ಕಾದಲ್ಲಿ ಹೋಗುವ, ವಸಾಹತು ಮಾಡುವ ಮತ್ತು ಆಸ್ತಿಯನ್ನು ಮಾಡುವ ಅಧಿಕಾರವಿರುವದಲ್ಲದೇ, ಕಾಯಿದೆಯ ಸಮಾನ ಸಂರಕ್ಷಣೆ ಇರಬೇಕು.

೧೫. ಕೂಲಿಕಾರರಿಗೆ ಯೋಗ್ಯ ಜೀವನಕ್ಕೆ ಅವಶ್ಯವಿರುವಷ್ಟಾದರೂ ವೇತನ, ದುಡುಮೆಯ ಮರ್ಯಾದಿತ ಕಾಲ, ಅವರ ಆರೋಗ್ಯ ಮುಪ್ಪು ಬೇನೆ, ಹಾಗೂ ನಿರುದ್ಯೋಗದ ಸಮಯದಲ್ಲಿ ಸಂರಕ್ಷಣೆ ಮತ್ತು ದುಡಿಯುವವರ ಮತ್ತು ದುಡಿಯಿಸಿಕೊಳ್ಳುವವರ ನಡುವಿನ ಜಗಳಗಳನ್ನು ತೀರಿಸಲು ಪಂಚಾಯತಿ ಮುಂಡಳವಿರಬೇಕು.

೧೬. ಎಲ್ಲ ಕೂಲಿಕಾರರನ್ನು ಗುಲಾಮುಮುಗಿರಿಯಿಂದ ಮುಕ್ತಮಾಡಬೇಕು.

೧೭ ಸ್ತ್ರೀ ಕೂಲಿಕಾರರ ವಿಶಿಷ್ಟ ಸಂರಕ್ಷಣೆ.

೧೮. ಶಾಲೆಗೆ ಹೋಗುವ ವಯಸ್ಸಿನ ಬಾಲಕರನ್ನು ಗಿರಣಿಗಳಲ್ಲಿ ಮತ್ತು ಖಣಿಗಳಲ್ಲಿ ದುಡುಮೆಗೆ ತೆಗೆದುಕೊಳ್ಳಲು ನಿರ್ಬಂಧವಿರಬೇಕು.

೧೯ ತಮ್ಮ ಹಿತಸಂರಕ್ಷಣದ ಸಲುವಾಗಿ ಸಂಘಗಳನ್ನೇರ್ಪಡಿಸುವ ಅಧಿಕಾರವು, ಎಲ್ಲ ಕೆಲಸಗಾರರಿಗೂ ಮತ್ತು ಒಕ್ಕಲಿಗರಿಗೂ ಇರಬೇಕು.

೨೦. ಭೂಕಂದಾಯ ಲಾವಣಿ ಮುಂತಾದ ಪದ್ಧತಿಗಳನ್ನು ಸುಧಾರಿಸುವದು ಲಾಭದಾಯಕವಲ್ಲದ ಭೂಮಿಗಳ ತೆರಿಗೆಯನ್ನು ಸೂಟಿಬಿಡುವದು, ಹಾಗೂ ವಿಶೇಷತಃ ಚಿಕ್ಕ ಚಿಕ್ಕ ಹೊಲಗಳ ಭೂಕಂದಾಯವನ್ನು ಕಡಿಮೆಮಾಡುವದು.

೨೧. ಪ್ರಾಗತಿಕ Graduated] ಪ್ರಮಾಣದ ಮೇಲೆ ವಾರಸಾ ಕರವಿರತಕ್ಕದ್ದು.

೨೨. ಸೈನ್ಯಖಾತೆಯ ಖರ್ಚನ್ನು ಈಗಿನ ಅರ್ಧಕ್ಕಾದರೂ ಇಳಿಸಬೇಕು

೨೩. ಸರ್ಕಾರದ ಯಾವ ಅಧಿಕಾರಿಯ ಸಂಬಳವೂ 500 ರೂಪಾಯಿಗಿಂತ ಹೆಚ್ಚಿರಕೂಡದು.

೨೪. ಉಪ್ಪಿನ ಮೇಲಿ ಕರವಿರ ಕೂಡದು.

೨೫. ಪರದೇಶೀ ಹಾಗೂ ಬಟ್ಟೆಗಳ ಸ್ಪರ್ಧೆಯಿಂದ ದೇಶೀ ನೂಲು ಮತ್ತು ಬಟ್ಟೆಗಳು ರಕ್ಷಿಸಲ್ಪಡಬೇಕು.

೨೬. ಮಾದಕ ಪದಾರ್ಥಗಳಿಗೆ ಸಂಪೂರ್ಣ ನಿರ್ಬಂಧವಿರಬೇಕು.

೨೭. ದೇಶದ ಉನ್ನತಿಗೆ ಸಹಾಯವಾಗುವಂತೆ ವಿನಿಮಯ ಮತ್ತು ಚಲನದ ಮೇಲೆ ರಾಷ್ಟ್ರದ ಸ್ವಾಮಿತ್ವವಿರಬೇಕು.

೨೮. ರಾಷ್ಟ್ರೀಯ ಉದ್ಯೋಗಗಳು ಖಣಿಗಳು, ಗಿರಣಿಗಳು, ರೇಲ್ವೆ ಮುಂತಾದವುಗಳು ರಾಷ್ಟ್ರೀಯ ಸರ್ಕಾರದವಾಗಬೇಕು.

೨೯. ರೈತರ ಸಾಲ ತೀರಿಸುವ ಬಗ್ಗೆ ಸಹಾಯ, ಮತ್ತು ಹೆಚ್ಚಿನ ಬಡ್ಡಿ ತೆಗೆಯುಕೊಳ್ಳಲಿಕ್ಕೆ ನಿರ್ಬಂಧ.

೩೦. ಎಲ್ಲ ನಾಗರಿಕರಿಗೆ ಸೈನ್ಯಶಿಕ್ಷಣವು ದೊರೆಯಬೇಕು.

ಸ್ವಧರ್ಮಾಶ್ರಮ ಸಹಾಯಕ್ಕೆ ಉಚಿತ ನಾಟಕ.

ಕೆ. ವಿ. ಪುಟ್ಟಪ್ಪನವರಿಂದ ರಚಿಸಲ್ಪಟ್ಟ.

ನನ್ನ ಗೋಪಾಲ.

ಈ ನಾಟಕವನ್ನು ಬಳ್ಳಾರಿ ಸ್ವಧರ್ಮಾಶ್ರಮದವರು ಅನಾಥ ಶರಣಾಲಯದ ಸಹಾಯಾರ್ಥವಾಗಿ 22-1-39 ಭಾನುವಾರ ಮತ್ತು 4-2-39 ಶನಿವಾರ ಪ್ರದರ್ಶಿಸಿದರು. ಇದರಲ್ಲಿ ಪಾತ್ರವನ್ನು ವಹಿಸಿದವರು ಅತಿ ಸಣ್ಣ ವಯಸ್ಸಿನ ಬಾಲಕಿಯರು ಮತ್ತು ಕೆಲವರು ಬಾಲಕರು.

(1) ನನ್ನಗೋಪಾಲ— ರಾಜಲಕ್ಷ್ಮಿ.
(2) ತಾಯಿ — ರಾಮಚಂದ್ರ.
(3) ಬನದ ಗೋಪಾಲ ಅಥವಾ ಕೃಷ್ಣ— ವಿಮಲಾದೇವಿ.
(4) ಗುರು— ಪರೋಜಿನೀದೇವಿ.
(5) ಸ್ವಯಂಸೇನಕದಳ — ಲಕ್ಷ್ಮಿನಾರಾಯಣ.
(6) ತುಲಸಿಬಾಯಿ— Fashionable Lady in comic scene
(7) ಲೋಕಾಭಿರಾಮ— ನರ್ತನ.
(8) ರಾಮದಾಸ್— ದಾಸಯ್ಯ
(9) ಶೇಷಗಿರಿ— ದಾಸರು
(10) ಅರವಿಂದ— ಬುಡಬುಡಕಿ
in comic scene.

ಈ ನಾಟಕದಲ್ಲಿ ಪಾತ್ರವಹಿಸಿದ "ನನ್ನ ಗೋಪಾಲ" (ರಾಜಲಕ್ಷ್ಮಿ) ತಾಯಿ, ರಾಮಚಂದ್ರ ಮತ್ತು ನರ್ತನ ಮಾಡಿದ ಲೋಕಾಭಿರಾಮನಿಗೆ ಮತ್ತು ತುಲಸಿಬಾಯಿಗೆ ಬಳ್ಳಾರಿ ಸಾರ್ವಜನಿಕರಿಂದ ಪದಕಗಳು ಹಂಚಲ್ಪಟ್ಟವು. ಬಳ್ಳಾರಿ ನಾಟಕ ರಂಗದಲ್ಲಿ. ಬಾಲಕಿಯರೇ ಪಾತ್ರವಹಿಸಿ ಜನಪ್ರೀತಿಗೊಳಗಾದ್ದು ಇದೇ ಸೊದಲನೆಯ ಸಲವೆನ್ನಬಹುದು.

ಗ್ರಾಮೋದ್ಧಾರ

ಮಾ॥ ಗಾಂಧಿಯವರ ಲೇಖನ

'ಅಸ್ಪೃಶ್ಯತೆಯು ಇರುವುದಾದರೆ ಹಿಂದೂ ಧರ್ಮವು ಉಳಿಯುವುದಿಲ್ಲವೆಂದು ನಾನು ಹೇಳುತ್ತಲೇ ಬಂದಿದ್ದೇನೆ. ಅದೇ ರೀತಿ ಹಳ್ಳಿಗಳು ನಾಶವಾದರೆ ಭಾರತವು ನಾಶವಾಗುವುದು. ಈಗ ಹಳ್ಳಿಗಾಡಿನವರು ಅಪಾರ ಸುಲಿಗೆಗೆ ಒಳಗಾಗಿದ್ದಾರೆ. ಆ ಸುಲಿಗೆಯಿಂದ ಅವರನ್ನು ಉದ್ಧರಿಸಿದರೆ ಅವರು ಬಲಗೊಳ್ಳುವರು. ಅಪಾರ ಪ್ರಮಾಣದಲ್ಲಿ ವಸ್ತುಗಳನ್ನು ಸೃಷ್ಟಿ ಮಾಡುವಂತಹ ಕೈಗಾರಿಕೆಗಳನ್ನು ಸ್ಥಾಪಿಸುವುದರಿಂದ, ಆ ಪದಾರ್ಥಗಳ ಸಾಗಾಟದ ಸಮಸ್ಯೆಯು ಸುಲುವುದಾಗಿದೆ. ಈ ಸಮಸ್ಯೆಯ ಫಲವಾಗಿ ಹಳ್ಳಿಗಾಡಿನವರು ಪ್ರತ್ಯಕ್ಷನಾಗಿಯೋ ಅಥವಾ ಅಪ್ರತ್ಯಕ್ಷವಾಗಿಯೋ ಸುಲಿಗೆಗೊಳಗಾಗುವುದು ಖಂಡಿತ. ಆದ್ದರಿಂದ ಹಳ್ಳಿಗಾಡಿನವರು ತಮ್ಮ ಕಾಲುಮೇಲೆ ತಾವು ನಿಲ್ಲುವಂತೆ ಮಾಡಲು ನಾವು ಅವರನ್ನು ಬಲಗೊಳಿಸಬೇಕು. ಸ್ವಂತ ಉಪಯೋಗಕ್ಕಾಗಿ ಬೇಕಾದರೆ ಅಧುನಿಕ ಕಲೆಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲಿ, ಆದರೆ ಇನ್ನೊಬ್ಬರ ಸುಲಿಗೆಗಾಗಿ ಹಾಗೆ ಮಾಡಬಾರದು."

ಬರೋಡಾ ಮಹಾರಾಜರು ಕಾಲಾಧೀನವಾದರು.

ಬರೋಡಾ ಮಹಾರಾಜರಾದ ಸರ್. ಸಯಾಜಿರಾವ್ ಗಾಯಕವಾಡರವರು. 6ನೇ ತಾ॥ ವಿಧಿವಶರಾದರು. ಕಳೆದ ಅಕ್ಟೋಬರ್ ತಿಂಗಳಲ್ಲಿ ಯೂರೋಪ್ ಪ್ರವಾಸದಿಂದ ಮರಳಿದ ಮೇಲೆ, ಇವರಿಗೆ ಅಸ್ವಸ್ಥತೆ ಇದ್ದೇ ಇತ್ತು. ಸಾಯುವಕಾಲಕ್ಕೆ 76 ವರ್ಷ ವಯಸ್ಸಿದ್ದಿತು. ಬರೋಡವು ಬಹಳ ಮುಂದುವರಿದ ಸಂಸ್ಥಾನವೆಂದು ಹೆಸರಾಗಿದೆ. ಇಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣವು ಆಚರಣೆಯಲ್ಲಿದೆ. ಡಾ. ಅಂಬೇಡ್ಕರ್ (ಹರಿಜನ ಮುಖಂಡರು) ರವರಿಗೆ ಉಚ್ಚ ಶಿಕ್ಷಣವನ್ನು ಕೊಡಲಿಕ್ಕೆ ಇವರು ಪ್ರವ್ಯ ಸಹಾಯ ಮಾಡಿದರು. ಪ್ರಪಂಚದಲ್ಲಿರುವ ಆಗರ್ಭ ಶ್ರೀಮಂತರಲ್ಲಿ ಇವರೂ ಒಬ್ಬರು. ಇವರು ಮಹಾರಾಷ್ಟ್ರ ಕುಲಕ್ಕೆ ಸೇರಿದವರಾದರೂ, ಗುಜರಾತಿ-ಮರಾಠಿ ಭೇದವಿಲ್ಲದೆ, ಸರ್ವ ಸಮತ್ವ ದೃಷ್ಟಿಯಿಂದ ಎಲ್ಲರನ್ನೂ ಕಾಣುತ್ತಿದ್ದರು. ಇವರು ಅನೇಕ ಸಂಸ್ಥೆಗಳಿಗೆ ಉದಾರ ಸಹಾಯ ನೀಡಿದವರು. ಗ್ರಾಮೋದ್ಧಾರ ಕಾರ್ಯಕ್ಕಾಗಿ ತನ್ನ ಸ್ವಂತ ಹಣದಿಂದ ಒಂದು ಕೋಟಿ ರೂಪಾಯಿಗಳ ದ್ರವ್ಯ ಸಹಾಯವನ್ನು ತಮ್ಮ ವಜ್ರ ಮಹೋತ್ಸವಕಾಲವಲ್ಲಿ ನೀಡಿದರು. ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಮೀನಾಕ್ಷಿ ಭವನ ಕಾಫಿ ಕ್ಲಬ್

[ರಿಜಿಸ್ಟರ್ಡ್]

ಶಾಖೆಗಳು—

ಕಾಫಿ ಕ್ಲಬ್ ಬೆಂಗಳೂರು ರೋಡ್
ಊಟ ವಸತಿಗೃಹ ಬ್ರಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪದಲ್ಲಿ ತಯಾರಿಸಿದ ಸಿಹಿಖಾರದ ಫಲಹಾರವಸ್ತುಗಳು.

ಒಳ್ಳೆಯ ಊಟದವ್ಯವಸ್ಥೆ ಧಾರಾಳವಾಗಿ ಗಾಳಿ, ಬೆಳಕು ಬರುವ ಮಹಡಿಯ ಮೇಲಿನ ಕೊಠಡಿಗಳು ಅಧುನಿಕ ವ್ಯವಸ್ಥೆ,

ಒಂದು ಸಲ ಬಂದು ಪರೀಕ್ಷಿಸಿರಿ.

Public debt of India

BY

J. C. KUMARAPPA.

(continued from previous issue)

We shall consider the following few items which have been debited to Indian revenues in regard to this period.

		£
1.	1st. Afghan War	12
2.	Two Burmese Wars	11
3.	Expeditions to China, Persia etc.	6
4.	The Indian 'Mutiny'	40
5.	Redemption of Company's Capital and Dividends	37
		£ 109 Million

THE AFGHAN WAR

This war was undertaken by the Government of Great Britain in opposition to the desires of the East India Company and yet the whole cost has been charged up to the Indian revenues. In this connection Sir George Wingate writes:—

'The Afghan War was one of the most notable of these, and it is now well understood that this war was undertaken by the British Government without consulting the Court of Directors, and in opposition to their views. It was in fact, a purely British war, but notwithstanding this, and in defiance of a solemn expression of unanimous opinion on the part of the Court of Directors, and of a resolution of the Court of Proprietors of the East India Company that the whole cost of the war should not be thrown upon the Indian finances, the ministry required this to be done".

In letter dated 6th. April 1842, the Chairman and the Deputy Chairman of the East India Company protested and wrote to Lord Fitzgerald—

'Under these circumstances it has become the duty of the Court to claim, on behalf of India, to be relieved from any charges to which, upon a fair and impartial view, she may not justly be liable, and whilst it is very far from the Court's desire prematurely to raise any question regarding the objects of the expeditions beyond the Indus, yet they are constrained to submit that, in no view of the case it can be just or expedient that the whole charge of these operations including that of the Military reinforcements about to be effected, should be thrown on the finances of India."

On the 27th June 1842, the General Court of the East India Company resolved—

Under these circumstances it has become the duty of the Court to claim, on behalf of India, to be relieved from any charges to which, upon a fair and impartial view, she may not justly be liable; and whilst it is very far from the Court's desire prematurely to raise any question regarding the objects of the expeditions beyond the Indus, yet they are constrained to submit that, in on view of the case it can be just or expedient that the whole charge of these operations including that of the Military reinforcements about to be effected, should be thrown on the finances of India".

On the 27th June 1842, the General Court of the East India Company resolved—

[To be continued]

COFFEE POWDER.

BEST. CHEAP.

Pure coffee powder and coffee seeds available. The seeds uniformly roasted and powdered here Rates very moderate Buy and Test once Special rates for merchants.

M. S. Rao. & Brothers. BELLARY.

ಗಣ ಜಧಿಕ **ಉತ್ತಮ ಕಾಫಿ ಪೌಡರು.** ಬೆಲೆ ಸುಲಭ

ನಮ್ಮಲ್ಲಿ ಕಾಫಿ ಪುಡಿ ಮತ್ತು ಕಾಫಿ ಬೀಜ ಯಾವಾಗಲೂ ದೊರೆಯುತ್ತವೆ. ಒಂದು ಸಲ ಉಪಯೋಗಿಸಿದರೆ ಅದರ ಗುಣವನ್ನು ನಿಮಗೆ ತಿಳಿಯುತ್ತದೆ. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್.

ಯಂ. ಯಸ್ ರಾವ್. ಅಂಡ್ ಬ್ರದರ್ಸ್.

ಅಪ್ಪಸಾಲ ಬೀದಿ. ಬಳ್ಳಾರಿ.

ರಾಷ್ಟ್ರ ಭಾಷೆಯಾದ

ಹಿಂದಿಯನ್ನು ಕಲಿಯಿರಿ.

ಹಿಂದೂಸ್ಥಾನದಲ್ಲಿ ೨೫ ಕೋಟಿ ಜನಗಳಿಗೆ ತಿಳಿಯುವ ಭಾಷೆ

ಹಿಂದೀ ಬಾಲಬೋಧಿನಿ (ಕನ್ನಡ-ತೆಲುಗು)	0 2 6
,, ಪಹಲೀ ಪುಸ್ತಕ (ಅರ್ಥ ಸಹಿತ)	0 5 0
,, ದೂಸರಿ ಪುಸ್ತಕ (,,)	0 6 0
,, ನೋತಿಬೋಧಕಾಹಾರ	0 6 0
,, ಅನುವಾದ I (ಕನ್ನಡ-ತೆಲುಗು	0 4 0
,, ಬಾತ್‌ಚೀತ್	0 3 0
Hindi English self Instructor	1 0 0
Guide to Hindusthani	1 0 0
ಹಿಂದೀ-ತೆಲುಗು-ಯೂ-ಕನ್ನಡ ಸ್ವಬೋಧಿನಿ	0 12 0

ಅಡ್ವಾನ್ಸಿಲ್ಲದೆ ಪುಸ್ತಕಗಳನ್ನು ವಿ. ಪಿ. ಮೇಲೆ ಕಳುಹಿಸಲಾಗುವುದಿಲ್ಲ. ಪರೀಕ್ಷೆಗಳಿಗೆ ಕೂಡಬೇಕೆನ್ನುವವರು ಸಮಕ್ಷಮ ಬಂದು ಎಲ್ಲಾ ಮಾಹಿತಿ ತಿಳಿಯಬೇಕು. ಬೇಡದವರಿಸುನೆಗೆ ಬಂದು ಹಿಂದೀ ಶಿಕ್ಷಣ ಕೊಡಲಿಕ್ಕೆ ಏರ್ಪಡಿಸಲಾಗುವುದು.

ಕಾರ್ಯದರ್ಶಿ

ಜಿಲ್ಲಾ ಹಿಂದೀ ಪ್ರೇಮೀ ಮಂಡಲ

ಮಹಮ್ಮದಿಯಾನ್ ಕ್ವಾರ್ಟರ್ಸ್ ಬಳ್ಳಾರಿ.

ಶ್ರೇಷ್ಠವಾದ

ಮುದ್ರಣ ಕೆಲಸ

(Job works)

ಇಂಗ್ಲೀಷ್, ಕನ್ನಡ, ತೆಲುಗು, ಹಿಂದೀ ಭಾಷೆಗಳಲ್ಲಿ

ಬೇರೆ ಬೇರೆ ಬಣ್ಣಗಳ ಬ್ಲಾಕು ಸಮೇತ

ಹೊತ್ತಿಗೆ ಸರಿಯಾಗಿ ಬೇಕೆಂದಿದ್ದರೆ

ವಿಠಲ ಮುದ್ರಣಾಲಯಕ್ಕೆ

ಬನ್ನಿರಿ

1. ಉತ್ತಮ ಮುದ್ರಣವು ಕಲಿಯ ಹೆಗ್ಗುರುತು!
2. ಹೊತ್ತಿಗೆ ಸರಿಯಾಗಿ ದೊರೆಯುವದು ವ್ಯವಹಾರಕ್ಕೆ ಭೂಷಣ!!
3. ಕೆಲಸಗಳೆಲ್ಲ ಸಾಮಾನ್ಯ ದರಪಟ್ಟಿಯಲ್ಲಿ ಮಾಡಲ್ಪಡುವವು.

ಕೆಲಸ ಕೊಟ್ಟು ಒಮ್ಮೆ ಪರೀಕ್ಷಿಸಿರಿ!

— ವ್ಯವಸ್ಥಾಪಕ

ವಿಠಲ ಮುದ್ರಣಾಲಯ,

ತೇರು ಬಜಾರು ಬಳ್ಳಾರಿ.

[ಇನೇ ಪುಟದಿಂದ ಸಾಗಿಬಂದದ್ದು]

ಶ್ರೀ ಡಿ ಯಜ್ ವೆಂಕೋಬರಾಯರು ಬೆಣ್ಣೆ ಈ ನೀತಿಯನ್ನವಲಂಬಿಸಬೇಡಿರಿ. ನಿಮಗೆ ಹಣಸಾಲದು ಬಿದ್ದರೆ ಎಲ್ಲಾ ನವ ಕರ ಸಂಬಳವನ್ನೂ ಸಮಾನವಾಗಿ ಕತ್ತರಿಸಿರಿ ಎಂದರು.

ಅಬ್ದುಲ್ ರಹೀಂ ಸಾಹೇಬರು ಉರ್ದುವಿನಲ್ಲಿ ಕಡಿತವು ಅವಶ್ಯಕವೆಂದು ಹೇಳಿದರು.

ಕೊನೆಯಲ್ಲಿ ಅಧ್ಯಕ್ಷರಾದ ಮಹಾಬಲೇಶ್ವರಪ್ಪನವರು ಉಪಸಂಹಾರ ಭಾಷಣ ಮಾಡುತ್ತ ಭಾಷಣಕಾರರೆಲ್ಲಾ ಪುರಸಭೆಯ ಹಿತವನ್ನೆಟ್ಟು ಮಾತಾಡಿದರೆಂದು ಹೇಳಿ ಪುರಸಭೆಯು ಬಹುಸಂಖ್ಯಾಕ ಸದಸ್ಯರ ಸೂಚನೆಗಳಿಗೆ ಬೆಂಬಲ ಕೊಡುವ ನಿರ್ಣಯವನ್ನಿಟ್ಟರು. ಅದು ಶ್ರೀ ಗಂಗಾವತಿಯವರೊಬ್ಬರಿಂದ ವಿರೋಧಿಸಲ್ಪಟ್ಟು ಬಹು ಸಂಖ್ಯಾಕರಿಂದ ಪಾಸಾಯಿತು.

ಕಲೆಕ್ಟರವರಲ್ಲಿ ಶಿಷ್ಟಮಂಡಳ.

ಪುರಸಭೆಯ ಬಹುಸಂಖ್ಯಾಕ ಸದಸ್ಯರು ಕಡಿತವು ಅವಶ್ಯಕನೆಂದೂ, ಅಲ್ಪ ಸಂಖ್ಯಾಕರು ಇದು ಅಕ್ರಮ, ಅನಾವಶ್ಯಕನೆಂದೂ, ಇಬ್ಭಾಗದವರು ಕಲೆಕ್ಟರವರನ್ನು ಭೇಟಿಮಾಡಿದರು. ಕಲೆಕ್ಟರವರು, ಶಾಂತಚಿತ್ತರಾಗಿ ಎಲ್ಲವನ್ನೂ ಕೇಳಿಕೊಂಡರು.

ಅಂಬಾ ಭವನ ಕಾಫೀ ಕ್ಲಬ್

(ರಿಜಿಷ್ಟರ್ಡ್)

ಮತ್ತು

ಶಾಖೆ:— **ಊಟದ - ಹೋಟಲ್.**

ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪದಲ್ಲಿದೆ. ಶುದ್ಧ ತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗ್ಲಾಸ್ - ಬೆಳಕು ಮತ್ತು ಇತರ ಅನುಕೂಲಗಳಿರುವ ಕೊಠಡಿಗಳು, ಭೋಜನ ಸಮಾರಂಭ ಪಾರ್ಟಿಗಳ ಏರ್ಪಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆಮಾಡುವೆವು.

ಪ್ರೊಪ್ರಯಿಟರ್ಸು:—

ಶಿ. ಕನ್ನಯ್ಯ, ಹೆಚ್. ಕರಿಬಸಪ್ಪ.

ಪ್ರಾಮಿಸರಿ ನೋಟಿನ ಸಾಲ ಮತ್ತು ಹೈಕೋರ್ಟು ತೀರ್ಪು

ಪ್ರಾಮಿಸರಿ ನೋಟು ಕಾಯ್ದೆಗೊಳಪಟ್ಟಿದೆ.

ಮದ್ರಾಸ್ ಇಲಾಖೆಯಲ್ಲಿ ಸಾಸಾದ ರೈತ ಋಣವಿಮೋಚನಾ ಕಾಯ್ದೆಗೆ ಪ್ರಾಮಿಸರಿ ನೋಟಿನ ಸಾಲವು ಒಳಪಡುವುದೇ ಎಂಬ ವಿಷಯವು ಪ್ರಾಂತೀಯ ಸರ್ಕಾರಕ್ಕೆ ಇಂಥಾ ನಿಬಂಧನೆಗಳನ್ನು ಮಾಡುವ ಅಧಿಕಾರವಿದೆಯೇ ಎಂಬ ಅಂಶವೂ ವಗೈರೆ ಮದ್ರಾಸ್ ಹೈಕೋರ್ಟಿನಲ್ಲಿ ಚರ್ಚೆಗೆ ಬಂದು ಈ ವಾರ ತೀರ್ಮಾನವಾಯಿತು.

"ಮದ್ರಾಸು ಪ್ರಾಂತೀಯ ಸರ್ಕಾರಕ್ಕೆ ಇಂಥಾ ನಿಬಂಧನೆಗಳುಳ್ಳ ಕಾಯ್ದೆಯನ್ನು ಮಾಡುವ ಅಧಿಕಾರವಿದೆ. ಇದು ಅಖಿಲ ಭಾರತ ಪ್ರಶ್ನೆಯಲ್ಲ. ಪ್ರಾಮಿಸರಿ ನೋಟುಗಳ ಸಾಲವೂ ಕೂಡ ರೈತಋಣ ವಿಮೋಚನಾ ಕಾಯ್ದೆಗೆ ವಳಪಟ್ಟಿದೆ. ಇತರ ಸಾಲಗಳ ಅಸಲು ಬಡ್ಡಿಯು ಈ ಕಾಯ್ದೆಯ ಪ್ರಕಾರ ಕಡಿಮೆಯಾಗುವಂತೆ ಪ್ರಾಮಿಸರಿ ನೋಟುಗಳ ಅಸಲು ಬಡ್ಡಿಯಾದರೂ ಈ ಕಾಯ್ದೆಯ ಪ್ರಕಾರ ಕಡಿಮೆಯಾಗುವುದು. ನ್ಯಾಯವಾಗಿದೆ" ಎಂಬರ್ಥವುಳ್ಳ ತೀರ್ಪನ್ನು ಹೈಕೋರ್ಟು ನ್ಯಾಯಾಧೀಶರು ಕೊಟ್ಟರು.

ರಾಯರಸೀಮೆ ಮಹಾಸಭೆ

ಮುಖ್ಯಮಂತ್ರಿಗಳಲ್ಲಿ ಶಿಷ್ಟಮಂಡಲ

ಅದವಾನಿಯಲ್ಲಿ ಸ್ಥಾಪಿತವಾದ ರಾಯರಸೀಮೆ ಮಹಾಸಭೆಯ ಪರವಾಗಿ, ಮುಖ್ಯ ಕಾರ್ಯದರ್ಶಿಗಳೂ ಅಡ್ವೋಕೇಟರೂಆದ ಶ್ರೀ ಹೆಚ್. ಲಿಂಗಾರೆಡ್ಡಿಯವರು, ಶ್ರೀ ಸೂರ್ಯನಾರಾಯಣ, ದಿ ಬ. ಭುಜಂಗರಾವ್ ಕಡಪಾ, ದಿ. ಬ. ವಿಜಯರಾಘವಾಚಾರ್ ಚಿತ್ತೂರು, ಶ್ರೀ ಜಿ ಕೃಷ್ಣಮೂರ್ತಿ ಪ್ರೊದಟೂರು, ಶ್ರೀ ಜಾಟೂರು ರಾಮಯ್ಯ ಮುನಿಸಿಪಲ್ ಛೇರ್ಮನ್ ಕರ್ನೂಲು ಇವರೊಡನೆ 11-2-39ನೇ ತಾ॥ ಮುಖ್ಯ ಮಂತ್ರಿಗಳನ್ನು ಕಂಡರು. ಈ ಶಿಷ್ಟಮಂಡಲದ ಭೇಟಿಯು ಲ್ಯಾಂಡ್ ಮೋರ್ಟ್‌ಗೇಜ ಬ್ಯಾಂಕದಖಲೀಲ ಬಿಲ್ಡಿಂಗ್ಸ್‌ನಲ್ಲಿ ಮಧ್ಯಾಹ್ನ 2ರಿಂದ 3 ವರೆಗೆ ಏರ್ಪಾಟಾಗಿದ್ದಿತು.

ತುಂಗಭದ್ರಾಯೋಜನೆ. ಮೆಡಿಕಲ್ ಕಾಲೇಜ ಪ್ರವೇಶಕ್ಕೆ ದತ್ತ ಮಂಡಲದವರಿಗೆ ನಿಯಮಿತ ಸ್ಥಾನಗಳು. ಮದ್ಯನಿಷೇಧ ಕಾಯ್ದೆಯ ಪ್ರಯೋಗ. ಆರ್ಥಿಕ ಯೋಜನೆಗಳಿಗೆ ಬೆಂಬಲ ಮತ್ತು ನೌಕರಿಗಳಲ್ಲಿ ದತ್ತ ಮಂಡಲದವರಿಗೆ ಸ್ಥಾನ ವಗೈರೆ ವಿಷಯಗಳು ವಿವೇಚಿಸಲ್ಪಟ್ಟವು. ಮಂತ್ರಿಗಳು ಶಾಂತಚಿತ್ತರಾಗಿ ಎಲ್ಲವನ್ನೂ ಕೇಳಿಕೊಂಡರು.

ಕರ್ನೂಲು ಸಭೆಯು ಮುಂದಕ್ಕೆ ಹಾಕಲ್ಪಟ್ಟಿತು.

ಈ ತಿಂಗಳು 18ನೇ ತಾ॥ ಕರ್ನೂಲಿನಲ್ಲಿ ನಡೆಯಬೇಕಾದ ರಾಯರಸೀಮೆ ಮಹಾಸಭೆಯ ಕಾರ್ಯಕಾರಿಣೀ ಸಮಿತಿಯು ಕೆಲ ಅನಾನುಕೂಲಗಳ ನೂಲಕ ಮುಂದುವರಿಸಲ್ಪಟ್ಟಿದೆಯೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಸ್ವದೇಶ

ಮದಾಸ್ ಹೈಕೋರ್ಟಿನ ಜಸ್ಟಿಸ್ ವರದಾಚಾರ್ಯರವರು, ಫೆಡರಲ್ ಕೋರ್ಟಿನ ನ್ಯಾಯಾಧೀಶರಾಗಿ ನೇಮಕಟ್ಟರು. ಅವರು ದೆಹಲಿಗೆ ಹೋಗಲಿರುವರು.

ಎಸ್. ವಿ. ಶೆಟ್ಟಿ ಅಂಡ ಬ್ರದರ್ಸು, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆಯೂ ಇರುತ್ತದೆ ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಷ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ.

ವೆಸ್ಟ್‌ಎಂಡ್ ನಾಜುಗಳೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಮ್ಮೆಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

ಅಂಗ್ವೆಂಟೋ.,

ಎಲ್ಲ ಚರ್ಮವ್ಯಾಧಿಗಳಿಗೂ ರಾಮಬಾಣ ಮುಲಾಮು

ಕಜ್ಜಿ ತುರಿ, ಇಸಬು, ಗಜಕರ್ಣ, ಹುಳಗಳು, ಚಿಲದಿ ಚಟ್ಟ ಸುಟ್ಟ ಜೊಬ್ಬೆಗಳು, ಸ್ಥಾಯಗಳು, ಉಗುರುಸುತ್ತು ಸಾದ ಒಡೆದ ಬಿರುಕುಗಳು, ತೀರ ಹಳೇಹುಣ್ಣು, ಹುರುಕುಗಳು ಮುಂತಾದವು ಖಾತ್ರಿಯಾಗಿಯೂ, ಅತಿ ತೀವ್ರವಾಗಿಯೂ, ಗುಣವಾಗುತ್ತವೆ. ಪ್ರತಿಯೊಬ್ಬರ ಮನೆಯಲ್ಲಿಯೂ ಅಗತ್ಯವಾಗಿ ಸಂಗ್ರಹಿಸತಕ್ಕದ್ದು.

ಬೆಲೆ ಸೀಸೆ ಒಂದಕ್ಕೆ ರೂ. 0—8—0 ಟಿ. ಕ. ಪ್ರತ್ಯೇಕ.

ಜೀವನ ಸುಧಾ ಫಾರ್ಮಸಿ.

ಸೋಲ ಏಜಂಟರು:—ಸರೋವರ ಬ್ರದರ್ಸು, ಬಳ್ಳಾರಿ.

Do You want your business to prosper in these Parts ?
If so, 'NAVA BHARAT' is the only medium through which you can advertise widely & get profits
Rates very moderate.
Apply to day
Manager,
NAVA BHARAT
BELLARY.

'Samala Pomade'
[REGD.]
DELIGHTFULLY SCENTED
Makes the hair soft smooth. The pleasant & fascinating odour is liked by one and all

'ಶಾಮಲ ಪೊಮೇಡು'
(ರಿಜಿಸ್ಟರ್ಡ್)
ಮನೋಹರವಾದ ಸುವಾಸನೆಯುಳ್ಳದ್ದು.
ಕಲಿಯುಕೂದಲುಗಳ ಶೋಭೆಯನ್ನು ಹೆಚ್ಚಿಸುವದು
ಅಲ್ಲದೆ ಮೆದುಳಿಗೆ ಹಿತಕರವಾದ್ದು.

NAVA BHARAT. BELLARY.
(With which is incorporated 'Congress Bulletin')
The leading Nationalist Weekly.
THE RATES of SUBSCRIPTION.

	Annual	Half Yearly
Local	1 8 0	1-0-0
Moffusil	2 0-0	1—4—0

'ನವ ಭಾರತ' ಬಳ್ಳಾರಿ.
[ಉಚ್ಚಲ ರಾಷ್ಟ್ರೀಯ ವಾರ ಪತ್ರಿಕೆ.]

	ವರ್ಷ	6 ತಿಂಗಳು
ಚಂದಾ ನಿವರ ಬಳ್ಳಾರಿ ನಗರ	1-8-0	1-0 0
ಪಟ್ಟಣ	2-0-0	1-4 0

ನಿಮ್ಮ ವ್ಯಾಪಾರದಲ್ಲಿ ಅಭಿವೃದ್ಧಿಯಾಗಬೇಕೋ ?
ನಿಮಗೆ ಲಾಭ ದೊರೆಯಬೇಕೋ ?
ನಿಮ್ಮ ವಸ್ತುಗಳಿಗೆ ಗಿರಾಕಿಗಳು ದೊರೆಯಬೇಕೋ?
ಹಾಗಾದರೆ, ಈ ಪ್ರಾಂತದಲ್ಲಿ ವಿಶೇಷ ಪ್ರಚಾರ ವಿರುವ **'ನವ ಭಾರತ'** ವಾರ ಪತ್ರಿಕೆಯಲ್ಲಿ ಜಾಹೀರಾತು ಕೊಡಿರಿ.
ಧರಗಳು - ಅತಿಸುಲಭ. ಈ ದಿನವೇ ಬರೆಯಿರಿ
ಮ್ಯಾನೇಜರು,
"ನವ ಭಾರತ"
ಬಳ್ಳಾರಿ.

Patent medicines, Tonics, injections Ayurvedic Preparations & Oilman-stores — Go to the shop. Cheapest in Bellary.
M. S. V. Bros,
Car Street, **BELLARY.**
ಇಂಗ್ಲೀಷ್ ಔಷಧಗಳು. ಇಂಜೆಕ್ಷನ್ ಮತ್ತು ಇತರ ಆಯುರ್ವೇದೀ ಔಷಧಗಳು, ಸ್ಟೇಷನರಿ ವಸ್ತೆ ಸುಲಭ ಬೆಲೆಯಲ್ಲಿ ದೊರೆಯುತ್ತವೆ.
ಯಂ. ಯಸ್. ವಿ. ಬ್ರದರ್ಸ್,
ತೇರು ಬೀದಿ, ಬಳ್ಳಾರಿ.

Nava Bharat, Bellary.

Sri

Printed at Vittal Press. Car Street Edited & Published by T. B. Keshava Rao. BELLARY

'ವಂದೇಮಾತರಂ'

THE ನವಭಾರತ

(ಇದರಲ್ಲಿ 'ಕಾಂಗ್ರೆಸ್' ಬುಲೆಟಿನ್' ಸಮಾವೇಶವಾಗಿದೆ)

ಉಜ್ವಲ · ರಾಷ್ಟ್ರೀಯ ವಾರ ಪತ್ರಿಕ.

ವಾರ್ಷಿಕ ಪೋಷಕ ದ್ರವ್ಯ.
ರಾಜ ಪೋಷಕರು, 10-0-0
ಪೋಷಕರು, 5-0-0

ಸಂಪಾದಕ:— ಟಿ. ಬಿ. ಕೇಶವರಾವ್.

ವಾರ್ಷಿಕ ಚಂದಾ
ಪರಸ್ಥಳದವರಿಗೆ, 2-0-0
ಬಳ್ಳಾರಿಯವರಿಗೆ, 1-8-0

ಉತ್ತಿಷ್ಠತ ! ಜಾಗ್ರತ !! ಸ್ರ್ವಾಸ್ಯವರಾನ್ನಿ ಬೋಧತ.

ಸಂಚಿಕೆ ೧ | ಬಳ್ಳಾರಿ, ಫೆಬ್ರವರಿ 25 ನೇ ಶನಿವಾರ 1939. | ಪ್ರತಿ ೩೧

ಮುಖ್ಯ ಮಂತ್ರಿಗಳಾದ ಶ್ರೀ ಸಿ. ರಾಜಗೋಪಾಲಾಚಾರ್ಯರವರು. 1939–40ರ ಆಯ . ವ್ಯಯ ಪಟ್ಟಿಯನ್ನು 20ನೇ ತಾ! ಮಂಡಿಸಿದರು.

ಈ ವರ್ಷದ ಅದಾಯ ರೂ. 162345000
,, ವ್ಯಯ ,, 164072000

ಕಡಿಮೆ ಬೀಳುವದು ರೂ. 1727000

ಹೊಸಕರಗಳು— ವಿದ್ಯುತ್ಶಕ್ತಿ, ಪೆಟ್ರೋಲು, ನುತ್ತು ತಂಬಾಕು. ಇವುಗಳ ಮೇಲೆ ಹೊಸ ತೆರಿಗೆಯು ನಿಧಿಸಲಾಗುವುದು.

ಬಂಗಾಲದ ಗವರ್ನರರು ಮರಣವಾದರು.

ಬಂಗಾಲ ಪ್ರಾಂತದ ಗವರ್ನರರಾದ ಲಾರ್ಡ್ ಬ್ರೇಬರ್ನ್‌ರು 23ನೇ ತಾ ಪ್ರಾ 10—48ಕ್ಕೆ ನಿಧನವಾದರೆಂದು ಪ್ರಕಟವಾಗಿದೆ. ಇವರು 1933ಕ್ಕೆ ಬೊಂಬಾಯಿ ಪ್ರಾಂತ್ಯದ ಗವರ್ನರರಾಗಿ ಬಂದರು. ಬಹಳ ಚಿಕ್ಕ ವಯಸ್ಸಿನವರಾದರೂ. ಇವರ ಕಾರ್ಯದಕ್ಷತೆಯಿಂದ 1937ನೇ ನವಂಬರ್ ತಿಂಗಳಲ್ಲಿ ಬಂಗಾಳದ ಗವರ್ನರರಾಗಿ ಮತ್ತೆ ನಿಯಮಿಸಲ್ಪಟ್ಟರು. ಈಗಿನ ವಾಯಿಸ್ರಾಯರು ರಜಾಹೋದಾಗ 4 ತಿಂಗಳ ಕಾಲ ವೈಸ್ರಾಯ ಪದವಿಯನ್ನೂ ನೋಡಿದರು. ಆಸ್ಪಾಮಿನ ಗವರ್ನರರಾದ ಸರ್ರಾಬರ್ಟ್‌ರೀಡ್‌ರವರು ಬಂಗಾಳದ ಗವರ್ನರರಾಗಿ ನಿರ್ಧಾರವಾದರು.

ನಿಮಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಡಲಾರೆವು.

ಅರಬ ಯಹೂದಿ ಜನರಲ್ಲಿ ಸಂಧಿಯನ್ನು ಕುದುರಿಸಲು ಒಂದು ಪರಿಷತ್ತು ಲಂಡನ್ ನಗರದಲ್ಲಿ ಯೇರ್ಪಾಟಾಗಿದ್ದಿತು. ಅರಬರು ತಮಗೆ ಪೂರ್ಣ ಸ್ವಾತಂತ್ರ್ಯವು ಬೇಕೆಂದು ವಾದಿಸಿದರು. ಆಲ್ಲದೆ ಯಹೂದಿಯರು ಇನ್ನು ಮೇಲೆ ತಮ್ಮಲ್ಲಿ ಬಂದು ನೆಲೆಸುವುದನ್ನು ತಡೆಗಟ್ಟಿಲು ಕೋರಿದರು. ಬ್ರಿಟಿಶರು ಇವರ ಬೇಡಿಕೆಗಳನ್ನೆಲ್ಲಾ ನಿರಾಕರಿಸಿರುವಂತೆ ತಿಳಿದುಬಂದಿದೆ.

ನವಭಾರತ

ಶನಿವಾರ ಫೆಬ್ರವರಿ 25. 1939.

ಪ್ರಾಂತಾಭಿವೃದ್ಧಿ ಮತ್ತು ಹೊಸ ತೆರಿಗೆಗಳು.

★

ಕಾಂಗ್ರೆಸ್ ಸರಕಾರಗಳು ಜಾರಿಯಲ್ಲಿರುವ ೧೧ ಪ್ರಾಂತ್ಯಗಳಲ್ಲೂ ಪ್ರಜೆಗಳ ಮತ್ತು ಬಡ ಶ್ರೈತರ ಹಿತದ ದೃಷ್ಟಿಯಿಂದ ಅನೇಕ ಕಾಯ್ದೆಗಳನ್ನು ಮಾಡಲಾಗಿದೆ. ಇದರಿಂದ ಸರಕಾರದ ಆದಾಯವು ಕಡಿಮೆಯಾಗಿದೆ. ಇದನ್ನು ಸರಿಮಾಡಲು ಆಯಾ ಪ್ರಾಂತದ ಮುಖ್ಯ ಮಂತ್ರಿಗಳು ಹೊಸ ತೆರಿಗೆಗಳನ್ನು ಹಾಕಬೇಕು. ಇಲ್ಲವೇ ಸಂಬಳ ಕಡಮೆಮಾಡಬೇಕು. ಮದ್ರಾಸಿನಲ್ಲಿ ೧ ಜಿಲ್ಲೆಗಳಲ್ಲಿ ಮುಧ್ಯಪಾನ ನಿಷೇಧವನ್ನು ಜಾರಿಗೆ ಬಂದಿರುವುದರಿಂದ, ಒಪಲ ಹಣಕೊರತೆ ಬಿದ್ದಿದೆ. ನಮ್ಮ ಮುಖ್ಯ ಮಂತ್ರಿಗಳು ಬಹುವಾಗಿ ಶೋಚಿಸಿ, ಪೋಟಾರ್ ಪೆಟ್ರೋಲ್, ತಂಬಾಕು, ಮತ್ತು ವಿದ್ಯುಚ್ಛಕ್ತಿಯ ಉಪಯೋಗ ಈ ಮೂರರ ಮೇಲೆ ಕರಗಳನ್ನು ನಿರ್ಣಯಿಸಿದ್ದಾರೆ. ಇದು ಬಡ ಶ್ರೈತರಿಗೆ ಸಂಬಂಧಿಸಿದುವಲ್ಲ. ಮೋಟರನ್ನು ಇಟ್ಟಿರುವವನಾದಲಿ ಶಿಗರೇಟ್ ಸೇದುವವನಾಗಲಿ, ಮತ್ತು ವಿದ್ಯುತ್ಶಕ್ತಿಯನ್ನು ಉಪಯೋಗಿಸುವವನಾಗಲಿ ಬಡವನಲ್ಲ.

ಸರಕಾರದ ಕೃಷಿಶಾಖೆಯಲ್ಲಿ ಇಷ್ಟು ದಿನ ಶ್ರೀಮಂತರಿಗೆ ಆಶ್ರಯವಿದ್ದಿತು. ಈಗಿರುವ ಸರಕಾರವು ಬಡವರ ಶ್ರೈತರ ಪರಿಸ್ಥಿತಿಯನ್ನು ಸುಧಾರಿಸಲು ಪಣ ತೊಟ್ಟಿರುವುದರಿಂದ ಇವುಗಳನ್ನು ದೇಶ ಹಿತ ದೃಷ್ಟಿಯಿಂದ ಸಮರ್ಥಿಸಲೇಬೇಕು. ಇಷ್ಟರ ಮೇಲೆಯೂ ಹಣದ ಕೊರತೆಬಿದ್ದರೆ ಸಂಬಳದಲ್ಲಿ ಕಡಿತವಾಗುವುದೆಂದು ಮುಖ್ಯ ಮಂತ್ರಿಗಳು ಸೂಚಿಸಿರುತ್ತಾರೆ. ಅವಶ್ಯವಾಗಿ ಮಾಡಬೇಕು. ಮಂತ್ರಿಗಳಿಗಿಂತಲೂ ಹೆಚ್ಚಾಗಿ ಸಂಬಳ ತೆಗೆದುಕೊಳ್ಳುವ ಅಧಿಕಾರಿಗಳು ಲೆಕ್ಕವಿಲ್ಲದಷ್ಟು ಜನರು ಇದ್ದಾರೆ. ಈ ಕಾರಣ ಜನ ಬಲವಿರುವ ಮುಖ್ಯ ಮಂತ್ರಿಗಳು ಈ ಕಾರ್ಯಗಳನ್ನೆಲ್ಲಾ ಮಾಡಲು ನಮ್ಮ ವಿನಂತಿ.

★

ತ್ರಿಪುರಿ ಕಾಂಗ್ರೆಸ್ ಅಧಿವೇಶನ.

ಈ ಸಲ ನಡೆಯುವ ತ್ರಿಪುರಿ ಕಾಂಗ್ರೆಸ್ ಅಧಿವೇಶನದ ಬಗ್ಗೆ ಕೆಲವೊಂದು ಸೂಚನೆಯು ಅಲ್ಲಿನ ಸ್ವಾಗತ ಸಮಿತಿಯವರಿಂದ ಬಂದಿದೆ. ಅದು ಎಲ್ಲರಿಗೂ ಗೊತ್ತಾಗಲೆಂದು ನಮಗೆ ಬಂದಿರುವ ಸೂಚನೆಯ ಸಾರಾಂಶವನ್ನು ಕೆಳಗೆ ಕೊಡಲಾಗಿದೆ. ಹೆಚ್ಚಿನ ಸೂಚನೆ ನಮ್ಮ ಕಡೆ ಬಂದ ಹಾಗೆ ನಾವೆ ಅದನ್ನು ಪ್ರಕಟಿಸುವೆವು.

೧. ವಿಷಯಸೂಚಿಯೂಮಿಕ ಸಮಿತಿ— ೬, ಅಮತ್ತು ಅನೆ ಮಾರ್ಚ್ ೧೯೩೯

ಪ್ರೇಕ್ಷಕ ಫೀ ಕಾಂಗ್ರೆಸ್ ಪ್ರತಿನಿಧಿಗಳಿಗೆ ರೂ. ೫ ಇತರರಿಗೆ ೧೦.

೨. ಕಾಂಗ್ರೆಸ್ ಅಧಿವೇಶನ— ರೂ. ೯ ೧೦ ಮತು ೧೧ ಮಾರ್ಚ್ ೧೯೩೯.

ಪ್ರೇಕ್ಷಕ ಫೀ— ರೂ ೧.೬, ೫, ೧೦ ೫೦, ೧೫೦.

೩. ವಸತಿ— ಪ್ರತಿನಿಧಿಗಳಿಗೆ ಪ್ರತಿಯೊಬ್ಬರಿಗೆ ರೂ. ೫. ಇತರ ಪ್ರೇಕ್ಷಕರಿಗೆ ರೂ. ೬. ಕುಟುಂಬ [೬ ಮಂದಿಗೆ ರೂ ೫೦] ಕ್ಕೆ ಹಾಗು ರೂ. ೧೦೦

೪. ಊಟ— ಒಂದು ಹೊತ್ತಿಗೆ ೬ ಆಣೆ, ಎರಡು ಹೊತ್ತಿಗೆ ೧೧ ಆಣೆ.

ಶ್ರೈತರ ಊಟ— ಒಂದು ಹೊತ್ತಿಗೆ ೩ ಆಣೆ. ಎರಡು ಹೊತಿಗೆ ೫ ಆಣೆ.

ಆಯಾ ಪ್ರಾಂತದವರ ರುಚಿ ಪದ್ಧತಿಗಳಿಗನುಸಾರವಾಗಿ ಊಟಕ್ಕೆ ವ್ಯವಸ್ಥೆ ಮಾಡಲಾಗಿದೆ.

ತ್ರಿಪುರಿ [ನಿಷ್ಕ್ರಮಣ ನಗರವು] ಯು ಜಿ. ಐ. ಪಿ. ರೇಲ್ವೆಯು "ಮದನ ಮಹಲ ಸ್ಟೇಷನ್ನಿನಿಂದ ಸುಮಾರು ೬ ಮೈಲು ದೂರದಲ್ಲಿರುವದು. ಸ್ವಾಗತ ಸಮಿತಿಯವರು ಸ್ಟೇಷನ್ನಿನಿಂದ ವಿಷ್ಣುದತ್ತ ನಗರಕ್ಕೆ ಬಸ್ಸುಗಳ ವ್ಯವಸ್ಥೆ ಇಟ್ಟಿದ್ದು ಬಸ್ ಛಾರ್ಜು ಪ್ರತಿಯೊಬ್ಬರಿಗೆ ೪ ಆಣೆ ಬೀಳುತ್ತದೆ. ಜಿ. ಐ. ಪಿ. ರೈಲ್ವೆಯವರು ರಿಯಾಯಿತ ತೋರಿಸಿದ್ದು ೧॥ ಛಾರ್ಜಿನಲ್ಲಿ ತಮ್ಮ ಯಾವ ಸ್ಟೇಷನ್ನಿನಿಂದಾದರೂ ಮದನಮಹಲಕ್ಕೆ ಹೋಗಿ ವಾಪಸ್ಸು ಬರುವ ಟಿಕೇಟುಗಳನ್ನು ಕೊಡುವರು. ಇಂತಹ ಟಿಕೇಟುಗಳು ೨೮-೩-೩೯ರಿಂದ ೧೫-೩-೩೯ರ ವರೆಗೆ ಕೊಡಲ್ಪಟ್ಟು, ಮರಳಿ ಪ್ರವಾಸವು ೨೪-೩-೩೯ರ ಒಳಗಾಗಿ ಮುಗಿಯಬೇಕಾಗುವದು. ಬಳ್ಳಾರಿಯಿಂದ ಈ ಸಲದ ಕಾಂಗ್ರೆಸ್‌ಗೆ ಹೋಗಿ ಬರುವ ಛಾರ್ಜು ಸುಮಾರು ೫೫ ರೂಪಾಯಿಗಳಾಗುತ್ತದೆ.

ಸಾ. ಸು. ಹರ್ಡೀಕರ
ಗೌ॥ ಕಾರ್ಯದರ್ಶಿ.

ರಾಜಕೋಟೆ ಸತ್ಯಾಗ್ರಹವು ಪ್ರಾರಂಭವಾದಮೇಲೆ 50ನೇ ಸರ್ವಾಧಿಕಾರಿಗಳ ಸೆರೆಯಾಗಿದೆ. ಜೈಲಿನಲ್ಲಿನ ಕ್ರೂರ ವರ್ತನೆಯಿಂದ ಆಸ್ಪ ಸತ್ಯಾಗ್ರಹವು ಆಚರಿಸಲಾಗುತ್ತಿದೆ.

ಜಯಪುರ ಸತ್ಯಾಗ್ರಹಿಗಳನ್ನು ಕೆಟ್ಟ ರೀತಿಯಿಂದ ನೋಡಿಕೊಳ್ಳುತ್ತಿರಲಾಗಿದೆ. ರಾಜಕೋಟೆ ಜಯಪುರಗಳಲ್ಲಿ ಬ್ರಿಟಿಶ ಪ್ರಭುತ್ವವು ಕೈಹಾಕಿದೆ.

ಲಿಂಬಡಿ— ಕಾಥಿಯವಾಡದ ಲಿಂಬಡಿ ಸಂಸ್ಥಾನದಲ್ಲಿ ಆಸಾಯಕತ್ವವು ಹೆಚ್ಚಿದುದರಿಂದ ಅಲ್ಲಿಯ 1500 ಜನರು ತಮ್ಮ ಅಡವು ಆಸ್ತಿಗಳೊಂದಿಗೆ ಅಹಮ್ಮದಾಬಾದಿಗೆ ಬಂದಿರುತ್ತಾರೆ.

ಮಿನಾಕ್ಷಿ ಭವನ ಕಾಫಿ ಕ್ಲಬ್
[ರಿಜಿಸ್ಟರ್ಡ್]

ಶಾಖೆಗಳು—

ಕಾಫಿ ಕ್ಲಬ್ ಬೆಂಗಳೂರು ಫೋರ್ಟ್
ಊಟ ವಸತಿಗೃಹ ಬ್ರಾಹ್ಮಣ ಬಿಂದು

ರುಚಿಕರವಾದ ಶುದ್ಧ ತುಪ್ಪ ವಲ್ಲಿ ತಯಾರಿಸಿದ ಸಿಹಿಖಾರದ ಫಲಹಾರವಸ್ತುಗಳು.

ಒಳ್ಳೆಯ ಊಟದವ್ಯವಸ್ಥೆ ಧಾರಾಳವಾಗಿ ಗಾಳಿ, ಬೆಳಕು ಬರುವ ವ್ಯಹಡಿಯ ಮೇಲಿನ ಕೊಠಡಿಗಳು ಆಧುನಿಕ ವ್ಯವಸ್ಥೆ,

ಒಂದು ಸಲ ಬಂದು ಪರೀಕ್ಷಿಸಿರಿ.

೧೯೩೭-೩೮
(೧-೧೦-೧೯೩೭ರಿಂದ ೩೦-೯-೧೯೩೮ ರ ವರೆಗೆ)
ಬಳ್ಳಾರಿ ಜಿಲ್ಲಾ ಹರಿಜನ ಸೇವಕ ಸಂಘದ ಆರನೆಯ ವರ್ಷದ ಆಯ-ವ್ಯಯ ಪಟ್ಟಿ.

ಆದಾಯ

ಹೋದ ವರ್ಷದ ಶಿಲ್ಕು	— — —
ಜಿಲ್ಲೆಯಲ್ಲಿ ಧರ್ಮಾತ್ಮರು ಕೊಟ್ಟ ಹಣ	೬೧೭ ೧೨ ೦
ಶಾಖೆಗಳಿಗೆ ಕೊಟ್ಟ ಹಣ, ಲೆಕ್ಕದ ರೂಪದಿಂದ ಬಂದದ್ದು	೫೭೨ ೧೪ ೧೨
ಸ್ಥಾಂತಿಕ ಸಂಘದವರು ಕೊಟ್ಟ ಅಡ್ವಾನ್ಸು	೫೦ ೦ ೦
ಕೇಂದ್ರ ಸಂಘದವರ ಗ್ರಾಂಟು	೭೫೨ ೧೫ ೯
ಆಲೂರು ಹಾಸ್ಪಲ್‌ಗೆ ಸ್ಪೆಷಲ್ ಗ್ರಾಂಟು	೩೦೦ ೦ ೦
ಸರ್ಕಾರ, ಬೋರ್ಡು ಸಹಾಯ	೫೦೯ ೦ ೦
ಸಾಲ ತೆಗೆದದ್ದು	೯೩೫ ೦ ೯
ಬಿ. ಕೆ. ನೆಲ ಫಂಡದಿಂದ ಆಲೂರು ಬಾವಿಗೆ ಕೊಟ್ಟ ಸಹಾಯ	೫೫೦ ೦ ೦
	೩೭೪೭ ೩ ೪

ಈ ಲೆಕ್ಕಗಳನ್ನೆಲ್ಲಾ ಸರಿಯೋದಿಸಿ ನೋಡಿಪ್ಪೆನೆ ಪ್ರತಿಯೊಂದು ಸಣ್ಣ ಖರ್ಚುಗಳಿಗೂ ಪಾವ್ತಿಗಳಿಗೆ ಲೆಕ್ಕಗಳು ಸಂಪೆವವರಿಂದ. ತೃಪ್ತಿಕರವಾದ ಸ್ಥಿತಿಯಲ್ಲಿದ್ದಲ್ಲಿದೆ

ಡಿ. ವಿ. ಸರೋವರ,
ಲೆಕ್ಕ ತೆಪಾಸಿಗರು, ಬಳ್ಳಾರಿ

ಖರ್ಚು

[A] ಆಡಳಿತ ಭಾಗ.

ಆಡಳಿತ ಭಾಗದವರ ವರ್ಷದ ಖರ್ಚು		೩೦೦ ೦ ೦
ಪ್ರಯಾಣ ಭತ್ತಾ	...	೬೬ ೭ ೦
ಹರಿಜನ ಸಾಹಿತ್ಯ	...	೪ ೦ ೦
ಸ್ಟೇಷನರಿ		೬ ೭ ೦
ಟಪಾಲು ಖರ್ಚು		೯ ೧೫ ೯
	A.	೩೬೬ ೮ ೯

[B] ಪ್ರಚಾರ ಭಾಗ.

ಸಭೆ ಕಾನ್ಫರೆನ್ಸು ಖರ್ಚು		೩ ೦ ೦
ಮುದ್ರಣ ಪ್ರಸಿದ್ಧಿಸಿದ ಖರ್ಚು		೯ ೦ ೦
	B.	೧೨ ೦ ೦

[C] ಹರಿಜನೋದ್ಧಾರ ಕಾರ್ಯ.

ಹರಿಜನ ಶಾಲೆಗಳಿಗಾಗಿ	೧೫೬ ೫ ೬
,, ಹಾಸ್ಟಲ್‌ಗಳಿಗಾಗಿ	೧೪೯ ೭ ೪
,, ಒಬ್ಬ ಬಾಲಕನ ಊಟಕ್ಕೆ	೫೦ ೧೪ ೦
ಪುಸ್ತಕ ಹಲಗೆ ವೈಗೈರಿ	೫೮ ೦ ೦
ವಿದ್ಯಾರ್ಥಿ ವೇತನಗಳು	೯೬ ೪ ೦
ಸಬ್ಬು, ಎಣ್ಣೆ, ಬಟ್ಟೆಗಳ ಖರ್ಚು	೯ ೭ ೦
ವಿನಿದ ಸಹಾಯ	೧೫ ೧೨ ೫
C.	೧೮೭ ೦ ೧

[D] ಆಲೂರು ಹರಿಜನ ಹಾಸ್ಪಲ್‌ಗೆ ಸಹಾಯ

ಹಾಸ್ಪಲ್ ಖರ್ಚಿಗೆ ಕೊಟ್ಟ ಗ್ರಾಂಟು	೨೫೬ ೦ ೦
,, ಕ್ವಾರ್ಟಾಲಕ್ಕೆ ಕೊಟ್ಟದ್ದು	೨೦೦ ೦ ೦
,, ಬಾವಿ ತೆಗೆಸಲು	೩೨೫ ೦ ೦
,, ಪುಸ್ತಕಗಳಿಗಾಗಿ	೧೦ ೦ ೦
	೭೫೦ ೦ ೦
ಕೊಟ್ಟೂರು ಹಾಸ್ಪಲ್‌ಗೆ	೮೦ ೦ ೦
ಹೊಸಪೇಟೆ ಸಂಸ್ಥೆಗೆ	೩೭ ೮ ೦
	೮೩೪ ೮ ೦
G ಸಾಲ ತೀರಿಸಿದ್ದು	೫೮೭ ೨ ೬
ಕೈಲಿರುವ ನಗದು ಹಣ	— — —
A ಯಿಂದ **G** ವರೆಗೆ ಒಟ್ಟು ಮೊತ್ತ	೩೭೪೭ ೩ ೪

ಚಿನ್ನಿನ ಹಳ್ಳಿ ದುರುಗಮ್ಮನ ಜಾತ್ರೆ

ಹರಪನಹಳ್ಳಿ ತಾಲೂಕಿನ ಚಿನ್ನಿನ ಹಳ್ಳಿ ಎಂಬ ಗ್ರಾಮದಲ್ಲಿ ಹರಿಜನ ದೇವತೆಯು ಜಾತ್ರೆಯೂ ಮತ್ತು ಹಿಂದುಗಳ ಹಗರಿ ಬಸವೇಶ್ವರ ರಥೋತ್ಸವವೂ ಭೇದವಿಲ್ಲದೆ ನಡೆಯಿತು. ಇದ ಸಂತೋಷಕರವಾದ ವಿಷಯ. ಈ ಜಾತ್ರೆಯ ಅನಂತರ ದಿನಗಳ ಪರಿಸೆಯು ಕೂಡುವುದು. ಇದರಿಂದ ಜಲ್ಲಾ ಬೋರ್ಡಿಗೆ ಆದಾಯವಾಗುವುದು

ಪ್ರಕಟಿಸಿದ ತಾರೀಖುಗಿಂತಲೂ ಒಂದು ದಿನ ಹೆಚ್ಚಿಗೆ ವಾಯಿದೆ ಕೊಟ್ಟಿರುತ್ತದೆ ದುರುಗಮ್ಮನ ಜಾತ್ರೆ ದಸಗಳ ಜಾತ್ರೆ ಬೇರೆ ಬೇರೆ ಜಾಗಗಳಲ್ಲಿ ನಡೆಯಜೀ ಕಾಗಿತ್ತು. ಆದರೆ ನೆರಡನ್ನು ಕೂಡಿಸಿ ಬಶರ್ಯತೆರಿಂದ ಹಣ ವಸೂಲ್ಮಾಡಿಲಾಯಿತು. ಎಲ್ಲಾ ತರವಾದ ಬಂಡಿಗಳಿಗೂ ಎತ್ತುಗಳಿಗೂ ಸುಂಕವನು ವಸೂಲ್ಮಾಡಲಾಯಿತು. ನೆಲದ ಜಕಾತಿ ೦೦-೦ ಇದ್ದರೆ ೦೦೯ ಒಂದು ಆಣೆ ವಸೂಲ್ಮಾಡಿದರು. ಆರೋಗ್ಯ ವಿಷಾಟು ಮತ್ತು ಪಶುಗಳವೈದ್ಯ ವಿಷಾಟುಗಳು ಇದ್ದಿಲ್ಲ. ಕಾಂಗ್ರೆಸ್ ಜಿಲ್ಲಾ ಬೋರ್ಡಿನವರು ಇವುಗಳನ್ನೆಲ್ಲಾ ಗಮನಿಸಿ ತಮ್ಮ ಕಳಂಕವನ್ನು ಬಾರದೆ ನೋಡಿಕೊಳ್ಳಬೇಕು. (ಶಿವು)

ಸಂಸ್ಥಾನಿಕರಿಗೆ ಮಹಾತ್ಮರ ಎಚ್ಚರಿಕೆ

ಕಾಲಕ್ಕನುಸರಿಸಿ ನಡೆದುಕೊಳ್ಳಿರಿ

(ಹರಿಜನ ಪತ್ರಿಕೆಯಿಂದ)

ತಿರುವಾಂಕೂರಿನ ಸಂಬಂಧದಲ್ಲಿ ನಾನು ಮೌನವಹಿಸಿರುವೆನೆಂಬದು. ತೋರುತ್ತಿದ್ದರೂ ತ್ರಾವಣಕೋರ ಪ್ರಶ್ನೆಯನ್ನು ನಾನು ಉಪೇಕ್ಷಿಸಿಲ್ಲವೆಂಬುದನ್ನು ಕಾರ್ಯಕರ್ತರು ಧರಿಸಬೇಕು. ಒಮ್ಮೊಮ್ಮೆ ಮೌನವೇ ಮಾತುಗಳಿಗಿಂತ ಅಧಿಕ ಪರಿಣಾಮಕರವಾಗಿ ಪರಿಣಮಿಸುತ್ತದೆ. ನಾನು ಮೌನವಹಿಸಿರುವುದು ಉಪಯುಕ್ತವೇ ಆಗಿರುವುದೆಂದು ನಾನು ಈಗ ಹೇಳಬಯಸುತ್ತೇನೆ. ಅಪೇಕ್ಷಿಸಿದ ಪ್ರಮಾಣದಲ್ಲಿ ಕಾರ್ಯಗಳು ಘಟಿಸದಿದ್ದುದಕ್ಕೆ ವಿಷಾದವಾಗುತ್ತದೆ. ಸಂಸ್ಥಾನ ಕಾಂಗ್ರೆಸದವರು ದಿವಾನರ ವಿರುದ್ಧ ಮಾಡಿದ ಆಪಾದನೆಗಳನ್ನು ಹಿಂತೆಗೆದುಕೊಂಡ ನಂತರ ಸರ್ವ ಸಂಗತಿಗಳು ಸುಲಲಿತವಾಗಿ ಸಜೆಯುವನೆಂದೂ ಸ್ವರಾಜ್ಯ ಚಳವಳಿಯು ಉತ್ಪಾದಿಸಿದ ಹುಂಬೆ ಪಾಗಲು ಸ್ವಾತಂತ್ರ್ಯ ದೊರೆಯುವುದೆಂದೂ ನನಗೆ ಆತಂಕವಿತ್ತು. ಆದರೆ ತಿರುವಾಂಕೂರ ವಾಸಿಗಳ ಭಾಗ್ಯವು ಅಷ್ಟೊಂದು ಉತ್ತಮವಿಲ್ಲವೆಂದು ತೋರುತ್ತದೆ. ತ್ರಾವಣಕೋರ ಅಸೆಂಬ್ಲಿಯಲ್ಲಿಯ 11 ಪ್ರಮುಖ ಸಭಾಸದರನ್ನು ಅಸೆಂಬ್ಲಿಯಿಂದ ತೆಗೆದೊಗೆಯ್ಯುವದು ಸೇಡು ತೀರಿಸಿಕೊಳ್ಳುವ ದ್ಯೋತಕವೇ ಆಗಿದೆ. ಸ್ವಾಭಿಮಾನಕ್ಕೆ ಶೋಭಿಸದಂಥ ಸಂಗತಿಗಳು ಇವರಿಂದ ಘಟಿಸಿದುವೆಂದು ಸಂಬಲು ನಾನು ಸಿದ್ಧನಿಲ್ಲ.

ಶ್ರೀಮತಿ ಅಕ್ಕನ್ನ ಚೇರಿಯಂಬ ಸ್ತ್ರೀ ರಾಜಕೈದಿಯನ್ನು ಕೆಟ್ಟ ರೀತಿಯಿಂದ ನಡಿಸಿಕೊಂಡಿದ್ದರ ಸಂಬಂಧದಲ್ಲಿ ನನ್ನ ಕಡೆಗೆ ಒಂದು ಪತ್ರವು ಬಂದಿದೆ. ಅವಳು ಕೋರ್ಟಿನಲ್ಲಿ ಹೇಳಿದ್ದುದು ನಿಜವಿದ್ದರೆ ಆತರದ ನಡತೆಯು ನಿಜವಾಗಿಯೂ ಅಪಮಾನಕರವಾಗಿದೆ. ಶ್ರೀಮತಿ ಚೇರಿಯನರು ಸುಸಂಸ್ಕೃತ ಮಹಿಳೆಯಿದ್ದು ಶಾಲೆಯ ಮುಖ್ಯಾಧ್ಯಾಪಿಕೆಯ ಕೆಲಸವನ್ನು ಬಿಟ್ಟು ಸ್ವಾತಂತ್ರ್ಯ ಯುದ್ಧದಲ್ಲಿ ಧುಮುಕಿದ್ದಾರೆ. ತ್ರಾವಣಕೋರ ಸಂಸ್ಥಾನವು ಸುಧಾರಿಸಿದ ಸಂಸ್ಥಾನವಲ್ಲದೆ ಸುಸಂಸ್ಕೃತ ರಾಜರೂ ಸುಸಂಸ್ಕೃತ ಮಹಾರಾಣಿಯನರೂ ಮತ್ತು ಅನುಭವಿಕ ದಿವಾನರಿಂದ ಕೂಡಿದ ಸಂಸ್ಥಾನವೆಂದೂ ಕರೆಯಿಸಿಕೊಳ್ಳಲ್ಪಡುತ್ತದೆ. ಇಂಥ ಸಂಸ್ಥಾನದಲ್ಲಿ ಕ್ರೂರವಾದ ದಬ್ಬಾಳಿಕೆಯಿಂದ ಸ್ವಾತಂತ್ರ್ಯವು ಹತ್ತಿಕ್ಕಲ್ಪಡುತ್ತಿರುವುದು ಕೇಳಿ ಮನಸ್ಸಿಗೆ ವ್ಯಸನವಾಗುತ್ತದೆ.

ಈ ದಬ್ಬಾಳಿಕೆಯು ಹಿಂದೂ ಧರ್ಮದ ಹೆಸರಿನಿಂದ ಒಂದು ಹಿಂದೂ ಸಂಸ್ಥಾನವ ರಕ್ಷಣೆ ಮಾಡಲು ಕೈಕೊಳ್ಳಲ್ಪಟ್ಟಿರುವದೆಂದು ಮತ್ತೊಂದು ಪತ್ರದಿಂದ ವ್ಯಕ್ತವಾಗುತ್ತದೆ. ಸ್ವಾತಂತ್ರ್ಯದ ಯುದ್ಧದಲ್ಲಿ ಪ್ರತ್ಯೇಕ್ಷವಾಗಿ ಭಾಗ ತೆಗೆದುಕೊಳ್ಳುತ್ತಿರುವ ಕ್ರಿಶ್ಚಿಯನರನ್ನು ದಬ್ಬಾಳಿಕೆಯಿಂದ ಹತ್ತಿಕ್ಕುವದೇ ದಬ್ಬಾಳಿಕೆಯು ಉದ್ದೇಶವಿರುವದೆಂದು ಹೇಳಲ್ಪಡುತ್ತದೆ

ಹಿಂದೂ ಮುಸಲ್ಮಾನ ಭೇದದ ದಿನಗಳು ಹೋದವು

ನಿಜವಾಗಿ ನೋಡಿದರೆ ಹಿಂದೂ ರಾಜ್ಯ ಮತ್ತು ಮುಸಲ್ಮಾನ ರಾಜ್ಯ ಎಂದು ಹೇಳುವ ದಿನಗಳು ದೂರವಾದವು. ಹಿಂದೂ ರಾಜ್ಯ ಮತ್ತು ಮುಸಲ್ಮಾನ ರಾಜ್ಯ ಎಂದು ನಿರ್ಣಯಿಸುವದಾದರೂ ಹೇಗೆ? ಕಾಶ್ಮೀರದಲ್ಲಿ ಬಹು ಸಂಖ್ಯಾಕರು ಮುಸಲ್ಮಾನರಿದ್ದು ಅರಸನು ಹಿಂದು ಇರುವನು ಇಷ್ಟಕ್ಕೆ ಅದಕ್ಕೆ ಹಿಂದೂರಾಜ್ಯವೆನ್ನಬೇಕೋ ಹೇಗೆ? ಇದರಂತೆ ಹೈದರಬಾದದಲ್ಲಿ ಹಿಂದುಗಳ ಸಂಖ್ಯೆ ಬಹಳ ಇದ್ದು ರಾಜನು ಮುಸಲ್ಮಾನನಿರುವನು. ಆದ್ದರಿಂದ ಅದಕ್ಕೆ ಮುಸಲ್ಮಾನ ರಾಜ್ಯವೆಂದು ಕರೆಯಬೇಕೋ ಹೇಗೆ? ಈತರದ ಭಾಷೆಯನ್ನು ಉಪಯೋಗ ಮಾಡುವದು ರಾಷ್ಟ್ರೀಯತ್ವಕ್ಕೆ ಕಲಂಕವಾಗಿರುವದೆಂದು ನನ್ನ ಅಭಿಪ್ರಾಯವಿದೆ. ಹಿಂದುಸ್ಥಾನದ ಮೇಲೆ ಕ್ರಿಸ್ತೀ ಅರಸನ ಆಳಿಕೆ ನಡೆದಿದೆಯೆಂದರೆ ಹಿಂದುಸ್ಥಾನಕ್ಕೆ ಕ್ರಿಸ್ತರಾಜ್ಯವೆನ್ನಬೇಕೋ ಹೇಗೆ? ಹಾಗಿಲ್ಲದಿದ್ದರೆ ಹಿಂದುಸ್ಥಾನದಲ್ಲಿ ರಾಜ್ಯಯಾರದೇ ಇರಲಿ. ಹಿಂದುಸ್ಥಾನವು ಹಿಂದೀಯರದು ಇದ್ದಂತೆ ಸಂಸ್ಥಾನದಲ್ಲಿ ಯಾರದೇ ರಾಜ್ಯವಿರಲಿ. ಆ ಸಂಸ್ಥಾನಗಳು ಹಿಂದೀಯವುಗಳೆಂದೇ ಭಾವಿಸಲ್ಪಡಬೇಕು. ಸದ್ಯದ ರಾಜ್ಯಕರ್ತರು ಮತ್ತು ಅವರ ವಾರಸದಾರರು ಜಾಗೃತರಾದ ಪ್ರಜೆಗಳ ಕೈಸೆಯು ತಮ್ಮ ಮೇಲೆ ಇರುವಷ್ಟು ದಿನಗಳ ವರೆಗೆ ಮಾತ್ರರಾಜ್ಯ ಸಾಗಿಸಿಕೊಂಡು ಹೋಗಲು ಶಕ್ತರಿರುವರು. ಜನತೆಯಲ್ಲಿ ಈಗ ಹುಟ್ಟಿದ ಜಾಗ್ರತಿ

ಯು ಕಾಯಂ ಉಳಿಯ ತಕ್ಕದ್ದಿದೆ. ದಿನ ದಿನಕ್ಕೆ ಆದು ಹೆಚ್ಚಾಗ ಹತ್ತಿದೆ. ರಾಜ್ಯಕರ್ತರು ಮತ್ತು ಅವರ ಸಲಹೆಗಾರರಿಗೆ ಜನರ ಭಾವನೆಯನ್ನು ಹತ್ತಿಕ್ಕುವಲ್ಲಿ ಸದ್ಯಕ್ಕೆ ಯಶ ದೊರೆಯ ಬಹುದು. ಆದರೆ ಆ ಭಾವನೆಯನ್ನು ಸಂಪೂರ್ಣ ನಾಶಮಾಡಲು ಅವರಿಗೆ ಆಗದು.

ಸ್ವತಂತ್ರ ಭಾರತದ ಸಣ್ಣ ಕಲ್ಪನೆ.

ಸ್ವತಂತ್ರ ಭಾರತದ ಸಣ್ಣ ಕಲ್ಪನೆಯು ಬಿಂಧದಂಥ ಪ್ರಜೆಗಳ ಕಾಯದೇ ಶೀರ ವಿಶ್ವಸ್ತ ಅನಸರ ಸಂಸ್ಥಾನಗಳಿಗಿಷ್ಟೇ ಅಸ್ಪದವಿರುವದು. ಇಂಗ್ಲೀಷರು ಸಹಕಾರಿ ಸೇವಕರಂತೆ ನಡೆದುಕೊಂಡರೆ ಅವರಿಗೂ ಸ್ಥಳ ದೊರೆಯುವದು. ಆದರೆ ಒಡೆಯರೆಂದು ಅವರಿಗೆ ಇರಲು ಅಸ್ಪದವಿಲ್ಲ. ಅವ್ವರಿಂದ ಸಂಸ್ಥಾನಿಕರು ಸ್ವತಂತ್ರ ಹಿಂದುಸ್ತಾನದಲ್ಲಿ ರಾಜರೆಂದು ಜೀವಂತ ಇರ ಬಯಸುವದಾದರೆ ಅವರಿಗೆ ಒಂದೇ ಒಂದು ಮಾರ್ಗವು ಉಳಿದಿದೆ. ಅದೆಂದರೆ ಅವರು ಕಾಲ ಮಹಾತ್ಮೆ ಅರಿತುಕೊಂಡು ಅದರಂತೆ ನಡೆಯುವದೇ.

ಲಿಂಬಡಿ ಸಂಸ್ಥಾನದಲ್ಲಿ ಕ್ರೂರ ಕೃತ್ಯಗಳು

ಕಥಿಯವಾಡ ಸಂಸ್ಥಾನಗಳಲ್ಲೊಂದಾದ ಲಿಂಬಡಿಯಲ್ಲಿ ಪ್ರಜಾ ಪರಿಷತ್ತನ್ನು ಬಗ್ಗುಬಡಿಯಲು ಅರಸರು ಹಿಂಸಾಕೃತ್ಯಗಳನ್ನು ಪ್ರೇರೇಪಿಸಿರುವಂತೆ ತಿಳಿದು ಬಂದಿದೆ. ಹೋದವಾರ ಪ್ರಜಾವುಂಡಲಕ್ಕೆ ಸೇರಿದ ಸದಸ್ಯರ ಮನೆಗಳು ಲೂಟಿಯಾದವು. ಕೆಲ ಡಕಾಯ್ತಿಗಳೂ ನಡೆದವು. ಈ ವಾರ ಪ್ರಜಾಪರಿಷತ್ತಿನಲ್ಲಿ ಭಾಗವಹಿಸಲು ಸಾವಿರಾರು ರೈತರು ಬಂದಿದ್ದರು. ಸನಾತನಿಗಳೆಂದು ಹೇಳಿಕೊಳ್ಳುತ್ತಾ ತುಂಟರು ಅವರ ಮೇಲೆ ಲಾಠಿ ಪ್ರಹಾರ ಮಾಡಿದರಲ್ಲದೆ, ಅಧ್ಯಕ್ಷರಾಗಲಿದ್ದ ದರ್ಬಾರ ಗೋಪಾಲದಾಸರನ್ನು ಸ್ಟೇಷನ್‌ದಿಂದ ಬಿಡಲೇ ಇಲ್ಲ. ಈ ಸಂಸ್ಥಾನದಲ್ಲಿ ಎಲ್ಲೆಲ್ಲಿಯೂ ಅನ್ಯಾಯ ಕೃತ್ಯವು ಹರಡಿದ್ದು, ಪರಿಸ್ಥಿತಿಯು ಗಂಭೀರವಾಗಿದೆ.

ದರ್ಬಾರ್ ಗೋಪಾಲದಾಸರು ಬರಲಿಕ್ಕಾಗದ ಕಾರಣ ಶ್ರೀಮತಿ ಲೀಲಾವತಿ ಮುನ್‌ಶಿಯನರು ಅಧ್ಯಕ್ಷತೆಯನ್ನು ವಹಿಸಿ ಪ್ರಜಾಪರಿಷತ್ತನ್ನು ನೆರವೇರಿಸಿದರೆಂದು ಈಚೆಗೆ ಬಂದ ವರ್ತಮಾನದಿಂದ ತಿಳಿದುಬಂದಿದೆ.

ಮದ್ರಾಸ್ ಪ್ರಾಂತ್ಯದಲ್ಲಿ ಮದ್ಯನಿಷೇಧ ಕಾರ್ಯಕ್ರಮ

ಈ ವರ್ಷ ಉತ್ತರಾರ್ಕಾಟ್ ಜಿಲ್ಲೆಯಲ್ಲಿ

ಮುಖ್ಯ ಮಂತ್ರಿಗಳಾದ ಶ್ರೀ ರಾಜಗೋಪಾಲಾಚಾರ್ಯರು 20ನೇ ತಾ॥ 1939ರ 40ರ ಆಯ - ವ್ಯಯ ಪತ್ರಿಕೆಯನ್ನು ಮದ್ರಾಸ್ ಅಸೆಂಬ್ಲಿಯಲ್ಲಿ ಮಂಡಿಸಿದರು. 17 ಲಕ್ಷದ 20 ಸಾವಿರ ರೂ. ಗಳು ಕೊರತೆ ಬೀಳಬಹುದೆಂದು ಆಂದಾಜು ಹಾಕಲಾದೆ. ಈ ವರ್ಷ ಉತ್ತರಾರ್ಕಾಟು ಜಿಲ್ಲೆಯಲ್ಲಿ ಮದ್ಯಪಾನದ ಪ್ರತಿಬಂಧವಾಗುವುದೆಂದು ಅವರು ತಿಳಿಸಿದರು.

ಹೈದರಬಾದಿನಲ್ಲಿ ಬಾಂಬುಗಳ ಅನಾಹುತ

20ನೇ ತಾ॥ ಪ್ರಾತಃಕಾಲ ಎರಡು ಕಡೆಗಳಲ್ಲಿ ಬಾಂಬಿನ ಸ್ಫೋಟವಾಯಿತು. ಹೈದರಬಾದು ಡೊಮಿನಿಯನ್ ಬ್ಯಾಂಕಿನ ಅಂಗಳದ ಬಾಗಿಲು ತೆಗೆಯಬೇಕಾದರೆ ಬಾಂಬು ಸಿಡಿದು ಜನಾನು ಕೈ ಕತ್ತರಿಸಿ ಹೋಯಿತು. ಆ ಪ್ರದೇಶಕ್ಕೆ ಕೇವಲ ಒಂದುವರೆ ಫರ್ಲಾಂಗು ದೂರದಲ್ಲಿರುವ ಮೈಜಾಂಜಾಹಿ ಮಾರ್ಕೆಟ್ಟಿನ ಬಳಿ ಮತ್ತೊಂದು ಬಾಂಬು ಸಿಡಿಯಿತು. ಅಲ್ಲಿಯೂ ಒಬ್ಬಾತನ ಕೈ ಕತ್ತರಿಸಿತು. ಅವನು ಸ್ವಲ್ಪ ಹೊತ್ತಿನಲ್ಲಿಯೇ ಸತ್ತುಹೋದನು. ಪೋಲೀಸರು ವಿಚಾರಣೆ ನಡೆಸುತ್ತಿರುವರು.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಸರಿಯುದ್ದವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ಸರ್ವ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆಯೂ ಇರುತ್ತದೆ ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ

ವೆಸ್ಟ್‌ಎಂಡ್ ವಾಚುಗಳೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದುಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

ಅಂಗ್ವೆಂಟೋ.,

ಎಲ್ಲ ಚರ್ಮವ್ಯಾಧಿಗಳಿಗೂ ರಾಮಬಾಣ ಮಲಾಮು

ಕಜ್ಜಿ ತುರಿ, ಇಸಬು, ಗಜಕರ್ಣ, ಹುಳಗಳು, ಚಲದಿ ಚಟ್ಟ ಸುಟ್ಟ ಬೊಬ್ಬೆಗಳು, ಘಾಯಗಳು, ಉಗುರುಸುತ್ತು ಪಾದ ಒಡೆದ ಬಿರುಕುಗಳು, ತೀರ ಹಳೇಹುಣ್ಣು, ಹುರುಕುಗಳು ಮುಂತಾದವು ಮಾತ್ರಿಯಾಗಿಯೂ, ಅತಿ ತೀವ್ರವಾಗಿಯೂ, ಗುಣವಾಗುತ್ತವೆ. ಪ್ರತಿಯೊಬ್ಬರ ಮನೆಯಲ್ಲಿಯೂ ಅಗತ್ಯವಾಗಿ ಸಂಗ್ರಹಿಸತಕ್ಕದ್ದು.

ಬೆಲೆ ಸೀಸೆ ಒಂದಕ್ಕೆ ರೂ. 0—8—0 ಟಿ. ಕ. ಪ್ರತ್ಯೇಕ.

ಜೀವನ ಸುಧಾ ಫಾರ್ಮಸಿ.

ಸೋಲ ಏಜಂಟರು:—ಸಹೋದರ ಬ್ರದರ್ಸ್. ಬಳ್ಳಾರಿ.

Public debt of India

BY

J. C. KUMARAPPA

(Continued from previous issue)

'That upon consideration of all the circumstances connected with the British intervention in the affairs of Afghanistan as they appear from the papers already laid before Parliament it is the opinion of this Court that the whole expense of that war ought not to be thrown on the people of India, but that a part of it should be borne by the Exchequer of the United Kingdom

As regards the other wars in Asia Sir George Wingate writes

'Most of our Asiatic wars with countries beyond the limits of our Empire have been carried on by means of the Military and monetary resources of the Government of India though the objects of these wars were in some instances, purely British, and in others but remotely connected with the interests of India. They were undertaken by the Government of India in obedience to instructions received from the British Ministers of the time acting through the Presidents of the Board of Control, and for all consequences they have involved, the British Nation is clearly responsible'

In Regard to the Persian War he says –

"The late Persian War was proclaimed by the British Ministry in pursuance of a policy with which India had no real concern; but the war, not the less, was carried on by the troops and resources of India, and one half only of the total cost was subsequently settled to be borne by the revenues of this country. India, in fact has been required to furnish men and means, for carrying on all our Asiatic wars and has never, in any instance, been paid a full equivalent for the assistance thus rendered which furnishes irrefragable proof of the one-sided and selfish character of our Indian policy" [Our Financial Relatians with India pp 17-19]

"THE MUTINY"

Jhon Bright, speaking on the East India Loan in March 1859, said:—

'I think that the forty million pounds which the revolt has cost, is a grievous burden to place upon the people of India It has come from the mismanagement of Parliament and the people of England If ever men had what was just, no doubt those forty million pounds would have to be paid out of the taxes levied upon the people of this country.'

Sir George Wingate draws attention to the unparalleled meanness and selfish tradition of Indian policy in these words

'In this crisis of the Indian Mutiny, then and with the Indian finances reduced to an almost desperate condition Great Britain has not only required India to pay for the whole of the extra regiments sent to that country, from the date of their leaving these shores, but has demanded back the money disbursed on account of these regiments for the last six months of their service in this country, previous to sailing for India

[To be continued]

COFFEE POWDER.
BEST. CHEAP.

Pure coffee powder and coffee sesed available. The seeds uniformy roasted and powdered here Rates very moderate Buy and Test once Special rates for merchants.

M. S. Rao. & Brother.
Mysore Coffee Works, BELLARY.

ಗುಣ ಜಳಿಕ **ಉತ್ತಮ ಕಾಫಿ ಪೌಡರು.** ಬೆಲೆ ಸುಲ
ನಮ್ಮಲ್ಲಿ ಕಾಫಿ ಪುಡಿ ಮತ್ತು ಕಾಫಿ ಬೀಜ ಯಾವಾಗಲೂ ದೊ
ರೆಯುತ್ತವೆ ಒಂದು ಸಲ ಉಪಯೋಗಿಸಿದರೆ ಆದರ ಗುಣವು ನಿನ
ಗೆ ತಿಳಿಯುತ್ತವೆ ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್.

ಯಂ. ಯಸ್ ರಾವ್. ಅಂಡ್ ಬ್ರದರ್.
ಮೈಸೂರು ಕಾಫಿ ವರ್ಕ್ಸ್ ಅಕ್ಕಸಾಲಿ ಬೀದಿ. ಬಳ್ಳಾರಿ

ಬಡವನ ಗೋಳು.

ನಾಂಬಡವ ನಾಂಬಡವ ಬಡತನವೆ ನನ್ನ ಜೀವ।
ಬೆಂಬಿಡದೆ ಕಾಡುವನು ಶನಿರಾಯ ನಮ್ಮ ಮಾವ।
ತಂಡಿ ತೀರ್ಥಗಳಿಗಾಗಿ ಸುತ್ತಿ ದೇಶವೆಲ್ಲವ ಕಂಡೆ।
ತೆರವ ಬಾಗಿಲನುಂದೆ ಬಾಯ್ತೆರೆದು ಕೊಂಡೆ।
ಕಂಗಿ ಕಂಡ ಮಾನವರ ಎಂಜಲನ್ನವ ನುಂಡೆ।
ಗುಂಡಿ ಗುಡಿಗವಿಗಳಲ್ಲಿ ಬಿದ್ದುರುಳಿಕೊಂಡೆ।
ಎಲುಬಿನ ಗೂಡೊಂದಾಸ್ಥಿಯುಳಿಸಿಕೊಂಡೆ।
ನಿರ್ಭಾಗ್ಯನ ಬಾಳ ಹೊಲವೇಗಳುಂ ಬರಸುಬಂಡೆ।
ದುರದೃಷ್ಟವಂತನಿಗೆ ಕಾಣುವವರೆಲ್ಲ ಯಮನ ಹಿಂಡೆ।
ಸುಕೃತದುರಂಗೆ ಚಿನ್ನ ಮುಪ್ಪುದು ಮಣ್ಣಿನುಂಡೆ।
ಆವನ ಅಮೃತದ ಹೊಂಡವುಂ ನಿರಂತರ ಹೊಂಡೆ।
ತೆಲುವುದನನ ಬಾಧೆಯೊಳಗನಿಶತೆಂಡೆ।
ಸಂತಾಪ, ಸಂಶಯ, ಸಾಫರಾಧಗಳವನ ಬದುಕು ಹೊಸಲದಂಡೆ [ಲದಂಡೆ)
ಕ್ಲೇಶ, ನೋಸ, ನಾಶಗಳವನ ಜೀವನ ಜಡೆಯಗೊಂಡೆ।
ಬೆವರು, ನವಿರು, ಮುನುರುಗಳವನಾತ್ಮಜೀರುಂಡೆ।
ಕುದಿಕುತ್ತ ಕುಂದುಗಳ ಶುಂಬವನ ಕೂಳಹಂಡೆ।
ಅಸರು, ನುಸವಿ, ಮೂಡಲೆಗಳವನ ನೈಯಬಾಸುಂಡೆ।
ಅಂಡಲೆದಾರ್ಜಿಸಿದ ಹೊವಡ್ಡವನು ಮನೆಯ ಕಳ್ಳುಗುಂಡೆ।
ತಿಂದನೆನೆ ಬಡ್ಡಿನುಂಗುವುದಯ್ಯೋ ಈ ವುಂಡೇ।
ಗಂಡನನು ನಿವಾರಿಸುವವರೇ ಇಲ್ಲವಿವನ ಪ್ರಾಣ ಮನಿಶಬೆಂಡೇ।
ಇಂತುನೂಡಿ ಹಳವನನು ದೊಡ್ಡನ್ಮ ಹಾಳುಗಂಡೆ।
ನಾವಾಗಲೇ ವಿಳುಕೊಟೆ ಜನರಾಗಿ ಹೆಲಂದು ವಿನವಿಸಿಕೊಂಡೆ।
ನನೊಬ್ಬ ರೈತನನು ನೂಡಿದರಾಗ ನೀಂತತ್ಪನರಿತುಕೊಂಡೆ।
ನಿಮಗು ನೆಮಗುಂ ಕ್ಲೇನು ನಾಂ ಹೊಟ್ಟೆತುಂಬ ಉಂಡೆ'
ದಣಿಗಳೇ ಕರುಣಿಸಿ ನಮ್ಮುಡಿಗೆರಗಿ ಬೇಡಿಕೊಂಡೆ

ಲೇ— ಎಂ. ರಂಗಪ್ಪ ಸೊಳಕಾಲ್ಮೂರು

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವುದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ, ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯೂಡ ಕ್ರೂಕ್ಸ್ ಕನ್ನಡಿಗಳು ಸರಿಯೂದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಅಧುನಿಕ 'ಕಟ್ಟು' (ಫ್ರೇಂ) ನಮ್ಮಲ್ಲಿವೆ. ಒಂದು ಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

ಹೆಚ್. ಯಸ್. ಅಂಡ್ ಸನ್ಸ್.
ಬೆಂಗಳೂರು ರೋಡ್ ಬಳ್ಳಾರಿ.

೧೩ಜನ ಕಾಂಗ್ರೆಸ್ ವರ್ಕಿಂಗ್ ಕಮಿಟೀ ಸದಸ್ಯರ ರಾಜೀನಾಮೆ.

ಈ ವರ್ಷ ಅಧ್ಯಕ್ಷಪದಕ್ಕೆ ಆರಿಸಲ್ಪಟ್ಟಿದ್ದ ಬಾಬೂ ಸುಭಾಸಚಂದ್ರ ಬೋಸರು ತಮ್ಮ ಅಧ್ಯಕ್ಷ ಚುನಾವಣೆಯಕಾಲದಲ್ಲಿ ತಮ್ಮ ವರ್ಕಿಂಗ್ ಕಮಿಟೀ ಸದಸ್ಯರನೇಕೆಯೇ ಕೆಲ ಆವಾದನೆಗಳನ್ನುಮಾಡಿದ್ದರು. ವರ್ಕಿಂಗ್ ಕಮಿಟೀ ಸಭೆಯು 20,21,22 ರ ದಿನ ಬೋಸರ ಗೈರ ಹಾಜರಿಯಲ್ಲಿ ವರ್ಧಾದಲ್ಲಿ ಕೂಡಿ ಮಹಾತ್ಮ ಗಾಂಧಿಯವರ ಉಪದೇಶಪ್ರಕಾರ ರಾಜೀನಾಮೆ ಕೊಡಲು ನಿರ್ಣಯಿಸಿದರು. ಪಂಡಿತ ಜವಾಹರಲಾಲರೂ ಕೂಡ ರಾಜೀನಾಮೆ ಕೊಡುವರು. ಆದರೆ ಅವರು ಒಂದು ಪ್ರತ್ಯೇಕ ಪತ್ರ ಬರೆದು ತಮ್ಮ ಕಾರಣಗಳನ್ನು ಸೂಚಿಸುವರು. ಉಳಿದ 12 ಜನರ ರಾಜೀನಾಮೆ ಪತ್ರವೂ ಬಾಬೂರಾಜೇಂದ್ರ ಪ್ರಸಾದರಿಂದ ಸಿದ್ಧ ಪಡಿಸಲ್ಪಟ್ಟು ಮಹಾತ್ಮರ ಒಪ್ಪಿಗೆಯಿಂದ ಕಳುಹಿಸಲಾಗಿದೆ.

ಅಂಬಾ ಭವನ ಕಾಫೀ ಕ್ಲಬ್
(ರಿಜಿಸ್ಟರ್ಡ್)
ಮತ್ತು
ಶಾಖೆ:— **ಊಟದ - ಹೋಟೆಲ್.**
ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪವಲ್ಲಿದೆ. ಶುದ್ಧತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾಳಿ ಬೆಳಕು ಮತ್ತು ಇತರ ಅನುಕೂಲಗಳಿರುವ ಕೊಠಡಿಗಳು, ಭೋಜನ ಸಮಾರಂಭ ಟೀಪಾರ್ಟಿಗಳ ಏರ್ಪಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆಮಾಡುವೆವು.

ಪ್ರೊಪ್ರೈಟರ್ಸು—
ಕೆ. ಕೆಟ್ಟಯ್ಯ, ಹೆಚ್. ಕರಿಬಸಪ್ಪ.

ನವ ಭಾರತ

Do You want your business to prosper in these Parts ?
If so, 'NAVA BHARAT' is the only medium through which you can advertise widely & get profits
Rates very moderate
Apply to day.
Manager,
NAVA BHARAT
BELLARY.

'Samala Pomade'
[REGD.]
DELIGHTFULLY SCENTED
Makes the hair soft smooth. The pleasant & fascinating odour is liked by one and all.
K V & Sons, BELLARY

'ಶಾಮುಲ ಪೊಮೆಯೀಡು'
(ರಿಜಿಸ್ಟರ್ಡ್)
ಮನೋಹರವಾದ ಸುವಾಸನೆಯುಳ್ಳದ್ದು
ತಲೆಯುಕೂದಲುಗಳ ತೋಭೆಯನ್ನು ಹೆಚ್ಚಿಸುವದು
ಅಲ್ಲದೆ ಮೆದುಳಿಗೆ ಹಿತಕಾರವಾದ್ದು.
ಕೆ. ವಿ. ಅಂಡ್ ಸನ್ಸು, ಬಳ್ಳಾರಿ.

NAVA BHARAT, BELLARY.
(With which is incorporated 'Congress Bulletin')
The leading Nationalist Weekly
THE RATES of SUBSCRIPTION.

	Annual	Half Yearly
Local	1 8, 0	1-0-0
Moffusil	2 0-0	1-4 0

'ನವ ಭಾರತ' ಬಳ್ಳಾರಿ.
[ಉಚ್ಚಲ ರಾಷ್ಟ್ರೀಯ ವಾರ ಪತ್ರಿಕೆ.]

	ವರ್ಷ	6 ತಿಂಗಳು
ಚಂದಾ ನಿವರ-ಬಳ್ಳಾರಿ ನಗರ	1-8-0	1 0 0
ಪರಸ್ಥಳ	2-0-0	1-4 0

ನಿಮ್ಮ ವ್ಯಾಪಾರದಲ್ಲಿ ಅಭಿವೃದ್ಧಿಯಾಗಬೇಕೋ ?
ನಿಮಗೆ ಲಾಭ ದೊರೆಯಬೇಕೋ ?
ನಿಮ್ಮ ವಸ್ತುಗಳಿಗೆ ಗಿರಾಕಿಗಳು ದೊರೆಯಬೇಕೋ?
ಹಾಗಾದರೆ, ಈ ಪ್ರಾಂತದಲ್ಲಿ ವಿಶೇಷ ಪ್ರಚಾರ ನಿರುವ **'ನವ ಭಾರತ'** ವಾರ ಪತ್ರಿಕೆಯಲ್ಲಿ ಜಾಹೀರಾತು ಕೊಡಿರಿ.
ಧರಗಳು - ಅತಿಸುಲಭ. ಈ ದಿನವೇ ಬರೆಯಿರಿ
ಮ್ಯಾನೇಜರು,
"ನವ ಭಾರತ"
ಬಳ್ಳಾರಿ.

Patent medicines, Tonics, injections
Ayurvedic Preparations &
Oilman stores — Go to the shop,
Cheapest in Bellary
M. S. V. Bros,
Car Street, **BELLARY.**

ಇಂಗ್ಲೀಸ್ ಔಷಧಗಳು, ಇಂಜೆಕ್ಷನ್ ಮತ್ತು ಇತರ ಆಯುರ್ವೇದೀ ಔಷಧಗಳು, ಸ್ನೇಷನರಿ ಸಾಮಾನುಗಳು ಸುಲಭ ಬೆಲೆಯಲ್ಲಿ ದೊರೆಯುತ್ತವೆ.
ಯಂ. ಯಸ್. ವಿ. ಬ್ರದರ್ಸ್,
ತೇರು ಬೀದಿ, ಬಳ್ಳಾರಿ.

Nava Bharat, Bellary.

REG. NO.

Sri

Printed at Vittal Press, Car Street Edited & Published by T. B. Keshava Rao, BELLARY.

'ವಂದೇ ಮಾತರಂ'

(ಇದರಲ್ಲಿ 'ಕಾಂಗ್ರೆಸ್ ಬುಲೆಟಿನ್' ಸಮಾವೇಶವಾಗಿದೆ)

ಉಜ್ವಲ : ರಾಷ್ಟ್ರೀಯ ವಾರ ಪತ್ರಿಕೆ.

ವಾರ್ಷಿಕ ಪೋಷಕ ದ್ರವ್ಯ.
ರಾಜ ಪೋಷಕರು, 10–0 0
ಪೋಷಕರು, 5–0–0

ಸಂಪಾದಕ:— ಟಿ. ಬಿ. ಕೇಶವರಾವ್.

ವಾರ್ಷಿಕ ಚಂದಾ
ಪರವ್ವಳದವರಿಗೆ, 2–0–0
ಬಳ್ಳಾರಿಯವರಿಗೆ, 1–8–0

ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ.

ಸಂಚಿಕೆ ೧ | ಬಳ್ಳಾರಿ, ಮಾರ್ಚ್ 4 ನೇ ಶನಿವಾರ 1939. | ಪ್ರತಿ ೩

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ.

ಅಂಗೀಕರಿಸಲ್ಪಟ್ಟ ನಿರ್ಣಯ.

*

ಡಾ|| ಸುಧಾಸುಂದ್ರ ಜೋಸರು ಧನಾಭಾವದ ತಮ್ಮ ಸೋದರರ ಗೃಹದಲ್ಲಿ ಚಿಕಿತ್ಸೆ ಹೊಂದುತ್ತಲಿರುವರು. ಶೀಘ್ರವಾಗಿಯೇ ಗುಣಮುಖರಾಗುವರೆಂದು ಅರಿಸಲಾಗಿದೆ.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆಯೂ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ನೇಷ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ.

ಸೆಸ್ಟ್‌ಎಂಟ್ ವಾಚುಗಳೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದುಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

ನವಭಾರತ

ಶನಿವಾರ ಮಾರ್ಚ್ 25, 1939.

ಬಳ್ಳಾರಿ ವರ್ತಕರು
ತಪ್ಪು ತಿಳುವಳಿಕೆ

ಕಾಂಗ್ರೆಸ್ ಸರ್ಕಾರದವರು ಶಾಸನ ಸಭೆಯ ಮುಂದೆ ತರಲಿರುವ **ಸೇಲ್ಸ್ ಟ್ಯಾಕ್ಸ್ ಟರ್ನ್ ಓವರ್ ಟ್ಯಾಕ್ಸ್** ಎಂಬುದಕ್ಕೆ ಬಳ್ಳಾರಿ ವರ್ತಕರು ತಮ್ಮ ನಿಷೇಧವನ್ನು ವ್ಯಕ್ತಪಡಿಸಿ 21ನೇ ತಾ॥ ಸಾರ್ವಜನಿಕ ಸಭೆಯಲ್ಲಿ ಅಧ್ಯಕ್ಷರು ಸಲ್ಲದ ಟೀಕೆಗಳನ್ನು ಮಾಡಿದರು.

ಮೇಲ್ಕಾಣಿಸಿದ ಕಾಯ್ದೆಗಳ ವಿವರಗಳು ಇನ್ನೂ ವೃತ್ತ ಪತ್ರಿಕೆಗಳಲ್ಲಿ ಪ್ರಕಟವಾಗಿಲ್ಲ. ಬಳ್ಳಾರಿಯ ವರ್ತಕರ್ಯಾರೂ ಈ ಕಾಯ್ದೆಯ ನಿಯಮಗಳನ್ನು ಅಭ್ಯಸಿಸಿದಂತೆ ತೋರಿಬರಲಿಲ್ಲ. ಈ ಕಾರಣ ಅಧ್ಯಕ್ಷರ ಆಪಕ್ಷಪಾತ ಮತ್ತು ಅನಿಷ್ಟವಾದ ಕಾಂಗ್ರೆಸ್ ಮೇಲಿನ ಟೀಕೆಯನ್ನು ನಾವು ಖಂಡಿಸುತ್ತೇವೆ. ಸರ್ಕಾರದವರ ಉದ್ದೇಶಗಳು ಸೂಕ್ಷ್ಮರೂಪದಲ್ಲಿ ಪ್ರಕಟವಾದೊಡನೆಯೇ ಟೀಕಿಸುವ ವಾಡಿಕೆಯು, ಕಾಂಗ್ರೆಸ್ ವಿರೋಧಿಗಳಿಗೆ ಸರ್ವಸಾಧಾರಣವಾಗಿ ಹೋಗಿಬಿಟ್ಟಿದೆ. ಸಂಪೂರ್ಣವಾಗಿ ಮತ್ತು ಅಧಿಕೃತವಾಗಿ ಸದರೀ ಕಾಯ್ದೆಯು ಇಂಗ್ಲಿಷ್ ಭಾಷೆಯಲ್ಲಿ ಸರ್ಕಾರದ ಗೆಜೆಟನಲ್ಲಿ ಪ್ರಕಟವಾಗಿಲಿದೆ. ಸಾರ್ವಜನಿಕ ಹಿತದ ದೃಷ್ಟಿಯನ್ನಿಟ್ಟು ಕಾಂಗ್ರೆಸ್ ನವರಾದರೂ, ಉಪನಿಯಮಗಳನ್ನು ಸೂಚಿಸಬಹುದು. ಇಲ್ಲಿಯವರೆಗೆ ಪ್ರಕಟವಾಗಿರುವ ಲೇಖನಗಳನ್ನೂ, ಉಪನ್ಯಾಸಗಳನ್ನೂ ಮುಖ್ಯಮಂತ್ರಿಗಳ ಸ್ಪಷ್ಟೀಕರಣವನ್ನೂ ವಿಮರ್ಶಿಸಿದರೆ ಈ ಕಾಯ್ದೆಯು ರೈತ, ವರ್ತಕ ಕೊಳ್ಳುವವರಿಗೆಲ್ಲಾ ಸಮಾನವಾಗಿ ಅನ್ವಯವಾಗುತ್ತದೆ. ವರ್ತಕನ ಭಾಗವು ಸ್ವಲ್ಪ ಹೆಚ್ಚಿರಬಹುದು.

ಒಂದು ವಿಷಯ. ಪಾಶ್ಚಿಮಾತ್ಯ ದೇಶಗಳ ಯಾವ ರಾಜ್ಯಭಾರ ಕ್ರಮವನ್ನು ಪರೀಕ್ಷಿಸಲಿ. ಹಣವಿರುವ ಶ್ರೀಮಂತರು ದೇಶ ಕ್ಷೇಮ ಸಾಧಕವಾದ ಕಾರ್ಯಗಳನ್ನು ಕೈಗೊಂಡಿರುವ ಸರ್ಕಾರಕ್ಕೆ ಇತರರಿಗಿಂತ ಹೆಚ್ಚಿಗೆ ತೆರಿಗೆ ಕೊಡಬೇಕಾಗುತ್ತದೆ. ಇದು ಒಟ್ಟು ಆದಾಯದಲ್ಲಿ ಶೇ 10 ರಿಂದ 90ರ ವರಿಗೂ ಇದೆ. ಶೇ 90 ಭಾಗವು ರಷ್ಯಾದಲ್ಲಿದೆ. ನಮ್ಮ ದೇಶದಲ್ಲಿ ಸದ್ಯಕ್ಕೆ ಸಮಾತಾವಾದವು [Socialism] ಜಾರಿಗೆ ಬರದಿದ್ದರೂ, ಬಡವರ ಮತ್ತು ರೈತರ ಉದ್ಧಾರಕ್ಕೆ ಶ್ರೀಮಂತರೂ ಮತ್ತು ಜಮೀನ್ದಾರರೂ ಸಹಕಾರ ಹಸ್ತವನ್ನು ನೀಡಬೇಕು. ಇಲ್ಲದಿದ್ದರೆ ಘೋರ ಬಡತನವು ನೀಗುವುದಿಲ್ಲ. ದೇಶದ ಆರ್ಥಿಕ ಪರಿಸ್ಥಿತಿಯು ಸುಧಾರಿಸುವುದಿಲ್ಲ.

ಈ ಕಾಯ್ದೆಯ ಮುಖ್ಯಾಂಶಗಳನ್ನು ಕುರಿತು ಒಂದೆರಡು ವಾರಗಲ್ಲಿ ಮುಖ್ಯ ವಿವರಗಳನ್ನು ಪ್ರಕಟಿಸುತ್ತೇವೆ.

ಬಳ್ಳಾರಿ ಜಿಲ್ಲಾ ಬೋರ್ಡು
ಪ್ರಾ. ಉಪಾಧ್ಯಾಯರು

ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ. ನಾಗನಗೌಡರು ಇತರ ಸದಸ್ಯರೊಂದಿಗೆ 21ನೆಯ ತಾ, ವಿದ್ಯಾಖಾತೆಯ ಮುಖ್ಯ ಮಂತ್ರಿಗಳನ್ನು ಮದ್ರಾಸು ನಗರದಲ್ಲಿ ಕಂಡು ಜಿಲ್ಲಾ ಬೋರ್ಡಿನ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಿ ಹೆಚ್ಚಿನ ಗ್ರಾಂಟನ್ನು ಸರಕಾರದಿಂದ ಜಿಲ್ಲಾ ವಿದ್ಯಾಭ್ಯಾಸಕ್ಕಾಗಿ ಕೊಡಲು ಬೇಡಿದರು. ಕಾಂಗ್ರೆಸ್ ಸರಕಾರದವರು ಕೈಗೊಂಡಿರುವ ಚಟುವಟಿಕೆಗಳಿಂದ (Nation Building Activities) ಯಾವ ಖಾತೆಯಲ್ಲೂ ಹೆಚ್ಚಿನ ಖರ್ಚನ್ನು ಈಗ ವಹಿಸುವಂತಿಲ್ಲವೆಂದೂ, ಜಿಲ್ಲಾ ಬೋರ್ಡಿನವರು ತಮ್ಮ ಆರ್ಥಿಕ ಸ್ಥಿತಿಗನುಗುಣವಾಗಿ ಹೆಚ್ಚು ಕಡಮೆಗಳನ್ನು ಮಾಡಿಕೊಳ್ಳಬೇಕೆಂದೂ ತಿಳಿಸಿದರೆಂಬುದಾಗಿ ಗೊತ್ತಾಗಿದೆ. ಈ ಕಾರಣ ಹಂಗಾಮಿಯಾಗಿ (Temporary Service)ದ್ದು ಜಿಲ್ಲಾ ಬೋರ್ಡಿನಿಂದ ತೆಗೆದುಹಾಕಲ್ಪಟ್ಟ ಸುಮಾರು 40 ಜನ ಉಪಾಧ್ಯಾಯರಿಗೆ ಸದ್ಯದ ಪರಿಸ್ಥಿತಿಯಲ್ಲಿ ಕೆಲಸ ದೊರೆಯಲಿಕ್ಕಿಲ್ಲ.

ಬಳ್ಳಾರಿಯ ವೃದ್ಧ ಕವಿಗಳು

ಬಳ್ಳಾರಿಯ ಜಿಲ್ಲಾ ಅಲೂರು ತಾಲ್ಲೂಕಿನ ಎಳ್ಳೆರ್ತಿ ಎಂಬ ಗ್ರಾಮದಲ್ಲಿ ಒಬ್ಬ ವಯೋವೃದ್ಧರಿದ್ದಾರೆ. ಅವರಿಗೆ ವಯಸ್ಸು ೮೩ ವರ್ಷ. ಕನ್ನಡ ಭಾಷಾಪ್ರೇಮಿಗಳು. ಸರಸಕವಿಗಳು. ಬಳ್ಳಾರಿಯಲ್ಲಿ ನಡೆದ ತ್ರಿಪದಿಯ ಕರ್ನಾಟಕ ಸಾಹಿತ್ಯ ಸಮ್ಮೇಳನದಲ್ಲಿ, ಅಲ್ಪ ಸಮಯದಲ್ಲೇ ಈ ಪತ್ರಿಕೆಯು ಬೇರೊಂದು ಕಡೆಯಲ್ಲಿ ಪ್ರಕಟವಾದ ಕವಿತೆಯನ್ನು ವೃದ್ಧ ಕವಿಗಳಾದ ನೇ॥ ವಿ॥ ಚನ್ನಯ್ಯನವರು ರಚಿಸಿದುದನ್ನು, ಶ್ರೀ ಜೋಳದಹಾಸಿ ದೊಡ್ಡನಗೌಡರು ವೃದ್ಧಮಧುರವಾಗಿ ಕವಿಗೋಷ್ಠಿಯ ಕಾಲಕ್ಕೆ ಓದಿದರು. ಕರ್ನಾಟಕ ಗಡಿನಾಡ ಸಮೀಪವಲ್ಲಿನ ಬಳ್ಳಾರಿ ಜಿಲ್ಲೆಯಲ್ಲೂ ಕೂಡ ಕನ್ನಡ ಕವಿಗಳಿಗೆ ಕೊರತೆಯಿಲ್ಲೆಂಬುದು ಸೂರ್ಯಪ್ರಕಾಶದಷ್ಟು ಸುಸ್ಪಷ್ಟವಾಗಿದೆ. ಕನ್ನಡ ಭಾಷಪ್ರೇಮಿಗಳಾದ ಹೊಳಲಗುಂದಿ ಬಸವನಗೌಡರ ಕೃಪೆಯಿಂದ ಈ ಪದ್ಯ ಸಂಗ್ರಹವು ನಮಗೆ ಲಭ್ಯವಾಯಿತು. [ಸಂಪಾದಕ]

ಸೇಲ್ಸ್ ಟ್ಯಾಕ್ಸ್ ಬಹಿರಂಗಸಭೆ

24ನೇ ತಾ, ಸಾಯಂಕಾಲ ಸಾಂಬಮೂರ್ತಿ ವೈದಾನದಲ್ಲಿ ಶ್ರೀ ವೀರಸ್ವಾಮಿಯವರ ಅಧ್ಯಕ್ಷತೆಯ ಕೆಳಗೆ ಒಂದು ಸಭೆಯು ನೆರೆದು ಕಾಂಗ್ರೆಸ್ ತತ್ವ ಸೇಲ್ಸ್ ಟ್ಯಾಕ್ಸು ಆಕಯ ವಗ್ಗೆ ಶ್ರೀ ವಿ. ಎಂ. ಗಿರಿ, ಕೇಶವರಾವ್ ಗಂಗಾವತಿಯವರಿಂದ ವಿವೇಚಿಸಲ್ಪಟ್ಟಿತು. ಶಾಂತರುದ್ರಪ್ಪನವರು ವಿರೋಧಿಸಿದರು. ಈ ಸಭೆಗೆ ವರ್ತಕರ್ತನೇಕರು ಬಂದಿದ್ದರು.

ಮಾನಾಕ್ಷಿ ಭವನ ಕಾಫಿಕ್ಲಬ್

[ರಿಜಿಸ್ಟರ್ಡ್]

ಶಾಖೆಗಳು—

ಕಾಫಿ ಕ್ಲಬ್ ಬೆಂಗಳೂರು ರೋಡ್

ಊಟ ವಸತಿಗೃಹ ಬ್ರಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪದಲ್ಲಿ ತಯಾರಿಸಿದ ಸಿಹಿಖಾರದ ಫಲಹಾರವಸ್ತುಗಳು.

ಒಳ್ಳೆಯ ಊಟದವ್ಯವಸ್ಥೆ. ಧಾರಾಳವಾಗಿ ಗಾಳಿ, ಬೆಳಕು ಬರುವ ಮಹಡಿಯ ಮೇಲಿನ ಕೊಪಡಿಗಳು ಅಧುನಿಕ ವ್ಯವಸ್ಥೆ,

ಒಮ್ಮೆ ಸಲ ಬಂದು ಪರೀಕ್ಷಿಸಿರಿ.

ಉಪವಾಸದ ಮಹಾತ್ಮ್ಯ

(ಮಹಾತ್ಮ ಗಾಂಧಿಯವರಿಂದ)

ಉಪವಾಸದ ಇತಿಹಾಸವು ಪ್ರಪಂಚದ ಆದಿಯ ಇತಿಹಾಸಗಳಷ್ಟು ಪುರಾತನವಾಗಿದೆ. ಅದು ಆತ್ಮಶುದ್ಧಿಗೂ, ಸದುದ್ದೇಶಗಳ ಸಾಫಲ್ಯಕ್ಕೂ ಕೈಗೊಳ್ಳಲ್ಪಟ್ಟಿದೆ. ದೇವರ ಸಾನಿಧ್ಯವನ್ನು ಪಡೆಯಲು ಪ್ರತ್ಯಕ್ಷ ಸಾಕ್ಷಿಪಡೆಯಲು ಬುದ್ಧ, ಜೀಸಸ್‌ಕ್ರೈಸ್ತ ಮತ್ತು ಮಹಮ್ಮದ್ ಪೈಗಂಬರ್ ಇವರುಉಪವಾಸವನ್ನಾಚರಿಸಿದರು. ಕಪಿಸೈನ್ಯಕ್ಕೆ ಸಾಧಿಯನ್ನು ಕೊಡೆಂದು ಸಮುದ್ರವನ್ನೊಲಿಸಲು ರಾಮಚಂದ್ರದೇವರು ಉಪವಾಸಮಾಡಿದನು. ತನ್ನ ದೇವರನ್ನಾಗಿಯೂ. ತನ್ನ ಪ್ರಾಣಪ್ರಿಯ ಸನ್ಯಾಗಿಯೂ ಮಾಡಿಕೊಳ್ಳಲು ಪಾವ್ರತಿಯು ಪರಮೇಶ್ವರನಿಗಾಗಿ ಉಪವಾಸಮಾಡಬೇಕಾಯಿತು. ನನ್ನ ಉಪವಾಸಗಳಲ್ಲಿಯೂ ಇದೇ ತತ್ವವನ್ನ ನಲಂಬಿಸಿರುತ್ತೇನೆ. ಈ ಮಹಾ ಉದಾಹರಣೆಗಳನ್ನೇ ಅನುಕರಿಸಿರುತ್ತೇನೆ ಆದರೆ ಉದ್ದೇಶಗಳು ಅವಕ್ಕಿಂತ ಅಲ್ಪ ದರ್ಜೆಯವಿರಬಹುದು.

ನಾನು ಉಪವಾಸ ಮಾಡುವ ಪ್ರಸಂಗ ಬೀಳಬಹುದೆಂಬನಂಬಿಕೆಯಿಂದ ಶೇಗಾಂವ ಗ್ರಾಮವನ್ನು ಬಿಟ್ಟೆನೆಂಬ ಒಂದು ಅಭಿಪ್ರಾಯಕ್ಕೆ ಉತ್ತರ ಕೊಡಬೇಕಾಗಿದೆ. ಅದು ರಾಜಕೋಟದ ಉಪಸ್ಯಾಸಕ್ಕೆ ಸಂಬಂಧಿಸಿದ್ದು. ಉಪವಾಸಮಾಡಲು ನನಗೆ ಬಹಳ ಹಿಂಜರಿಕೆಯುದೆ 1933ನೇ ಆಗಷ್ಟು ತಿಂಗಳಲ್ಲಿ ಮಾಡಿದ ಉಪವಾಸವು ಅಲ್ಪ ಕಾಲದಿದ್ದರೂ ಅದರಿಂದ ನನಗೆ ಬಹಳ ಒತ್ತಾಟವಾಗಿತ್ತು. ನನ್ನನ್ನು ಬಿಡುಗಡೆಮಾಡಿದ ದಿನವೇ ನಾನು ಮರಣಕ್ಕೆ ತಯಾರಾಗಿದ್ದೆನು. ನನ್ನ ಹತ್ತರವಿದ್ದ ಔಷಧಸಾಮಗ್ರಿಯನ್ನೆಲ್ಲಾ ನಸ್ಸೊಡನಿದ್ದ ದಾದಿಗೆ ಒಪ್ಪಿಸಿ ಬಿಟ್ಟಿದ್ದೆನು. ಆಗಿನಿಂದ ಉಪವಾಸಗಳೆಂದರೆ ನನಗೆ ಬಹಳಭಯ. 6 ರಿಂದ 13 ಏಪ್ರೆಲ್ ರವರಿಗೆ ನಡೆಯುವ ರಾಷ್ಟ್ರೀಯ ವಾರದಲ್ಲಿನ ಒಂದು ದಿನವು ಉಪವಾಸವೇ ನಾಕು ನಾಕಾಗಿ ನನ್ನ ದೇಹವು ದೊಷ್ಟ ಉಪವಾಸಕ್ಕೆ ತಯ್ಯುವುದಿಲ್ಲೆಂಬುದು ಮನವರಿಕೆಯಾಗಿಬಿಟ್ಟಿದೆ. ಈಕಾರಣ ನಾನು ಸೇಗಾಂ ಗ್ರಾಮವನ್ನುಬಿಟ್ಟಾಗ ರಾಜಕೋಟೆಯಲ್ಲಿ ಉಪವಾಸಮಾಡಬೇಕಾದೀತೆಂದು ಎಣಿಸಿರಲಿಲ್ಲ. ಇಂಥಾ ನಿರ್ಣಯಗಳನ್ನು ಮಾಡುವಾಗಿದ್ದರೆ ಸ್ನೇಹಿತರಿಗೆ ಸಕಾಲದಲ್ಲಿ ತಿಳಿಸುವ ಪ್ರಾಗ್ವಾನವನ್ನು ಮಾಡಿರುವೆನು. ಇದರಿಂದ ನಾನು ಮೊದಲೇ ಆಲೋಚಿಸಿರಲಿಲ್ಲ. ಆತ್ಮದ ಅತಿಶಯ ವೇದನೆಯಿಂದ ಒಮ್ಮೆಲೆ ಬಂದುಬಿಟ್ಟಿತು. ಉಪವಾಸದ ಹಿಂದಿನ ದಿನಗಳು ಭಗವಂತನ ದೀರ್ಘಪ್ರಾರ್ಥನೆಯದಿನಗಳಾಗಿದ್ದವು. ನಾನು ಉಪವಾಸ ನಿರ್ಣಯವನ್ನು ಮಾಡುವ ಪೂರ್ವದಲ್ಲಿನ ರಾತ್ರಿಯು ನನಗೆ ಬಹು ಸಂಕಟ ಮಯವಾಗಿದ್ದಿತು. ನಾನು ಏನು ಮಾಡಬೇಕೆಂದು ತೋಚದಾಯಿತು.

ಏನಾದರಾಗಲಿ, ಈ ಕಾರ್ಯವನ್ನು ಮಾಡೇತೀರಬೇಕು

ಎಂಬುದು ನನಗೆ ಪ್ರಾತಃಕಾಲ ಹೊಳೆಯಿತು. ಹೀಗೆ ಮಾಡಬೇಕೆಂದು ಭಗವಂತನು ಪ್ರೇರೇಪಿಸಿರುವನೆಂಬ ವಿಶ್ವಾಸವು ನನ್ನಲ್ಲಿಲ್ಲದಿದ್ದರೆ ನಾನು ಈ ನಿರ್ಣಯವನ್ನು ಮಾಡುತ್ತಿರಲಿಲ್ಲ. ಇಷ್ಟು ರಾಜಕೋಟೆಯ ಉಪವಾಸವು ವಿಷಯವಾಯಿತು.

ಸತ್ಯಾಗ್ರಹ ಸೈನ್ಯಜಾತೆಯಲ್ಲಿ ಉಪವಾಸವು ಬಲವಾದ ಶಸ್ತ್ರವಾಗಿದೆ. ಇದನ್ನು ಎಲ್ಲರೂ ಆಚರಿಸಲು ಬರುವಂತಿಲ್ಲ. ದೇಹದಲ್ಲಿ ಶಕ್ತಿ ಇದೆಯೆಂಬ ಕಾರಣವು ಇದನ್ನು ಮಾಡಲಿಕ್ಕೆ ಯೋಗ್ಯತೆ ಕೊಡಲಾರದು. ಒಬ್ಬರು ಮಾಡುತ್ತಾರೆಂದು ಮಾಡುವುದೂ, ಉಪವಾಸ ಮಾಡಬೇಕೆಂದು ಮಾಡುವುದೂ ತ್ಯಾಜ್ಯವಾಗಿದೆ. ಆತ್ಮ ಪ್ರೇರಣೆಯಿಂದ ಉಪವಾಸವಾಗಬೇಕು. ಅದಕ್ಕೋಸ್ಕರ ಅದು ಬಹಳ ಅಪರೂಪವಾಗಿರಬೇಕು ಈ ಸಾಧನೆಗೆ ನಾನು ಸೃಷ್ಟಿಸಲ್ಪಟ್ಟಿರಬಹುದೆಂದು ಊಹೆಯಾಗುವುದು. ರಾಜಕೀಯ ರಂಗದಲ್ಲಿನ ನನ್ನ ಒಬ್ಬ ಸ್ನೇಹಿತರಿಗಾಗಲಿ ಇಂಥಾ ಪ್ರೇರಣೆಯಾಗಿಲ್ಲವೆಂಬುದನ್ನು ಅರಿಯಲು ಯೋಗ್ಯನಾಗಿದೆ. ನನ್ನ ಉಪವಾಸಗಳಿಗಾಗಿ ಅವರು ಎಂದೂ ಕೋಪಿಷ್ಠರಾಗಿಲ್ಲ. ಕೆಲ ಸಂದರ್ಭಗಳಲ್ಲದೆ ಉಳಿದ ಕಾಲದಲ್ಲಿ ಅಶ್ರಮೋಪವಾಸಿಗಳಿಗೂಕೂಡ ಮನೋವೈಕಲ್ಯವಾಗಿಲ್ಲ.(ಅಂತಃ ಪ್ರೇರಣೆಯು ಎಷ್ಟೇಯಿರಲಿ) ಸಹಾನುಭೂತಿ ಉಪವಾಸಗಳನ್ನು ಕೂಡ ಮಾಡಬಾರದೆಂಬ ನನ್ನ ವಿಧಿನಿಯಮವನ್ನು ಅವರು ಒಪ್ಪಿಕೊಂಡಿರುತ್ತಾರೆ. ಉಪವಾಸವು ಒಲವಾದ ಅಸ್ತ್ರವಾಗಿದ್ದರೂ ಅದಕ್ಕೆ ವಿಧಿನಿಯಮಗಳಿರುವ ಕಾರಣ ಅದರಲ್ಲಿ ಶಿಕ್ಷಣಹೊಂದಿದವರು ಮಾತ್ರ ಅದನ್ನು ಆಚರಿಸಬೇಕು. ನನ್ನ ಈ ದರ್ಜೆಯೊಂದಿಗೆ ತೋಲಿಸಿದರೆ ಉಪವಾಸಗಳನ್ನಾಚರಿಸುವವರ ನೇಕರು ಸತ್ಯಾಗ್ರಹ ಉಪವಾಸಿಗಳೊಂದಿಗೆ ಬಾರುವುದಿಲ್ಲ. ದೀರ್ಘಾಲೋಚನೆಯಿಲ್ಲದೆ ಪ್ರಥಮ ತಯಾರಿ ಇಲ್ಲದೆ, ಆಚರಿಸಲ್ಪಟ್ಟ ನಿರಾಹಾರ ಸಾಧನಗಳು ಅವು ಆಗಿವೆ. ಇವನ್ನು ಸಮಯ ಸಂದರ್ಭಗಳಿಲ್ಲದೆ ಉಪಯೋಗಿಸಿದರೆ ಅವುಗಳಿಗಿರುವ ಅಲ್ಪ ಶಕ್ತಿಯೂಹೋಗಿ ವೃಥಾ ಅಪಹಾಸ್ಯಕ್ಕೆ ಗುರಿಯಾಗಬೇಕಾಗಬಹುದು.

H. Sreenivasa Rao,
News Agent Brahmins St
BELLARY.
Ananda Vigadan,
Grihalaxmy [TAMIL]
Grihalaxmy ([TELUGU
Viswamitra (HINDI
Sunday Herald ENGLISH
Available.

ಬಳ್ಳಾರಿಯ ವೃದ್ಧ ಕವಿಗಳೊಬ್ಬರು.

ಶ್ರೀ ಮಠದ ಚನ್ನಯ್ಯನವರು, ಯಳ್ಳರ್ತಿ (ಆಲೂರು ತಾಲೂಕು)

ಶ್ರೀಮದಾನಂದ ಪ್ರದೇಶವಿ ದೀ ಮಹಾಕರ್ಣಾಟ ರಾಜ್ಯದ। ಭೂಮಿಹಿತವರ್ಣನೆಯನೆಸಗಿದ ಪೂರ್ವ ಕವಿ
ಗಳಿಗೇ॥ ಪ್ರೇಮದಿಂದಾಂ ನಮಿಸಿ ರಾಜ್ಯ। ಕ್ಷೇಮಕೋಸುಗ ವೊಳ್ಪ ಕವಿತೆಯ । ನೇಮದಿಂದೀ ಸಮಿತಿಯನಂಜಲಿಸಲೆನ್ನಗೆ
ಳೆನವೂ॥೧॥ ಕನ್ನಡದ ನಡುನಾಡನಾಳ್ದಾ। ಪನ್ನರಕ್ಷಕ ಕೃಷ್ಣರಾಜೇಂದ್ರೋನ್ನತಿಯ ನಭಿ ವರ್ಣಿಸಿದ ಸದ್ಗ್ರಂಥಗಳೆ ಸಾಕ್ಷೀ॥
ಇನ್ನು ಮತ್ತೀಗರ್ಪ ಗತಿಯಂ। ಕನ್ನಡಮ್ಮನ ಕೇಳ್ವರಾರಂ। ರುನ್ನಿಸಲು ನಾಕಾಣೆನಮ್ಮಾ ಯೆಂಬುವವರಿಲ್ಲಾ॥೨॥ ಅಮ್ಮಯೆಂಬ
ಭಿಮಾನವಿದ್ದರೆ। ಸಮ್ಮತನದಾಗಿಹುದು ಜಗದೊಳು। ಸುಮ್ಮನೇ ಕುಳಿತಿರ್ಪರೇತಕೆ ನುಕ್ತಳಾದವರೂ॥ ಬೊಮ್ಮನೆಂದೇ ಪೇಳ್ವಪೆ
ಸರಿದು। ಸಮ್ಮುದದೊಳುದ್ಧರಿಸಬೇಕೆಂ। ದೊಮ್ಮನವ ವಾಡಿದರೆ ಸಾಧ್ಯವದಾಗದೇ ನಿಮಗೇ ॥೩॥ ಪಡುರಸದ ಭೋಜನವ
ನೂಡಿಸಿ । ದೊಡೆಯಳಲ್ಲವೆ ನಿಮಗೆ ನೀವರ ತೊಡಕು ಮನವನು ಮಾಡಿದುದಕೀಗತಿಯು ನಿಮಗಾಯ್ತೂ॥ ಎಡರುಗಳು
ನಿಮಗೀಗತೋರ್ಪವು। ಬಿಡದೆ ನೀನೇಕಾಗ್ರಚಿತ್ತದಿ। ಮುಡಿದಿರಾದಡೆ ಮೊದಲ ಸುಖವದು ನಿಮಗೆ ಸಿದ್ಧಿಪುದೂ ॥೪॥
ದುರುಳ ಕನಕಾಕ್ಷನನು ಕೊಂದಾ। ಧರಸು ಸೂಕರಮೂರ್ತಿತನಗಿರು। ವೆರಡು ಕೋರೆಗಳಿಂದ ಜನಿಸಿದ ತುಂಗಭದ್ರೆಯದೂ॥
ವರವರಾಹಾಚಲವಬಟ್ಟ । ಳ್ಳಿರದೆ ಬಂದಾನದಿಯು ನಿನ್ನನುಸರಿಸಿ ಬಹುಫಲವಿತ್ತುದಮ್ಮಾ ನಮ್ಮ ಪುಣ್ಯವಲಾ ॥ ೫ ॥
ತುಂಗಭದ್ರೆಯೆನಿಪ್ಪ ನಾವದ। ಮಂಗಳ ಪ್ರದವೂದ ಪೊಳೆಯಮ। ಗಂಗೆಗಿಂ ಮಿಗಿಲಾಗಿ ತೋರುವದಾವನಾಡೊಳಗೇ॥
ಗಂಗೆಯೆದು ಜಳಕಕ್ಕೆ ಯೋಗ್ಯವು। ತುಂಗತೀರ್ಥವ ಸುಪ್ರಸಾದವ। ಸಂಗಳಿಸಿ ಕೊಡುತಿರ್ಪುದಮ್ಮಾ ನಿನ್ನೊಡಲೊಳಿರ್ದೂ॥೬॥
ಅಣ್ಣ ಬಸವಣ್ಣನನು ಸುಗುಣವ । ನುಣ್ಮೆಸಿದ ನಾದೇನಿಯಕ್ಕನ । ಬಣ್ಣವೆಮಗೆಟ್ಟುಸ್ಸ ಶರಣಪ್ಪನನು ಕಳಕೊಂಡೊ ॥ ಕ
ಣ್ಣುಕಾಣದ ಕಸಿಗಳಂದದೊ। ಳಣ್ಣ ಇಲ್ಲದ ದೀಪಕೆಣೆನಾವ್ಮಣ್ಣು ಗೂಡಿಪ ಕಾಲಬಂದದೆ ತಾಯೆ ಚಿತ್ತೈಸೂ ॥ ೭ ॥
ಕವಿಗೊಡನೆಯಂದೆಂಬುವರ್ಥದ। ಸವಿಯನಾಂತಿಹ ಶಬ್ದವಲ್ಲನೆ। ಭುವಿಯೊಳಗೆ ಕರ್ನಾಟನೆಂದರೆ ಇದಕೆ ಪಡಿಯುಂಟೇ॥
ಕವಿಗಳಿಗೆ ಸರಸತ್ವನೀವುದು। ನವರಸಾಲಂಕಾರದಿಂದಿಹು। ದವಿರತಂ ಬಣ್ಣಿಪರು ನಿನ್ನನು ವಿವಿಧ ಮತದವರೂ ॥ ೮ ॥
ನಿನಗೆ ಪಡಿಯಿಲ್ಲೆಂಬಕಾರಣ । ದನುವನರಿದಿರ್ಪಾಂಧ್ರದೇಶದ।ಜನರು ನಿನ್ನನು ಕರೆಯಬರ್ಪರುನಿತ್ಯ ನಿತ್ಯದೊಳೂ॥ನಿನಗೆ ನೆರ
ಮನೆಯೆಲ್ಲವೇ ಸುಖ। ವನುಸದಾಕಾಣಲ್ಕೆ ಬಾರದು । ನಿನಯಗುಣಸಂಪನ್ನೆ ನಿನ್ನಧಿಕಾರವುಳಿಯುವದೇ ॥೯॥ ನೆರೆಮನೆಯ
ಜನರೊಡನೆ ಸೇರರು ಮರಹುಬಿಡುವರು ನಿನ್ನ ತನ್ನಡೆ। ನರರೆ ಹಿಂದಿನಕವಿಗಳೆಸಗಿದ ಕಾವ್ಯಗಳ ಶೇಖ್ತ್ವಾ॥ ನರರದಾರೌನಿನ್ನ
ಮಕ್ಕಳ । ಮರುಳಬಟ್ಟರೆ ಕರೆದು ಪೊರೆವವ । ರರಿಯಲಿಕ್ಕಾರಿಲ್ಲವಮ್ಮಾ ಮತ್ತೆಗತಿಯಿಲ್ಲನೂ ॥೧೦॥ ಹಿಂದಿನರಸರ ಸರಸಕವಿ
ಗಳ ಮಂದಹಾರಿತ್ರಗಳ ಬಹುವಿಧ । ದಿಂದನೋಡಲು ಕಾಣದಿಹುದವು ಕಾರಣವದೇನೋ॥ ಮಂದಮತಿಯೋ ನಿದ್ರೆಯೋಯಿ
ದ । ರಂದವರಿಯಲು ಬಾರದವ್ಯಾ ಮುಂದೆ ಗತಿಯೇನೆಂದು ಕೇಳ್ದರೆ ಕೇಳ್ವರಾರಿಲ್ಲಾ॥೧೧॥ ದೈಸುಕಾಟನೆಂಬುವರು ಪರರ। ದೇಶ
ವಾಸಿಗಳಾಗಿ ತಮ್ಮಯ ಭಾಷೆಗಳೆಲ್ಲ ಬಿಟ್ಟೇ ಕಡೆಗೆ ತಲೆತಿರುಗಿ । ದೋಷವಿರಹಿತವೂದ ಕನ್ನಡ ಭಾಷೆಯೊಳು ಕೋಶವ
ನು ರಚಿಸಿ ವಿ। ಶೇಷವರ್ಣನೆಗೈದರದರಿಂ ಮನಕೆ ಸಂತಸವೂ ॥೧೨॥ ನಿನಗೆ ಮೂಡಣಕಡೆಯಪೊಡವಿಯು। ತೆನುಗುರಾಜ್ಯವು
ನಿನ್ನ ಕೆಳಗಿನ । ದೆನಿಸಿಕೊಂಡಿರು ತಿರುವದವರಿಂನಿಬುಧ ಸಂಚಯವೂ । ಮನಮೊಳಾಲೋಚನೆಯನೈಸಲಿ। ಲ್ಲಿನಿತು ಕುಂದೊ
ಪ್ಪುತ್ತಕಾರಣ। ನಿನಗೆ ಮಿಗಿಲೆನಿಸದು ಕಣಾ ಕೇಳ್ವಾಯಿ ನಿರ್ಮಾಯೇ ॥೧೩॥ ಅರನನೆ ನೆರವರಹಿತವರ್ಧವ। ಧರಪುದಮತೇ
ಕಣದೊಳಿರ್ಪುದು ಪರಸಶಬ್ದಗಳಲ್ಲವದು ನಿನಗೆಂತು ಮೇಲಹುದೂ॥ ಕಿರಿದುಮಲಬಾರತ್ಯಲಿರುವುದು। ಹಿರಿದು ಕುತ್ತುಗಳಿಂ
ದ ಸೆರೆವುದು । ಪರಿಕಿಸಲು ಸರಿಯಲ್ಲ ಪಡುವಣ ಕಡೆಗೆಕಡಲಿಹುದು ॥೧೪॥ ಬಡಗಣದ ಸರಿಹೆದ್ದು ರಾಜ್ಯವು । ಬಿಡದೆ ಪರಿಕಿ
ಸೆ ಮೊರಟುಭಾಷೆಯ। ನುಡಿವಜನರನು ಸರಣಿಯದು ತೊಡಕೆಂದವಂಬಟ್ಟೂ ॥ ಕಡೆಗೆ ನೊರುಟಪ ಬಂಕಿವೇವನು । ಸಿಡಿದು
ಬುದೀ ಯಡೆಯ ಸೇರ್ದನು। ಮೃಡನ ಪಡೆಯಹ ಶರಣನೆಂದರೆ ಘನಶರದ ಸಾಕ್ಷೀ ॥೧೫॥ ಹೆಸ್ತನಾತಿಯಿಂದ ನಾನ । ಪ್ರಸ್ತ
ನೆವನನು ಮಾಡಿ ಕೈಯಿ । ಮಸ್ತಕವನೊರಸುತ್ತ ಬರಲಾಚೇಟಿಯಣ್ಣಗಂಗೇ॥ ಶಸ್ತ್ರದೀಪಜಯವನು ಕೊಡಲಾ । ಸ್ತಸ್ಪಲ
ಮೊಳರಲಾಗಿ ನಿಮುಖಾಶ್ವತನವನು ನಿನ್ನೊಡಲೊಳಡಗಿಪೆಯಪೆ ಮಹಾಕ್ಷೇತ್ರಾ ॥೧೬॥ ಅನ್ಯಭಾಷಾಸಕ್ತಿಯಿಂದಿಪ ನಿನ್ನ ಮ
ಕ್ಕಳೆನಿಪ್ಪನಮಗೆ । ನ್ಯೋನ್ಯ ನಿಷ್ಕಾಸತಿಯ ಬಿಟ್ಟರೆ ಗಣ್ಣ ತೆರಪಾಯ್ತೂ॥ ಇನ್ನು ಮೇಲ್ನಡುಗಟ್ಟಿ ದುಡಿಯುವ । ದಣ್ಣು
ನೋಡೌ ಮರುಗಬೇಡೌ ಮಾನ್ಯಳೇ ನಿನ್ನಿಂದ ಧನ್ಯತೆಯನ್ನು ಪಡೆಯುವೆವೂ ॥೧೭॥ ಹಿಂದೆಕೀರ್ತಿಯನುಳಿಸಿ ಪೋದವ
ನಂದರಾಧೀಶರನು ಕವೀಶರ। ವೃಂದವನು ಭೋಗಿಗಳ ಶಿವಯೋಗಿಗಳ ಸಮುದಯಕೇ॥ ಮುಂದೆ ಕಳೆಬೆಳೆವಂತೆ ಮಾಡುವ
ದೊಂದೆಯಭಯದ ವಾಕ್ಯವನು ಕೊಡು। ನಿಂದಿಸುವ ಪರಜನನ ನೋರೆಗೆ ಮುಸಿಯ ಜಿಲ್ಲುನೆವೂ ॥೧೮॥ ತಾಯೆನಲು ನರ
ವೀವತಾಯೇ । ಕೋಯೊನು ಪರಿಯಿಂದಲೀಗಳೆ ಬಾಯನುಡಿಯನು ನುಡಿದೆಯಾದರೆ ನಮಗೆ ಕೋಟಿಫಲಾ। ನ್ಯಾಯದಿಂ
ಸದ್ಧರ್ಮದಿಂದಲ। ಜೇಯರಾಗುವೆನೆಂದುನಂಬುತೆ। ಕೈಯ್ಯಬೆರಳೆಣಿಕೆಂಪೆತ್ತಿ ಮೆಲಕೆ ತೋರಿಸುವೆನಹಹಾ ॥೧೯॥ ಭೋ ಸಭೆ
ಕರೇ ಭೋ ಸುಸಭ್ಯರೇ ಈ ಸದುದ್ಯೋಗವನುನವದಗಿಸಿ । ಲೇಸುಗೈದುದರಿಂದಲೆನಗಾಯಾಸವಿನಿತಿಲ್ಲಾ ॥ ತೋಷಮನದಿಂ
ಕನ್ನಡವಸುವಿ । ಶೇಷವದು ಬಹಳುಂಟು ಮುಗಿಸಿದೆ । ಈ ಸಮಯ ನಿಸ್ತರದ ಭಯದಿಂ ಜಯ ಜಯ ಜಯ ಶ್ರೀ ॥೨೦॥

ತ್ರಿಪುರೀ ಕಾಂಗ್ರೆಸ್

(ಏ. ಯಂ. ಗಿರಿಯವರಿಂದ)

ಹಳ್ಳಿಯ ಪ್ರದೇಶಗಳಲ್ಲಿ ಕಾಂಗ್ರೆಸ್ ಕೂಡಿಸಬೇಕೆಂಬ ಮಹಾತ್ಮಾ ಗಾಂಧಿಯವರ ನಿರ್ಣಯದಂತೆ ಫೈಜಪುರ, ಹರಿಪುರ, ತ್ರಿಪುರಿ ಹೀಗೆ ಕ್ರಮ ಪ್ರಕಾರವಾಗಿ ನಡೆದು ಈ ೩ ವರ್ಷಗಳಲ್ಲಿ ಕಾಂಗ್ರೆಸ್ ಅತಿಯಶಶ್ವಿಯಾಗಿದೆ. ಜನ ಸಮ್ಮೇಳನವು ಫೈಜಪುರಕ್ಕಿಂತ ಹರಿಪುರದಲ್ಲಿ ವಿಶೇಷವಾಗಿತ್ತು. ಹರಿಪುರವು ಗುಜರಾತ್ ದೇಶದಲ್ಲಿದ್ದು ಶ್ರೀಮಂತರಾದ ಗುಜರಾತಿಯವರ ಸಹಾಯವು ಸರ್ದಾರ ವಲ್ಲಭಭಾಯಿಯವರಿಗೆ ಯಥೇಚ್ಛವಾಗಿ ದೊರೆಯಿತು. ಹರಿಪುರದ ಏರ್ಪಾಟುಗಳು ವಿಶೇಷತೆಯಲ್ಲಿ ಪ್ರೇಕ್ಷಕರಿಗೆ ಆಕರ್ಷಣೀಯವಾಗಿದ್ದವು.

ತ್ರಿಪುರಿಯಲ್ಲಿ ಅಧ್ಯಕ್ಷರ ಅಸ್ವಸ್ಥತೆ, ರಾಜಕೀಯ ವಾತಾವರಣದ ಅನಿಶ್ಚಯ ಸ್ವರೂಪದಿಂದ ಜನ ಸಮೂಹವು ಕಡಮೆ ಇದ್ದಿತಾದರೂ, ಕಳವಳಕ್ಕೇನೂ ಅವಕಾಶವಿದ್ದಿಲ್ಲ ಮುಂಬೈಯಿಂದ ಜಬ್ಬಲ್‌ಪುರದವರೆಗೆ ನಮ್ಮ ಕಡೆಯ ಬಯಲು ಸೀಮೆಯ ಜ್ಞಾಪಕವಾಗುತ್ತಿತ್ತು. ಜಬ್ಬಲ್‌ಪುರದ ಸುತ್ತಮುತ್ತಲ ಪ್ರದೇಶಗಳಲ್ಲಿ ಸುವರ್ಣದಂತಿರುವ ಗೋಧಿ ಬೆಳೆಯಿದೆ.

ಮಧ್ಯಪ್ರಾಂತದ ಹಿಂದೀಭಾಗದಲ್ಲಿರುವ ತ್ರಿಪುರಿಯು ಜಬ್ಬಲ್‌ಪುರಕ್ಕೆ ೧೫ ಮೈಲುಗಳ ದೂರದಲ್ಲಿ ಸಣ್ಣ ಪುಟ್ಟ ಗುಡ್ಡಗಳ ಪ್ರದೇಶದಲ್ಲಿ ಸೃಷ್ಟಿ ಸೌಂದರ್ಯದಿಂದ ಮೆರೆಯುತ್ತಲಿದೆ. ಬಹಿರಂಗ ಅಧಿವೇಶನಕ್ಕೇರ್ಪಟ್ಟ ಸ್ಥಳವು ಒಂದುಗುಡ್ಡದ ತಪ್ಪಲಲ್ಲಿದ್ದು ಒಂದು ಭಾಗದ ಎತ್ತರ ಪ್ರದೇಶದಲ್ಲಿ ಮುಖಂಡರಿಗಾಗಿ ಕೂಡಲು ಸ್ಥಾನಗಳನ್ನು ಧ್ವನಿವಾಹಕ ಯಂತ್ರಗಳೊಂದಿಗೆ ಒದಗಿಸಿದ್ದರು. ಆ ಪ್ರಾಂತದ ಪೂರ್ವ ಇತಿಹಾಸಕ್ಕೆ ಸಂಬಂಧಿಸಿದ ಕಲಾಚೂರಿ ಶಿಲ್ಪಕಲೆಯಿಂದ ಎಲ್ಲೆಲ್ಲಿಯೂ ಅಲಂಕೃತವಾದ ಅಧಿವೇಶನದ ರಮ್ಯತೆಯಿಂದ ಪ್ರಾಚೀನ ಕಲಾನೈಪುಣ್ಯತೆಯು ಸುಸ್ಪಷ್ಟರಣೆಯಾಗುತ್ತಿತ್ತು. ಪ್ರಾರಂಭದ ದಿನ ಪ್ರಾತಃಕಾಲ ಗಂಭೀರ ಸ್ವರೂಪದ, 52 ಆನೆಗಳೊಂದಿಗೆ ಹೊರಟ ಮೆರವಣಿಗೆಯು ಚಿರಿತ್ರಾರ್ಹವಾದ ದಿಗ್ವಿಜಯವನ್ನು ಘೋಷಿಸುತ್ತಲಿದ್ದಿತು.

ಗ್ರಾಮೋದ್ಯೋಗ, ಖಾದೀ ಮತ್ತು ಸ್ವದೇಶೀ ಪ್ರದರ್ಶನವು ಪ್ರತಿ ವರ್ಷದಂತೆ ಬೋಧಕವಾಗಿದ್ದಿತು. ದೆಹಲಿಯ ಹಿಂದೂಸ್ತಾನೀ ತಾಲೀಮೀ ಸಂಘದವರ ಪ್ರದರ್ಶನವು ಮುಂಬರುವ ವಾರ್ಧಾ ಶಿಕ್ಷಣಕ್ರಮವನ್ನು ಸಾರುತ್ತ ಕೈಗಾರಿಕೆಗಳ ಮೂಲಕ ಮಕ್ಕಳಿಗೆ ಹೇಗೆ ಶಿಕ್ಷಣಕೊಡಬೇಕೆಂಬುದು ಎಂಥವರಿಗಾದರೂ ಸುಂದರವಾಗುತ್ತಿದ್ದಿತು. ಈ ಶಿಕ್ಷಣದ ಮೂಲಕರ್ತೃಗಳು ಮಹಾತ್ಮ ಗಾಂಧಿಯವರು. ಏಳು ತರಗತಿಗಳ ಏಳುವರ್ಷದ ಬಾಲ-ಬಾಲಕಿಯರ ಉದ್ಯೋಗ ಶಿಕ್ಷಣದಿಂದ ಶಾಲೆಯು ಸ್ವಯಂಪೋಷಿತವಾಗಿ ದೇಶದಲ್ಲಿ ನಿರುದ್ಯೋಗವು ನಿರ್ಮೂಲವಾಗಬಹುದು. ಹಿಂದೂಸ್ತಾನೀ ತಾಲೀಮೀ ಸಂಘದವರು ನೂಲುವ ವಿಧಾನ, ರಟ್ಟಿನ ಕೆಲಸದಿಂದ ಸದ್ಯಕ್ಕೆ ಶಿಕ್ಷಣಕೊಡುತ್ತಲಿರುವರು. ಇದು ವಾರ್ಧಾಯೋಜನೆಯ ಪ್ರಕಾರವಿದ್ದು ಬಾಲ-ಬಾಲಕಿಯರಿಂದ ತಯಾರಾದ ವಸ್ತುಗಳು ಪ್ರದರ್ಶಿಸಲ್ಪಟ್ಟಿದ್ದವು.

ಲೇಲೆಯವರ ಮೋಂಬತ್ತಿಯಿಂದ ತಯಾರಿಸಲ್ಪಟ್ಟ ಮೂರ್ತಿಗಳು ಗಾಂಧಿಯವರ ಶಸ್ತ್ರಕ್ರಿಯೆ, ಹೆಂಡ ಪಂಗಡಿ, ರಾಧಾಕೃಷ್ಣ-ವಿಶ್ವಾಮಿತ್ರ ಮೇನಕ ಜೀವಕಳೆಯಿಂದ ಒಪ್ಪುತ್ತಿತ್ತು ಕಣ್ಣಿಗೆ ಹಬ್ಬವನ್ನುಮಾಡಿದವು. ವಿವಿಧ ಪ್ರಾಂತಗಳ ಚರಖಾ ಸಂಘಗಳಿಗೆ ಸಂಬಂಧಿಸಿದ ಖಾದೀ ಭಂಡಾರಗಳು ಅದರಲ್ಲಿಯೂ ಬೀಹಾರ ನೀರತ್ ಕಾಶ್ಮೀರ (ಬಂಗಾಳದ ರೇಶ್ಮೆ)ದ ಅಂಗಡಿಗಳು ತಮ್ಮ ಶ್ರೀಸ್ಥಿತ್ವ ಮತ್ತು ನವೀನವಾದ ವಿವಿಧ ಖಾದಿಯ ವಸ್ತ್ರಗಳಿಂದ ಸುಶೋಭಿತವಾಗಿದ್ದವು. ಜೇನುಹುಳಗಳ ರಕ್ಷಣೆ, ಕಾಗದದ ತಯಾರಿ ಒಬ್ಬರಿಂದ ಎರಡು ಗಾಣಗಳ ಕೆಲಸ ಇವೆಲ್ಲವೂ ಪ್ರದರ್ಶಿತವಾಗಿದ್ದವು.

ಪ್ರದರ್ಶನವು ಚಕ್ರವ್ಯೂಹದಂತಿದ್ದು ಪ್ರವೇಶಿಸಿದಮೇಲೆ ಹೊರಗೆ ಬರುವುದು ಕಷ್ಟವೂ ವಿನೋದಕರವೂ ಆಗಿ ಅಭಿನವನ್ಯೂನಿನ ಜ್ಞಾಪಕ ಬರುತ್ತಿತ್ತು.

ಊಟ-ಉಪಚಾರದ ವ್ಯವಸ್ಥೆಯು ಅತ್ಯಪ್ತಿಕರವಾಗಿದ್ದಿತು. ಹರಿಪುರದ ಏರ್ಪಾಟನಂತರಲಿಲ್ಲ. ಪ್ರತಿನಿಧಿಗಳ ಪ್ರೇಕ್ಷಕರ ನಿವಾಸ ವಿಷಯ ನಿಯಾಮಕ ಸಮಿತಿಯ ಮಂಟಪ ರುಂಡಾ ಚೌಕ, ಪ್ರದರ್ಶನ ಮಂಟಪ ಬಹಿರಂಗಾಧಿವೇಶನ ಒಂದಕ್ಕೊಂದು ಹತ್ತಿರವಿದ್ದು ಅಡ್ಡಾಡುವುದಕ್ಕೆ ಆಯಾಸವಾಗಿರಲಿಲ್ಲ. ಹರಿಪುರದಲ್ಲಿ ಈ ತೊಂದರೆಯು ಬಹಳವಿದ್ದಿತು. ಎಲ್ಲವೂ ಗೋಳಾಕಾರದಲ್ಲಿ ನಿರ್ಮಿತವಾಗಿದ್ದಿತು ಬಡ ಪ್ರಾಂತವೆಂದು ಹೇಳಲ್ಪಟ್ಟರೂ ಅವರ ಏರ್ಪಾಟುಗಳು ಒಟ್ಟಿನಲ್ಲಿ ಕೃಪ್ತಿಕರವಿದ್ದವು.

ಉಪ್ಪಿನ ತೆರಿಗೆ ಕಡಿಮೆ ಮಾಡಬೇಕು

ಉಪ್ಪಿನ ಮೇಲೆ ಮಣ 1ಕ್ಕೆ ಹಾಕಿರುವ 1.4-0 ರೂ. ತೆರಿಗೆಯಲ್ಲಿ ನಾಲ್ಕು ಆಣೆಯನ್ನು ಕಡಿಮೆ ಮಾಡಿ ಒಂದು ರೂಪಾಯಿಗೆ ಇಳಿಸಬೇಕೆಂಬ ತಿದ್ದುಪಡೆಯನ್ನು ದೆಹಲಿಯ ಅಸಂಬ್ಲಿಯಲ್ಲಿ ಶ್ರೀ ಅವನಾಷಲಿಂಗಂ ಚೆಟ್ಟಿಯಾರ್‌ರವರು ತಂದರು.

ಆ ತಿದ್ದುಪಡೆಯು ಬಹುಮತದಿಂದ ಅಂಗೀಕರಿಸಲ್ಪಟ್ಟಿತು 55 ಮಂದಿ ಸದಸ್ಯರ ಪರವಾಗಿಯೂ, 38 ಮಂದಿ ಸದಸ್ಯರು ವಿರೋಧವಾಗಿಯೂ ವೋಟು ಮಾಡಿದರು.

ಅಂಬಾ ಭವನ ಕಾಫೀ ಕ್ಲಬ್

(ರಿಜಿಸ್ಟರ್ಡ್)

ಮತ್ತು

ಶಾಖೆ:— **ಊಟದ - ಹೋಟೆಲ್.**

ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪದಲ್ಲಿದೆ. ಶುದ್ಧತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾಳಿ ಬೆಳಕು ಮತ್ತು ಇತರ ಅನುಕೂಲಗಳಿರುವ ಕೊಠಡಿಗಳು, ಭೋಜನ ಸಮಾರಂಭ ಟೀಪಾರ್ಟಿಗಳ ಏರ್ಪಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆಮಾಡುವೆವು.

ಪ್ರೊಪ್ರೈಟರ್ಸು—

ಶಿ. ಕೆಸ್ಸಯ್ಯ, ಹೆಚ್. ಕರಿಬಸಪ್ಪ.

ಬಳ್ಳಾರಿ ಸುದ್ದಿ.

19ನೇ ತಾ॥ ವರ್ತಕ ಸಂಘದಲ್ಲಿ ಮದ್ರಾಸ್ ಸರ್ಕಾರದವರು ತರಲಿರುವ "ಸೇಲ್ಸ್ ಟ್ಯಾಕ್ಸ್" ಕಾಯ್ದೆಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಬೇಕೆಂದು ನಿಶ್ಚಯಿಸಿದರು. 21ನೇ ತಾ॥ ಮಂಗಳವಾರ ಊರಲ್ಲಿ ಕೆಲಭಾಗದ ಅಂಗಡಿಗಳು ಮುಚ್ಚಲ್ಪಟ್ಟು ಸಾಯಂಕಾಲ ಸಾಂಬಮೂರ್ತಿ ಮೈದಾನದಲ್ಲಿ ಶ್ರೀ ವೈ. ಸುಬಾಬಲೇಶ್ವರಪ್ಪನವರ ಅಧ್ಯಕ್ಷತೆಯಲ್ಲಿ ವರ್ತಕ ಸಭೆಯು ಸೇರಿತ್ತು. ಅಧ್ಯಕ್ಷರೂ ಶ್ರೀ ದೇವೇಂದ್ರನಾಯ್ಡು (ವಕೀಲ) ಇವರೂ ಕಾಂಗ್ರೆಸ್ ಸರ್ಕಾರದ ಟೀಕೆಯಲ್ಲಿ ಮೇರೆ ತಪ್ಪಿದರು. ಇಂಥಾ ಬಹಿರಂಗ ಸಭೆಯಲ್ಲಿ ಅಧ್ಯಕ್ಷರು ಕೆಲ ಅಶ್ಲೀಲ ಶಬ್ದಗಳನ್ನುಪಯೋಗಿಸಿದುದಕ್ಕಾಗಿ ಅನೇಕರಿಗೆ ಜೀ ಸರಿಕೆಯುಂಟಾಯಿತು. ಜಿ. ಕಾ. ಕಾರ್ಯದರ್ಶಿಗಳಾದ ಶ್ರೀ ವಿ. ಎಂ. ಗಿರಿಯವರು ಕಾಂಗ್ರೆಸ್ ತತ್ವಗಳನ್ನು ಸ್ಪಷ್ಟೀಕರಿಸಿ ಬಹುಜನರಿಗೆ ಉಪಯುಕ್ತವಾಗುವ ಕಾಯ್ದೆಗಳನ್ನು ಜಾರಿಗೆ ತರುವುದರಲ್ಲಿ ಕಾಂಗ್ರೆಸ್ ಸರ್ಕಾರವು ಹಿಂದು ಮುಂದು ನೋಡುವುದಿಲ್ಲವೆಂದು ಹೇಳಿದರು. ಸದರೀ ಕಾಯ್ದೆಗೆ ವಿರೋಧವನ್ನು ವ್ಯಕ್ತಪಡಿಸುವ ನಿರ್ಣಯವಾಯಿತು.

21ನೇ ತಾ॥ ಮದ್ಯಾಹ್ನ ಕಲೆಕ್ಟರ್‌ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಹರಿಜನ ಸಲಹ ಸಮಿತಿಯು ಕೂಡಿ ಹರಿಜನರ ಹಿತಕ್ಕೆ ಸಂಬಂಧಿಸಿದ ಅನೇಕ ವಿಷಯಗಳು ಚರ್ಚಿತವಾದವು.

ಜಿಲ್ಲಾ ಆರ್ಥಿಕ ಸಭೆ

ಕಲೆಕ್ಟರ್‌ರವರ ಅಧ್ಯಕ್ಷತೆಯಲ್ಲಿ 23ನೇ ತಾ॥ ಸಾಯಂಕಾಲ ಕೂಡಿದ್ದಿತು. ಅಧಿಕಾರಿ, ಅನಧಿಕಾರೀ ಸದಸ್ಯರೆಲ್ಲಾ ಸಭೆಗೆ ಬಂದಿದ್ದರು. ರಸ್ತೆಗಳಿಗಾಗಿ ಉಳಿದ ರೂ.3500ದಲ್ಲಿ ರೂ.2000ಗಳನ್ನು ಜಿಲ್ಲೆಯಲ್ಲಿನ 8ರಸ್ತೆಗಳ ಕಾಮಗಾರಿಗಾಗಿ ಉಪಯೋಗಿಸಬೇಕೆಂದು ನಿಶ್ಚಯವಾಯಿತು. ಚೀಪ್ಲಗುರ್ತಿ ಭಾವಿಗೆ ಇಂಪಿನ ಪಂಪ್‌ಸೆಟ್ ಹಾಕಿಸಲು ರೂ. 3000 ಸ್ಯಾಂಕ್ಷನ್ ಆಯಿತು. ಜಿಲ್ಲೆಯ ಹರಿಜನರ ಬಸ್ತಿಗಳಲ್ಲಿ 10 ಭಾವಿ ತೆಗೆಯುವ ಸ್ಕೀಂಗೆ ಸರ್ಕಾರದವರು 1000 ರೂ. ಕೊಟ್ಟರೆ, ಹರಿಜನ ಸೇವಕ ಸಂಘದವರು 2000 ರೂ. ಕೊಡುವುದಾಗಿ ತಿಳಿಸಿದ್ದರು. ಈ ವಿಷಯವನ್ನು ಸರ್ಕಾರಕ್ಕೆ ಬರೆದು ಒಪ್ಪಿಗೆ ತರಿಸುತ್ತೇವೆಂದು ಹರಿಜನ ಕಾರ್ಯದರ್ಶಿಗಳಿಗೆ ಕಲೆಕ್ಟರ್‌ರವರು ತಿಳಿಸಿದರು.

ಸಂಡೂರು ಸಂಸ್ಥಾನ

ಎತ್ತಿನಹಟ್ಟಿ.

ಇಲ್ಲಿ ಯುಗಾದಿ ಹಬ್ಬದ ದಿವಸ ಶ್ರೀ ಶಿ. ಷಡಕ್ಷರಶಾಸ್ತ್ರಿಗಳು ಸಂಸ್ಥಾನಗಳ ಪರಿಸ್ಥಿತಿ ರೈತರ ಕರ್ತವ್ಯ ಕುರಿತು ಭಾಷಣ ಮಾಡಿದರು.

ಯುರೋಪಿನ ಪರಿಸ್ಥಿತಿ

ಇಂಗ್ಲೆಂಡ್-ಫ್ರಾನ್ಸ್‌ಗಳ ತಯಾರಿ.

ಸಣ್ಣ ಪುಟ್ಟ ದೇಶಗಳನ್ನು ನುಂಗಿ ನೀರು ಕುಡಿಯುತ್ತಲಿರುವ ಹಿಟ್ಲರನ ಭೀಕರ ಕೃತ್ಯಗಳಿಂದ ಮುದಿಸಿಂಹಗಳಾದ ಇಂಗ್ಲೆಂಡ್ ಫ್ರಾನ್ಸ್‌ಗಳಿಗೆ ಅಲ್ಪ ಸ್ವಲ್ಪ ಬಿಸಿ ಹತ್ತಿದೆ. ಬಾಲ ಮುರಿದರೂ ಕದಲದಿದ್ದ ಈ ಮುದಿ ಪ್ರಾಣಿಗಳು ಯುದ್ಧದ ತಯಾರಿಯನ್ನು ಜೋರಾಗಿ ಮಾಡುತ್ತಲಿವೆ. ರಷ್ಯಾದ ಸಮೂಜದ ಸಮತವಾದಕ್ಕೆ ಯಾವಾಗಲೂ ವಿರೋಧವಿದ್ದ ಬ್ರಿಟನ್ ಫ್ರಾನ್ಸ್ ಇಂದು ರಷ್ಯಾಕ್ಕೆ ಸ್ನೇಹ ಹಸ್ತವನ್ನು ಚಾಚಿವೆ. ಬ್ರಿಟನ್, ಫ್ರಾನ್ಸ್, ರಷ್ಯಾ, ರುಮೇನಿಯಾ, ಪೋಲೆಂಡ್, ತುರ್ಕಿ ದೇಶಗಳು ಜರ್ಮನಿಗೆ ವಿರುದ್ಧವಾಗಿ ಕಲೆಯಬಹುದು. ಲಿಥುನಿಯಾ ಸ್ವಾಧೀನದಲ್ಲಿದ ಮೆಮಲ್ ಭಾಗವು ಜರ್ಮನಿಗೆ ಸೇರಿತು. 1924ರ ನಂತರ ಇದು ಜರ್ಮನಿಗೆ ಸೇರಿದ್ದಿತು.

ಜೆಕೋಸ್ಲೋವೇಕಿಯಾದ ಸಂಕಟ

ನೂತನವಾಗಿ ಆಕ್ರಮಿಸಲ್ಪಟ್ಟ ಜೆಕೋಸ್ಲೋವೇಕಿಯಾ ದೇಶದಲ್ಲಿ ಲೆಕ್ಕವಿಲ್ಲದಷ್ಟು ಆತ್ಮಹತ್ಯೆಗಳಾಗುತ್ತಲಿವೆ. ಯಹೂದಿ ಜನರು ಮುಂಚಿನ ಅಪಮಾನಗಳನ್ನು ಸಹಿಸಲಾರದೆ ಈಗಲೇ ಸಾಯುತ್ತಲಿರುವರು. ಹತ್ತು ಸಾವಿರಕ್ಕಿಂತಲೂ ಹೆಚ್ಚಿನ ಜನರು ಸೆರೆಯಾಗಿರಬಹುದೆಂದು ಊಹಿಸಲ್ಪಟ್ಟಿದೆ.

ಅಶಕ್ತ ಮತ್ತು ಸಣ್ಣ ದೇಶಗಳವರೂ ಪ್ರಜಾಸ್ವಭುತ್ವ ವಿರುವ ಬ್ರಿಟನ್, ಫ್ರಾನ್ಸ್, ರಷ್ಯಾದೇಶದವರೂ ಕೂಡಿ ಸಮ್ಮೇಳನವನ್ನು ನಡೆಸಲಿರುವರು. ಜರ್ಮನಿಯ ವರ್ತನೆಯನ್ನು ಪರಿಗಣಿಸುವುದೇ ಈ ಸಭೆಯ ಉದ್ದೇಶ.

K. B. & SONS.

[Estd 1935.]

General and Paper Merchants.

Car Street, **BELLARY.**

Best reliabe and cheapest house for all kinds of Novelties. Oilman stores, Thermas Flasks. Food Jars. Fountain Pens of numerous qualities and makes. Patent Medicines. Perfumes Toilet and Washing Soaps, Glass ware Tea. Coffee, all kinds of Papers and agents for Hoogly Printing inks for neat and attractive Printing.

ಎಲ್ಲಾವಿಧವಾದ ಸ್ಟೇಷನರಿ, ಕಾಗದಗಳು ವಿಷಧಗಳು, ಸಬ್ಬು, ಸುಗಂಧ, ಕಾಫಿ ಟೀ, ಸಾಜನ ಸಾಮಾನು, ಅಂದವಾದ ಮುದ್ರಣಕ್ಕೆ ಬೇಕಾಗುವ ಹೊಸ್ಲಿ ಮಸಿ, ವಗೈರೆ ಸುಲಭ ಬೆಲೆಗೆ ದೊರೆಯುತ್ತೆ.

ಕೆ. ಬಿ. ಅಂಡ್ ಸನ್ಸ್, ಕೇರು ಬೀದಿ, ಬಳ್ಳಾರಿ.

7·A

ನವ ಭಾರತ

ನಿಮ್ಮ ವ್ಯಾಪಾರದಲ್ಲಿ ಅಭಿವೃದ್ಧಿಯಾಗಬೇಕೋ ?
ನಿಮಗೆ ಲಾಭ ದೊರೆಯಬೇಕೋ ?
ನಿಮ್ಮ ವಸ್ತುಗಳಿಗೆ ಗಿರಾಕಿಗಳು ದೊರೆಯಬೇಕೋ?
ಹಾಗಾದರೆ, ಈ ಪ್ರಾಂತದಲ್ಲಿ ವಿಶೇಷ ಪ್ರಚಾರ ನಿರುವ **'ನವ ಭಾರತ'** ವಾರ ಪತ್ರಿಕೆಯಲ್ಲಿ ಜಾಹೀರಾತು ಕೊಡಿರಿ.

ದರಗಳು - ಅತಿಸುಲಭ. ಈ ದಿನವೇ ಬರೆಯಿರಿ

ಮ್ಯಾನೇಜರು,
"ನವ ಭಾರತ"
ಬಳ್ಳಾರಿ.

'Samala Pomade'

[REGD.]

DELIGHTFULY SCENTED

Makes the hair soft smooth. The pleasant & fascinating odour is liked by one and all.

K. V. & Sons, BELLARY.

'ಶಾಮಲ ಪೊಮೇಡು'

(ರಿಜಿಸ್ಟರ್ಡ್)

ಮನೋಹರವಾದ ಸುವಾಸನೆಯುಳ್ಳದ್ದು.

ತಲೆಯಕೂದಲುಗಳ ಪೋಷಣೆಯನ್ನು ಹೆಚ ್ಚಿಸುವದು ಅಲ್ಲದೆ ಹೆಮ್ಮುಳಿಗೆ ಹಿತಕರವಾದ್ದು.

ಕೆ. ವಿ. ಅಂಡ್ ಸನ್ಸ್, ಬಳ್ಳಾರಿ.

NAVA BHARAT, BELLARY.

(With which is incorporated 'Congress Bulletin')

The leading Nationalist Weekly.

'ನವ ಭಾರತ' ಬಳ್ಳಾರಿ.

[ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.]

The Rates of Subscription.	ಚಂದಾ ವಿವರ
Annual	ವರ್ಷ
Local 1—8—0	ಸ್ಥಳದವರಿಗೆ 1-8-0
Moffusil 2—0—0	ಪರಸ್ಥಳದವರಿಗೆ 2-0-0
Half Yearly	6 ತಿಂಗಳು
Local 1—0—0	ಸ್ಥಳದವರಿಗೆ 1-0-0
Moffusil 1—4—0	ಪರಸ್ಥಳದವರಿಗೆ 2-0-0

Patent medicines, Tonics, injections
Ayurvedic Preparations &
Oilman-stores — Go to the shop.
Cheapest in Bellary.

M. S. V. Bros,

Car Street, **BELLARY.**

ಇಂಗ್ಲೀಷ್ ಔಷಧಗಳು, ಇಂಜೆಕ್ಷನ್ ಮತ್ತು ಇತರ ಆಯುರ್ವೇದೀ ಔಷಧಗಳು, ಸ್ಪೇಷನರಿ ವಗೈರೆ ಸುಲಭ ಬೆಲೆಯಲ್ಲಿ ದೊರೆಯುತ್ತವೆ.

ಎಂ. ಯಸ್. ವಿ. ಬ್ರದರ್ಸ್,

ತೇರು ಬೀದಿ, ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವುದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ. ವಿಪಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ, ಸುಲಭದಂದಲ್ಲಿ ವಹರುತ್ತೇವೆ. ಗ್ಯಾರಂಟಿಯೂದ ಕ್ರೋಕ್ಸ್ ಕನ್ನಡಿಗಳು ಸರಿಯೂದ ಬೆಲೆಗೆ ದೊರೆಯುತ್ತವೆ. ಬಡವರಿಗೂ. ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ 'ಕಟ್ಟ' (ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವದು.

ಹೆಚ್. ಯಸ್. ಅಂಡ್ ಸನ್ಸ್.

ಬೆಂಗಳೂರು ರೋಡ್ ಬಳ್ಳಾರಿ.

Nava Bharat, Bellary.

REG. NO. M. 3937.

Sri _____ _____

_____

_____

Printed at Vittal Press, Car Street Edited & Published by T. B. Keshava Rao, BELLARY.

'ವಂದೇ ಮಾತರಂ'



(ಇದರಲ್ಲಿ 'ಕಾಂಗ್ರೆಸ್' ಬುಲೆಟಿನ್' ಸಮಾವೇಶವಾಗಿದೆ)

ಉಜ್ವಲ · ರಾಷ್ಟ್ರೀಯ ವಾರ ಪತ್ರಿಕೆ.

ವಾರ್ಷಿಕ ಪೋಷಕ ಪ್ರಮುಖ
ರಾಜ ಪೋಷಕರು, 10-0-0
ಪೋಷಕರು, 5-0-0

ಸಂಪಾದಕ — ಟಿ. ಬಿ. ಕೇಶವರಾವ್.

ವಾರ್ಷಿಕ ಚಂದಾ
ಪರದೇಶದವರಿಗೆ, 2-0-0
ಬಳ್ಳಾರಿಯವರಿಗೆ, 1-8-0

ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ.

ಸಂಪುಟ ೧ | ಬಳ್ಳಾರಿ. ಏಪ್ರಿಲ್ ೧೧ನೇ ಶನಿವಾರ ೧೯೩೯. | ಸಂಖ್ಯೆ ೩೩

ಗಾಂಧೀ ಬೋಸ್'
ಪತ್ರ ವ್ಯವಹಾರ

ಕಾಂಗ್ರೆಸ್ಸಿನಲ್ಲಿ ಸದ್ಯಕ್ಕುಂಟಾಗಿರುವ ಬಿಕ್ಕಟ್ಟನ್ನು ಬಗೆಹರಿಸಲು ಮಹಾತ್ಮ ಗಾಂಧಿ - ಸುಭಾಷಚಂದ್ರ ಬೋಸರಲ್ಲಿ ಪತ್ರವ್ಯವಹಾರವು ನಡೆಯುತ್ತಿರುವುದೆಂದು ತಿಳಿದುಬಂದಿದೆ. ಸುಭಾಷಬಾಬುಗಳಿಗೆ ಜ್ವರ ಪರಿಪಾರವಾಗಿಲ್ಲ. ಆದರೂ ಅವರ ಆರೋಗ್ಯವು ಸುಧಾರಿಸುತ್ತಿರುವದೆಂಗು ಡಾಕ್ಟರು ಜನರ ಅಭಿಪ್ರಾಯವಿದೆ. ಅವರ ಮಾನಸಿಕ ಚಿಂತೆಯಿಂದ ಪ್ರಕೃತಿಯು ಕೆಟ್ಟದೆಯೆಂದು ನಂಬಲಾಗಿದೆ

ದಕ್ಷಿಣ ಇಂಡಿಯಾ ವಾಣಿಜ್ಯ ಸಂಘಗಳು
ಮುಖ್ಯಮಂತ್ರಿಗಳಲ್ಲಿ ಶಿಷ್ಟಮಂಡಲ

ಮದ್ರಾಸ್ ಸರ್ಕಾರದವರು ಹೊಸದಾಗಿ ವಿಧಿಸಲಿರುವ 'ಸೇಲ್ಸ್ ಟ್ಯಾಕ್ಸ್ ಮತ್ತು ಟರ್ನ್‌ಓವರ್' ಟ್ಯಾಕ್ಸ್‌ದಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಲು ದಕ್ಷಿಣ ಇಂಡಿಯಾ ವಾಣಿಜ್ಯ ಸಂಘ ಮತ್ತು ಅದಕ್ಕೆ ಸಂಬಂಧಿಸಿದ 13 ಸಂಘಗಳವರು ತಮ್ಮ ಉಪಾಧ್ಯಕ್ಷರಾದ ಜ. ಮಹಮ್ಮದು ಇಸ್ಮಾಯಿಲ್‌ಸಾಹೇಬರ ನೇತೃತ್ವದಲ್ಲಿ ಮುಖ್ಯಮಂತ್ರಿಗಳಲ್ಲಿ ಶಿಷ್ಟಮಂಡಲವನ್ನೊಯ್ದು, ತಮ್ಮ ಅಭಿಪ್ರಾಯಗಳನ್ನು ಒಂದು ದೀರ್ಘ ಹೇಳಿಕೆಯ ಮೂಲಕ ತಿಳಿಯಪಡಿಸಿದರು. ಇದರಿಂದ ವರ್ತಕರಿಗೆ ಹೊರಲಾರದ ಭಾರವಾಗುವುದೆಂದೂ ಸ್ವದೇಶೀ ಉದ್ಯೋಗಗಳು ನಾಶವಾಗುವೆಂದೂ, ಇಂಥಾ ಕಾಯ್ದೆಯು ಪ್ರಪಂಚದ ಇನ್ನಾವ ದೇಶದಲ್ಲಿಲ್ಲವೆಂದು ಇದರ ಪರಿಣಾಮವಾಗಿ ಕೂಲಿಕಾರರ ಅಸಂತೋಷವು ಹೆಚ್ಚಾಗುವುದೆಂದೂ ತಿಳಿಸಿದರು.

ಮುಖ್ಯ ಮಂತ್ರಿಗಳು ಅವರೊಡನೆ ಒಂದು ಘಂಟೆಯವರೆಗೂ ಚರ್ಚಿಸಿದರು. ಬಿಲ್ ಹಿಂದಕ್ಕೆ ತೆಗೆದು ಕೊಳ್ಳಲಾಗುವುದಿಲ್ಲವೆಂದೂ. ಆದರೆ ಸುಧಾರಣೆಗಾಗಿ ಸೂಚನೆಗಳನ್ನು ಮಾಡಬಹುದೆಂತಲೂ, ಹೇಳಿದರು. ಸರಕಾರಕ್ಕೆ ಈಗ ಒಂದುಕೋಟಿ ಬೇಕಾಗಿದೆಯೆಂತಲೂ, ವರ್ಷ ವರ್ಷವೂ 25 ಲಕ್ಷ ರೂ, ಹೆಚ್ಚಳವಾಗುತ್ತಿದೆ ಯೆಂತಲೂ, ಈ ಮಾರ್ಗದಿಂದ ಬರಲು ಅವಕಾಶ ಕಲ್ಪಿಸಲಾಗುವುದೆಂದೂ ಮುಖ್ಯ ಮಂತ್ರಿಗಳು ತಿಳಿಸಿದರು.

ಮಾನ್ಯದ ವರ್ತಕರೆ., ನೂಲಿನ ವರ್ತಕರು, ರತ್ನ ವ್ಯಾಪಾರಿಗಳು ಈ ಮೊದಲೇ ಮುಖ್ಯ ಮಂತ್ರಿಗಳನ್ನು ನೋಡಿದ್ದರು.

ಮಾನವರ್ತಕರೇ, ಆಗಲಿ ಸದರಿ ಕಾಯ್ದೆಗೆ ಉಪಸೂಚನೆಗಳನ್ನು ಕೊಡಲು ತಯಾರಾಗಿ ಬಂದಿಲ್ಲವಾದ್ದರಿಂದ ಮುಖ್ಯ ಮಂತ್ರಿಗಳಿಗೆ ಸೂಚನೆಗಳು ದೊರೆಯಲಿಲ್ಲ. ವ್ಯಾಪಾರೀ ಸಂಘಗಳವರು ಉಪಸೂಚನೆಗಳನ್ನು ಕೊಡಲು ಸದ್ಯದಲ್ಲಿಯೇ ಸಭೆಕೂಡಲಿರುವರು

ಬಳ್ಳಾರಿ ಜಿಲ್ಲಾ ಬೋರ್ಡ್

ಜಿಲ್ಲಾ ಬೋರ್ಡ್ ವಿದ್ಯಾಭ್ಯಾಸಕ್ಕೆ ತೆಗೆ ಕಡಮೆ ಬಿದ್ದಿರುವ ಹಣವನ್ನು ಭರ್ತಿಮಾಡಲು ರೂಪಾಯಿಗೆ ಅರ್ಧ ಪೈ ವಿದ್ಯಾಸೆಸ್ ಹಾಕಲು ನಿರ್ಣಯವಾಯಿತು. ಆಲೂರು ಹಾಸ್ಪಿಟಲ್‌ಗೆ 200 ಮುಂಜಾರಾಯಿತು. ಕಾಂಗ್ರೆಸ್ ಪಾರ್ಟಿ ಮೀಟಿಂಗಿನಲ್ಲಿ ಶಿಸ್ತು-ಕಾಂಗ್ರೆಸ್ ಗೌರವ ಕಾಪಾಡುವುದರ ಬಗ್ಗೆ ಉಪನ್ಯಾಸಗಳಾದುವು.

ನವಭಾರತ

ಶನಿವಾರ ಏಪ್ರೆಲು 1. 1939.

ಬಳ್ಳಾರಿ ಜಿಲ್ಲೆಯ

ನೀರಿನಅಭಾವ

ಬೇಸಿಗೆಯ ಪ್ರಾರಂಭದೊಂದಿಗೆ ಬಳ್ಳಾರಿ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ನೀರಿನ ಅಭಾವವು ಹೆಚ್ಚುತ್ತಿದೆ. ಉತ್ತರಮಂಡಲದ ಜಿಲ್ಲೆಗಳಲ್ಲಿ ಬಳ್ಳಾರಿಯಲ್ಲೇ ವಿಶೇಷವಾಗಿ ನೀರಿನ ಅಭಾವವಿದೆ. ಇಲ್ಲಿ ವರ್ಷಕ್ಕೆ ಸರಾಸರಿ 20 ಅಂಗುಲುಗಳಿಗಿಂತ ಹೆಚ್ಚಿನ ಮಳೆಯಿಲ್ಲ. ಇಲ್ಲವೆ ಹಿಂದಿನ ಸರಕಾರದವರು ಹಳ್ಳಿಗಾಡಿನ ಪ್ರದೇಶಗಳಲ್ಲಿ ಕುಡಿಯುವ ನೀರಿನ ಭಾವಿಗಳನ್ನು ವಿಶೇಷವಾಗಿ ತೆಗೆದಿಲ್ಲ.

ಕಾಂಗ್ರೆಸ್ ಸರಕಾರವು ಅಸ್ತಿತ್ವಕ್ಕೆ ಬಂದಮೇಲೆ ಒಂದು ಯೋಜನೆಯನ್ನು ನಿರ್ಮಾಣಿಸಿರುವದು. ಅದರ ಪ್ರಕಾರ 10 ವರ್ಷಗಳಲ್ಲಿ ಸ್ಥಾಂತ್ಯದ ಮೂಲೆ ಮೂಲೆಯಲ್ಲಿರುವ ಪ್ರತಿಯೊಂದು ಹಳ್ಳಿಗೂ ಒಂದು ಕುಡಿಯುವ ನೀರಿನ ಭಾವಿಯು ಅಗೆಸಲ್ಪಡಬೇಕು. ಬಳ್ಳಾರಿ ಜಿಲ್ಲೆಗಾಗಿ ಹೋದ ವರ್ಷ 29 ಸಹಸ್ರ ರೂಪಾಯಿಗಳು ಸರಕಾರದ ಕಡೆಯಿಂದ ದೊರೆಯಿತು. ಜಿಲ್ಲೆಯಲ್ಲಿ ಸಣ್ಣ ಪುಟ್ಟ ಹಳ್ಳಿಗಳು ಸೇರಿ ಸುಮಾರು 800 ಹಳ್ಳಿಗಳಿವೆ. ಅನೇಕ ಹಳ್ಳಿಗಳಲ್ಲಿ ಕೆರೆಯ ನೀರನ್ನು ಉಪಯೋಗಿಸುತ್ತಲಿರುವರು. ಪೂರ್ವಭಾಗದ ಕೆಲ ಹಳ್ಳಿಗಳಲ್ಲಿ ಮಳೆಗಾಲದಲ್ಲಿ ಸಂಗ್ರಹವಾದ ಮಳೆ ನೀರಿನ್ನ ವಕ್ಕಾಣಿಗಳಿಂದ ನೀರನ್ನು ಬಳಸುವರು. ಕ್ಷಶ್ಮಲಯುಕ್ತವಾದ ನೀರಿನ ಬಳಕೆಯಿಂದ ಜಿಲ್ಲೆಯ ಅನೇಕ ಭಾಗಗಳಲ್ಲಿ ನಾರು ಹುಣ್ಣು ಅಧಿಕವಾಗಿದೆ. ಸರಕಾರದವರು ಎರಡು ಮುಖ್ಯ ವಿಷಯಗಳನ್ನಾಲೋಚಿಸಬೇಕು.

(1) ಕುಡಿಯುವ ನೀರೇ ದೊರೆಯದಿರುವ ಊರುಗಳಲ್ಲಿ ತಕ್ಷಣವೇ ಸೇದುವ ಭಾವಿಗಳನ್ನು ಅನುಕೂಲವಾದ ಹತ್ತರ ಪ್ರದೇಶಗಳಲ್ಲಿ ತೆಗೆಸಬೇಕು.

(2) ತುಂಬುವ ಭಾವಿಗಳನ್ನು ಸೇದುವ ಭಾವಿಗಳಾಗಿ ಅವಶ್ಯ ಜಾಗ್ರತೆ ಮಾಸ್ತಾಟು ಮಾಡಬೇಕು

ಹೋದವರ್ಷ ಒಂದೆರಡು ತಾಲೂಕುಗಳಲ್ಲೀ ವಿಶೇಷವಾಗಿ ಹಣವು ವ್ಯಯವಾದಂತೆ ತಿಳಿದುಬಂದಿದೆ.

ಜಿಲ್ಲೆಯ 9 ತಾಲೂಕುಗಳಲ್ಲೂ ಸರಿಯಾಗಿ ವಿಚಾರಿಸಿ ಹಣವನ್ನು ಹಂಚಬೇಕು. ಇದಕ್ಕೆ ಜನತೆಯ ಜಾಗೃತಿಯೂ ಬೇಕು. ಈ ಭಾವಿಗಳನ್ನು ತೆಗೆಸುವ. ಹಣವನ್ನೊದಗಿಸುವ ಕೆಲಸವು ಬಹುಮುಟ್ಟಿಗೆ ಕಲೆಕ್ಟರ್‌ರವರನ್ನೇ ಅನಲಂಬಿಸಿದೆ. ಈ ಕಾರಣ ಯಾವ ಯಾವ ಹಳ್ಳಿಗಳಲ್ಲಿ ನೀರಿನ ಅಭಾವವಿನಿಯೋ, ಯಾವ ಯಾವ ಹಳ್ಳಿಗಳಲ್ಲಿ ಕಶ್ಮಲ ನೀರಿನಿಂದ ನಾರು ಹುಣ್ಣಿನ ಪ್ರಾಬಲ್ಯವಿದೆಯೋ ಅಂತಹ ಹಳ್ಳಿಗಳ ಮಹನೀಯರು ತಕ್ಷಣವೇ ಕಲೆಕ್ಟರ್‌ರವರಿಗೆ ಅರ್ಜಿ ಹಾಕಿಕೊಳ್ಳಬೇಕು. ಹೀಗೆ ಕಲೆಕ್ಟರ್‌ರವರಿಗೆ ಅರ್ಜಿಹಾಕಿದಂಶವನ್ನು ನಮಗೂ ತಿಳಿಸಿದರೆ ಈ ಪತ್ರಿಕೆಯ ಮೂಲಕ ತಕ್ಕ ಪ್ರಚಾರ ನಡೆಸಿ ಕಲೆಕ್ಟರ್‌ರವರ ಗಮನವನ್ನು ಸೆಳೆಯುತ್ತೇವೆ.

ಬಳ್ಳಾರಿ ನಗರ

ಜಿಲ್ಲಾ ವಿದ್ಯಾ ಸಂಘ.

ಶ್ರೀ ಶೀತಾರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ 29ನೇ ಫ್ರಾ. ಕೂಡಿದ್ದಿತ್ತು. ಕೆಲ ಶಾಲೆಗಳಿಗೆ 'ನೆಕಗ್ನಿಷನ್' ತೆಗೆದರು, ಕೆಲವಕ್ಕೆ ಕೊಟ್ಟರು. ಸರ್ಕಾರದವರು ತಮಗೆ ಕೊಟ್ಟ 63091 ರೂ.ಗಳಲ್ಲಿ 625 ರೂ. ಖರ್ಚಾಗಿದ್ದಿತು. ಇದರಲ್ಲಿ 62466 ರೂ ಶಾಲೆಗಳಿಗೆ ಗ್ರಾಂಟು ಕೊಟ್ಟರು. ವಿದ್ಯಾ ಸಂಘಗಳು ಜೂ 1ನೇ ತಾ. ಸಿಂದ ತೆಗೆದುಹಾಕಲ್ಪಟ್ಟವೆ.

ಹಿಂದೀ ಪ್ರೇಮೀ ಮಂಡಲ.

ಶ್ರೀ ವೇಣುಗೋಪಾಲಾಚಾರ್ಯರ ಮನೆಯಲ್ಲಿ 29ನೇ ಸಾಯಂಕಾಲ ಅವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಸಂಘದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಸಲುವಾಗಿ ಯೋಜನೆಗಳಾದುವು. ಆಂಧ್ರ ಹಿಂದೀ ಸಭೆಯು ಸಹಾಯನಾಡಲು ಕೇಳಿಕೊಳ್ಳಬೇಕೆಂದಾಯಿತು. ಸಂಗೀತ, ಉಪಾಹಾರಾನಂತರ ಶ್ರೀ ಬಿ. ಗೌಡಪ್ಪನವರು ಹಿಂದಿಯ ಕವಿತೆಗಳನ್ನೋದಿ ಸರಳ ಹಿಂದಿಯಲ್ಲಿ ಅರ್ಥವನ್ನು ಹೇಳಿದರು. ಶ್ರೀ ಕೇಶವಮೂರ್ತಿ (ಗರ್ಲ್ಸ್‌ಸ್ಕೂಲು ಅಧ್ಯಾಪಕರು) ಹಿಂದೀ ಮಹತ್ವವನ್ನು ಹೇಳಿದರು. ಜಿ. ಬಾಸಿತ್ ಸಾಹೇಬರವರೂ, ವೆಲ್ಲೂರಿ ಭೀಮರಾಯರೂ ರಾಷ್ಟ್ರಭಾಷೆಯನ್ನು ಕಲಿಯಬೇಕಾದ ಆವಶ್ಯಕತೆ ಕುರಿತು ಭಾಷಣಮಾಡಿದರು.

ಪುರ ಸಭೆ.

ಅಧ್ಯಕ್ಷರಾದ ಜಿ. ರಾಘವೇಂದ್ರಸಾಹೇಬರ ನೇತೃತ್ವದಲ್ಲಿ 30ನೇ ತಾ. ಸಭೆಯು ಕೂಡಿದ್ದಿತು. ಮಿಲಿಟೇರಿಯವರು ತಮ್ಮ ಜಾಗಾಕ್ಕೆ ಕೊಡಬೇಕಾದ ಸುಮಾರು 85 ಸಾವಿರ ರೂಪಾಯಿಗಳನ್ನು ಕೊಡುವ ವಿಷಯಕ್ಕೆ ಜವಾಬು ಬಂದಿದೆ. ಈ ವಿಷಯದಲ್ಲಿ ಪರ್ಯಾಲೋಚಿಸಲಾಗುವುದೆಂದು ಮಿಲಿಟರಿಯವರು ಹೇಳಿದ್ದಾರೆ. ಆದರೆ ಈ ಕಾರಣ ಪುರಸಭೆಯವರು ತಾವು ಕೊಡಬೇಕಾದ ಸರಕಾರದ ಸಾಲವನ್ನು ಹಿಂದಕ್ಕೆ ಹಾಕಬಾರದೆಂದು ಸರಕಾರದವರು ಪುರಸಭೆಗೆ ಎಚ್ಚರಿಸಿದ್ದಾರೆ. ಕಾಲುನೆಗಳನ್ನು ತೆಗೆಸುವ ಕಾರ್ಯದಲ್ಲಿ ಬಹಳ ಉದಾಸೀನವಾದ ಅತೃಪ್ತಿಕರವಾದ ಕೆಲಸವಾಗುತ್ತಿರುವುದೆಂದು ಸದಸ್ಯರು ವ್ಯಕ್ತಪಡಿಸಿದರು. ಇದರ ಮೇಲ್ವಿಚಾರಣೆಮಾಡಿ ಸಂಬಂಧಿಸಿದ ಅಧಿಕಾರಿಗಳಿಗೆ ವರದಿ ಮಾಡಲು ಒಂದು ಸಮಿತಿಯು ನಿರ್ಮಿತವಾಯಿತು.

ಮೋರಗೆರೆ-ಸೊನ್ನ ನೀರಿನ ಅಭಾವ

[ಪಂಚಾಯಿತಿ ಬೋರ್ಡಿನವರಿಂದ]

ಮೋರಗೆರೆ-ಸೊನ್ನ ಈ ಗ್ರಾಮಗಳಲ್ಲಿ ಹರಿಜನರಿಗೆ ನೀರಿನ ಕೊರತೆಯು ಅಧಿಕವಾಗಿದೆ. ಈ ಕಷ್ಟವು ನೂರಾರು ವರ್ಷಗಳಿಂದಿದೆ. ಸಂಬಂಧಿಸಿದ ಅಧಿಕಾರಿಗಳನೇಕರೂ, ಲೇಬರ್ ತಹಶೀಲ್ದಾರವರೂ ಇದನ್ನು ನೋಡಿ ಹೋಗಿರುವರು. ಆದರೂ ಏನೂ ಮಾಡದಿರುವರು. ಈ ವಿಷಯದಲ್ಲಿ ಲೇಬರ್ ಮತ್ತು ಇತರ ಅಧಿಕಾರಿಗಳೊಡನೆ ಪತ್ರವ್ಯವಹಾರ ನಡೆಸಿ ಕಷ್ಟ ಪರ್ಯ ತೆಗೆದುಕೊಳ್ಳಲು ಶ್ರೀ ಭಾ. ಲಿಂಗಪ್ಪನವರಿಗೆ (ಪಂಚಾಯ್ತಿ ಬೋರ್ಡ ಅಧ್ಯಕ್ಷರು) 20ನೇ ತಾ, ದಿನ ಸಭೆಯಲ್ಲಿ ಅಧಿಕಾರ ಕೊಡಲಾಗಿದೆ. ಈ ವಿಷಯದಲ್ಲಿ ಅಧಿಕಾರಿಗಳೂ. ಇತರರೂ ತಕ್ಕ ಪ್ರಯತ್ನಗಳನ್ನು ಮಾಡಿವರೆಂದು ನಂಬಲಾಗಿದೆ.

ಭಾವಿಗಳನ್ನು ತೆಗೆಸಲು ಜಿಲ್ಲಾ ಹರಿಜನ ಸೇವಕ ಸಂಘದವರ ಸಹಾಯ.

(ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳು ಜಿಲ್ಲೆಯಲ್ಲಿ ಹರಿಜನರಿರುವ ನೀರಿನ ಕೊರತೆಗಾಗಿ ಅಧಿಕಾರಿಗಳ ಗಮನವನ್ನು ಸೆಳೆಯುತ್ತಲೇ ಬಂದಿದ್ದಾರೆ. ಆಲ್ ಇಂಡಿಯಾ ಗ್ರಾಂಟಿದ ೫೧೦೦೦ ರೂ,ಗಳಲ್ಲಿ ಜಿಲ್ಲೆಯ ಹರಿಜನ ಬಸ್ತಿಗಳಲ್ಲಿ ಅಂದರೆ 10 ಊರುಗಳಲ್ಲಿ ಭಾವಿ ತೆಗೆಸಲು ಸುಮಾರು ರೂ, 5860 ಸ್ಯಾಂಕ್ಷನ್ ಮಾಡಿದಾಗ ಮೋರಗೆರೆಯ ಭಾವಿಯು ಅದರಲ್ಲಿ ಸೇರಲಿಲ್ಲ. ಅಲ್ಲಿ ಕಲ್ಲು ಪ್ರದೇಶವಿದ್ದು ಎಷ್ಟುಮೇಲ್ ಅಧಿಕವಾಗುವುದೆಂದು ಭಾವಿಸಲ್ಪಟ್ಟಿತ್ತು. ಎಕನಾಮಿಕ್ ಕೌನ್ಸಿಲು ಮತ್ತು ಜಿಲ್ಲಾ ಹರಿಜನ ಅಡ್ವಿಸರಿ ಬೋರ್ಡುಗಳ ಸ್ಪತಿಯೊಂದು ಮೀಟಿಂಗುಗಳಲ್ಲಿಯೂ ಈ ವಿಷಯವು ಚರ್ಚೆ ತವಾಗುತ್ತಲೇ ಇದೆ. ಆದರೆ ನಿರೀಕ್ಷಿತ ಲಾಭವಿಲ್ಲದಿದೆ. ಇದಕ್ಕೆ ಕಾರಣವೆಂದರೆ ಅಧಿಕಾರೀ ಯಂತ್ರವು ಶೂನ್ಯದಂತೆಯೇ ಇದೆ ಆನೆಯ ನಡಿಗೆ ಉದಾಹರಣಾರ್ಥವಾಗಿ ಬಳ್ಳಾರಿ ತಾ. ಚೇಡ್ಲಗುರ್ಕಿ ಭಾವಿಗೆ 3000 ಸ್ಯಾಂಕ್ಷನ್ ಮಾಡಲು 2 ವರ್ಷವಾಯಿತು. ಅಲ್ಲಿ 7-8 ಸಾವಿರ ಖರ್ಚುಮಾಡಿದರೂ. ಹರಿಜನರ ಭಾವಿಗೆ ಉಪಯೋಗ ಬಿದ್ದಿಲ್ಲ. ಹರಿಜನ ಸಂಘದ ಕಾರ್ಯದರ್ಶಿಗಳು ತಮ್ಮ ಮುಖ್ಯ ಕೇಂದ್ರವಾದ ದೆಹಲಿಗೆ ಬರೆದು ಬಿರ್ಲಾ ಫಾನಿಫಂಡಿಂದ 2 ಸಾವಿರ ರೂ. ಸ್ಯಾಂಕ್ಷನ್ ಮಾಡಿಸಿರುವರು. ಅದಕ್ಕೆ ಕಂಡೀಷನ್ ವೊಂಟು ಸರ್ಕಾರವು 4 ಸಾವಿರ ಕೊಡಬೇಕು. 6 ಸಾವಿರದಲ್ಲಿ ಹರಿಜನರಿಗಾಗಿ ಹತ್ತು ಭಾವಿಗಳನ್ನು ತೆಗೆಸಬೇಕು. ಹಿಂದೆ ಇದ್ದ ಕಲೆಕ್ಟರ್‌ರವರು ಇದಕ್ಕೆ ಒಪ್ಪಿದ್ದರು. ಈಗ ಬಂದವರಿಗೂ ಸಹ ಫೆ1 ಮತ್ತು 23ನೇ ತಾ,ಗಳಂದಿನ ಹರಿಜನ ಸಲಹೆ ಸಮಿತಿ ಎಕನಾಮಿಕ್ ಕೌನ್ಸಿಲು ಸಭೆಗಳಲ್ಲಿ ಶ್ರೀ ಕೇಶವನಾಯರು ಕಲೆಕ್ಟರ್‌ರವರಿಗೆ ತಿಳಿಸಿದರು ಅವರು ಸರ್ಕಾರಕ್ಕೆ ಒತ್ತಿದು ತೀಸ್ಪಾಗಿ ಒಪ್ಪಿಗೆ ಪಡೆಯುವರೆಂಬ ತೀರ್ಮಾನವಾಯಿತು. ಮುಂದಿರುವ ಸ್ಕೀಂನಲ್ಲಿ ಮೋರಗೆರೆಯು ಸೇರುವುದೆಂಬ ಭರವಸೆಯುಂಟು.

★

ವಿದುರಾಶ್ವತ್ಥದ ಕಾಂಗ್ರೆಸ್ ಅಧಿವೇಶನ

ಏಪ್ರಿಲು ತಿಂಗಳ ಮಧ್ಯ ಭಾಗದಲ್ಲಿ ನಡೆಯಲಿರುವ **ಮೈಸೂರು ಕಾಂಗ್ರೆಸ್ಸಿನ ಮಹಾಧಿವೇಶನಕ್ಕೆ** ಮೈಸೂರಿನ ನಾಯಕರಾದ ಶ್ರೀ ಹೆಚ್. ಶಿ. ದಾಸಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ.

ರಾಜಕೋಟೆಯ ಸಮಸ್ಯೆ

ರಾಜಕೋಟೆಯ ಸಮಸ್ಯೆಯನ್ನು ಬಗೆಹರಿಸಲು ಮಹಾತ್ಮ ಗಾಂಧಿಯವರು ದೆಹಲಿಗೆ ಹೋಗಿರುವುದು ಸರಿಯಷ್ಟೆ. ಹಿಂದೂಸ್ಥಾನದ ಮುಖ್ಯ ನ್ಯಾಯಾಧೀಶರಾದ ಸರ್ ಮಾರಿಸ್ ಗ್ವೈಯ್ಯರ್‌ರವರು ಈ ಪ್ರಕರಣವನ್ನು ಬಗೆಹರಿಸಲು ವೈಸ್ರಾಯರಿಂದ ಆಜ್ಞಾಪಿಸಲ್ಪಟ್ಟಿರುವರು. ವಲ್ಲಭಭಾಯಿ ಪಟೇಲರು ಮುಖ್ಯ ನ್ಯಾಯಾಧೀಶರನ್ನು ಕಂಡು ತಮ್ಮ ಹೇಳಿಕೆಯನ್ನು ಕೊಟ್ಟರು. ದಿವಾನರಾದ ದರ್ಬಾರ್ ವೀರವಲ್ಲರವರೂಕೂಡ ನ್ಯಾಯಾಧೀಶರನ್ನು ಕಂಡರು. ಈವಾರದೊಳಗಾಗಿ ನಿರ್ಣಯವು ಹೊರಬೀಳಬಹುದು.

ಕಾಶೀ—ಅಲಹಾಬಾದು ನಗರಗಳಲ್ಲಿ ಹಿಂದೂ ಮುಸಲ್ಮಾನ್ ವೈಷಮ್ಯದ ಪರಿಸ್ಥಿತಿ ಇದೆ ಸರಕಾರದವರು ಎಚ್ಚರಿಕೆಗಳನ್ನು ತೆಗೆದುಕೊಳ್ಳುತ್ತಿರುವರು.

K. B. & SONS.

[Estd 1935.]

General and Paper Merchants.

Car Street, **BELLARY.**

(Prefer Hoogly Printing inks for neat and attractive Printing)

Best reliabe and cheapest house for all kinds of Novelties. Oilman stores, Thermas Flasks, Food Jars, Fountain Pens of numerous qualities and makes, Patent Medicines, Perfumes Toilet and Washing Soaps, Glass ware Tea, Coffee, all kinds of Papers and agents for Hoogly Printing inks.

ಎಲ್ಲಾವಿಧವಾದ ಸ್ಟೇಷನರಿ, ಕಾಗದಗಳು ಔಷಧಗಳು, ಸಬ್ಬು, ಸುಗಂಧ, ಚಾಹಿಟ್ಟು, ಗಾಜಿನ ಸಾಮಾನು, ಅಂದವಾದ ಮುದ್ರಣಕ್ಕೆ ಬೇಕಾಗುವ ಹಲ್ಲಿನ ಶಾಯಿ, ವಗೈರೆ ಸುಲಭ ಬೆಲೆಗೆ ದೊರೆಯುತ್ತೆ.

ಕೆ. ಬಿ ಅಂಡ್ ಸನ್ಸ್, ಕಾರು ಬೀದಿ, ಬಳ್ಳಾರಿ.

ಪ್ರಾಥಮಿಕ ಶಾಲೋಪಾಧ್ಯಾಯರ ಕರ್ತವ್ಯಗಳು

ಹೊಳಲಗುಂದಿ ಉಪಾಧ್ಯಾಯರ ಸಂಘ

ನಾವು ಪ್ರಾಥಮಿಕ ವಿದ್ಯಾ ಬ್ಯಾಸಕ್ಕಾಗಿ ವರ್ಷಕ್ಕೆ 2.25000 ರೂ. ಖರ್ಚುಮಾಡುತ್ತಲಿದ್ದೇವೆ. ಆದರೆ ಸಾಕಾದಷ್ಟು ಉಪಯೋಗವು ಆಗಿಲ್ಲೆಂಬುದೂ ಸುಶಿಕ್ಷಿತರಾದ ಆರೇ 1500 ಪ್ರಾ. ಉಪಾಧ್ಯಾಯರಲ್ಲಿ 100 ಜನ ತಮ್ಮ ಕರ್ತವ್ಯಗಳನ್ನು ನೆರವೇರಿಸುತ್ತಲಿಲ್ಲೆಂದು ನನಗೆ ತೋರಿಬಂದಿದೆ. ಉಪಾಧ್ಯಾಯರು ಕರ್ತವ್ಯ ಭ್ರಷ್ಟರಾದರೆ, ಜಿಲ್ಲಾ ಬೋರ್ಡಿನವರು ತೀಕ್ಷ್ಣಣ ಜರ್ಮಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ." ಎಂದು ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ. ನಾಗನಗೌಡರು ಹೊಳಲಗುಂದಿ ಉಪಾಧ್ಯಾಯ ಸಂಘದ ಸಭೆಯಲ್ಲಿ 27ನೇ ತಾ ಆಡಿದೆಕೊಂಡಿಸಿದರು.

ಸಭೆಯು ಬೋರ್ಡು ಶಾಲಾ ಭವನದಲ್ಲಿ ಏರ್ಪಟ್ಟಿದ್ದಿತು. ಸ್ಥಳದರ್ಶಗಳು ಉಪಾಧ್ಯಾಯರೇ ಅಲ್ಲದೆ ಊರಿನ ಕೆಲ ಮಹನೀಯರೂ ಪಾಲು ಮಾಡಿಸಿದ್ದರು. ವಂದೇ ಮಾತರಂ ಪ್ರಾರ್ಥನಾನಂತರ ಸಂಘದ ಕಾರ್ಯದರ್ಶಿ ಲಕ್ಷ್ಮಣರಾಯರು ವಾರ್ಷಿಕ ವರದಿಯನ್ನು ಓದಿ ತಮ್ಮ ಭಾಗದ ಉಪಾಧ್ಯಾಯರ ಕುಂದು ಕೊರತೆಗಳನ್ನು ವಿವರಿಸಿದರು. ಕಡಿಮೆ ಸಂಬಳ ಮತ್ತು ರಜಾ ಕಾಲದ ವೇತನ. ಸೆಕಂಡರೀಗ್ರೇಡ್ ಉತ್ತೀರ್ಣರಾದ ಉಪಾಧ್ಯಾಯರು, ಸಬಿನಿಯಂಟರೀ ವಾರಿಗರಲ್ಲಿ ಸಾಧ್ಯನಿಲ್ಲ ವಾಲೆಗಳಲ್ಲಿನ ಸೆಕಂಡರೀ ಉಪಾಧ್ಯಾಯರಿಗಿಂತ ಕಡಮೆ ವರ್ಗಿಯಲ್ಲರುವರು. ಸನುತ್ತಲೇಕು. ಜಿ. ಓ. ನಂ 5096-33, ಎಲ್. ಯಂ. ಎಂಬು ದೇನೋ ಇದೆ. ಆದರೆ ಇಕ್ರಿಮೆಂಟ್ ಸೀನಿಯಾರಿಟಿಗಳ ಸರಿಯಾದ ವಿನ್ಯೋಜನೆ ಇಲ್ಲ 1940ರಲ್ಲಿ ಉಪಾಧ್ಯಾಯರು ಫೈನಲ್‌ಗ್ರೇಡು ಪಾಸಾಗಬೇಕೆಂಬ ನಿರ್ಬಂಧವು ತೊಲಗಬೇಕು. ಬಿಸಿಲುಕಾಲದ ರಜಾ ದೊರೆಯಬೇಕು. ಸ್ನಾತಕೋತ್ತರ ಕಾಲವನ್ನು 7ರಿಂದ 10ರ ವರೆಗೆ ಮಾತ್ರ ಏರಿಸಲು ತಿಂಗಳಿಂದ ಜೂನ್ ತಿಂಗಳವರೆಗೆ ತರಗತಿಗಳು ನಡೆಯಬೇಕು. ಇತ್ಯೇ ಮೊದಲಾದ ವಿಷಯಗಳು.

ಶ್ರೀ ಟಿ ಬಿ. ಕೇಶವರಾಯರು:-

ಪ್ರಾ. ಉಪಾಧ್ಯಾಯರ ಕರ್ತವ್ಯಗಳನ್ನು ಅರುಹಿ ಮುಂದಿನ ಸಾಗರೀಕರನ್ನು ಮಾಡುವ ಘನಕಾರ್ಯವು ಅವರುಮೇಲಿರುವುದರಿಂದ ಅವರು ತೃಪ್ತರಾಗಿ ಅಲ್ಪವೇತನವಿದ್ದರೂ, ಚೆನ್ನಾಗಿ ಕೆಲಸಮಾಡಿ ಯಶಸ್ಸು ಸಂಪಾದಿಸಬೇಕೆಂದರು ಜಿಲ್ಲಾ ಬೋರ್ಡಿನ ಆರ್ಥಿಕ ಸ್ಥಿತಿ ತೃಪ್ತವಿಲ್ಲವಾದ ಕಾರಣ ಕೆಲ ಕಾಲ ಕಾಯಬೇಕಾಗಬಹುದೆಂದರು. ತಮ್ಮಲ್ಲಿರುವ ಕುಂದು ಕೊರತೆಗಳನ್ನು ಶೀಘ್ರವಾಗಿ ನಿರ್ಮೂಲ ಮಾಡಬೇಕೆಂದರು.

ಡಾ ನಾಗನಗೌಡರು:-

ಆರ್ಥಿಕ ದುಸ್ಥಿತಿಯಿಂದ ಕೆಲ ಉಪಾಧ್ಯಾಯರನ್ನು ತೆಗೆಯುಬೇಕಾಯಿತು. ನಿದ್ಯಾಮಂತ್ರಿಗಳ ಬಳಿ ಹೋಗಿ ನನಗೆ ವಿದ್ಯೆಗಾಗಿ ಹೆಚ್ಚಿನ ಗ್ರಾಂಟು ಕೊಡಿರೆಂದು ಕೇಳಿದ್ದಾಯಿತು ಅವರು ನಿರಾಕರಿಸಿದರು. ನಿಮ್ಮಸ್ಥಿತಿಯನ್ನು ಹೆಚ್ಚಿಸಿರಿ. ಇಲ್ಲವೇ ಬೇರೆ ಸಂಬಳ ಕಡಮೆಮಾಡಿಕೊಳ್ಳಿರಿ. ಎಂತ ಅವರು ಹೇಳಿದರು. ನಾವು ಪ್ರಾ. ಶಾಲೆಗಳಿಗಾಗಿ ಬಹು ಹಣವನ್ನು ಖರ್ಚುಮಾಡುತ್ತಲಿದ್ದೇವೆ ನಿಜ ನ್ನು ಕಾಂಗ್ರೆಸ್ಸಿನವರು ಈ ಪದವಿಗೆ ಕೂರಿಸಿದನೇಲೆ ಅನೇಕ ಹಳ್ಳಿಗಳಿಗೆ ಹೋಗಿ ಶಾಲೆಗಳ ಸ್ಥಿತಿಯನ್ನು ನೋಡಿದ್ದೇನೆ. ಕಾಲಕ್ಕೆ ಸರಿಯಾಗಿ ಬರದಿರುವುದು. ಸುಳ್ಳು ಹಾಜರಿ ಹಾಕುವುದು, ರಿಪೋರ್ಟುಕೊಡದೆ ರಜಾ ಹೋಗುವುದು ಮುಂತಾದ ಅನೇಕ ದೋಷಗಳು ನನ್ನ ಗಮನಕ್ಕೆ ಬಂದಿವೆ. ಕೆಲ ಶಾಲೆಗಳು ಒಳ್ಳೆಯ ಅಭಿವೃದ್ಧಿ ಸ್ಥಿತಿಯಲ್ಲಿವೆ. ಉತ್ಸಾಹದಿಂದ, ಶ್ರದ್ಧೆಯಿಂದ ಕೆಲಸಮಾಡುವ ಉಪಾಧ್ಯಾಯರೂ ಇದ್ದಾರೆ. ಆದರೆ ಕರ್ತವ್ಯವನ್ನು ಮರತವರೂ ಇದ್ದಾರೆ. ನಾನಾನ್ಯ ಕುಂದುಕೊರತೆಗಳನ್ನು ದೂರ ಮಾಡಲು ನಾವು ಸಿದ್ಧರಿದ್ದೇವೆ. ಆದರೆ ಕರ್ತವ್ಯ ಭ್ರಷ್ಟರಾದರೆ. ಶಿಕ್ಷಿಸಬೇಕಾಗುತ್ತದೆ.

ಉಪಾಧ್ಯಾಯರಿಗೆ ಅಲ್ಪವೇತನವಿದೆ. ಬಹಳ ದಿನಗಳಿಂದಲೂ ಇಂಕ್ರಿಮೆಂಟು ಕೊಟ್ಟಿಲ್ಲ. ಈಗಿರುವ ಆರ್ಥಿಕ ಪರಿಸ್ಥಿತಿಯಲ್ಲಿ ನನಗೆ ಸಾಧ್ಯವಿರುವುದನ್ನೆಲ್ಲಾ ಮಾಡುತ್ತೇವೆ. ಕಲೆಕ್ಟರರು ನಮಗೆ 4 ತಿಂಗಳಿಂದ ವಿದ್ಯಾಸೆಸ್ 60 ಸಾವಿರ ರೂ, ಕೊಡುವುದನ್ನು ನಿಲ್ಲಿಸಿರುತ್ತಾರೆ. ನೀವು ತೃಪ್ತಿಯಿಂದ ಸಂತೋಷದಿಂದ ನಿಮ್ಮ ಕರ್ತವ್ಯಗಳನ್ನು ನೆರವೇರಿಸಿರಿ. ಒಳ್ಳೆಯ ಕಾಲ ಬಂದೊಡನೆ ನಿಮಗೆ ಪರಿಹಾರ ಕೊಡುತ್ತೇವೆ. ನಿಮ್ಮ ಇತರ ಕುಂದುಕೊರತೆಗಳ ಬಗ್ಗೆ ಸಹಾಯ ಮಾಡಲಾಗುವುದೆಂದು ಹೇಳಿದರು

ಶ್ರೀ ರಘುನಾಥ ಚಾರ್ಯರು ವಂದನಾರ್ಪಣ ಮಾಡಿದನೇಲೆ ತಾಂಬೂಲಾನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಕೆ. ಪಿ. ಸಿ. ಸಿ. ಕೌನ್ಸಿಲ್ ಸಭೆ

ಧಾರವಾಡ ತಾ, ೨೫

ಕ. ಪ್ರಾಂ. ಕಾ. ಕ. ಯ ಸಭೆಯ ಕಾರ್ಯಕಾರೀ ಮಂಡಲದ ಸಭೆಯು ತಾ. 1—4—1939 ನೇ ದಿ

ವಸ ಸಂಜೆ 6 ಘಂಟೆಗೆ ಸಿಸಿ ಮು ಕ್ಯಾಮಿನಲ್ಲಿ ಜಿಲ್ಲಾ ಕಮೀಟಿಯ ಕಚೇ ರಿಯಲ್ಲಿ ಸೇರಲಿರುವದು.

ಸಿವ್ಹಿಕ್ ಬೋರ್ಡು

ಸ್ಥಾಂತಿಕ ಸಿವ್ಹಿಕ್ ಬೋರ್ಡಿ ನ ಸಭೆಯು ಸಿಸಿಯಲ್ಲಿ ಅಂದೇ ಮ ಧ್ಯಾನ್ಹ 2 ಘಂಟೆಗೆ ಸೇರುವದು ಕಾ ರವಾರ ಮತ್ತು ವಿಜಾಪುರ ಜಿಲ್ಲಾ ಬೋರ್ಡು ಚುನಾವಣೆಗಳ ವಿಷಯವು ಸಭೆಯಮುಂದೆ ಬರಲಿರುವದೆಂದು ತಿಳಿಯುತ್ತದೆ.

ಮುಂಬೈಯಲ್ಲಿ ಪಾನಪ್ರತಿಬಂ ಧವನ್ನು ಯಶಶ್ವಿಗೊಳಿಸುವದಕ್ಕಾಗಿ 'ಪಾನನಿರೋಧ ಪ್ರಚಾರ ವಾರ' ದ ಪ್ರಾರಂಭೋತ್ಸವವು ಚೌಪಾಟಿಯಲ್ಲಿ ಪ್ರಚಂಡ ಸಭೆಯಾಗಿ ನೆರವೇರಿತು. ಮಾನ್ಯ ಜೇರ. ಕೆ. ನಟರಾಜ್, ಜಲಿ ಬಹಾದ್ದೂರಖಾನ. ರೆವ್ಹರೆಂಡ ಫ ರ್ನಾಂಡೀಜ, ದಾರುವಾಲ ಮೊದಲಾ ದ ಎಲ್ಲ ಜಾತಿ ಮತ್ತು ಪಂಗಡಗಳ ಪ್ರಮುಖರು ಮಾತ್ತನಾಡಿ ಸರಕಾರದ ವರ ಈ ಕಾರ್ಯಕ್ರಮಕ್ಕೆ ಹೃತ್ಪೂ ರ್ವಕ ಬೆಂಬಲ ಕೊಟ್ಟರು.

ಸಿಂಧಮಂತ್ರಿಗಳ ರಾಜೀನಾಮೆ.

ಸಿಂಧದ ಹಿಂದೂ ಮಂತ್ರಿಗಳಿಬ್ಬರ ರಾಜೀನಾಮೆಯನ್ನು ಗವರ್ನರ್‌ರವರು ಸ್ವೀಕರಿಸಿರುತ್ತಾರೆ.

ಅಂಬಾಭವನ ಕಾಫೀ ಕ್ಲಬ್

(ರಿಜಿಸ್ಟರ್ಡ್)

ಸುತ್ತು

ಶಾಖೆ — **ಊಟದ - ಹೋಟಲ್.**

ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀ ಪದಲ್ಲಿದೆ. ರುದ್ಧತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾರೆ - ಬೆಳೆ ಕು ಮತ್ತು ಇತರ ಅನುಕೂಲಗಳೆರುವ ಕೊಠಡಿಗಳು, ಭೋಜನ ಸಮಾರಂಭ ಬೇಸಾರ್ಟಗಳ ವಿಷಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾ ನ ವ್ಯವಸ್ಥೆಮಾಡುವೆವು.

ಪ್ರೊಪ್ರಯಿಟರ್ರು—

ಶಿ. ಕನ್ನಯ್ಯ, ಹೆಚ್. ಕರಿಬಸಪ್ಪ.

ಹೊಳಲಗುಂದಿಯಲ್ಲಿ ಕಾಂಗ್ರೆಸ್ ಪ್ರಚಾರ ಕಾರ್ಯ

ಜಿಲ್ಲಾ ಬೋರ್ಡು ಅಧ್ಯಕ್ಷರಾ ದ ಶ್ರೀ ನಾಗನಗೌಡರೂ, ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳೂ ಇಲ್ಲಿಗೆ ಬಂದು ಇಲ್ಲಿನ ವಿದ್ಯಾ ಸಂಸ್ಥೆ ಗಳನ್ನೆಲ್ಲಾ ಸಂದರ್ಶಿಸಿ ಹರಿಜನ ಕೇರಿ ಗೆ ಹೋಗಿ ಅವರ ಬೇಡಿಕೆಗಳನ್ನೆಲ್ಲಾ ವಿಚಾರಿಸಿಕೊಂಡು ಉಪಾಧ್ಯಾಯರ ಸಂಘದ ಕಾರ್ಯಕಲಾಪಗಳನ್ನು ಮುಗಿಸಿ ರಾಯಂಕಾಲ ದೇವಸ್ಥಾನದ ಮುಂದೆ ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸ್ ಕಾರ್ಯವನ್ನೇಲೆ ಭಾಷ ಣಮಾಡಿದರು.

ಸ್ಥಾರ್ಥನಾನಂತರ ಡಿ. ಯಜ್ ವಿ. ರಾಯರು—ಅತಿಥಿಗಳ ಪರಿಚ ಯ ಮಾಡಿಕೊಟ್ಟರು. ನಂತರ ಕೇಶ ವರಾಯರು — ಕಾಂಗ್ರೆಸ್ ಚರಿತ್ರೆ ಕಾಂಗ್ರೆಸ್‌ನ ನಿರ್ಮಾಣ ಕಾರ್ಯಕ್ರ ಮ, ಖಾದಿ ಹರಿಜನೋದ್ಧಾರ ಗ್ರಾ ಮ ಕೈಗಾರಿಕೆಗಳು ಬ್ರಿಟಿಶರು ನಮ್ಮ ಉದ್ಯೋಗಗಳನ್ನು ಹೇಗೆ ನಾಶಮಾಡಿ ದರು? ಕಾಂಗ್ರೆಸ್ ಮಂತ್ರಿವರ್ಗದ ಕಾರ್ಯ ಇವುಗಳನ್ನೆಲ್ಲಾ ವಿಷುವಲವಾಗಿ ಕೇಳಿದರು. ಅಸ್ಪೃಶ್ಯತಾ ನಿವಾರಣೆಗೆ ರಾಸ್ತಾಧಾರಗಳನ್ನು ಹೇಳಿದರು. ಹರಿ ಜನರನ್ನು ದಯೆಯಿಂದ ನೋಡಲು ಜನರಿಗೆ ಮನವಿಮಾಡಿದರು. ಸುಮಾ ರು 1 ಘಂಟೆಗಿಂತಲೂ ಹೆಚ್ಚಾಗಿ ಜ ನರು ರಾಂತರಾಗಿ ಕುಳಿತು ಆಲಿಸಿ ದರು.

ಡಾ. ಗೌಡರು—ಉಪಾನ್ಯಾ ಸಕರ ಉಪದೇಶ ಪ್ರಕಾರ ನಮ್ಮದೇಶ ದೇಶ ಕಲ್ಯಾಣವಾಗುವುದೆಂತಲೂ ಸ್ವರಾಜ್ಯವು ಶೀಘ್ರವಾಗಿ ಲಭಿಸುವು ದೆಂತಲೂ ಹೇಳಿದರು.

ಡಿ. ಹೆಚ್. ವಿ. ರಾಯರು—ಎಲ್ಲರ ನ್ನೂ ವಂದಿಸಿದರು.

ಸಂಡೂರು ಸಂಸ್ಥಾನ ಸುಧಾರಣಾ ಸಮಿತಿ.

ಸಂಡೂರು ಸಂಸ್ಥಾನದ ಸುಧಾ ರಣಾ ಸಮಿತಿಯು 26ನೇ ತಾ. ಸ್ಥಾ ತ್ಕಾಲ ಕೂಡಿದ್ದಿತು. ರಾಜ್ಯ ಭಾರ ವಲ್ಲಿ ಯಾವ ತರದ ಬದಲಾವಣೆಗಳಾ ಗಬೇಕು? ತೆರಿಗೆಯಲ್ಲಿ ಏನು ಹೆಚ್ಚು ಕಡಿಮೆಗಳನ್ನು ಮಾಡಬೇಕು? ಈ ವಿ ಷಯದಲ್ಲಿ ಸೂಚನೆಗಳನ್ನು ಕೊಡಲು ಸಂಡೂರು ಸಂಸ್ಥಾನದ ಪ್ರಜೆಗಳಿಗೆ ಮೇ 1ನೇ ತಾ ವರಿಗೂ ಅವಧಿಕೊಡ ಲಾಗಿದೆ. ಮೇ ತಿಂಗಳ ಮೊದಲನೇ ವಾರದಲ್ಲಿ ಸಮಿತಿಯು ಪುನಃಕೂಡಿ ಬಂದ ಸೂಚನೆಗಳ ವಿಮರ್ಶೆಯನ್ನು ಮಾಡುವುದು.

ಮದರಾಸು ಅಸೆಂಬ್ಲಿಯಲ್ಲಿ ಗೊಂದಲ

ಭಾರತ ಮಂತ್ರಿಗಳಾದ (Secretary of State) ಲಾರ್ಡ್ ಜೆಟ್ಲ್ಯಾಂಡರವರು ಮದ್ರಾಸು ಸರಕಾರ ಕ್ಕೆ ಒಂದು ಪತ್ರವನ್ನು ಬರೆದು ಸದ್ಯ ದ ರಾಜಕೀಯ ಪರಿಸ್ಥಿತಿಯಲ್ಲಿ ಪ್ರ ತ್ಯೇಕ ಪ್ರಾಂತಗಳು ಸಾಧ್ಯವಿಲ್ಲವೆಂತ ಲೂ, ಸಂಯುಕ್ತ ರಾಜ್ಯಘಟನೆಯು ಸ್ಥಿರವಾಗಿ ಸ್ಥಾಪಿಸಲ್ಪಟ್ಟಮೇಲೆ ಅ ದು ಸಾಧ್ಯವಾಗುವ-ಸಂಭವವಿದೆಯೆಂ ತಲೂ ತಿಳಿಸಿದ್ದಾರೆಂದು ವ್ಯಕ್ತಪಟ್ಟ ದೆ. ಈ ಪತ್ರದ ವಿಷಯ ಗೊತ್ತಾದ ನಂತರ ಆಂಧ್ರರಲ್ಲಿ ತೀವ್ರವಾದ ಅಸಂ ತೋಷ, ಅತೃಪ್ತಿ, ಅಸಮಾಧಾನಗಳು ಹುಟ್ಟಿವೆ. ಮದ್ರಾಸು ಅಸೆಂಬ್ಲಿ ಅಧ್ಯ ಕ್ಷರಾದ ಶ್ರೀ ನಾಂಬಮೂರ್ತಿಯವರು ಸದಸ್ಯರನ್ನು ತಮ್ಮ ತಮ್ಮ ಮಾತೃ ಭಾಷೆಗಳಲ್ಲಿ ಮಾತಾಡಲು ಒತ್ತಾಯ ಪಡಿಸುತ್ತಿರುವರು.

ಒಂದೇ ಭಾಷೆಯು ಪ್ರಾಬಲ್ಯ ವಲ್ಲಿರುವ ವಿವಿಧ ಪ್ರಾಂತಗಳು ನಿರ್ಮಾ ಣವಾಗದಿದ್ದರೆ ಈ ಕಷ್ಟಗಳು ತಪ್ಪು ವುದಿಲ್ಲವೆಂದೂ, ಇದಕ್ಕೆ ಶೀಘ್ರವಾಗಿ ಪ್ರಾಂತಗಳನ್ನು ನಿರ್ಮಾಣಮಾಡುವು ದೇ ಔಷಧವೆಂದೂ ಅವರು ಒಂದು ಪ್ರಕಟನೆಯಿಂದ ತಿಳಿಸಿದ್ದಾರೆ.

ಹಳ್ಳಿಗಳ ಉದ್ಧಾರ.

ರಾಷ್ಟ್ರ ಪುನರುದ್ಧಾರ ಸಮಿತಿಯ ಮುಂದಿರುವ ಸಮಸ್ಯೆಗಳು

ಯಾವುದೇ ದೇಶದ ಆರ್ಥಿಕ ಉನ್ನತಿ ಯಾಗಲು, ಆ ದೇಶದ ಶುಭಚಿಂತಕರು ಆದರ ರಾಷ್ಟ್ರ ನಿರ್ಮಾಣದಲ್ಲಿ ತೊಡಗುವರು ಈ ಆರ್ಥಿಕ ಪುನರ್ನಿರ್ಮಾಣದ ಪ್ರೀತಿಯೊಂದು, ಸ್ಥಿತಿಯನ್ನು ಸುಧಾರಿಸುವುದರಲ್ಲಿ ಸಹಾಯಕವಾಗುವುದು. ಅನುದಿಂದೆಲೇ ಉನ್ನತ ಶೀಲ ರಾಷ್ಟ್ರಗಳನ್ನು ಈ ಸಂಬಂಧದಲ್ಲಿ ಅನುಕರಣ ಮಾಡಲಾಗುವುದು — ಆಂತಹ ದೇಶಗಳಲ್ಲಿ ಪ್ರಜಾತಂತ್ರ ಶಾಸನ ವ್ಯವಸ್ಥೆಯು ಸ್ಥಿರವಾಗಿರುತ್ತದೆ. ಗ್ರೇಟ್ ಬ್ರಿಟನ್ನಿನಂತಹ ದೇಶದಿಂದ ಪೂರ್ಣವಾಗಿ ಹೊಂದು ಅಮೆರಿಕದ ಸಂಯುಕ್ತ ಸಂಸ್ಥಾನಗಳವರೆಗೂ ಸಹ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಪ್ರಯತ್ನ ತೀವ್ರವಾಗಿರುವುದನ್ನು. ಈ ನಿರ್ಮಾಣ ಕಾರ್ಯದಲ್ಲಿ ಕೈಗಾರಿಕೆಗೇ ಪ್ರಧಾನತೆಯನ್ನು ಕೊಡಲಾಗುತ್ತಿದೆ ಭಾರತದ ಆರ್ಥಿಕ ಉನ್ನತಿಯ ಮಾರ್ಗದಲ್ಲಿ ಅನೇಕ ಕಠಿಣತೆಗಳಿವೆ. ಇವುಗಳಲ್ಲಿ ಅದೊಂದು-ಭಾರತದ ಆರ್ಥಿಕ ಉನ್ನತಿಯಾಯಿತೆಂದರೆ, ಭಾರತೀಯರು ಬ್ರಿಟಿಷರಿಗೆ ಪರೋಧಿಗಳಾಗುವೆನೆಂಬುದೇ.

ಹೊಸ ಶಾಸನದಿಂದಲೂ ಸಹ ಬ್ರಿಟಿಷ್ ಸಾಮ್ರಾಜ್ಯವು ಎಂದಿನಂತೆಯೇ ಇದೆ. ಸಾಮ್ರಾಜ್ಯಗಳಲ್ಲಿ ಉತ್ಪತ್ತಿಯ ಸಾಧನಗಳು ಕಡಿಮೆ. ಅಂದರೆ ನಮ್ಮ ರಾಷ್ಟ್ರೀಯ ಸಭೆಯು ಇವರ ನಿರ್ಣಾರದಲ್ಲಿ ಉದಾಸೀನವಾಗಿದೆ ಎಂದೆಲ್ಲ. ನಿಳು ಸಾಮ್ರಾಜ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳ ಸ್ಥಾಪನೆಯಾದ ಕೂಡಲೇ ದೇಶದ ನಿರುದ್ಯೋಗ ಸಮಸ್ಯೆ ಬಡತನಗಳನ್ನು ದೂರಮಾಡಲು, ಒಂದು ಸಮಿತಿಯನ್ನು ನೇಮಿಸಲಾಯಿತು. ಇವರು ನಮ್ಮ ದೇಶದ ಆರ್ಥಿಕ ಉನ್ನತಿಯ ಉಪಾಯ ಹುಡುಕುವುದೇ ಉದ್ದೇಶ ಕಳೆದ ಅಕ್ಟೋಬರಿನಲ್ಲಿ ಕಾಂಗ್ರೆಸ್ ಸ್ವಾತ್ಯಗಳ ಔದ್ಯೋಗಿಕ ಸಮ್ಮೇಳನವು ನಡೆಯಿತಷ್ಟೆ. ಅದರಲ್ಲಿ ಉತ್ಪಾದನೆಕ್ಕಾಗಿ ಒಂದು ದೊಡ್ಡ ಯೋಜನೆಯನ್ನು ಸಿದ್ಧಮಾಡತಕ್ಕೆ ಕೆಂದೂ, ದೇಶವಲ್ಲ ಪ್ರಚಾರವಿರುವ ಔದ್ಯೋಗಿಕ ಪಂಥಗಳನ್ನು ತಮ್ಮ ವಶಪಡಿಸಿಕೊಳ್ಳಬೇಕೆಂದೂ ಅದರಲ್ಲಿ ತೀರ್ಮಾನವಾಯಿತು ಅದಕ್ಕಾಗಿ ಒಂದು ಉಪಸಮಿತಿಯನ್ನು ನೇಮಿಸಿದೆ. ಇವರು ಈ ದೇಶದಲ್ಲಿ ಸ ಔದ್ಯೋಗಿಕ ಸಾಧನೆಗಳೆನ್ನು ಯಾವ ರೀತಿ ಉಪಯೋಗಿಸಿಕೊಳ್ಳಬಹುದು ಎಂಬುದನ್ನು ಯೋಚಿಸಿ ತಮ್ಮ ಅಭಿಪ್ರಾಯವನ್ನು ಕಾಂಗ್ರೆಸ್ ಕಾರ್ಯಸಮಿತಿಗೆ ಒಪ್ಪಿಸಬೇಕು.

ರಾಷ್ಟ್ರಪತಿಗಳಾದ ಶ್ರೀ ಸುಭಾಷರಿಗೆ ತಮ್ಮ ಕಾರ್ಯಕಾಲವಲ್ಲೇ ಇದಕ್ಕೆ ಒಂದು ನಿಶ್ಚಿತರೂಪ ಬರಬೇಕೆಂಬ ಚಿಂತೆ ಇದೆ ಆದರೆ ಗ್ರಾಮಗಳಲ್ಲಿರುವ ಬಡ ರೈತನ ಜೀವನವನ್ನೂ ಧ್ಯಾನದಲ್ಲಿಡದೆ ಭಾರತದ ಆರ್ಥಿಕ ಉನ್ನತಿಯ ಯಾವ ಯೋಚನೆ ಮಾಡಿದರೂ ಅದು ಸಫಲವಾಗಲಾರದು. ನಮ್ಮಲ್ಲಿ ಹಳ್ಳಿಗರೇ ಬಹು ಸಂಖ್ಯಾತರಿರುವುದರಿಂದ ಇವರ ಆರ್ಥಿಕ ಉನ್ನತಿಯಾಕಷ್ಟೆ ಮೊದಲು ಗಮನ ಕೊಡುವುದು ಅತ್ಯಗತ್ಯ ಹಳ್ಳಿಗಳಿಗೂ ಪಟ್ಟಣಗಳಿಗೂ ನಿಕಟ ಸಂಬಂಧವನ್ನು ಸ್ಥಾಪಿಸಬೇಕು. ಕಳೆದ ಐದು ವರ್ಷಗಳಿಂದ ನಮ್ಮ ದೇಶದಲ್ಲಿ ಪುಷ್ಕಳ ಗಳೇನೋ ಹೆಚ್ಚಿವೆ. ಆಧುನಿಕ ರೀತಿಯ ಕೈಲಸಗಳೂ ಸಹ ನಡೆಯುತ್ತಿವೆ. ಆದರೇನು, ಇದರಿಂದ ದೇಶದ ಸ್ಥಿತಿಯು ಮಾತ್ರ ಕೊಂಚವೂ ಸುಧಾರಿಸಿಲ್ಲ.

ಈ ಹೊಸ ಔದ್ಯೋಗಿಕ ದಂಧೆಗಳಿಂದ ನಮ್ಮ ದೇಶದ ನಿರುದ್ಯೋಗವು ಕಿಂಚಿತ್ತೂ ಕಡಿಮೆಯಾಗಲಿಲ್ಲ ನಮ್ಮ ದೇಶದಂತಹ ವಿಶಾಲ ದೇಶದಲ್ಲಿ ಕೇವಲ ಅರ್ಧಕೋಟಿ ಜನರಿಗೆ ಮಾತ್ರ ಕೆಲಸ ಸಿಕ್ಕಿದೆ ಅಷ್ಟೆ. ನಮ್ಮ ನಿರುದ್ಯೋಗಿಗಳ ಸಂಖ್ಯೆಯು ಇದಕ್ಕೂ ಬಿಗಿಂತ ಹೆಚ್ಚಿದೆ. ಇದರಿಂದ ಈ ಹೊಸ ಕೈಗಾರಿಕೆಗಳಿಂದ ನಮ್ಮ ನಿರುದ್ಯೋಗದ ಸಮಸ್ಯೆಯು ಬಗೆಹರಿಯಲಿಲ್ಲ ಬಡತನ, ನಿರುದ್ಯೋಗ ಇವೆರಡೂ ಈಗಿನ ಮುಖ್ಯ ಸಮಸ್ಯೆಗಳು. ಭಾರತದ ಆರ್ಥಿಕ ಉನ್ನತಿಯ ಸಮಸ್ಯೆಯ ಮೂಲವು ಇವೆರಡರಲ್ಲಿ ಸವಾಮವೇಶವಾಗಿದೆ ಇದಕ್ಕಾಗಿ "ನ್ಯಾಷನಲ್ ಪ್ಲಾನಿಂಗ್ ಕಮೀಷನ್" ನಿಯುಕ್ತವಾಗಿದೆ. ದೇಶದ ಆರ್ಥಿಕ ಉನ್ನತಿಗೆ ಸಹಾಯವಾಗುವಂತೆ ನಮ್ಮ ದೇಶದಲ್ಲಿ ಯಾವ ಯಾವ ವಸ್ತುಗಳು ಸ್ವಾಸ್ಥ್ಯವಾಗುವುದೋ ಅವುಗಳನ್ನು ಗೊತ್ತುಹಚ್ಚಬೇಕೆಂದು ಇವರಿಗೆ ಹೇಳಲಾಗಿದೆ. ಯಾವ ವ್ಯವಸಾಯದಿಂದ ದೇಶದ ಆರ್ಥಿಕ ಪುನ್ನತಿಗೆ ಸಹಾಯವಾಗುವುದೋ ಅದನ್ನು ಸಹ ನಿರ್ಣಯಮಾಡಬೇಕಂತೆ. ಗೃಹಗಳ ಕೈಗಾರಿಕೆಗಳ ಕಡೆಗೂ ದೃಷ್ಟಿ ಇಡಬೇಕಾಗಿದೆ ಈ ಕಮೀಷನ್ನಿನವರು.

ಈ ಕಮೀಷನ್ನಿನ ಸಹಾಯಕ್ಕೆ ಅ. ಭಾ. ಗ್ರಾ. ಕೈ. ಸಂಘದ ಸಹಾಯವನ್ನು ಪಡೆಯುವುದು. ಭಾರತವು ಕೃಷಿ ಪ್ರಧಾನ ದೇಶ. ಗೃಹಕೈಗಾರಿಕೆಗಳ ಅಭಿವೃದ್ಧಿಗಾಗಿ ಹೆಚ್ಚು ಗಮನಕೊಟ್ಟು ಅವುಗಳ ಪುನ್ನತಿಗಾಗಿ ಪ್ರಯತ್ನಪಟ್ಟಲ್ಲಿ ಅಧಿಕ ಸ್ಥಾಯ ಸಾಧ್ಯವಾಗುವುದು. ಆದರೆ ನಮ್ಮ ಸಧ್ಯದ ಆರ್ಥಿಕ ದೃಷ್ಟಿಯಿಂದ ಇದು ಸಾಧ್ಯವಾಗದಮಾತು. ಮೊದಲು ನಗರಗಳಲ್ಲಿ ಅಧಿಕ ಪ್ರಮಾಣದಲ್ಲಿ ನಿರುದ್ಯೋಗದ ಸಮಸ್ಯೆಯನ್ನು ದೂರಮಾಡಿ ನಂತರ ಹಳ್ಳಿಕಡೆ ಗಮನಕೊಡಬೇಕಾಗುವುದು (ನಿ ಸ)

(ಮುಂದಿನ ಪುಟವನ್ನು ನೋಡಿರಿ.)

ನಿಸಾಕ್ಷಿ ಭವನ ಕಾಫಿಕ್ಲಬ್

[ವಿಜಿಸ್ಟರ್ಡ್]

ಶಾಪೆಗಳು—

ಕಾಫಿ ಕ್ಲಬ್ ಬೆಂಗಳೂರು ಕೋಡಾ

ಊಟ ವಸತಿಗೃಹ ಬ್ರಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪ ವಲ್ಲಿ ತಯಾರಿಸಿದ ಸಿಹಿಫಾರದ ಫಲ ಪಾರನಸ್ತುಗಳು.

ಒಳ್ಳೆಯ ಊಟದವ್ಯವಸ್ಥೆ ಧಾರಾಳವಾಗಿ ಗಾಳಿ, ಬೆಳಕು ಬರುವ ಮಹಡಿಯ ಮೇಲಿನ ಕೊಠಡಿಗಳು ಆಧುನಿಕ ವ್ಯವಸ್ಥೆ,

ಒಂದು ಸಲ ಬಂದು ಪರೀಕ್ಷಿಸಿರಿ.

ಹಳ್ಳಿಗಳ ಉದ್ಧಾರ

(ಹಿಂದಿನ ಪುಟದಿಂದ)

ನೊದಲು ನಗರಗಳ ವ್ಯವಸಾಯದ ಸಮುಚಿತ ವ್ಯವಸ್ಥೆಯಾದರೆ ಹಳ್ಳಿಗಳ ಕೈಗಾರಿಕೆಗಳನ್ನೂ ಉನ್ನತವಾಗಿದ್ದಲ್ಲಿ ಒಯ್ಯಲು ಸಹಾಯವಾಗುವುದು. ಏಕೆಂದರೆ ಗ್ರಾಮಗಳಲ್ಲಿ ವುತ್ಪತ್ತಿಯಾಗುವ ವಸ್ತುಗಳಿಗೆ ನಗರಗಳಲ್ಲಿ ಗಿರಾಕಿಗಳು ದೊರೆಯುವವು. ಹಳ್ಳಿಗಳಲ್ಲಿ ವುತ್ಪತ್ತಿಯಾಗುವ ವಸ್ತುಗಳನ್ನೂ ಸರಿಯಾದ ಬೆಲೆಯಲ್ಲಿ ಮಾರಲು ಸರಿಯಾದ ವ್ಯವಸ್ಥೆಯನ್ನು ಮಾಡಬೇಕು. ನಮ್ಮಲ್ಲಿರುವ ಈಗಿನ ದೊಡ್ಡ ಲೋಪವೆಂದರೆ ನಮ್ಮ ಅಪೂರ್ಣ ವಸ್ತುಗಳು ವಿದೇಶಕ್ಕೆ ಹೋಗಿ ಅಲ್ಲಿನ ಫಳಕು ಬಿಳಕುಗಳಿಂದೊಡಗೂಡಿ ನಮಗೇ ಹಿಂದಿರುಗಿ ಒಂದಕ್ಕೆ ಹತ್ತರಷ್ಟು ಬೆಲೆಗೆ ಮಾರಲ್ಪಡುವವು. ಈ ಪದ್ಧತಿಯು ನಿರ್ಮೂಲವಾಗದೆ ಗತ್ಯಂತರವಿಲ್ಲ. ಆದರೆ ಅಪೂರ್ಣವಸ್ತುಗಳ ಸಮುಸಂಯೋಗವನ್ನು ನಾವೇ ಮಾಡಿಕೊಳ್ಳುವುದು ನೊದಲನೇ ಕರ್ತವ್ಯ ನಮ್ಮ ದೇಶದ ಎಣ್ಣೆ ಬೀಜಗಳು, ಹತ್ತಿ, ಚರ್ಮ, ಇತ್ಯಾದಿಗಳು ಪರದೇಶಕ್ಕೆ ಹೋಗಿ ಪುನಃ ನಮ್ಮಲ್ಲಿಗೇ ಅಧಿಕ ಬೆಲೆಗೆ ಮಾರಲ್ಪಡುವುದೆಂದರೆ ಎಷ್ಟು ಶೋಚನೀಯವಾದ ವಿಚಾರ! ಈ ಪ್ರಶ್ನೆಗಳನ್ನು ಬಹಳ ಆಳವಾಗಿ ಆಲೋಚಿಸಬೇಕಾಗಿದೆ. ಈ ವಸ್ತುಗಳೆಲ್ಲವನ್ನೂ ನಮ್ಮಲ್ಲಿಯೇ ಪುಷ್ಕಲೀಕರಿಸಿಕೊಳ್ಳುವಂತೆ ಪ್ರಯತ್ನಗಳು ನಡೆದೇನೇ ನಮ್ಮ ಭಾರತಕ್ಕೆ ಮುಕ್ತಿ ಇಲ್ಲವಾದರೆ ಇಲ್ಲ

★

ಇಂಡಿಯಾ-ಇಂಗ್ಲೆಂಡ್ ವ್ಯಾಪಾರೀ ಒಪ್ಪಂದಕ್ಕೆ ಒಪ್ಪಿಗೆ ದೊರೆಯಲಿಲ್ಲ.

ಇಂಡಿಯಾ ಸರಕಾರದವರು ತಮ್ಮ ಸದಸ್ಯರ ಮೂಲಕ ಇಂಗ್ಲೆಂಡಿನೊಡನೆ ವ್ಯಾಪಾರೀ ಸಮ್ಬಂಧವನ್ನು ಮಾಡಿಕೊಂಡು ಅದನ್ನು ತಮ್ಮ ವಾಣಿಜ್ಯ ಖಾಯೆಯ ಸಚಿವರಾದ ಸರ್-ಜಫರುಲ್ಲಾಖಾರ ಮೂಲಕ ಭಾರತ ಶಾಸನ ಸಭೆಯಲ್ಲಿ ಮಂಡಿಸಿದರು. ಆ ನಿರ್ಣಯದ ಮೇಲೆ 2 ದಿನಗಳ ಕಾಲ ಚರ್ಚೆ ನಡೆದು, 28ನೇ ಫೆಬ್ರವರಿ ದಿನ ಬಹುಮತದಿಂದ ತಿರಸ್ಕೃತವಾಯಿತು. ನಿರ್ಣಯದ ಪರವಾಗಿ 47 ಸದಸ್ಯರೂ ವಿರೋಧವಾಗಿ 59 ಸದಸ್ಯರೂ ವೋಟುಮಾಡಿದರು. ಮುಸ್ಲಿಂಲೀಗ ಸಕ್ಷದವರು ತಾಟಸ್ಥ್ಯಭಾವವನ್ನು ವಹಿಸಿದ್ದರು.

ಮುಧ್ಯ ಇಂಡಿಯಾ ಸಂಸ್ಥಾನಗಳ ಸಮ್ಮೇಳನವು ಇಂದೂರಿನಲ್ಲಿ ಮಾರ್ಚ್ 31ನೇ ತಾ. ಸೇರಿದ್ದಿತು. ಕಾರ್ಯಕ್ರಮವು ಇನ್ನೂ ಹೊರಬಿದ್ದಿಲ್ಲ

ಯೂರೋಪಿನಲ್ಲಿ ಯುದ್ಧದ ಕಾರ್ಮೋಡಗಳು

ಜರ್ಮನಿಗೆ ಮತಾಯುದ್ಧ ಪೂರ್ವ ಸೇರಿದ್ದ ಡ್ಯಾಂಜಿಗ್ ದ್ವೀಪವನ್ನು ತನಗೆ ಕೊಡಬೇಕೆಂದು ಪೋಲೆಂಡ್ ದೇಶಕ್ಕೆ ಹಿಟ್ಲರನು ಎಚ್ಚರಿಕೆ ಕೊಟ್ಟಿರುವನು. ಬ್ರಿಟ್, ಫ್ರಾನ್ಸ್ ದೇಶಗಳು ಯುದ್ಧಕ್ಕೆ ತಯಾರಿದ್ದಿಲ್ಲವಾದ ಕಾರಣ ಹಿಟ್ಲರನ ಅನ್ಯಾಯ ಅಕ್ರಮಗಳನ್ನೆಲ್ಲಾ ಸಹಿಸಿಕೊಂಡವು. ಈಗ ತಯಾರಾಗುತ್ತಿದ್ದಾರೆ. ಈ ಕಾರಣ ಪೋಲೆಂಡ್ ದೇಶದಮೇಲೆ ದಾಳಿಯಾದರೆ ಯುದ್ಧವಾಗುವ ಸಂಭವವಿದೆ.

ಬಿರುಗಾಳಿಯ ಅನಾಹುತ

ಆಹಾರ ಸಸ್ಯ ಸಂಭವಿಸಿದೆ

[ಜೋಬಾಯ ತ್ರಿನೇ ತಾ]

ಬೆಳಗಿನ ಯಾಮದಲ್ಲಿ ಪಶ್ಚಿಮ ಭಾಗದಲ್ಲಿ ತೀವ್ರವಾದ ಬಿರುಗಾಳಿಯೆದ್ದು (ಮಳೆಸಹಿತ) ಪೈರುಗಳಿಗೂ, ಮರಗಳಿಗೂ, ಮತ್ತು ಮನೆಕರುಗಳಿಗೂ ಅಪಾರ ನಷ್ಟವಾಗಿದೆಯೆಂದು ನಂಬಲಾಗಿದೆ. ಕರಾಚಿ ನಗರಕ್ಕೆರುವ ಟೆಲಿಫೋನ್ ಮತ್ತು ಟೆಲಿಗ್ರಾಫ್ ತಂತಿಗಳು ಕಿತ್ತುಹೋಗಿವೆ. ಕರಾಚಿ ನಗರದೊಡನೆ ತಕ್ಷ ಪತ್ರ ವ್ಯವಹಾರ ನಡೆಸಲು ಸರ್ಕಿಯರ್ ಕೊಲ್ಲಿಯ ಮೂಲಕ ಕೇಬಲ್ ಕಳುಹಿಸುವ ವ್ಯವಸ್ಥೆಯ ಕಾರ್ಯಕ್ರಮಗಳನ್ನು ಆಲೋಚಿಸಲಾಗಿದೆ. ಬಿರುಗಾಳಿಯಿಂದ ಆದ ಅನಾಹುತವೆಷ್ಟೆಂಬುದು ತಿಳಿದಿಲ್ಲ.

29ನೇ ಜೂನ್‌ಗೆ ಮುಂಬೈ ನಗರದಲ್ಲಿ ಮಳೆಬಂದಿತು. ಈಗ ಈರೀತಿಯಲ್ಲಿ ಮಳೆಬರುವುದು ವಿಶೇಷವೇನೂ ಅಲ್ಲ.

ಪರದೇಶ

ಇಟಲಿಯ ಸರ್ವಾಧಿಕಾರಿಯಾದ ಮುಸೋಲಿನಿಯು ರೋಂ ನಗರದಲ್ಲಿ ಭಾಷಣ ಮಾಡುತ್ತಾ "ಜರ್ಮನಿ ಮತ್ತು ಇಟಲೀ ದೇಶಗಳ ಸ್ನೇಹವನ್ನು ಕೆಡಿಸಲು ಅಲ್ಲಲ್ಲಿ ಪ್ರಯತ್ನಗಳಾಗುತ್ತಿರುವವೆಂದೂ, ಸರ್ವಾಧಿಕಾರಿ ರಾಷ್ಟ್ರಗಳನ್ನೆಬ್ಬಿಸಲು ಕೆಲವು ದೇಶಗಳು ಒಟ್ಟಾಗಬೇಕೆಂದೂ ಸನ್ನಾಹನಡೆಸಿವೆ. ನಾವು ಯುದ್ಧಕ್ಕೆ ಸಿದ್ಧರಿದ್ದೇವೆ. ಪ್ರಪಂಚದ ಪ್ರತಿಮೂಲೆಯಲ್ಲೂ ಯುದ್ಧವಾರಂಭಿಸುತ್ತೇವೆ." ಎಂದು ಎಚ್ಚರಿಕೆಯನ್ನಿತ್ತಿರುವನು.

ಸ್ಪೇನಿನ ಬಹು ಭಾಗವು ದಂಗೆಕೋರರ ನಾಯಕನಾದ ಫ್ರಾಂಕೋವಿಗೆ ಸೇರಿದಂತಾಯಿತು. ರಾಜಧಾನಿಯಾದ ಮಾಡ್ರಿಡ್ ನಗರದಲ್ಲಿ ಅವನ ಸೈನಿಕರು ನುಗ್ಗುತ್ತಿರುವರೆಂದು ಈಚೆಗೆ ಬಂದ ಸುದ್ದಿಯಿಂದ ವ್ಯಕ್ತವಾಗಿದೆ.

ಜಪಾನರು ಚೀನ ದೇಶದಲ್ಲಿ ಕಿಯಾಂಗ್ಸಿ ಪ್ರಾಂತದ ರಾಜಧಾನಿಯಾದ ನಾಂಚಂಗ ಪಟ್ಟಣವನ್ನಾಕ್ರಮಿಸಿರುವ ಸುದ್ದಿ ಬಂದಿದೆ.

ಜರ್ಮನಿಯವರಿಗೆ- ಈಗ ಜಪಾನ ವಶದಲ್ಲಿರುವ ಕಿಯಾಚೌ ದ್ವೀಪವು ದೊರಕಬಹುದೆಂದು ಊಹಿಸಲಾಗಿದೆ.

ಹಂಗೇರಿಯಾ-ಸ್ಲೋವೇಕಿಯಾ ಗಡಿನಾಡಿನಲ್ಲಿ ಯುದ್ಧವು ನಿಂತಿದೆ.

ರಾಷ್ಟ್ರೀಯ ವಾರವನ್ನು ಆಚರಿಸಿರಿ.

[ಏಪ್ರಿಲು 6 ರಿಂದ 13 ರ ವರೆಗೆ.]

ಪ್ರತಿವರ್ಷವೂ ಜಾಲಿಯನ್‌ವಾಲಾ ಬಾಗದ ಸ್ಮರಣಾರ್ಥವಾಗಿ ಇಡ್ಯಾ ದೇಶದಲ್ಲಿ ನಡೆಸಲ್ಪಡುತ್ತಿರುವ ಸತ್ಯಾಗ್ರಹವಾರವು ಸಮೀಪಿಸಿದೆ. ಕಾಂಗ್ರೆಸ್‌ನ ನಿರ್ಮಾಣ ಕಾರ್ಯಕ್ರಮವನ್ನು ಕಾಂಗ್ರೆಸ್ ಭಕ್ತರೆಲ್ಲಾ ನಡೆಸಬೇಕು. ಲಕ್ಷಗಟ್ಟಲೆ ಬೆಲೆಯ ಖಾದಿಯನ್ನು ಮಾರಬೇಕು. ಹರಿಜನೋದ್ಧಾರ ಕಾರ್ಯವನ್ನು ಕೈಗೊಳ್ಳಬೇಕು. ಮದ್ಯನಿಷೇಧ ಪ್ರಚಾರವಾಗಬೇಕು. ಗ್ರಾಮೋದ್ಧಾರ ಕಾರ್ಯಗಳ ಮಹತ್ವವನ್ನು ಜನರಿಗೆ ತಿಳಿಸಬೇಕು.

ನವ ಭಾರತ

ಎಸ್.ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ

ಪರಿಶುದ್ಧವಾದ ಭಂಗಾರ ಮತ್ತು ಜೆಲ್ಲಿರು ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲ ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಷ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ಪೆಸ್ಟ್ ಎಂಡ್' ಪಾತ್ರೆಗಳೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದುಸಲ ದಯವಿಟ್ಟು ಬಂದು ಪರೀಕ್ಷಿಸಿರಿ

'Samala Pomade'

[REGD.]

DELIGHTFULY SCENTED

Makes the hair soft smooth. The pleasant & fascinating odour is liked by one and all.

K. V. & Sons, BELLARY.

'ಶಾಮಲ ಪೊಮೇಡು'

(ರಿಜಿಸ್ಟರ್ಡ್)

ಮನೋಹರವಾದ ಸುವಾಸನೆಯುಳ್ಳದ್ದು.

ತಲೆಯಕೂದಲುಗಳ ಶೋಭೆಯನ್ನು ಹೆಚ್ಚಿಸುವದು ಅಲ್ಲದೆ ಮೆದುಳಿಗೆ ಹಿತಕರವಾದ್ದು.

ಕೆ. ವಿ ಅಂಡ್ ಸನ್ಸ್, ಬಳ್ಳಾರಿ.

NAVA BHARAT. BELLARY.

(With which is incorporated 'Congress Bulletin')

The leading Nationalist Weekly.

'ನವ ಭಾರತ' ಬಳ್ಳಾರಿ.

[ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.]

The Rates of Subscription.	ಚಂದಾ ವಿವರ
Annual	ವರ್ಷ
Local 1—8—0	ಸ್ಥಳದವರಿಗೆ 1-8-0
Moffusil 2—0—0	ಪರಸ್ಥಳದವರಿಗೆ 2-0-0
Half Yearly	6 ತಿಂಗಳು
Local 1—0—0	ಸ್ಥಳದವರಿಗೆ 1-0-0
Moffusil 1—4—0	ಪರಸ್ಥಳದವರಿಗೆ 2-0-0

Patent medicines, Tonics, injections
Ayurvedic Preparations &
Oilman stores —Moderate Rates
Trial earnestly solicited.

M. S. V. Bros,

Car Street, **BELLARY.**

ಇಂಗ್ಲೀಷ್ ಔಷಧಗಳು, ಇಂಜೆಕ್ಷನ್ ಮತ್ತು ಇತರ ಆಯುರ್ವೇದೀ ಔಷಧಗಳು, ಸ್ನೇಹನವು ವಗೈರೆ ಸುಲಭ ಬೆಲೆಯಲ್ಲಿ ದೊರೆಯುತ್ತವೆ

ಎಂ. ಯಸ್. ವಿ. ಬ್ರದರ್ಸ್,

ತೇರು ಬೀದಿ, ಬಳ್ಳಾರಿ.



ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವುದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ. ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುಪಾಗುವ ತಂಪು ಕನ್ನಡಕಗಳನ್ನೂ, ಮಲಭದಂದಲ್ಲಿ ವೊರುತ್ತೇವೆ. ಗ್ಯಾರಂಟಿಯೂಡ ಕ್ರೌನ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಅಧುನಿಕ 'ಕಟ್ಟ' (ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವದು.

ಹೆಚ್. ಯಸ್. ಅಂಡ್ ಸನ್ಸ್.

ಬೆಂಗಳೂರು ರೋಡ್ ಬಳ್ಳಾರಿ.

Nava Bharat, Bellary.

REG. NO. M. 3937.

Sri H. M
Bella I Swamy

Printed at Vittal Press, Car Street Edited & Published by T. B. Keshava Rao, BELLARY.

'ನಂದೇ ಮಾತರಂ'



(ಇದರಲ್ಲಿ 'ಕಾಂಗ್ರೆಸ್ ಬುಲೆಟಿನ್' ಸಮಾವೇಶವಾಗಿದೆ)

ಉಜ್ವಲ · ರಾಷ್ಟ್ರೀಯ ವಾರ ಪತ್ರಿಕೆ.

ವಾರ್ಷಿಕ ಪ್ರೋತ್ಸಾಹಕ ದ್ರವ್ಯ
ರಾಷ್ಟ್ರ ಪ್ರೋತ್ಸಾಹಕರು, 10-0-0
ಪ್ರೋತ್ಸಾಹಕರು, 5-0-0

ಸಂಪಾದಕ — ಟಿ. ಬಿ. ಕೇಶವರಾವ್.

ವಾರ್ಷಿಕ ಚಂದಾ
ಪರದೇಶದವರಿಗೆ, 2-0-0
ಬಳ್ಳಾರಿಯವರಿಗೆ, 1-8-0

ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ.

ಸಂಚಿಕೆ ೧ | ಬಳ್ಳಾರಿ. ಏಪ್ರಿಲ್ ೮ನೇ ಶನಿವಾರ ೧೯೨೯. | ಸಂಪುಟ ೧-೧

ರಾಜಕೋಟೆಯ ಸಮಸ್ಯೆ

ಮಹಾತ್ಮ ಗಾಂಧಿಯವರಿಗನುಕೂಲವಾಯಿತು.

ರಾಜಕೋಟೆಯ ಥಾಕೂರ ಸಾಹೇಬರು ತಮ್ಮ ಪ್ರಜೆಗಳಿಗೆ ಕೊಟ್ಟಿದ್ದ ವಾಗ್ದಾನದ ಪ್ರತಿಜ್ಞಾ ಭಂಗ ಮಾಡಿದನೇಲೆ ಮಹಾತ್ಮ ಗಾಂಧಿಯವರ ಉಪವಾಸವನ್ನು ನೆರವೇರಿಸುವುದು ನ್ಯಾಯಾಧೀಶರು ಇದರಲ್ಲಿ ಕೈ ಹಾಕಿ ಈ ವಿಷಯವನ್ನು ಹಿಂದೂಸ್ಥಾನದ ಮುಖ್ಯ ನ್ಯಾಯಾಧೀಶರಾದ ಸರ್ ಮಾರಿಸ್‌ಗ್ವೈಯರ್‌ರವರಿಗೆ ಒಪ್ಪಿಸಿದುದೂ ಎಲ್ಲರಿಗೆ ತಿಳಿದ ಅಂಶವಾಗಿದೆ.

ಈ ವಾರ ಭಾರತ ಮುಖ್ಯ ನ್ಯಾಯಾಧೀಶರು ತಮ್ಮ ತೀರ್ಮಾನವನ್ನು ಹೇಳಿರುತ್ತಾರೆ. ಸರ್ವಾರ್ ಪಟೇಲರು ಹೇಳುವ ಪ್ರಕಾರ ತಾವು ನಿಯಮಿಸುವ ಜನರನ್ನೇ ಥಾಕೋರ್ ಸಾಹೇಬರು ಒಪ್ಪಬೇಕು. ತಮ್ಮ ಬರಹ ಮೂಲಕ ಹೇಳಿಕೆಗಳಿಂದ ಥಾಕೋರ್‌ರು ಈ ವಿಷಯವನ್ನು ಸ್ವೀಕರಿಸಿರುವರು. ಆದ್ದರಿಂದ ಈ ರಾಜ್ಯಾಂಗ ಸುಧಾರಣ ಸಮಿತಿಯಲ್ಲಿ 10ಕ್ಕಿಂತ ಹೆಚ್ಚಿನ ಸದಸ್ಯರು ಇರಕೂಡದು ಆ ಹತ್ತರಲ್ಲಿ ಒಬ್ಬರು ಅಸ್ಪೃಶ್ಯರಾಗಿರಬೇಕು. ಇದರಲ್ಲಿ ಯಾರು ನಾಮಕೆ ವ್ಯೋಹನವಾಗಿ ಪರೆಂಬಂಶಕ್ಕೆ ಹಮ್ಮ ಅಭಿಪ್ರಾಯವನ್ನು ಕೇಳಿಲ್ಲವಾದ್ದರಿಂದ ಆ ವಿಚಾರದ ಬಗ್ಗೆ ತಾವು ಏನೂ ಹೇಳುವುದಿಲ್ಲವೆಂದಿದ್ದಾರೆ. ಸರ್ದಾರ್ ವಲ್ಲಭಭಾಯಿಯವರೂ, ಥಾಕೋರ್ ಸಾಹೇಬರ ಪರವಾಗಿ ಸರ್ವಾರ್ ನೀರವಾಚಾರವರೂ ಮುಖ್ಯನ್ಯಾಯಾಧೀಶರಿಗೆ ತಮ್ಮ ಸಾಕ್ಷ್ಯವನ್ನಿತ್ತುದಲ್ಲದೆ ಸಂಬಂಧಿಸಿದ 'ರಿಕಾರ್ಡು'ಗಳನ್ನು ಕೊಟ್ಟರು.

ರಾಜಕೋಟೆಯಲ್ಲಿ ಮಹದಾನಂದ

ಈ ಸುದ್ದಿಯು ರಾಜಕೋಟೆಗೆ ತಿಳಿದೊಡನೆ ಅಲ್ಲಿಯ ಪ್ರಜೆಗಳು ಸಂತೋಷಭರಿತರಾದರು. ಮಹಾತ್ಮ ಗಾಂಧಿಯವರು ಧೈರ್ಯಂದರನರಿಗೆ ತಾರುಕ್ಕೊಟ್ಟ 'ನಮ್ಮ ಆತಯವು ಸಂಪೂರ್ಣವಾಗಿ ಸ್ವೀಕೃತವಾಯಿತು' ಎಂದಿರುವರು. ಸರೋಜಿನಿದೇವಿಯವರು ಈ ಸುದ್ದಿಯನ್ನು ತೀಪೊಡನೆ ಮಹಾತ್ಮ ಗಾಂಧೀಕೀ ಜೈ ಎಂದು ಜಯಘೋಷಮಾಡಿದರು.

ಗಾಂಧೀ - ವೈಸ್ರಾಯ್ ಸಂಭಾಷಣೆ.

ಮಹಾತ್ಮ ಗಾಂಧಿಯವರು 1ನೇ ತಾ. ಸಾಯಂಕಾಲ ಸುಮಾರು ವಂಡಾನವರ ಸಂಗಿಯವರಿಗೆ ವೈಸ್ರಾಯರನ್ನೊಡನೆ ಸಂಭಾಷಿಸಿದರು. ಏಪ್ರಿಲ್ 20 ರಿಂದ 27ರ ವರೆಗೆ ಬೀಹಾರ್ ದೇಶದ ಬೃಂದಾವನದಲ್ಲಿ ನಡೆಯುವ 'ಗಾಂಧೀ ಸೇವಾ ಸಂಘದ ಸಭೆಗೆ ಪ್ರಾಜರಾಗಲು ಇಷ್ಟರಲ್ಲೇ ಹೊರಡಲಿರುವರು. 16ನೇ ತಾ. ಸಾಧ್ಯಾ ವಿದ್ಯಾಪೀಠದ ಸಭೆಯ ಅಧ್ಯಕ್ಷತೆಯನ್ನು ವಹಿಸಲಿರುವರು.

ಗಾಂಧಿ ಸೇವಾ ಸಂಘ.

ಈ ಸಭೆಯು ಬೀಹಾರಿನಲ್ಲಿ ಕೊಡಬೇಕಿತ್ತು. ಪ್ಲೇಗ್ ಜಾಡ್ಯದಕಾರಣ,ಅದು ಮುಂದು ಹಾಕಲ್ಪಟ್ಟಿದೆ. ಮಹಾತ್ಮ ಗಾಂಧಿಯವರ ಕಾರ್ಯಕ್ರಮವು ತಿಳಿಯುಬಂದಿಲ್ಲ.

ರಾಷ್ಟ್ರೀಯ ಸಾರವನ್ನು ಸಡಿಸಲು ಕಾಂಗ್ರೆಸ್ ಅಧ್ಯಕ್ಷರು ಸ್ವಾಧೀನಿಸಿಕೊಂಡಿರುವರು.

ಬಳ್ಳಾರಿ ಜಿಲ್ಲೆಗೆ ಇಬ್ಬರು ಹಿಂದೀ ಉಪಾಧ್ಯಾಯರು ಬೇಕು

1939 - 40 ರಲ್ಲಿ ಜಂದರೆ ಜೂನ್ ತಿಂಗಳ ಪ್ರಾರಂಭದಿಂದ ರಾಯದುರ್ಗ ಮತ್ತು ಹರಪನಹಳ್ಳಿ ಹೈಸ್ಕೂಲುಗಳಲ್ಲಿ ಹಿಂದೀ ವರ್ಗಗಳು ಪ್ರಾರಂಭವಾಗಲಿವೆ. ಉಪಾಧ್ಯಾಯರು ಕನಿಷ್ಟಪಕ್ಷ S S. L. C. ಪರೀಕ್ಷೆ ಮತ್ತು ಹಿಂದೀ ವಿಶಾರದ ಅಥವಾ ವಿದ್ವಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. ಮಾಸಿಕವೇತನವು 30 ರೂಪಾಯಿವುದು ಬಳ್ಳಾರಿ ಜಿಲ್ಲೆಯವರಿಗೆ, ಕನ್ನಡ-ತೆಲುಗು ತಿಳಿದವರಿಗೆ ಸ್ವಾಶಸ್ತ್ಯವು ಕೊಡಲಾಗುವುದು ಅರ್ಜಿದಾರರು ಜಿಲ್ಲಾ ಬೋರ್ಡು ಅಧ್ಯಕ್ಷರಿಗೂ, ಎಜ್ಯುಕೇಶನಲ್ ಆಫೀಸರವರಿಗೂ ಅರ್ಜಿ ಹಾಕಿಕೊಂಡು ಈ ಕೆಳಗೆ ಕಾಣಿಸಿದವರಿಗೆ ಒಂದು ಕಾಗದ ಕಳುಹಿಸಬೇಕು.

ಟಿ. ಪಿ. ಕೇಶವರಾವ್,
ಕಾರ್ಯದರ್ಶಿ
ಜಿಲ್ಲಾ ಹಿಂದೀ ಪ್ರೇಮೀ ಮಂಡಲಿ,
ಬಳ್ಳಾರಿ.

ಹರಪನಹಳ್ಳಿಯಲ್ಲಿ ಸುವರ್ಣ ಮಹೋತ್ಸವ

ಶ್ರೀ ಪಿ. ಜೆ. ಸ್ಟಾರ್ಕಿಯವರಿಂದ ಪ್ರಾರಂಭ

ಬರುವ-ಮೇ ತಿಂಗಳ 13-14-15 ನೇ ತಾ, ಗಳಲ್ಲಿ ಹರಪನಹಳ್ಳಿ ಬೋರ್ಡು ಹೈಸ್ಕೂಲಿನ ಸುವರ್ಣ ಮಹೋತ್ಸವವು ನೆರವೇರುವುದೆಂದು ಖಚಿತವಾಗಿ ತಿಳಿದುಬಂದಿದೆ. ವಿದ್ಯಾಖಾತೆಯ ಮಂತ್ರಿಗಳಾದ ಶ್ರೀ ಪಿ. ಜಿ. ವಾರ್ಕಿಯವರು 13ನೇ. ತಾ, ಪ್ರಾರಂಭೋತ್ಸವನನ್ನು ನೆರವೇರಿಸಲಿರುವರು. ವಿವರವಾದ ಕಾರ್ಯಕ್ರಮವು ಮುಂದೆ ಪ್ರಕಟವಾಗುವುದು.

ಹಂಪಿಯಲ್ಲಿ ವಿರುಪಾಕ್ಷೇಶ್ವರಸ್ವಾಮಿ ರಥೋತ್ಸವ

ಹಂಪಿಯ ರಥೋತ್ಸವವು (1—4—39 ನೇ ಮಂಗಳವಾರ) ಅತಿ ವಿಜೃಂಭಣೆಯಿಂದ ನೆರವೇರಿತು. ಈ ವರ್ಷ ಸುತ್ತಲೆ ಜಿಲ್ಲೆಗಳು, ವಿಶೇಷವಾಗಿ ಕಾರಣ ಜನವು ವಿಶೇಷವಾಗಿ ಕಲೆತಿದ್ದರು. ಸುಮಾರು 50 ಸಾವಿರದವರೆಗೂ ಜನ ಸಂಖ್ಯೆ ಇದ್ದಿತೆಂದು ಅಂದಾಜುಮಾಡಲಾಗಿದೆ. ಆನೆಗುಂದಿ ರಾಜರು, ಸಮಸ್ತ ರಾಜನೈಭವದೊಡನೆ ಸುವರ್ಣಾಯುಕ್ತ ಪಾಲಕಿಯಲ್ಲಿ ದಯಮಾಡಿಸಿದೊಡನೆ, ದೇವಸ್ಥಾನದ ಧರ್ಮಕರ್ತರು ಅವರಿಗೆ ರಾಜಯೋಗ್ಯ ಸಮಾನಮಾಡಿ ಹಾರತುರಾಯಿಗಳನ್ನು ಸಮರ್ಪಿಸಿದರು. ಸಂತರ ಜಿಲ್ಲಾ ಬೋರ್ಡ ಅಧ್ಯಕ್ಷ ಮುಂತಾದ ಪ್ರಮುಖರ ಪರಿಚಯವಾಯಿತು. ಹವನ ಹೋಮ ವಿಧಿಗಳಾದನಂತರ ರಥವನ್ನೆಳೆಯುವ ಶುಭಕಾರ್ಯವು ರಾಜರ ಉನ್ನತ ಹಸ್ತದಿಂದ ನೆರವೇರಿತು. ಈ ವರ್ಷ ಯಾವ ಅನಾಯಗಳೇ ಆಗಲಿ, ಅನಿರೀಕ್ಷಿತಘಟನೆಗಳಾಗಲಿ ಸಂಭವಿಸಲಿಲ್ಲ. ಆರೋಗ್ಯ ಖಾಖೆಯ ಅಧಿಕಾರಿಗಳು ಒಂದು ಪ್ರದರ್ಶನವನ್ನೇರ್ಪಡಿಸಿದ್ದರು. ಈ ವರ್ಷ ಆರೋಗ್ಯಖಾತೆಯವರ ಏರ್ಪಾಟುಗಳು ತೃಪ್ತಿಕರವಾಗಿದ್ದವು

ಬನ್ನಿಕಲ್ಲಿನಲ್ಲಿ ಬೆಂಕಿ ಅನಾಹುತ

2ನೇ ತಾ, ಭಾನುವಾರ ರಾತ್ರಿ ಹರಿಜನರಕೇರಿಗೆ ಬೆಂಕಿಬಿದ್ದು ಸುಮಾರು 20-25 ಗುಡಿಸಿಲುಗಳು ಭಸ್ಮೀಭೂತವಾಗಿವೆ. ಅವರಿಗೆ ನಿಲ್ಲಲು ಸ್ಥಳವಿಲ್ಲ. ತಿನ್ನಲುಗ್ರಾಸವಿಲ್ಲ. ದಾನಿಗಳಾದ ಮಹಾಶಯರು ಬಡವರಮೇಲೆ ಲಕ್ಷ್ಯವಿಟ್ಟು ಅವರಿಗೆ ಧನ ಧಾನ್ಯರೂಪದಿಂದ ಸಹಾಯಮಾಡಲು ಕೋರುತ್ತೇನೆ — ಹೀಗೆಂಬುದಾಗಿ ತುಂಬ್ರಹಳ್ಳಿ ಕಾಂಗ್ರೆಸ್ ಕಾರ್ಯಾಧ್ಯಕ್ಷರಿಗಳಾದ ಶ್ರೀ ಪಂಪಾಪತಿಯವರು ಬರೆಯುತ್ತಾರೆ. ಸಹಾಯದ್ರವ್ಯವನ್ನು ತುಂಬ್ರಹಳ್ಳಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಜಿ. ವೀರಪ್ಪನವರಿಗೆ ಕಳುಹಿಸಲು ಕೋರಲಾಗಿದೆ. (ಪ್ರವಾಹ-ಬೆಂಕಿ ಅಂಟು ಜಾಡ್ಯ-ಬಿರುಗಾಳಿ ಮಗೈರೆಗಳಿಂದ ಸಂಭವಿಸುವ ಆಕಸ್ಮಿಕ ಅನಾಹುತಗಳಿಗೆ ಸರಕಾರದವರು ಹಣ ತೆಗೆದಿಟ್ಟಿರುವರು. ಹಡಗಲಿ ತಹಶೀಲ್ದಾರ್‌ರವರಿಗೆ ಈವಿಷಯ ತಿಳಿಸಿ ಕೊಡಲೇ ಸಹಾಯ ಪಡೆಯಬೇಕು)

ಸಂಪಾದಕ.

ಕನ್ನಡ ಭಗವದ್ಗೀತೆ ಕುಸುಮ ಪಟ್ಟಿದಿ.

(ಬೆಲೆ ೦-೧೨-೦)

ಲೇಖಕ:- **ಯಂ. ಯಸ್. ಸುಬ್ಬಣ್ಣ**
ಸಿಗುವ ಸ್ಥಳ:- ಕಾಲುವ ಸುಬ್ಬಣ್ಣ
ವರ್ತಕ, ಬಳ್ಳಾರಿ.

ಗೀತೆಯು ಪ ಪಂಜದ ಅನೇಕ ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿದೆ. ಸಂಸ್ಕೃತದ ಮೂಲ ಅರ್ಥಕ್ಕೆ ಕೊರತೆ ಬರದಂತೆ ಅನುವಾದಕರು ತಮ್ಮ ತಮ್ಮ ಜೀವ ಭಾಷೆಗಳಲ್ಲಿ ಅನುವಾದಿಸಿರುವರು. ಕುಸುಮ ಪಟ್ಟದಿಯಲ್ಲಿ ಕನ್ನಡೀಕರಿಸಲ್ಪಟ್ಟ ಗ್ರಂಥವು ಇದೇ ಪ್ರಥಮವೆಂದಾಗಿದೆ. ಕನ್ನಡಿಗರು ಶ್ರೀ ಸುಬ್ಬಣ್ಣನವರಿಗೆ ಚಿರಋಣಿಗಳಾಗಬೇಕಾಗಿದೆ ಇವರ ಶೈಲಿಯು ಸ್ವಮನೋಹರವಾಗಿದೆ. ಪದ್ಯಗಳು ಸರಳ ಮತ್ತು ಪ್ರಚಲಿತ ಕನ್ನಡ ಶಬ್ದಗಳಿಂದ ತುಂಬಿರುವುದರಿಂದ ಕನ್ನಡ ಭಾಷೆಯ ಸಾಮಾನ್ಯ ಜ್ಞಾನಿಗಳಿಗೂ ಇದರ ಅರ್ಥವಾಗುವುದು. ಮೂಲ ಸಂಸ್ಕೃತ ಶ್ಲೋಕಗಳಿಗೆ ಅಲ್ಲಲ್ಲಿ ಹೋಲಿಸಿ ನೋಡಲಾಗಿ ಅಪಾರ್ಥವೆಲ್ಲಿಯೂ ದೊರೆಯಲಿಲ್ಲ. ಶ್ರೀ ಸುಬ್ಬಣ್ಣನವರು ಗ್ರಂಥರಚನೆಗಾಗಿ ಬಹು ಶ್ರಮಪಟ್ಟಿರುವುದು ಗ್ರಂಥವನ್ನವಲೋಕಿಸಿದವರಿಗೆ ಸ್ಪಷ್ಟವಾಗದಿರದು. ಕನ್ನಡಿಗರೆಲ್ಲರೂ ಇದನ್ನು ಕ್ರೀಯಾತ್ಮಕಿಸಲು ಕೋರುತ್ತೇವೆ.

ಟಿ. ಬಿ. ಕೇ.

ನವ ಭಾರತ

ಶನಿವಾರ ಏಪ್ರಿಲ್ 8, 1939.

ರಾಜಕೋಟೆಯ ವಿಜಯ.

ರಾಜಕೋಟೆಯಲ್ಲಿ ಮಹಾತ್ಮಗಾಂಧಿಯವರಿಗೆ ದೊರೆತ ವಿಜಯವು ಸಂಸ್ಥಾನಾಧೀಶ್ವರರ ಕಣ್ಣು ತೆರೆಸುವುದೆ. ತಮ್ಮ ಪ್ರಜೆಗಳನ್ನು ಎಷ್ಟುಕಾಲ ದಬ್ಬಾಳಿಕೆಯಲ್ಲಡಬಲ್ಲರು? ರಾಜಕೋಟೆಯ ದಿವಾನರಾದ ದರ್ಬಾರ್ ವೀರವಲ್ಲ ತ್ರಿವಾಂಕೂರು ದಿವಾನರಾದ ಸರ್ ಶಿ. ಪಿ. ರಾಮಸ್ವಾಮಿ ಯಂ ಘನರಿಂದ ದೇಶಕ್ಕೂ ಸಂಸ್ಥಾನಾಧೀಶ್ವರರಿಗೂ ಹಿತವಾಗಲಾರದೆಂದು ಮಹಾತ್ಮ ಗಾಂಧಿಯವರು ಎಚ್ಚರಿಸಿರುವರು. ಇಂಥಹ ವೀರವಲ್ಲರು ಇನ್ನೂ ಅನೇಕರಿರುವರು! ಪ್ರಜೆಗಳಿಗೆ ಜವಾಬ್ದಾರರಾದ ಮಂತ್ರಿಗಳು ಸ್ಥಾನಾರೂಢರಾಗುವವರೆಗೆ ಯಾವಸಂಸ್ಥಾನದಲ್ಲಿಯೂ ಸುಧಾರಣೆ ಯಾಗಲಾರದು.

ವಿವಿಧ ಸಂಸ್ಥಾನಗಳಲ್ಲಿ ಸುಧಾರಣಾ ಸಮಿತಿಗಳು ನಿರ್ಮಿತವಾಗಿವೆ. ಎಲ್ಲೆಲ್ಲಿ ಯಾವತರದ ಅಧಿಕಾರವು ಜಾರಿಯಲ್ಲಿ ಬರುವುದೆಂಬುವನ್ನು ಕಾಣಬೇಕಾಗಿದೆ. ರಾಜಕೋಟೆಯು ಉದಾಹರಣೆಯಿಂದ ಸಂಸ್ಥಾನಾಧೀಶರೂ ಅವರ ಸಲಹೆಗಾರರೂ ಬುದ್ಧಿಕಲಿತರೆ ಅವರಿಗೂ ಶ್ರೇಯಸ್ಸು ಸಂಸ್ಥಾನ ಪ್ರಜೆಗಳಿಗೂ ಸುಖವು ಲಭ್ಯವಾಗುವುದು

★

ಕಾಂಗ್ರೆಸ್ ಸಮಾಚಾರಗಳು

ಶ್ರೀ ಸುಭಾಷಚಂದ್ರಬೋಸರು

ಜಾರಿಯಾದಲ್ಲಿ ಗುಣಹೊಂದುತ್ತಲಿರುವರು ಅವರ ಅಸ್ವಸ್ಥತೆಯಿಂದ ಗಾಂಧೀಜಿಯವರನ್ನು ನೋಡಲಾಗಲಿಲ್ಲ. ಪತ್ರವ್ಯವಹಾರವು ನಡೆಯುತ್ತಲಿದೆ. ತ್ರಿಪುರಿಯಲ್ಲಿ ನಾಸಾಪ ಪಂಡಿತ ಪಂತರ ನಿರ್ಣಯದಂತೆ ಸುಭಾಸರು ನಡೆದುಕೊಳ್ಳುವರೋ ಇಲ್ಲವೋ ಎಂಬ ಬಗ್ಗೆ ಸಂಶಯಗಳುತ್ಪನ್ನವಾಗಿವೆ. ವೃತ್ತಪತ್ರಗಳಲ್ಲಿ ಪ್ರಸಿದ್ಧವಾದ ಈಸುದ್ದಿಗಳನ್ನು ಖಂಡಿಸಿ ಈ ನಿರ್ಣಯಕ್ಕೆ ತಾವು ಬದ್ಧರಿರುವರೆಂದು ಸುಭಾಸರು ಪ್ರಕಟಿಸಿರುವರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಈ ತಿಂಗಳ 28ನೇ ತಾ, ನ ದಿನ ಕಲ್ಕತ್ತೆಯಲ್ಲಿ ಕೂಡುವುದೆಂದು ಅಧಿಕೃತವಾಗಿ ಪ್ರಕಟವಾಗಿದೆ.

ಹೈದರಾಬಾದ್ ಸತ್ಯಾಗ್ರಹದ ಭೀಕರ ಸ್ವರೂಪ

ಹಿಂದೂದೇಶದ ಎಲ್ಲಾ ಭಾಗಗಳಿಂದಲೂ ಹೈದರಾಬಾದಿನಲ್ಲಿ ಸತ್ಯಾಗ್ರಹವನ್ನು ಹೂಡಲು ಆರ್ಯಸಮಾಜಿಗಳು ಮುಂಬೆ ಬರುತ್ತಲಿರುವರು. ಇವರಿಗೆ ಸೋಲಾಪುರವೇ ಮುಖ್ಯ ಕೇಂದ್ರ ಜಿಲ್ಲೆಯಿಂದ ತಂಡತಂಡವಾಗಿ ಗುಲ್ಬರ್ಗದ ಮುಖಾಂತರ ಪ್ರವೇಶಿಸುವರು. ಹಿಂದೂಗಳ ಧಾರ್ಮಿಕ ಹಕ್ಕುಗಳನ್ನು ಸರಕಾರದವರು ದಯಪಾಲಿಸುವಂತಿಲ್ಲ. ಅಲ್ಲದೆ ಈ ಬಗ್ಗೆ ಆರ್ಯಸಮಾಜದವರಿಗೆ ಭರವಸೆಕೊಡುವಂತಿಲ್ಲ. ಅಂತರಾಷ್ಟ್ರೀಯ ಆರ್ಯಲೀಗಿನ ಕಾರ್ಯಕಾರಿಣೀ ಸಮಿತಿಯು 6 ನೇ ತಾ ಪರಿಸ್ಥಿತಿಯನ್ನು ವಿಮರ್ಶಿಸಿ ಮುಂದಿನ ಕಾರ್ಯಮಾರ್ಗವನ್ನು ನಿರ್ಧರಿಸಿತು.

ಇರಾಕ್‌ದೇಶದಲ್ಲಿ ರಾಯಭಾರಿಗಳ ಕೊಲೆ

ಇರಾಕಿನ ಫಾಜಿ ದೊರೆಗಳು ಮೋಟಾರು ಅನಾಹುತಕ್ಕೊಳಗಾಗಿ ಸತ್ತರೆಂದು ಪ್ರಕಟವಾಗಿದೆ. ಸುಳ್ಳು ಸುದ್ದಿಗಳು ಹಬ್ಬಿದಕಾರಣ ಪ್ರಜೆಗಳು ಅವೇಶರಾಗಿ ಬ್ರಿಟಿಶ ರಾಯಭಾರಿಯನ್ನು ಕೊಂದುಅವರ ಕಛೇರಿಗೆ ಬೆಂಕಿಹಚ್ಚಿದರು. ಫಾಜಿಗಳ 3 ವರ್ಷದ ಮಗನು ಪಟ್ಟಕ್ಕೇರಿಸಲ್ಪಟ್ಟಿರುವನು.

ಯುದ್ಧವಾದರೆ

ಬೆಹಲಿ ಕೇಂದ್ರ ಸರಕಾರಕ್ಕೆ ವಿಶೇಷಾಧಿಕಾರ.

ಯೂರೋಪಿನಲ್ಲಿ ಯುದ್ಧ ಪರಿಸ್ಥಿತಿ ಇರುವುದರಿಂದ ಪ್ರಾಂತೀಯ ಸರಕಾರಕ್ಕಿರುವ ಕೆಲ ಅಧಿಕಾರಗಳನ್ನು ಕೇಂದ್ರಸರಕಾರಕ್ಕೆ ಕೊಡಲು ಇಂಡಿಯಾ ಆಕ್ಟ್‌ನಲ್ಲಿ ಬದಲಾವಣೆ ಮಾಡಬೇಕೆಂಬ ತಿದ್ದುಪಡಿಯನ್ನು ಭಾರತ ಮಂತ್ರಿಗಳಾದ ಜಟ್ಲಂಡರವರು ಬ್ರಿಟಿಶ ಕಾಮನ್ಸ್‌ಸಭೆಯಲ್ಲಿ ಒಂದು ಮಸೂದೆಯನ್ನು ತಂದಿರುತ್ತಾರೆ. ಇದರಿಂದ ಇಂಗ್ಲೆಂಡಿಗೆ ಗಂಡಾಂತರವದಗಿದಾಗ ಪ್ರಾಂತಗಳನ್ನು ಕೇಳದೆ ಕೇಂದ್ರದವರು ಪ್ರಾಂತಗಳಿಗೆ ಸಂಬಂಧ ವಿಷಯಗಳನ್ನೂ ಸಹ ಚರ್ಚಿಸಿ ನಿರ್ಣಯಕ್ಕೆ ಬರಬಹುದು.

ಶ್ರೀ ಯಸ್. ಕೆ. ಭೀಮಶೇನ ರಾಯರ ನಿಧನ

ಸಿರುಗುಪ್ಪೆಯ ಪ್ರಮುಖ ಜಮೀನ್ದಾರರಾದ ಶ್ರೀ ಯಸ್. ಕೆ. ಭೀಮಶೇನರಾಯರು 4ನೇ ತಾ, ಮೈಸೂರು ನಗರದಲ್ಲಿ ಸ್ವರ್ಗಸ್ಥರಾದರೆಂದು ತಿಳುಹಿಸಲು ವಿಷಾದಿಸುತ್ತೇವೆ. ಇವರು ಸಿರುಗುಪ್ಪೆಯ ಎಲ್ಲಾ ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. ಕಾಂಗ್ರೆಸ್ಸಿನ ಪರವಾಗಿ ಸರ್ವದಾ ವರ್ತಿಸುತ್ತಾ ಜನತೆಯ ಪ್ರೇಮಾದರಗಳಿಗೆ ಪಾತ್ರರಾಗಿದ್ದರು. ಇವರ ಮರಣದಿಂದ ಸಿರುಗುಪ್ಪೆಯ ಸಾರ್ವಜನಿಕ ಮುಖಂಡರೊಬ್ಬರು ಕಣ್ಮರೆಯಾದಂತಾಯಿತು. ಅಂತ್ಯಕಾಲಕ್ಕೆ ಇವರ ವಯಸ್ಸು 48 ಇದ್ದು ಪತ್ನಿ ಮತ್ತು 4 ಮಕ್ಕಳನ್ನು ಬಿಟ್ಟು ಹೋಗಿರುತ್ತಾರೆ. ದೇವರು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಹೊಳಲಗುಂದಿ

[ನಮ್ಮ ಸುದ್ದಿಗಾರರಿಂದ]

ಬಣವೆಗಳಿಗೆ ಬೆಂಕಿ:-

1ನೇ ತಾ, ಶನಿವಾರ ರಾತ್ರಿ ಸುಮಾರು 11 ಬಣವೆಗಳಿಗೆ ಬೆಂಕಿ ತಗಲಿ ಮುಲ್ಲು ಸೊಪ್ಪೆಯಲ್ಲಾ ಭಸ್ಮವಾಗಿ ಸುಟ್ಟು ಹೋಯಿತು. ಪರ್ವತ ಪ್ರೀಮಿಯೋನಾದಿಯಲ್ಲಿದ್ದ ಈ ಬೆಂಕಿಯನ್ನಾರಿಸಲಿಕ್ಕೆ ಸಾಧಿಸಾರು ರೈತರು ಪ್ರಯತ್ನಪಟ್ಟರೂ ನಿರರ್ಥಕವಾಯಿತು. ಅನೇಕ ವರ್ಷಗಳಿಂದ ಕ್ಷಾಮ ಸಂತಪ್ತರಾಗಿ ಈ ವರ್ಷ ಒಳ್ಳೆಯ ಬೆಳೆಯನ್ನು ಹೊಂದಿದ ರೈತರು ಮೇಪನ ಕ್ಷಾಮಕ್ಕೆ ಎಡವಾಗಬೇಕಾಯಿತು. ಸುಮಾರು ೫00 ರೂ. ನಷ್ಟವಾಗಿರಬಹುದೆಂದು ಅಂದಾಜು ಮಾಡಲಾಗಿದೆ. ಈ ಕೃತ್ಯವು ತುಂಟರಿಂದ ನಡೆದಿರಬಹುದೆಂದು ಊಹಿಸಲಾಗಿದೆ.

ಹರಿಜನರು ಮತ್ತು ಇತರ ಬಡವರು

ಇವರ ಕುಂದು ಕೊರತೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದು ತಕ್ಕ ಪರಿಹಾರವನ್ನು ಕೊಡಿಸಲು ಪಂಚಾಯಿತಿ ಬೋರ್ಡು ಅಧ್ಯಕ್ಷರಾದ ಶ್ರೀ ರಾಘವೇಂದ್ರಾಚಾರ್ಯರು ಸ್ಪಯತ್ನಿಸುತ್ತಿರುವರು. ಹರಿಜನ ಕಾರ್ಯಸಮಿತಿಗಳನ್ನೂ, ಜಿಲ್ಲಾ ಬೋರ್ಡು ಅಧ್ಯಕ್ಷರನ್ನೂ ಕರೆಸಿಕೊಂಡು ಅವರ ಗಮನಕ್ಕೆ ಎಲ್ಲಾ ಕುಂದುಕೊರತೆಗಳನ್ನೂ ತಂದು ಪರಿಹಾರಕ್ಕೆ ಪ್ರಯತ್ನಿಸುತ್ತಿರುವರು. ಇವರ ಕಾರ್ಯದಲ್ಲಿ ಎಲ್ಲರೂ ಸಹಕಾರ ನೀಡುತ್ತಿರುವರು. ಪಂಚಾಯ್ತಿ ಬೋರ್ಡು ಇವರ ಕಾಲದಲ್ಲಿ ಅಭಿವೃದ್ಧಿ ಹೊಂದುವುದೆಂದು ಆಶಿಸಲಾಗಿದೆ.

ಹರಪನಹಳ್ಳಿಯಲ್ಲಿ

ಶ್ರೀರಾಮ ನವಮಿ ಉತ್ಸವ.

ಇದೇ ಪ್ರಮಾದಿ ಸಂವತ್ಸರ ಚೈತ್ರ ಶುದ್ಧ ಪ್ರತಿಪದ 22-3-39 ನೇ ತೀವಿಯಿಂದ 29-3-39ನೇ ತೀ ದಿನದರಿಗೂ ಇದೇ ಗ್ರಾಮದಲ್ಲಿ ಯಿರುವ ಶ್ರೀಮಾ ದಂಡಿನ ಕೃಷ್ಣರಾವು ಇವರ ಶ್ರೀರಾಮ ಮಂದಿರದಲ್ಲಿ ಪ್ರತಿದಿನವೂ ಶ್ರೀರಾಮ ಭಜನ ಜರಿಗಿದುದಲ್ಲದೆ ತಾ, 28-29 ಈ ಯರಡು ದಿನಗಳಲ್ಲಿ ಸ್ಯೆಸೂರು ಆಸ್ಥಾನ ಸಂಗೀತ ವಿದ್ವಾನ್ ಶ್ರೀಮದ್ ದೇವೇಂದ್ರಪ್ಪನವರ ಶಿಷ್ಯರಾದ ಸೊರಟೂರು ಭೀಮಸೇನ ಆಚಾರ್ಯರವರ ಪಿಟೀಲು ಕಚೇರಿಯು ಮತ್ತು ಬಾಯಿ ಹಾಡಿಕೆ ಇವು ಎರಡು ಸಭಿಕರನ್ನು ಬಹಳ ಆನಂದಗೊಳಿಸಿದವು. ಈ ವಿಶೇಷ ಆನಂದದಿಂದ ಇದೇ ಗ್ರಾಮದ ಪುರ ಜನರೆಲ್ಲರೂ ತೀರಿ 30—3—39ನೇ ತೇದಿ ಬಿಂದು ಬಹಿರಂಗ ಸಾತಕಳೇರಿ ಮಾಡಿಸಿ ಆಚಾರ್ಯರವರನ್ನು ಗೌರವಿಸಿದರು.

ಸಾದರ ಸ್ವೀಕಾರ ವಿಮರ್ಶೆ

ಶಿಕ್ಷಕ ಮಿತ್ರ (ಮಾಸಿಕ ಪತ್ರಿಕೆ)
ವಾರ್ಷಿಕ ಚಂದಾ 2 0-0
ಸಂಪಾದಕರು,
ಜೋಶಿ ಅರವಿಂದರಾಯರು.

ಈ ಎಣ್ಣೆಯು, ಬಾಣಂತಿಯರಿಗೂ, ರಕ್ತವಿಲ್ಲದವರಿಗೂ, ಕೈಕಾಲು ಬಾತಿರುವವರಿಗೂ, ದೇಹಪುಷ್ಟಿಗೂ, ಉಪಯೋಗಿಸಲ್ಪಡುತ್ತದೆ. ಇದನ್ನು ಬಳಸಿರುವವರಲ್ಲನೇಕರು ರೋಗಮುಕ್ತರಾಗಿದ್ದೇವೆಂದು ತಾವುತಿಳಿಸುಕೊಂಡಿರುತ್ತಾರೆ. ಇದರಲ್ಲಿ ಕೊಬ್ಬಿನ ಭಾಗವು ವಿಶೇಷವಾಗಿರುವುದರಿಂದ ರೋಗನಾಶ ಮಾಡುವ ಗುಣವು ಇದರಲ್ಲಿ ಕಡಮೆ ಇದ್ದರೂ, ಇದನ್ನು ತೆಗೆದುಕೊಂಡವರು ಸ್ಥೂಲಕಾಯರಾಗುತ್ತಿರುವುದು ಅನೇಕರ ಗೋಚರಕ್ಕೆ ಬರುತ್ತಲಿದೆ. ಇದರ ಸೇವನದಿಂದ ರಕ್ತವಲ್ಲಿರುವ, ಮುಖ್ಯವಾದ ಕೆಲವು ಕಣಗಳೂ ತಮ್ಮ ತೀಕ್ಷ್ಣತೆಯನ್ನು ಕಳೆದುಕೊಂಡು ಪುನಃ ರೋಗಬಂದರೆ ವಾಸಿಯಾಗುವುದೇ ದುರ್ಲಭವೆಂದು ಅನೇಕ ಪಾಶ್ಚಿಮಾತ್ಯ ವೈದ್ಯರು ಅಭಿಪ್ರಾಯಪಟ್ಟಿದ್ದಾರೆ. ಲಂಡನ್ ಶಾಯಿಹಾರ ಸಂಘದ ಅಧ್ಯಕ್ಷರಾದ ಮ. ಬಿ. ಪಿ. ಅಲೀಸರ ಎಂಬುನವರು ಈ ಎಣ್ಣೆಯ ವಿಷಯದಲ್ಲಿ ಬಹಳ ಯುಕ್ತಿಯುಕ್ತವಾದ ಲೇಖನವನ್ನು ಬರೆದಿರುತ್ತಾರೆ. ಅವರ ಮತ್ತು ಇತರ ಶಾಸ್ತ್ರಜ್ಞರ ಅಭಿಪ್ರಾಯದಂತೆ ಈ ಎಣ್ಣೆಯ ಸೇವನದಿಂದ ಶರೀರದ ಪುಷ್ಟಾಣಗಳು ಕೆಲಸಕ್ಕೆ ಬಾರದಂತಾಗುತ್ತವೆ. ಯೂರೋಪಿನ ಮಹಾಯುದ್ಧದ ಸ್ವಲ್ಪ ಮುಂಚಿನಿಂದಲೂ ಪಾಶ್ಚಿಮಾತ್ಯ ವೈದ್ಯರು ರಕ್ತಪುಷ್ಟಿಗೂ, ಶರೀರ ದಾರಢ್ಯಕ್ಕೂ ಸಾಧಕವಾದ ಪುಷ್ಟಾಣುಗಳನ್ನು (Vitamins) ಕಂಡು ಹಿಡಿಯುವದರಲ್ಲಿಯೇ ತೊಡಗಿದ್ದಾರೆ.

ಇದರ ತಯಾರಿ

ಪಾಶ್ಚಿಮಾತ್ಯ ದೇಶದ ಕೆಲವು ಉತ್ತರ ಸಮುದ್ರಗಳಲ್ಲಿ ನೀರಿನ ಮೇಲ್ಬಾಗವು 'ಅಲ್ಗೆ' (Algav) ಎಂಬ ಗಿಡಗಳಿಂದ ಆವೃತವಾಗಿದೆ. ಈ ಗಿಡಗಳಲ್ಲಿ 'ವಿಟುಮಿ.ಡಿ' ಎಂಬ ಪುಷ್ಟಾಣುವು ಸೂಕ್ಷ್ಮರೂಪದಲ್ಲಿದೆಯೆಂದು ಶಾಸ್ತ್ರಜ್ಞರ ಅಭಿಪ್ರಾಯ. 'ಇನ್‌ಫುಸೂರಿಯ" (Infasoria) ಎಂಬ ಜಲವಾಸಿ ಕ್ರಿಮಿವರ್ಗವು ಸದರಿ ಪುಷ್ಟಾಣುಗಳನ್ನು ತನ್ನ ಪೋಷಣೆಗೆ ಆಕರ್ಷಿಸುವುದು. ಸಣ್ಣ ಮೀನುಗಳು ಈ ಕ್ರಿಮಿವರ್ಗವನ್ನು ತಿಂದು ಬಿಡುತ್ತವೆ. ಈ ಸಣ್ಣ ಮೀನುಗಳನ್ನು, ದೊಡ್ಡ ಮೀನುಗಳೂ ದೊಡ್ಡ ಮೀನುಗಳನ್ನು ಮೊಸಳೆಯಂತಿರುವ 'ಕಾಡ್'(Cod) ಎಂಬ ಅತಿ ದೊಡ್ಡ ಮೀನುಗಳು ನುಂಗಿಬಿಡುತ್ತವೆ. ಈ ರೀತಿಯಲ್ಲಿ ಒಂದು ಪ್ರಾಣಿಯಿಂದ ಮತ್ತೊಂದು ಪ್ರಾಣಿಗೆ ಪುಷ್ಟಾಣುವು ಸಾಗಿ ಕೊನೆಯಲ್ಲಿ 'ಕಾಡ್' ಎಂಬ ಮೀನಿನಲ್ಲಿ ಘನವಾಗುವುದೆಂದು ಕೆಲವು ಪಂಡಿತರು ಸ್ಪಷ್ಟಪಡಿಸಿದೊಡನೆಯೇ ಇದರ ಶೋಧಕ್ಕೂ, ತಯಾರಿಗೂ ತಂಡ ತಂಡಗಳೇ ಹೊರಟವು.

(ಮುಂದಿನ ಪುಟವನ್ನು ನೋಡಿರಿ.)

ಕಾಡ್ಲಿವರ್ ಆಯಿಲ್

(ಹಿಂದಿನ ಪುಟದಿಂದ)

ಈ ಕೆಲ ವರ್ಷಗಳೊಳಗಾಗಿಯೇ ಇದಕ್ಕೆ ದೊಡ್ಡ ಕಂಪನಿಯು ಸರ್ಪಟ್ಟ ಇದರ ಉಪಯೋಗವನ್ನು ವ್ಯಪಕವಾಗಿ ಹಬ್ಬಿಸಿಬಿಟ್ಟಿದ್ದಾರೆ.

'ಕಾಡ್' ಎಂಬ ಮೀನುಗಳನ್ನು ಹಿಡಿದು ಅವುಗಳನ್ನು ಕೊಂದು ಮೇಲಾಗವನ್ನು ತೆಗೆದು ಶರೀರಾವ್ಯಂತರವನ್ನೂ ಕಬ್ಬಿಣ ಸಹಾಲಿಗೆ ಉಪಯೋಗಿಸಲ್ಪಡುವ ಕಬ್ಬಿಣದ ಸಂಯುಕ್ತಗಳಿಗಿಂತಲೂ ಅತಿ ದೊಡ್ಡ ಪರಿಮಾಣಗಳಲ್ಲಿ ಹಾಕಿ ಮೇಲಾಗದಲ್ಲಿ ಎಣ್ಣೆಯು ತೇಲುವವರೆಗೂ ಬೇಯಿಸುತ್ತಾರೆ. ಇದು ಬೇಯಬೇಕಾದರೆ ಕೊಬ್ಬಿನ ವಾಸನೆಯಿಂದ ಅನೇಕ ಹುಳಗಳೂ, ನೊಣಗಳೂ ಬಿದ್ದು ನಾಯುತ್ತವೆ. ಈ ಬಾಹ್ಯ ಜೀವರಾಶಿಗಳು ಬೆಂದು ಎಣ್ಣೆಯು ಮೇಲಾಗದಲ್ಲಿ ಸುವಾರು ಅರು ಅಂಗುಲದ ದಪ್ಪವಿರುವದೆಂದು ನೋಡಿದವರು ಹೇಳುತ್ತಾರೆ. ಡಾಕ್ಟರ್ ಆಲಿನರವರು ಡಿ. ಪುನ್ಯಾಣುವು ಈಸತ್ತ ಪ್ರಾಣಿಗಳಿಂದಲೇ ದೊರಕಿಸುವದೋ ಸೂರ್ಯ ಬಂದು ಸಂಶಯವಟ್ಟಿರುತ್ತಾರೆ. ಸದರಿ ಎಣ್ಣೆಯು ವಿಶೇಷ ಪರಿವರ್ತನೆ ಇಲ್ಲದೆ ಶೀಸೆಗಳಿಗೆ ತುಂಬಲ್ಪಟ್ಟು ಎಲ್ಲಾ ಅಲಂಕಾರಗಳೊಂದಿಗೆ ರವಾನಾಗುತ್ತದೆ.

ವಿಮರ್ಶೆ

ಮಕ್ಕಳಿಗೆ ಬರುವ ವಾತರೋಗ (Rickets) ಗಳಿಗೆ ಈ ಔಷಧವನ್ನು ಕೊಟ್ಟರೂ ವದೇ ವದೇ ಬರುವುದರಿಂದ ಕೊಡದಿರುವುದೇ ಒಳ್ಳೆಯದೆಂದು ಅನೇಕ ಪಾಶ್ಚಿಮಾತ್ಯರೇ ಆಭಿಪ್ರಾಯಪಡುತ್ತಾರೆ. ಕೆಲಪಕ್ಕೆ ಬಾರದ ಕೊಬ್ಬು ದೇಹದಲ್ಲಿ ಸೇರಲವಕಾಶವಾಗಿ ಮನುಷ್ಯನು ಸ್ಥೂಲ ಕಾಯನಾಗುವುದು. ಸ್ವಭಾವಿಕವಾದುದಾದರೂ ಅನನು ರೋಗಮುಕ್ತನಾದನಂತಲೂ, ಸನಶಕ್ತಿಯು ಅವನಲ್ಲಿ ಉತ್ಪನ್ನನಾಯಿತೆಂತಲೂ ಭಾವಿಸುವುದು ನೂಢತನ. ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಾಣಿ ಸಂಬಂಧದ ಪರೀಕ್ಷೆಗಳು (Experiment) ಇವನ್ನೇ ತಪ್ಪುದಾರಿಗೆಳೆಯುತ್ತಿರುವವೆಂದು ಅಲ್ಲಿನ ವೈದ್ಯರೇ ಒಪ್ಪಿಕೊಂಡಿದ್ದಾರೆ. ಅಲ್ಲದೆ ಈ ದಿವಸ ಕಂಡು ಹಿಡಿದ ಔಷಧಗಳು ನಾಳೆಗೆ ದೋಷಯುಕ್ತವಾಗುವುದು. ಅವರ ನಿರ್ಣಯದಿಂದಲೇ ನಮಗೆ ತಿಳಿದು ಬಂದಿದೆ ಇಂದಿನವರೆಗೂ ಪುಷ್ಯಾಣುಗಳ ವಿಷಯವೇ ಯಾರಿಂದಲೂ ಸರಿಯಾಗಿ ವಿಶದವಾಗಿಲ್ಲಾ. ಲೆಕ್ಕವಿಲ್ಲದಷ್ಟು ವಾಸ್ತಜ್ಞರು ತಮ್ಮ ಶೋಧಗಳನ್ನು ಸಹಸಿಯೇ ಇದ್ದಾರೆ. ರೋಗಗ್ರಸ್ಥನಾಗಿ ಬಲಹೀನನಾಗಿರುವಮನುಷ್ಯನಿಗೆ ಅವನ ಪೂರ್ವ ಪುಷ್ಟತೆಯನ್ನು ದೊರಕಿಸುವ ವಿಷಯದಲ್ಲಿ ಪಾಶ್ಚಿಮಾತ್ಯ ವೈದ್ಯ ಶಾಸ್ತ್ರವು ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇದೆ. ಪುಷ್ಯಾಣುಗಳು ವನಸ್ಪತಿ ವರ್ಗದಲ್ಲಿ ಬೇಕಾದ ಹಾಗೆ ದೊರೆಯುತ್ತಿರಬೇಕಾದರೆ ಪ್ರಾಣಿಗಳ ಹತ್ಯವಿಂದ ಅವುಗಳನ್ನು ಒದಗಿಸುವುದು ಹಿಂದೀಯರಿಗೆ ಒಪ್ಪತಕ್ಕದ್ದಲ್ಲಾ. ಶೀಸ್ರದಲ್ಲಿಯೇ ದಸ್ಯಪುಷ್ಟರಾಗಬೇಕೆಂದು ಸಿಕ್ಕಿದ ಪಾಶ್ಚಿಮಾತ್ಯ ರಸಾಯನಗಳನ್ನು ಸೇವಿಸಿ ಮೈಯೆಲ್ಲಾ ಚುಚ್ಚಿಸಿಕೊಂಡು (Injection) ಇರುವ ಅಲ್ಪ ಸ್ವಲ್ಪ ಜೀರ್ಣ ಶಕ್ತಿಯನ್ನು ಹಾಳುಮಾಡಿಕೊಂಡು ಪುಷ್ಟನಾಗಿರುವ ಗಮ್ಯ ಆಹಾರ ಸಾಮಗ್ರಿಗಳನ್ನು ಜಿಗಿಸಲು ಶಕ್ತಿ ಇಲ್ಲದೇ ಅನೇಕರು ಜೀವಶವಗಳಾಗಿರುವುದನ್ನು ನಾವೆಲ್ಲರೂ ನೋಡುತ್ತಲಿದ್ದೇವೆ. ಶ್ರೀಮಂತರು ಕ್ಲಿಷ್ಟವಾದ ಆಹಾರ ಮತ್ತು, ಹಣ್ಣು ಹಂಪಲುಗಳನ್ನು ಸೇವಿಸುತ್ತಾ ನಿಯಮಿತ ಪದ್ಧತಿಗಳ ಆಚರಣೆಯಲ್ಲಿದ್ದರೆ ಪುಷ್ಯಾಣುಗಳು ದೇಹದಲ್ಲಿಯೇ ಬೇಕಾದಷ್ಟು ಉತ್ಪತ್ತಿಯಾಗಿ ಅವರ ಆರೋಗ್ಯ ಭಾಗ್ಯವು ಚನ್ನಾಗಿರುವುದಲ್ಲದೆ ಪಾಶ್ಚಿಮಾತ್ಯರ ಔಷಧಗಳಿಗಾಗಿ ಸುರಿಯುವ ಹಣವು ಉಳಿಯುತ್ತದೆ.

ಇದರ ಸೇವನೆಯ ವಿಷಯದಲ್ಲಿ ಮಿ॥ ಆಲಿನ್ಸರವರ ಕಡೆಯ ವಾಕ್ಯವನ್ನು ಸ್ಮರಿಸಿ ಈ ಲೇಖನವನ್ನು ನುಗಿಸೋಣ—

ಸಾರಾಂಶ— ಕ್ಷೀಣಿಸುತ್ತಿರುವ ಮೀನಿನ ಹೃದಯ ಭಾಗದ ಕೊಬ್ಬು ಮತ್ತು ಸತ್ತ ನೊಣಗಳ ಸಾರವನ್ನು ಸೇವಿಸುವುದು. ಎಷ್ಟೇ ನವೀನ ಪದ್ಧತಿಯಾಗಿರಲಿ ಅದು ಬುದ್ಧಿಹೀನವೂ ಹುಚ್ಚುತನವೂ ಆದ ಕೃತ್ಯವಾಗಿದೆ.

" To consume extracts derived from the decaying livers of and from dead flies, however mueh refined, is surely to be both penny wise and pound foolish at the same time."

ರೈಲ್ವೆಯ ಭಯಂಕರ ಅನಾಹುತ.

೭೪ ಮಂದಿ ಸತ್ತಿದ್ದಾರೆ

ಕಲಕತ್ತೆಗೆ ೭೧ ಮೈಲಿ ದೂರ ದಲ್ಲಿರುವ ಮಜದಿಯಾ ಸ್ಟೇಷನ್ನಿನಲ್ಲಿ ನಾರ್ತ್ ಬಂಗಾಲ ಎಕ್ಸ್‌ಪ್ರೆಸ್‌ಗೂ ಢಾಕಾ ಮೇಲ್‌ಗೂ ಘೋರಾತಿಘೋರವಾಗಿ ಭಯಂಕರ ಅನಾಹುತವುಂಟಾಯಿತು. 17ನೇ ತಾ. ಬೆಳಗಿನ ಝಾವ ೩ 20ಕ್ಕೆ ಕಲಕತ್ತೆಗೆ ಹೊರಡಲು ಎಕ್ಸ್‌ಪ್ರೆಸ್ ಗಾಡಿಯು ತಯಾರಾಗಿ ನಿಂತಿದ್ದಾಗ ಢಾಕಾ ಮೇಲ್ ಹಿಂಭಾಗದಿಂದ ಬಂದು ಡಿಕ್ಕಿ ಹೊಡೆಯಿತು. ಈ ಅನಾಹುತದಲ್ಲಿ 34 ಮಂದಿ ಸತ್ತಿರುವುದು ಇಲ್ಲಿಯವರೆಗೆ ತಿಳಿದುಬಂದಿದೆ. ಡ್ರೈವರು ಮತ್ತು ಇಬ್ಬರು ಫೈರ್‌ಮೆನ್‌ಗಳನ್ನು ಬಂಧಿಸಲಾಗಿತ್ತು. ಜಾಮೀನು ಪಡೆದು ಬಿಡುಗಡೆಮಾಡಲಾಗಿದೆ. 30-40 ಜನರಿಗೆ ಘಾಯಗಳಾಗಿವೆ.

ರಾಜಕೋಟೆಯ ತೊಡಕು

ಮಹಾತ್ಮ ಗಾಂಧಿಯವರ ಒಪ್ಪಿಗೆಯಿಂದ ಸರ್ದಾರ ವಲ್ಲಭಭಾಯಿ ಪಟೇಲರು ಕಳುಹಿಸಿದ ಏಳು ಹೆಸರುಗಳ ಪೈಕಿ 6 ಜನರು ರಾಜಕೋಟೆಯ ಪ್ರಜೆಗಳಲ್ಲವೆಂದು ಥಾಕೋರ್ ಸಾಹೇಬರು ಗಾಂಧಿಯವರಿಗೆ ಬರೆದಿರುತ್ತಾರೆ. ರಾಜಕೋಟೆಯ ಮುಸಲ್ಮಾನರನ್ನು ಜಿನ್ನಾರವರು ಪ್ರೋತ್ಸಾಹಿಸುತ್ತಿರುವರು. ಹರಿಜನರನ್ನು ಪ್ರೋತ್ಸಾಹಿಸಲು ಬೊಂಬಾಯಿಯಿಂದ ಅಂಬೇಡ್ಕರರವರು ಬಂದಿರುತ್ತಾರೆ. ಗಿರಾಸಿಯಾ ಎಂಬ ಜಮೀನ್ದಾರರೂ ಕೂಡ ಸುಧಾರಣಾ ಸಮಿತಿಯಲ್ಲಿ ಸ್ಥಾನಬೇಕೆಂದು ಹಟ ಹಿಡಿದಿರುವರು ಈ ರೀತಿಯಲ್ಲಿ ಮಹಾತ್ಮ ಗಾಂಧಿಯವರ ಕಾರ್ಯದಲ್ಲಿ ವಿಘ್ನಗಳನ್ನು ಹೂಡಲು ಎಲ್ಲಾಕಡೆಗಳಿಂದಲೂ ಅಲ್ಪ ಸಂಖ್ಯಾಕರೆಂಬ ಹೆಸರಿನಮೇಲೆ ಮುಂದೆಬರುತ್ತಿರುವರು. ಮಹಾತ್ಮ ಗಾಂಧಿಯವರು ಕಲ್ಕತ್ತೆಯ ಅಖಿಲ ಭಾರತ ಕಾಂಗ್ರೆಸ್ ಕಮಿಟೀ ಸಭೆಗೆ ಹೋಗುವುದು ಅನುಮಾನಾಸ್ಪದವಾಗಿದೆ

ಮಹಾತ್ಮ ಗಾಂಧಿಯವರು ರಾಜಕೋಟೆಯ ಸಲಿಟಿಕಲ್ ಏಜಂಟರಾದ ಗಿಬ್ಸ್ಸರನ್ನು ಕಂಡರು. ಅವರು ಉಗ್ರವಾದ ಧೋರಣೆಯನ್ನು ಸ್ವೀಕರಿಸಬಹುದೆಂದು ಸಂಬಲಾಗಿದೆ.

ಸುಭಾಷ ಚಂದ್ರಬೋಸ್-ಜವಾಹರಲಾಲರ ಭೇಟಿ

19ನೇಯ ತಾ. ಪಂಡಿತ ಜವಹರಲಾಲರು - ಸುಭಾಷರು ವಿಶ್ರಮಿಸುತ್ತಿರುವ ಝಾರಿಯಾ ಎಂಬಲ್ಲಿಗೆ ಹೋಗಿ ಬಹಳ ಕಾಲ ಕಾಂಗ್ರೆಸ್ ವಿಷಯಗಳನ್ನು ಚರ್ಚಿಸಿದರು. ಮಹಾತ್ಮ ಗಾಂಧಿ - ಸುಭಾಷ ಚಂದ್ರಬೋಸ್ ಇವರು ಕಲೆತು ಕಾಂಗ್ರೆಸ್ ವಾತಾವರಣವನ್ನು ಅಸಂದಿಗ್ಧತೆಯಿಂದ ದೂರಮಾಡಲು ಯತ್ನಿಸಿರುವರೆಂದು ಊಹಿಸಲಾಗಿದೆ.

ಸ್ಥಾನೀಕ ಶಾಖೆಗಳ ಮಂತ್ರಿ ಶ್ರೀ ಗೋಪಾಲರೆಡ್ಡಿಯವರು

ಸ್ಥಾನೀಕ ಶಾಖೆಗಳ ಮಂತ್ರಿಯಾದ ಶ್ರೀ ಗೋಪಾಲರೆಡ್ಡಿಯವರು 19ನೇ ಸ್ರಾ. ಗುಂತಕಲ್ಲಿನಲ್ಲಿಳಿದರು. ಅಲ್ಲಿಂದ ದಾರಿಯಲ್ಲಿ ಚಿಪ್ಪಗೆರೆ, ನಗರ ಕೋಣ, ರಾಮದುರ್ಗ, ನೇಮಕಲ್ ಮುಂತಾದ ಗ್ರಾಮಗಳ ರೈತರು ಬಿನ್ನವತ್ತಳಿಕೆಗಳನ್ನರ್ಪಿಸಿ ತಮ್ಮ ಬೇಡಿಕೆಗಳನ್ನು ಮುಂದಿಟ್ಟರು. ಅವರಿಗೆಲ್ಲಾ ಸದುತ್ತರಗಳನ್ನು ಕೊಟ್ಟು ಮಧ್ಯಾನ್ಹಾತ್ಪರ ಆಲೂರಿಗೆ ಬಂದರು. ಆಲೂರಿನಲ್ಲಿ ಪಂಚಾಯ್ತಿ ಬೋರ್ಡಿನವರು ಮಾನಪತ್ರವನ್ನು ಕೊಟ್ಟರು. ಸಾಯಂಕಾಲ ಆದವಾನಿಯಲ್ಲಿನ ಕಾರ್ಯಕ್ರಮವಾಯಿತು.

20ನೇ ತಾ. ಪ್ರಾತಃಕಾಲ ಶಿರುಗುಪ್ಪೆಗೆ ಹೋಗುವಾಗ ದಾರಿಯಲ್ಲಿ ಹಳ್ಳಿಗಳ ರೈತರು ತಮ್ಮ ಬೇಡಿಕೆಗಳನ್ನು ಮುಂದಿಟ್ಟರು. ಶಿರುಗುಪ್ಪೆಯಲ್ಲಿ ವೇಶಸೂರು ಸೇತುವೆಯ ಶಂಕು ಸ್ಥಾಪನೆಯಾಯಿತು. ಅಲ್ಲಿಂದ ಸಾಯಂಕಾಲ ಕುರುಗೋಡು ಮಾರ್ಗವಾಗಿ ಬಳ್ಳಾರಿಗೆ ಬಂದರು. ಕುರುಗೋಡಿನಲ್ಲಿ ಸಾರ್ವಜನಿಕ ಸಭೆಯಾಯಿತು.

ಮಂತ್ರಿಗಳು ಕಾಂಗ್ರೆಸ್ ಕಾರ್ಯಕ್ರಮವನ್ನು ತಿಳಿಸಿ ಕಾಂಗ್ರೆಸ್‌ಗೆ ಬೆಂಬಲಬೇಡಿದರು. 21ನೇ ತಾ, ಕಣೇಕಲ್ ರಾಮದುರ್ಗದ ಕಾರ್ಯಕ್ರಮಗಳನ್ನು ಮುಗಿಸಿ ಮಧ್ಯಾನ್ಹ ಮದ್ರಾಸಿಗೆ ಪ್ರಯಾಣ ಬೆಳೆಸಿದರು.

ಅಂಬಾ ಭವನ ಕಾಫೀ ಕ್ಲಬ್

(ರಿಜಿಸ್ಟರ್ಡ್)

ಮತ್ತು

ಕಾಫೆ — **ಊಟದ - ಹೋಟೆಲ್.**

ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪದಲ್ಲಿಯೆ ಶುದ್ಧತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾಕಿ ಜೆಲ್ಲಿ ಮತ್ತು ಇತರ ಅನುಕೂಲಗಳಿರುವ ಕೊಠಡಿಗಳು, ಭೋಜನ ಸಮಾರಂಭ ಟೀಪಾರ್ಟಿಗಳ ಏರ್ಪಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆ ಮಾಡುವೆವು.

ಪ್ರೊಪ್ರಯಿಟರ್ಸು—

ಪಿ. ಕನ್ನಯ್ಯ, ಹೆಚ್. ಕರಿಬಸಪ್ಪ.

K. B. & SONS.

[Estd 1935.]

General and Paper Merchants.

Car Street, **BELLARY.**

(Prefer Hoogly Printing inks for neat and attractive Printing

Best reliabe and cheapest house for all kinds of Novelties, Oilman stores, Thermas Flasks, Food. Jars, Fountain Pens of numerous qualities and makes, Patent Medicines. Perfumes Toilet and Washing Soaps, Glass ware Tea. Coffee, all kinds of Papers and agents for Hoogly Printing inks

ಎಲ್ಲಾವಿಧವಾದ ಸ್ಟೇಷನರಿ, ಕಾಗದಗಳು ಔಷಧಗಳು, ಸಬ್ಬು, ಸುಗಂಧ, ಕಾಫಿ ಟೀ, ಗಾಜಿನ ಸಾಮಾನು, ಆದವಾದ ಮುದ್ರಣಕ್ಕೆ ಬೇಕಾಗುವ ಹೊಗ್ಗಿ ಮಸಿ, ವಗೈರೆ ಸುಲಭ ಬೆಲೆಗೆ ದೊರೆಯುತ್ತೆ.

ಕೆ. ಬಿ. ಅಂಡ್ ಸನ್ಸ್, ತೇರು ಬೀದಿ, ಬಳ್ಳಾರಿ

ಔಂಧ ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಯೋಜನೆಗಳು

(ಹರಿಜನ ಪತ್ರಿಕೆಯಿಂದ)

ಔಂಧ ಸಂಸ್ಥಾನದಲ್ಲಿ ಮಹಾತ್ಮ ಗಾಂಧಿಯವರಿಂದ ಸ್ವೀಕೃತವಾದ ರಾಜಕೀಯ ಸುಧಾರಣೆಗಳು ಜಾರಿಗೆ ಬಂದನಂತರ ನಿರಕ್ಷರತೆಯ ನಿರ್ಮೂಲನಕ್ಕಾಗಿ ಒಳ್ಳೆಯ ಏರ್ಪಾಟುಗಳಾಗಿವೆ. ಔಂಧ ಸಂಸ್ಥಾನದ ವಿದ್ಯಾ ಸಮಿತಿಯ ಪ್ರಯತ್ನ ಫಲವಾಗಿ ಈಗ 700 ಜನರಿಗೆ ಓದಲು ಬರುತ್ತವೆ. ಔಂಧ ಸಂಸ್ಥಾನದ ಆಟ್ಪಾಡಿಯ ತಾಲೂಕಿನಲ್ಲಿ ವಿದ್ಯಾಭ್ಯಾಸದ ಕ್ರಮಗಳನ್ನು ಸಾಗಿಸಲು ಈ ಸಮಿತಿಯ ಪರವಾಗಿ 60 ಜನ ಸ್ವಯಂ ಸೇವಕರು ಕೆಲಸಮಾಡುತ್ತಲಿರುವರು. ಈ 60 ಜನರು, 4 ವಿಭಾಗಗಳಾಗಿ ಹಳ್ಳಿಗಳನ್ನು ಹಂಚಿಕೊಂಡಿರುವರು. ಇವರ ಸಹಾಯಕ್ಕಾಗಿ ಒಂದು ಮಾಯಾ ದೀಪವಿದೆ. (Magic Lantern) ಇದನ್ನು ತಮ್ಮ ಪ್ರವಾಸ ಕಾಲದಲ್ಲಿ ಮುಖಂಡರು ಉಪಯೋಗಿಸುವರು. ಇದರಿಂದ ರೈತರಲ್ಲಿ ಉತ್ಸಾಹವು ಹುಟ್ಟುವುದು. ಹರಿ ಕೀರ್ತನೆ ಮಾಡುವುದರಲ್ಲಿ ಚತುರರಾದ ರಾಜಕುಮಾರಿ ಸುಂದರಿ ತಾಯಿ ಪಂತರವರ ವಿದ್ಯಾಭ್ಯಾಸ ಸಂಬಂಧದ ಕೀರ್ತನೆಗಳಿಂದ ಜನರಲ್ಲಿ ಅಪೂರ್ವ ಜಾಗೃತಿಯು ಉತ್ಪನ್ನವಾಗುತ್ತಲಿದೆ. ಈ ತರದ ಪ್ರಚಾರದಿಂದ ಮುಂದಿಯಲು ಇನ್ನೂ ಹೆಚ್ಚಿಗೆ ಸ್ವಯಂಸೇವಕರು ದೊರೆಯುತ್ತಲಿರುವರು. ಹಳ್ಳಿ ಹಳ್ಳಿಗಳಲ್ಲಿನ ವಿದ್ಯಾನಂತರೂ. ವಿದ್ಯಾರ್ಥಿಗಳೂ ಇದಕ್ಕೆ ಸಹಾಯಮಾಡುವರು. ಈ ವಂದು ತಿಂಗಳಲ್ಲಿ 4000 ಜನರು ಹೊಸದಾಗಿ ಕಲಿಯಲಿಕ್ಕೆ ಪ್ರಾರಂಭಿಸಿರುವರು.

ಪ್ರತಿಯೊಂದು ಹಳ್ಳಿಯಲ್ಲಿ ಪ್ರಾಥಮಿಕ ಅಕ್ಷರಮಾಲೆಯ ದೊಡ್ಡ ಪಟಗಳು ಅಲ್ಲಲ್ಲಿ ಹಚ್ಚಿರುವುದನ್ನು ಕಾಣಬಹುದು. ರಾತ್ರಿಯ ಶಾಲೆಗಳಲ್ಲಿ ಸಂತೋಷವೂ ಉತ್ಸಾಹವೂ. ಕಂಡುಬರುತ್ತಲಿದೆ. ರೈತನು ಪ್ರಾರಂಭದಲ್ಲಿ ಸಂದಿಗ್ಧ ಮನಸ್ಕನಾಗಿರುವನು. ಏಕೆಂದರೆ ಅವನನ್ನು ಹಿಂದಿನಿಂದಲೂ ಮೋಸಪಡಿಸಿರುವವರೇ ಹೆಚ್ಚಿಗೆ! ಇಂಥಾ ಕಾರ್ಯಗಳಲ್ಲಿ ನಂಬಿಕೆಯೂ ಉತ್ಸಾಹವೂ ಬೇಕು.

ಪ್ರೇಮ ಪೂರಿತವಾದ ಸತತ ಪ್ರಯತ್ನಗಳಿಂದ ಇಂಥಾ ಅಗಾಧ ಕಾರ್ಯದಲ್ಲಿ ಜಯವು ಲಭ್ಯವಾಗುವುದು. ಈಗ ಕಲಿಯುತ್ತಿರುವವರ ಸಂಖ್ಯೆ ಅವುಂಧನಗರ 600, ಅವುಂಧ ತಾಲೂಕ 3000, ಕುಂದಲನಗರ 400, ಕುಂದಲ ತಾಲೂಕ 3000, ಆಟ್ಪಾಡಿನಗರ 300, ತಾಲೂಕ 6000. ಸಂಸ್ಥಾನದಲ್ಲಿ ಒಟ್ಟಿಗೆ 12 ಸಾವಿರ ವಿದ್ಯಾನಂತರು. ಅಂದರೆ ಶೇಕಡ 50 ಜನರು ಈಗ ಇರುವರು.

ಇದಕ್ಕೆ ಜಿಲ್ಲಾ ಬೋರ್ಡಿನವರು ಏನು ಉತ್ತರ ಕೊಡುವರಿ

ಹರಪನಹಳ್ಳಿ ಕೊಟ್ಟೂರು ಮಧ್ಯದ ಹಗರೀ ಹೊಳೆ ಅಪಾಯ ಪರಿಸ್ಥಿತಿ.

ಹರಪನಹಳ್ಳಿ - ಕೊಟ್ಟೂರು ಮಧ್ಯದಲ್ಲಿ ಹರಾಳು ಹತ್ತಿರವಿರುವ ಹಗರೀ ಹೊಳೆಯ ಸೇತುವೆಯು ಮುರಿದುಬಿದ್ದು 4-5 ವರ್ಷಗಳಾಗುತ್ತಾ ಬಂತು. ಬಳ್ಳಾರಿ - ಹರಪನಹಳ್ಳಿ ಮತ್ತು ಕೊಟ್ಟೂರು - ದಾವಣಗೆರೆಗೆ ಹೋಗುವ ಬಸ್ಸುಗಳ ಮತ್ತು ಲಾರಿಗಳ ಓಡಾಟವು ವಿಪರೀತವಾಗಿದೆ. ವರ್ಷದಲ್ಲಿ ಅನೇಕ ಸಲ ಗಾಡಿಗಳು ಬಿದ್ದು ನಷ್ಟಕ್ಕೆ ಗುರಿಯಾದ ಘಟನೆಗಳು ನಮ್ಮ ಗಮನಕ್ಕೆ ಬಂದಿವೆ. ಕಲ್ವರ್ಟಿನ ಕಟ್ಟಡವು ಕೆಲವೆಡೆಗಳಲ್ಲಿ ಕೊಚ್ಚಿಹೋಗಿದೆ. ಕೆಲವೆಡೆಗಳಲ್ಲಿ ಬಾಗಿಹೋಗಿದೆ. ಈ ಭಾಗದಮೇಲೆ ಮೋಟಾರುಗಳೂ, ಗಾಡಿಗಳೂ ಹೋಗಬೇಕು. ಮಳೆಗಾಲದಲ್ಲಿ ಆಗುವ ಅಪಾಯಗಳನ್ನು ವರ್ಣಿಸಲಸದಳ ಸ್ವಾಣಾಪಾಯವು ಸಂಭವಿಸುತ್ತವೆ. ಜಿಲ್ಲಾ ಬೋರ್ಡಿನವರು ಕೂಡಲೇ ಕಣ್ಣುತೆರೆದು ಇದರ ಪುನರ್ನಿರ್ಮಾಣ ಕ್ಕೇರ್ಪಡಿಸಬೇಕೆಂದು ಎಚ್ಚರಿಸುತ್ತೇನೆ.

ಟಿ. ಯಸ್. ಗುರುಲಿಂಗಪ್ಪ.
ಜಿಲ್ಲಾ ಬೋರ್ಡ್ ಮೆಂಬರ್
ಕೊಟ್ಟೂರು.

ಹರಪನಹಳ್ಳಿ ಬೋರ್ಡ್ ಹೈಸ್ಕೂಲ್ ಸುವರ್ಣ - ಮಹೋತ್ಸವ.

ಮೇ 12, 13, 14, 15ನೇ ಶುಕ್ರವಾರ, ಶನಿವಾರ, ಭಾನುವಾರ, ಸೋಮವಾರ

ಸಂಕ್ಷಿಪ್ತ ಕಾರ್ಯಕ್ರಮ.

12ನೇ ತಾ, ಶುಕ್ರವಾರ ಸಾಯಂಕಾಲ ವಿದ್ಯಾಖಾತೆಯ ಮಂತ್ರಿಗಳಾದ ಗೌ॥ ಶ್ರೀ ಕೆ. ಜೆ. ವಾರ್ಕಿಯವರ ಆಗಮನ, ಸ್ವಾಗತ. ಖಾದಿ ಪ್ರದರ್ಶನದ ಪ್ರಾರಂಭೋತ್ಸವ.

13ನೇ ತಾ, ಶನಿವಾರ ಪ್ರಾತಃಕಾಲ ಶ್ರೀ ವಾರ್ಕಿಯವರಿಂದ ಸುವರ್ಣ ಮಹೋತ್ಸವದ ಪ್ರಾರಂಭ ರಾಲಿಯ ವರದಿ.

14 ನೇ ತಾ, ಭಾನುವಾರ ಪೂರ್ವ ವಿದ್ಯಾರ್ಥಿಗಳ ದಿನ, ಲಲಿತ ಕಲೆಗಳ ಹಬ್ಬ.

15ನೇ ತಾ, ಸೋಮವಾರ ಸ್ಪರ್ದೆಗಳಲ್ಲುತ್ತೀರ್ಣರಾದವರಿಗೆ ಪಾರಿತೋಷಕಗಳು. ಅಧ್ಯಕ್ಷರ ಉಪಸಂಹಾರ ಭಾಷಣ.

ಬಿ. ತಿರುಮಲರಾವು,
ಅಧ್ಯಕ್ಷ ಪ್ರಚಾರ ಸಮಿತಿ.

★

ಬಳ್ಳಾರಿ ಜಿಲ್ಲಾ ಬೋರ್ಡಿನವರು ಸ್ಥಾನಿಕ ಶಾಖೆಯ ಮಂತ್ರಿಗಳಿಗೆ ೨೦ನೇ ತಾ. ಅರ್ಪಿಸಿದ ನಿವೇದನದ ಸಾರಾಂಶ.

(1) ಭೂಮಿಯಗುತ್ತಿಗೆಯೇ ಜಿಲ್ಲಾ ಬೋರ್ಡಿನ ಮುಖ್ಯಾದಾಯ. ಇದು ಸರಾಸರಿ ಎರಡುಲಕ್ಷ ರೂ. ಗಳವರೆಗೂ ಬರುತ್ತದೆ. ರಸ್ತೆಗಳಿಗೂ ಇತರ ಜಿಲ್ಲರಿ ಖರ್ಚುಗಳಿಗೂ ಇದರ ಉಪಯೋಗವಾಗಬೇಕಾಗಿದೆ. ಸರಕಾರದವರು 32,790 ರೂ. ಕೊಡುತ್ತಾರೆ. ನಾವು ಬಹಳ ಹಣವನ್ನು ರಸ್ತೆಗಳಿಗಾಗಿ ಖರ್ಚುಮಾಡಬೇಕಿರುತ್ತದೆ ನಾವು ಎಷ್ಟೇಕಷ್ಟಪಟ್ಟರೂ ಒಂದು ಮೈಲಿಗೆ 140 ರೂ. ಗಿಂತ ಹೆಚ್ಚಿಗೆ ವ್ಯಯಮಾಡುವಂತಿಲ್ಲ. ರಸ್ತೆಗಳು ಚನ್ನಾಗಿರಬೇಕಾದರೆ ಕನಿಷ್ಠಕ್ಕೆ 250 ಆದರೂ ಒಂದುಮೈಲಿಗೆ ವ್ಯಯಮಾಡಲುಬೇಕು. ಈಜಿಲ್ಲೆಯಲ್ಲಿ ಮಳೆಯೂ ಕಡಮೆ. ನೀರಿಲ್ಲದಿದ್ದರೆ ಒಳ್ಳೆಯ ರಸ್ತೆಗಳು ಹೇಗಾಗುತ್ತವೆ. ಈ ಕಾರಣ ಮೂಾದರಲ್ಲಿ ಎಂಡು ಭಾಗದ ಖರ್ಚನ್ನು ಸರಕಾರದವರು ಭರಿಸಬೇಕು. ಹೀಗಾದರೆ ಒಳ್ಳೆಯರಸ್ತೆಗಳು ಸಾಧ್ಯ. ಇದೂ ಅಲ್ಲದೆ ಸರಕಾರವು ಸಹಾಯವೂ ಮೈಲಿಗೆ 65 ರೂ. ನಷ್ಟಿದ್ದು ಸ್ವಾಂತದಲ್ಲಿಯೇ ಬಹಳ ಕಡಮೆ ಇದೆ. ಈವರ್ಷದಿಂದಲಾದರೂ ಇದನ್ನು ಹೆಚ್ಚಿಸಬೇಕು.

(2) 1931-32 ನುತ್ತು 32-33 ಮಳೆಇಲ್ಲದಕಾರಣ ರೈತರಿಗೆ ಸಹಾಯಮಾಡಲು ಜಿಲ್ಲಾಬೋರ್ಡಿಗೆ ಗ್ರಾಂಟುಗಳನ್ನೊದಗಿಸಿ ತನ್ಮೂಲಕ ರಸ್ತೆಯು ಕೆಲಸಗಳಿಗೇರ್ಪಡಿಸಿದ್ದರು. ಸ್ವಲ್ಪದಿನಗಳಲ್ಲೇ ಸರಕಾರದವರು ತಮ್ಮ ಕ್ಷಾಮು ಪೀತೆಗೆ ಇದನ್ನೆಲ್ಲಾ ತೆಗೆದುಕೊಂಡರು. ಹೊಸದಾಗಿ ರಸ್ತೆಗಳನ್ನು ಹಾಕಲು ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಕಾರ್ಯವು ಸರಕಾರದಿಂದಲೇ ನಡೆಯಬೇಕಿತ್ತು. ಅವರು ಹಾಗೆ ನೂಡಿರುವುದಾದರೂ ತಾನು ಹಾಕಿದ ರಸ್ತೆಗಳ ಸ್ಥಳವನ್ನು ಸೇರಿಸಿಕೊಳ್ಳುವ ಕಾರ್ಯವನ್ನು ಜಿಲ್ಲಾಬೋರ್ಡೇ ಮಾಡಬೇಕೆಂದರೆ ಖರ್ಚಿನಕೆಲಸ. ಸರಕಾರದವರು ಪುನರ್ವಿಮರ್ಶೆಮಾಡಿ ಸರಕಾರದ ಆಜ್ಞೆಯಿಂದ ಜಿಲ್ಲಾಬೋರ್ಡ್ ಈಕೆಲಸ ಸಾಗಿಸಿತ್ತಾದ ಕಾರಣ ಈಕಾರ್ಯವನ್ನೂಕೂಡ ಸರಕಾರವೇ ಮಾಡಬೇಕೆಂದು ಬೇಡುತ್ತದೆ.

(3) ಲೆಕ್ಕಗಳು ತಪಾಸಾದ ಮೇಲೆ 3500 ರೂ. ಸರಕಾರಕ್ಕೆ ಕೊಡತಕ್ಕ ಬಾಕಿ ಇರುವುದೆಂದು ಆಡಿಟರ್‌ರವರ ಆಕ್ಷೇಪಣೆ ಪ್ರಕಾರ ಸರಕಾರದವರು ಸದರಿ ಹಣವನ್ನು ರಿಫಂಡ್ ಮಾಡಲು ಆಜ್ಞಾಪಿಸಿರುವರು. ನಾವು ತೃಪ್ತಿಕರವಾದ ಹೇಳಿಕೆ ಕೊಟ್ಟು ನಾವು ತೆಗೆದುಕೊಂಡ ಹಣವು ನ್ಯಾಯವೆಂದು ತೋರಿಸಿದ್ದೇವೆ. ಇದನ್ನು ಏನುಶಿಸಿ ರೀಫಂಡ್ ಆರ್ಡರು ರದ್ದುಮಾಡಲು ಕೋರುತ್ತೇವೆ.

(4) ಜಿಲ್ಲೆಯು ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಸಾಲದು ಬಂದ ಹಣವನ್ನು ಭರ್ತಿಮಾಡಲು ಅರ್ಧಸ್ಕೈ ಹೆಚ್ಚಿನ ವಿದ್ಯಾತೆರಿಗೆ ವಿಧಿಸಿರುತ್ತೇವೆ 1920 ನೇ ಆಕ್ಟ 37 ನೇ ಕಲಂಪ್ರಕಾರ ಸರಕಾರದ ಸಹಾಯ ನಮಗೆ ದೊರೆಯಬೇಕು. ನಾವುಹೆಚ್ಚಿಸಿದಂತೆ ಸರಕಾರವೂ ತನ್ನ ಗ್ರಾಂಟು ಹೆಚ್ಚಿಸಬೇಕು.

ಆರ್. ನಾಗನಗೌಡ
ಜಿಲ್ಲಾ ಬೋರ್ಡು ಅಧ್ಯಕ್ಷರು.

ತಾ॥ 20-4-39
ಕ್ಯಾಂಪ್-ದೇವನೂರು

ವಿದುರಾಶ್ವತ್ಥದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಮಹಾಧಿವೇಶನ

ಮೈಸೂರು ಸೀಮೆಯ ವಿದುರಾಶ್ವತ್ಥದಲ್ಲಿ ನಡೆದ ದ್ವಿತೀಯ ಕಾಂಗ್ರೆಸ್ ಅಧಿವೇಶನವು ಅಪೂರ್ವವಾದುದಾಗಿದೆ. ಹಿಂದೂಸ್ಥಾನದಲ್ಲಿನ ಯಾವ ಸಂಸ್ಥಾನದಲ್ಲೂ (ತಿರುವಾಂಕೂರಿನ ಹೊರತಾಗಿ) ಇಂಥಾ ಶಿಸ್ತು, ರಾಜಕೀಯ ಜಾಗೃತಿ ಐಕಮತ್ಯಗಳಿಲ್ಲವೆಂದು ಈ ಅಧಿವೇಶನವನ್ನು ನೋಡಿದವರಿಗೆ ವ್ಯಕ್ತವಾಗದಿರದು. ಮೈಸೂರಿನ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು ಬಂದಿದ್ದರು. ಕಳೆದ ವರ್ಷದ ಅಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯನವರೂ, ಚುನಾವಣೆ ಇಲ್ಲದೆ ಆರಿಸಿಬಂದ ಈ ವರ್ಷದ ಅಧ್ಯಕ್ಷರಾದ ಶ್ರೀ ದಾಸಪ್ಪನವರೂ, ತಮ್ಮ ಅಮೋಘ ಭಾಷಣಗಳಿಂದ ಸ್ವಾತಂತ್ರ್ಯ ಪ್ರೀತಿಯು ಬ್ರಿಟಿಷ್ ಹಿಂದೂಸ್ಥಾನಕ್ಕಿಂತ ಸಂಸ್ಥಾನಗಳಲ್ಲಿ ಕಡಮೆ ಇಲ್ಲವೆಂದು ಸಾರಿದರು. ಮಹಾತ್ಮ ಗಾಂಧಿಯವರ ನಾಯಕತ್ವವು ಆದರ್ಶವಾಯಿತು. ಸತ್ಯ ಅಹಿಂಸೆಗಳ ಜಯವಾಯಿತು. ಸರಕಾರದ ಅನೀತಿ ವರ್ತನೆಯು ಸ್ಪಷ್ಟವಾಯಿತು. ಡಾ. ಪಟ್ಟಾಭಿಯವರೂ ಇಲ್ಲಿಗೆ ಆಗಮಿಸಿ ಸ್ವದೇಶೀ ಪ್ರದರ್ಶನದ ಪ್ರಾರಂಭೋತ್ಸವವನ್ನು ನಡೆಸಿ ಕಾಂಗ್ರೆಸ್‌ನವರಿಗೆ ಸದುಪದೇಶ ಮಾಡಿದರು.

ಘಟನೆಯೂ, ಕಾರ್ಯಕ್ರಮವೂ ಮಾತೃ ಸಂಸ್ಥೆಯಾದ ಅಖಿಲ ಭಾರತ ರಾಷ್ಟ್ರೀಯ ಸಂಸ್ಥೆಯನ್ನೇ ಹೋಲಿದ್ದಿತು. ಈ ಮೈಸೂರು ಕಾಂಗ್ರೆಸ್ ನಾಯಕತ್ವದಲ್ಲಿ ಮೈಸೂರಿನ ಬಾಂಧವರು ಜವಾಬ್ದಾರೀ ಸರಕಾರದ ಸುದಿನಗಳನ್ನು ಶೀಘ್ರದಲ್ಲೇ ಕಾಣುವರೆಂದು ಅಶಿಸುತ್ತೇನೆ.

ಪ್ರತ್ಯಕ್ಷದರ್ಶಿ.

ನವ ಭಾರತ

ಎಸ್.ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು

ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಷ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ ವೆನ್ಸ್ ಎಂಡ್ ಪಾಚುಗಳೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದುಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

Patent medicines, Tonics, injections
Ayurvedic Preparations &
Oilman-stores —Moderate Rates
Trial earnestly solicited.

M. S. V. Bros,
Car Street, **BELLARY.**

ಇಂಗ್ಲೀಷ್ ಔಷಧಗಳು, ಇಂಜೆಕ್ಷನ್ ಮತ್ತು ಇತರ ಆಯುರ್ವೇದೀ ಔಷಧಗಳು. ಸ್ವೀಷನರಿ ವಸ್ತುಗಳೆ ಸುಲಭ ಬೆಲೆಯಲ್ಲಿ ದೊರೆಯುತ್ತವೆ.

ಎಂ. ಯಸ್. ವಿ. ಬ್ರದರ್ಸ್,
ತೇರು ಬೀದಿ. ಬಳ್ಳಾರಿ.

Sarada Ink.[Regd]

[*Awarded Gold Medal and Certificate of Merit at the All India Swadeshi Exhibition, Bellary.*]

For Fountain Pens and Steel Pens

Blue-Black, Red, Blue, Green & Violet
SARADA INK WORKS, (Regd.)
K. V. & Sons, BELLARY.

ಶಾರದಾ ಇಂಕ್ (ರಿಜಿಸ್ಟರ್ಡ್)

[ಬಳ್ಳಾರಿ ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ ಸುವರ್ಣಪದಕವನ್ನೂ, ಯೋಗ್ಯತಾಪತ್ರವನ್ನೂ ಪಡೆದಿದೆ.]

ಫೌಂಟನ್ ಪೆನ್ನುಗಳಿಗೂ, ಇತರ ಲೇಖನಿಗಳಿಗೂ, ಉಪಯೋಗಿಸಲು ಶ್ರೇಷ್ಠವಾದ ಬ್ಲೂ-ಬ್ಲಾಕ್ ಕೆಂಪು. ನೀಲಿ ಹಸರು, ನೈಲಿಟ್ ವೆಗೈರೆ ಬಣ್ಣಗಳಲ್ಲಿ ದೊರೆಯುತ್ತದೆ.

ಕೆ. ವಿ. ಅಂಡ್ ಸನ್ಸ್, ಬಳ್ಳಾರಿ.

ಶ್ರೇಷ್ಠವಾದ
ಮುದ್ರಣ ಕೆಲಸ
(Job works)

ಇಂಗ್ಲೀಷ್, ಕನ್ನಡ, ತೆಲುಗು, ಹಿಂದೀ ಭಾಷೆಗಳಲ್ಲಿ
ಬೇರೆ ಬೇರೆ ಬಣ್ಣಗಳ ಬ್ಲಾಕು ಸಮೇತ
ಹೊತ್ತಿಗೆ ಸರಿಯಾಗಿ ಬೇಕೆಂದಿದ್ದರೆ
ವಿಠಲ ಮುದ್ರಣಾಲಯಕ್ಕೆ
ಬನ್ನಿರಿ

1. ಉತ್ತಮ ಮುದ್ರಣವು ಕಲೆಯ ಹೆಗ್ಗುರುತು!
2. ಕೆಲಸಗಳೆಲ್ಲ ಸಾಮಾನ್ಯದರದಲ್ಲಿ ಮಾಡಲ್ಪಡುವವು.

ಕೆಲಸ ಕೊಟ್ಟು ಒಮ್ಮೆ ಪರೀಕ್ಷಿಸಿರಿ!

— ವ್ಯವಸ್ಥಾಪಕ
ವಿಠಲ ಮುದ್ರಣಾಲಯ,
ತೇರು ಬಜಾರು ಬಳ್ಳಾರಿ.

NAVA BHARAT. BELLARY.
(With which is incorporated 'Congress Bulletin')
The leading Nationalist Weekly.
'ನವ ಭಾರತ' ಬಳ್ಳಾರಿ.
[ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.]

The Rates of Subscription.	ಚಂದಾ ವಿವರ
Annual	ವರ್ಷ
Local 1—8—0	ಸ್ಥಳದವರಿಗೆ 1-8-0
Moffusil 2—0—0	ಪರಸ್ಥಳದವರಿಗೆ 2-0 0
Half Yearly	6 ತಿಂಗಳು
Local 1—0—0	ಸ್ಥಳದವರಿಗೆ 1-0-0
Moffusil 1—4—0	ಪರಸ್ಥಳದವರಿಗೆ 2-0-0

Nava Bharat, Bellary.

REG. NO. M. 3937.

Sri _____

_____

_____

Printed at Vittal Press, Car Street Edited & Published by T. B. Keshava Rao, BELLARY.

'ಸಂಜೀ ಪಾತರ'



(ಇದರಲ್ಲಿ 'ಕಾಂಗ್ರೆಸ' ಬುಲೆಟಿನ' ಸಮಾನೇಶವಾಗಿದೆ)

ಉಜ್ವಲ · ರಾಷ್ಟ್ರೀಯ ವಾರ ಪತ್ರಿಕೆ.

ವಾರ್ಷಿಕ ಪೋಷಕ ದ್ರವ್ಯ.
ರಾಜ ಪೋಷಕರು, 10-0-0
ಪೋಷಕರು, 5-0-0

ಸಂಪಾದಕ— ಟಿ. ಬಿ. ಕೇಶವರಾವ್.

ವಾರ್ಷಿಕ ಚಂದಾ
ಪರಸ್ಥಳದವರಿಗೆ, 2-0-0
ಬಳ್ಳಾರಿಯವರಿಗೆ, 1-8-0

ಉತ್ತಿಷ್ಠತ ! ಜಾಗೃತ !! ಪ್ರಾಪ್ಯವರಾನ್ನಿ ಬೋಧತ.

ಸಂಚಿಕೆ ೧ | ಬಳ್ಳಾರಿ. ಏಪ್ರಿಲ್ ೨೯ನೇ ಶನಿವಾರ ೧೯೩೮. | ಸಂಪುಟ ೪೦

ಬೆಂಗಳೂರು ಕಂಟೋನ್ಮೆಂಟ್ ಸ್ಟೇಷನ್

ಮೈಸೂರು ಸರ್ಕಾರಕ್ಕೆ ಕೊಡಲು ಸೂಚನೆಗಳು.

ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ನನ್ನು ಮೈಸೂರು ಸರ್ಕಾರಕ್ಕೆ ಒಪ್ಪಿಸುವುದರ ಸಲುವಾಗಿ-ಮೈಸೂರು ರಿಪ್ರೆಸೆಂಟೇಟಿವ್ ಸೆಟ್ಲ್‌ಮೆಂಟ್ ವಿಷಯಗಳನ್ನೂ ನಿರ್ಮಿಸಿ ತಮ್ಮ ಸೂಚನೆಗಳನ್ನು ಇಂಡಿಯಾ ಸರ್ಕಾರಕ್ಕೆ ವಪ್ಪಿಸಿರುವರೆಂದು ತಿಳಿದು ಬಂದಿದೆ.

ಮದ್ರಾಸ್ ಅಸೆಂಬ್ಲಿ

ತಂಬಾಕಿನ ಮಸೂದೆ,

ತಂಬಾಕಿನ ಮೇಲೆ ಹಾಕಿರ್ಪ ಕರವನ್ನು ಕಡಮೆ ಮಾಡಲು ಕಾಂಗ್ರೆಸ್ಸೇತರ ಸದಸ್ಯರು ತಂದ ತಿದ್ದುಪಡಿಗಳೆಲ್ಲ ಶಿಕ್ಷೇತಾ ಮದ್ರಾಸ್ ಅಸೆಂಬ್ಲಿಯಲ್ಲಿ ಬಿದ್ದು ಹೋಗಿವೆ. ಸೆಲೆಕ್ಟ್ ಕಮಿಟಿಯವರಿಂದ ಸುಸೂತ್ರಿತವಾಗಿ ಬಂದ ಈ ಮಸೂದೆಯು ನಿರೋಧವಾಗಿ ತಂದ ಆಕ್ಷೇಪಣೆಗಳಿಗೆ ಖುದ್ದಾ ಮುಖ್ಯಮಂತ್ರಿಗಳಾದ ರಾಜಗೋಪಾಲಾಚಾರ್ಯರು ಸಮರ್ಪಕವಾದ ಉತ್ತರ ಗಳನ್ನಿತ್ತರು.

ಮುಖ್ಯ ಮಂತ್ರಿಗಳಿಂದ ಒಂದು ತಿದ್ದುಪಡಿಯಾಯಿತು.

ಪ್ರತಿ ವರ್ಷವೂ ೨೦೦ ರೂಗಳಿಗೆ ಮೇಲೆ ಹೊಗೇನೊಪ್ಪು ವ್ಯಾಪಾರ ಮಾಡತಕ್ಕವನು ವರ್ಷಕ್ಕೆ ೬ ರೂ. ತೆರಿಗೆ ಕೊಡಬೇಕು ೩೦೦ ರೂಗಳಿಗೆ ಮಾರಿದವರು ೨೦೦ ರೂಗಳಿಗಿಂತ ಕಡಮೆ ವ್ಯಾಪಾರ ಮಾಡುವವರು ೧೨ ರೂ. ತೆರಿಗೆ ಕೊಡಬೇಕು. ೪೦೦ ರೂಗಳಿಗೆ ಮೇಲೆ ವ್ಯಾಪಾರ ಮಾಡುವವರು ತಮ್ಮ ವ್ಯಾಪಾರದ ಹೊರಲಿನ ೪೦೦ ರೂಗಳ ಮೇಲೆ ೫ ರೂಪಾಯಿಗೆ ೧ ರೂಪಾಯಿಯಂತೆ ಇನ್ನೂ ಹೆಚ್ಚಿನ ವ್ಯಾಪಾರದವರು ೧೦೦೦ ರೂಪಾಯಿಗೆ ೧೫ ರೂಪಾಯಿಯಂತೆ ತೆರಿಗೆ ಕೊಡಬೇಕು. ಇದೇ ಆ ತಿದ್ದುಪಡಿ.

ಕರ್ನಾಟಕ ಏಕೀಕರಣ.

ಶ್ರೀ ದಾತಾರನವರ ನಿರ್ಣಯ.

ಬೆಳಗಾವಿಯ ಶ್ರೀಯುತ ಬಳವಂತರಾವ್ ಪಾತಾರ ರವರು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟೀ ಸಭೆಯಲ್ಲಿ ಭಾಷಾವಾರ ಪ್ರಾಂತಗಳನ್ನು ನಿರ್ಮಿಸಬೇಕೆಂಬೋ ಕರ್ನಾಟಕ ಪ್ರಾಂತ್ಯನಿರ್ಮಾಣವನ್ನು ಕೂಡಲೇ ಮಾಡಿಬೇಕೆಂದು ಸರಕಾರಕ್ಕೆ ಎಚ್ಚರಿಸಬೇಕೆಂಬುವ ನಿರ್ಣಯವನ್ನು ತರಲಿರುವರು.

ಮುಂಬೈ ನಗರದಲ್ಲಿ ಹರಿಜನರಿಗೆ ದೇವಾಲಯ ಪ್ರವೇಶ

ಮುಂಬೈ ಪ್ರಾಂತೀಕ ಹರಿಜನ ಸೇವಕ ಸಂಘವೆವರು ಒಂದು ಪ್ರಕಟನೆ ಹೊರಡಿಸಿ ಕಾನೂನು ಪುರದಲ್ಲಿ ಮತ್ತೆ ೭ ದೇವಾಲಯಗಳು ಹರಿಜನರ ಪ್ರವೇಶಕ್ಕೆ ತೆರೆಯಲಾಗಿವೆಯೆಂದು ಸೂಚಿಸಿರುವರು. ಈಗ ಮುಂಬೈ ನಗರದಲ್ಲಿ ಒಟ್ಟಿಗೆ ೬೧ ದೇವಾಲಯಗಳು ಹರಿಜನರ ಪ್ರವೇಶಕ್ಕೆ ಯೋಗ್ಯವಾಗಿವೆ.

ಭೆಳೆಗೆ ಬರುವ ರೋಗಗಳನ್ನು ಮದ್ರಾಸ್ ಸರ್ಕಾರದ ಯೋಜನೆ

ಮದ್ರಾಸ್ ಸರ್ಕಾರದವರು ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರೀಸರ್ಚ್ ಎಂಬ ವ್ಯವಸಾಯ ಸಂಸ್ಥೆಗೆ ಸೂಚನೆಗಳನ್ನು ಕಳುಹಿಸಿದ್ದಾರೆ. ಬಿಡೆ, ಅಡಿಕೆ ಬಿಡೆ, ತೆಂಗು, ತಾಳೆ ಎತ್ತಳೆ ಮತ್ತು ತಂಬಾಕು ಬೆಳೆಗಳಿಗೆ ಬರುವ ರೋಗಾದಿಗಳ ಕಾರಣಗಳನ್ನು ಪರೀಕ್ಷಿಸಿ ಚಿಕಿತ್ಸೆಗಳನ್ನು ಸೂಚಿಸಬೇಕೆಂದು ಕೋರಿರುತ್ತಾರೆ. ಎಲೆಗಳು ಬೀಳುವುದು ಹಣ್ಣು ಕೊಳೆಯುವುದು, ತೊಗಟೆ ಯು ಮುಂತಾದ ವೈರಿ ಬರಲ್ಲಿ ಅಡಕವಾಗಿವೆ.

ಈ ಯೋಜನೆಯ ಅವಧಿಯು ೫ ವರ್ಷಗಳಿಗ್ಗೆ ೫೪೦೦೦ ರೂ ಗಳು ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದೆ

ನವ ಭಾರತ

ಶನಿವಾರ ಏಪ್ರಿಲ್ 29, 1939.

ಕಾಂಗ್ರೆಸ್ ಸಂಸ್ಥೆಯಲ್ಲಿ ಐಕಮತ್ಯ

★

ಈ ವರ್ಷ ಅಧ್ಯಕ್ಷರ ಚುನಾವಣೆಯಾದಮೇಲೆ, ಕಾಂಗ್ರೆಸ್ ಸಂಸ್ಥೆಯ ಪ್ರಮುಖರಲ್ಲಿ ಮತ ಭೇದಗಳು ತೀವ್ರವಾಗಿ ದೇಶದ ಎಲ್ಲಾ ಕಡೆಗಳಲ್ಲೂ ಭಿನ್ನಾಭಿಪ್ರಾಯಗಳಿಗೆ ಕಾರಣವಾಗಿದೆ. ತ್ರಿಪುರೀ ಕಾಂಗ್ರೆಸ್ ಆದ ನಂತರ ವರ್ಕಿಂಗ್ ಕಮಿಟಿಯೇ ನಿರ್ಮಿತವಾಗಿಲ್ಲ. ಎಂಟು ಪ್ರಾಂತಗಳಲ್ಲಿನ ಕಾಂಗ್ರೆಸ್ ಆಡಳಿತಕ್ಕಾಗಿ ವಿಚಾರಣಾ ಸಂಘವು (Parliamentary Sub Committes) ಏರ್ಪಡಬೇಕಿದ್ದಿತು. ಅದೂಕೂಡ ಏರ್ಪಡಲಿಲ್ಲ. ಮಹಾತ್ಮ ಗಾಂಧಿಯವರು ರಾಜಕೋಟೆಯ ಗೊಂದಲದಲ್ಲಿದ್ದ ಕಾರಣವೂ, ಸುಭಾಷ ಬಾಬುಗಳು ಅಸ್ವಸ್ಥರಾದುದರಿಂದಲೂ, ಅವರಿಬ್ಬರ ಭೇಟಿಗೆ ಅವಕಾಶವಾಗಿರಲಿಲ್ಲ.

ಈಗ ಕಲ್ಕತ್ತೆಯಲ್ಲಿ ಗಾಂಧಿ ಜವಾಹರ ಬೋಸ ಸಂಭಾಷಣೆಗಳು ಸಾಗಿವೆ. ಇವುಗಳ ಫಲದಿಂದ ದೇಶದಲ್ಲಿ ಐಕಮತ್ಯವಾಗಿ. ಕಾಂಗ್ರೆಸ್ ಸಂಸ್ಥೆಯ ಜನರೆಲ್ಲಾ ಒಮ್ಮನಸ್ಸಿನಿಂದ ನಿಶ್ಚಿತ ಉದ್ದೇಶ ಸಾಧನೆಯ ಕಾರ್ಯಕ್ಕೆ ತೊಡಗುವರೆಂದು ಆಶಿಸುತ್ತೇವೆ.

ಈಗಿನ ಸಂದರ್ಭದಲ್ಲಿ ಐಕಮತ್ಯದ ಅವಶ್ಯಕತೆ ಇದ್ದಂತೆ, ಈಹಿಂದೆ ಎಂದೂ ಇರಲಿಲ್ಲ. ಏತಕ್ಕೆಂದರೆ ಬ್ರಿಟಿಶ ಸರಕಾರದವರು ಪ್ರಾಂತೀಕ ಸರಕಾರಗಳಿಗಿದ್ದ ಅಲ್ಪ ಸ್ವಲ್ಪ ಅಧಿಕಾರಗಳನ್ನು ಕಸಿದು ಕೇಂದ್ರ ಸರಕಾರಕ್ಕೆ ಕೊಟ್ಟಿರುವರು. ಯುದ್ಧಕಾಲದಲ್ಲಿ ಮಾತ್ರ ಈ ಅಧಿಕಾರವು ಉಪಯೋಗಿಸಲ್ಪಡುವುದೆಂದು ಭಾರತ ಮಂತ್ರಿಗಳಾದ ಲಾರ್ಡ್‌ಜಿಟ್ಲ್ಯಾಂಡರು ಪಾರ್ಲಿಮೆಂಟ್ ಸಭೆಯಲ್ಲಿ ಹೇಳಿದರು. ಅಲ್ಲದೆ ಯಾವ ಸಮಯದಲ್ಲಿ ಯುದ್ಧವಾರಂಭವಾಗುವುದೋ ಹೇಳಲು ಬರುವಂತಿಲ್ಲ. ಯುದ್ಧವು ತಲೆದೋರುವುದಾದರೆ ಇಂಡಿಯಾದ ಧನವನ್ನೂ, ಜನರನ್ನೂ ತನ್ನ ಸಾಮ್ರಾಜ್ಯ ಹಿತಕ್ಕೆ ಬ್ರಿಟಿಶರು ಉಪಯೋಗಿಸುವುದರಲ್ಲಿ ಯಾವ ಸಂಶಯವೂ ಇಲ್ಲ. 1914 ರಿಂದ 1918ರ ವರೆಗೆ ನಡೆದ ಯೂರೋಪ್ ಮಹಾ ಸಂಗ್ರಾಮದಲ್ಲಿ ಭಾರತೀಯರು ಸಹಾಯಮಾಡಿರುವುದಕ್ಕಾಗಿ ಹಿಂದೂಸ್ಥಾನಕ್ಕೆ ಎಂಥಾ ಫಲಗಳು ಲಭ್ಯವಾದುವೆಂಬುದು ಎಲ್ಲರಿಗೂ ತಿಳಿದ ಅಂಶವಾಗಿದೆ.

ಹಿಂದೂ - ಮುಸಲ್ಮಾನ್ ವೈಷಮ್ಯ, ಜಾತಿ ಜಾತಿಗಳ ಅಂತಃಕಲಹ, ಕಾಂಗ್ರೆಸ್ಸಿನಲ್ಲಿ ಹೊಕ್ಕಿರುವ ಅನೀತಿ ಸ್ವಾರ್ಥವಾತಾವರಣ ಇವೆಲ್ಲಾ ನಾಶ ಹೊಂದಬೇಕು. ಇದನ್ನು ಭಾರತದ ಸಂಕಟ ಕಾಲವೆಂದರಿತು ಎಲ್ಲರೂ ಐಕ್ಯರಾಗಬೇಕು. ಆರ್ಥಿಕವಾಗಿಯೂ ರಾಜಕೀಯವಾಗಿಯೂ, ನಮಗೆ ಕೆಟ್ಟು ತಗಲಬಹುದು. ಇದನ್ನೆಲ್ಲಾ ನಾವು ಅರಿಯಬೇಕು.

ಭಾರತದಲ್ಲಿನ ಪ್ರತಿಯೊಂದು ಭಾಗಕ್ಕೂ ಈ ಸಮಸ್ಯೆಯು ಸಮವಾಗಿ ಅನ್ವಯಿಸುತ್ತದೆ. ಈ ಕಾರಣ ಬಳ್ಳಾರಿ ಜಿಲ್ಲೆಯಲ್ಲಾದರೂ ವಿವಿಧ ಅಭಿಪ್ರಾಯಗಳನ್ನೊಳಗೊಂಡ ಜನರು ಐಕ್ಯವಾಗಿ ಕಾರ್ಯಸಾಧನೆಗೆ ಯತ್ನಿಸಬೇಕೆಂದು ನಮ್ಮ ಬೇಡಿಕೆ.

ಗಾಂಧಿ - ಬೋಸ್ ಜವಾಹರಲಾಲರಲ್ಲಿ ವಿಚಾರವಿನಿಮಯ

ಮಾ॥ ಗಾಂಧಿಯವರೂ, ಪಂ॥ ಜವಹರಲಾಲ ನೆಹರೂರವರೂ 26 ನೇ ತಾ॥ ಕಲ್ಕತ್ತೆಗೆ ಬಂದರು. ಆ ದಿನ ಮಧ್ಯಾಹ್ನೋತ್ತರ ಕಾಂಗ್ರೆಸ್ ಬಿಕ್ಕಟ್ಟನ್ನು ಬಗೆಹರಿಸಲು ಈ ಮೂವರು ಮುಖಂಡರಲ್ಲಿ ಮಾತುಕತೆಗಳು ನಡೆದವು. ಇನ್ನೂ ಯಾವ ನಿರ್ಧಾರಕ್ಕೂ ಬಂದಿಲ್ಲ.

ಶಿಯಾ-ಸುನ್ನಿಗಳ ಜಗಳ ದಂಡಾತ್ಮಕ ಪೋಲೀಸರನ್ನು ನಿಯಮಿಸಲು ಯುಕ್ತಪ್ರಾಂತ ಸರ್ಕಾರದ ನಿಶ್ಚಯ

ಮುಸಲ್ಮಾನರಲ್ಲಿ ಶಿಯಾ-ಸುನ್ನಿ ಪಂಗಡಗಳಿಗೆ ಲಕ್ನೋನಗರದಲ್ಲಿ ಬಹಳ ದಿನಗಳಿಂದಲೂ ಕಲಹವಾಗುತ್ತಲಿದೆ. ಕೆಲವು ದಿನಗಳ ಕೆಳಗೆ ಕೌನ್ಸಿಲ್ ಭವನಕ್ಕೆ ಬಂದು ಈ ಜನರು ಅಲ್ಲಿ ರಿಕಾರ್ಡುಗಳನ್ನು ನಾಶಪಡಿಸಿ, ಗಲಭೆ ಮಾಡಿದ ಕಾರಣ ಯುಕ್ತ ಪ್ರಾಂತ ಸರ್ಕಾರದವರು 200 ದಂಡ ಪೋಲೀಸರನ್ನು ಆದರ ಖರ್ಚನ್ನು ಆ ಎರಡು ಪಂಗಡಗಳಿಂದ ವಸೂಲ್ಮಾಡುವರು.

ಕಲ್ಕತ್ತೆಯ ನಗರ ಸಭಾಧ್ಯಕ್ಷರು

ಶ್ರೀ ನಿಮಿತ ಚಂದ್ರನೇನ ಬಾರ್ ಆಟ್ ಲಾ ರವರು ಅಧ್ಯಕ್ಷರಾಗಿಯೂ ರಾಜ ಕುನೂರ ಯೂಸಫ್ ಮಿರ್ಜಾರವರು ಉಪಾಧ್ಯಕ್ಷರಾಗಿಯೂ ಕಾಂಗ್ರೆಸ್ ಪರವಾಗಿ ಆರಿಸಲ್ಪಟ್ಟರು. ಶ್ರೀ ಸುಭಾಷಚಂದ್ರಬೋಸರು ಇಬ್ಬರನ್ನೂ ಅಭಿನಂದಿಸಿ ಅಸೆಂಬ್ಲಿಯಲ್ಲಿ ತರಲಿರುವ ಮುನಿಸಿಪಲ್ ಬಿಲ್ಲನ್ನು ನಿರೋಧಿಸಬೇಕೆಂದರು.

ಮಿನಾಕ್ಷಿ ಭವನ ಕಾಫಿಕ್ಲಬ್
[ರಿಜಿಸ್ಟರ್ಡ್]
ಶಾಖೆಗಳು—
ಕಾಫಿ ಕ್ಲಬ್ ಬೆಂಗಳೂರು ಕೋಸ್
ಊಟ ವಸತಿಗೃಹ ಬ್ರಾಹ್ಮಣ ಬೀದಿ.
ರುಚಿಕರವಾದ ಶುದ್ಧ ತುಪ್ಪದಲ್ಲಿ ತಯಾರಿಸಿದ ಸಿಹಿಖಾರದ ಫಲಹಾರವಸ್ತುಗಳು.
ಒಳ್ಳೆಯ ಊಟದವ್ಯವಸ್ಥೆ ಧಾರಾಳವಾಗಿ ಗಾಳಿ, ಬೆಳಕು ಬರುವ ಮಹಡಿಯ ಮೇಲಿನ ಕೊಠಡಿಗಳು ಆಧುನಿಕ ವ್ಯವಸ್ಥೆ,
ಒಂದು ಸಲ ಬಂದು ಪರೀಕ್ಷಿಸಿರಿ.

ಗಾಂಧೀಜಿ ಮೊಮ್ಮಗನ ವಿವಾಹ

ಗಾಂಧೀಜಿಯವರ ಮೊಮ್ಮಗನಾದ ಕಾಂತಿಲಾಲ್ ಗಾಂಧಿಗೂ. ಶ್ರೀಮತಿ ಸರಸ್ವತಿ (ತಿರುನಾಂಕೂರು ಜಿ. ರಾಮಚಂದ್ರರ ಸೊಸೆ)ಗೂ. ರಾಜಕೋಟೆಯಲ್ಲಿ 24 ನೇ ತಾ, ಬೆಳಿಗ್ಗೆ ವಿವಾಹವಾಯಿತು.

ಮೈಸೂರಿನಲ್ಲಿ ರಾಜದ್ರೋಹ.

ಶಿವಮೊಗ್ಗಾ ನಗರದ ಪ್ರಮುಖನಾಯಕರಾದ ಶ್ರೀ ಹೆಚ್ ಸಿದ್ದಯ್ಯನವರು, ರಾಜದ್ರೋಹ ಕಲಮಿನ ಕೆಳಗೆ ಬಂಧಿಸಲ್ಪಟ್ಟು, (124 ಎ. ಪಿ ಸಿ.) 18 ತಿಂಗಳ ಶಿಕ್ಷೆ. 300 ರೂ, ದಂಡಕ್ಕೆ ಗುರಿಯಾದರು. ದಂಡ ಕೊಡದಿದ್ದರೆ. ಮತ್ತೆ 3 ತಿಂಗಳ ಶಿಕ್ಷೆ ಅನುಭವಿಸಬೇಕು ತುಮಕೂರಿನ ಕಾಂಗ್ರೆಸ್ ಸ್ನೇಹಿತರಾದ ಶ್ರೀ ಟಿ. ಸುಬ್ರಹ್ಮಣ್ಯಂರವರೂ ಕೂಡ 24ನೇ ತಾ. ಬಂಧಿತವಾಗಿದ್ದಾರೆ.

ಹೈದರಾಬಾದಿನಲ್ಲಿ ದಬ್ಬಾಳಿಕೆ

ಶ್ರೀ ರಾಜಗುರು ಘನೇಂದ್ರ ಶಾಸ್ತ್ರಿಯವರು ತಮ್ಮ 600 ಸತ್ಯಾಗ್ರಹಿಗಳೊಡನೆ ಗುಲ್ಬರ್ಗಾದಲ್ಲಿ ಶಿಬಿರವಾದರು. ಪೂನಾದ ಸುಪ್ರಸಿದ್ಧ ವಕೀಲರಾದ ಭೂಪಟ್ಕರ್‌ರವರು 250 ಸತ್ಯಾಗ್ರಹಿಗಳೊಡನೆ ಪಿರಂಗಾಬಾದಿನಲ್ಲಿ ಸತ್ಯಾಗ್ರಹಮಾಡಲು ಹೊರಟಿರು. ಮೆದರಾಸಿನಲ್ಲಿ ನಿಷೇಧಿಸಲಾಗಿರುವಾಗ ಶ್ರೀರಾಮನಾಥ ಗೋಯಂಕಾರವರು ಹೈದರಾಬಾದಿನಲ್ಲಿ ಹಿಂದೂ ಧರ್ಮಕ್ಕೆ ಎಂಥಾಚ್ಯುತಿ ಬಂದಿರುವದೆಂಬುದನ್ನು ನಿವರಗಳೊಂದಿಗೆ ತಿಳಿಸಿದರು. ಹೈದರಾಬಾದು ಸರಕಾರದವರು ಶಾರೀರಿಕ ಹಿಂಸೆಯನ್ನು ಕೊಡಬಲ್ಲರೇ ವಿನಾ ಮಾನಸಿಕವಾಗಿ ಧರ್ಮಕ್ಕೆ ಚ್ಯುತಿತರಲಾರರೆಂದೂ ಅವರ ಕೃತ್ಯಗಳಿಂದ ಧರ್ಮ ಚಳವಳಿಗೆ ಬೆಂಬಲ ಕೊಟ್ಟಂತಾಯಿತೆಂದೂ ಹೇಳಿದ್ದಾರೆ.

Agriculturists' Debt Relief Act ರೈತ ಋಣವಿಮೋಚನೆ ಕಾಯ್ದೆ

[ಪ್ರೋನೋಟಿನ ಸಂಬಂಧದಲ್ಲಿ ಫೆಡರಲ್ ಕೋರ್ಟಿಗೆ ಅಪೀಲು]

ಹೈಕೋರ್ಟಿನ ನ್ಯಾಯಾಧೀಶರು ಈ ತಿಂಗಳ 25 ನೇ ತಾ,ನ ದಿನ ಗವರ್ನ್‌ಮೆಂಟ್ ಆಫ್ ಇಂಡಿಯಾ ಕಾಯ್ದೆಯ 205ನೇ ಕಲಂಕೆಳಗೆ ಫೆಡರಲ್ ಕೋರ್ಟಿಗೆ ಅಪೀಲ್ಮಾಡಲು ಅರ್ಜಿದಾರರಿಗೆ ಅಪ್ಪಣೆ ಕೊಟ್ಟರು. ವಾದಿಯೊಬ್ಬನು ಒಟ್ಟುಸಾಲಂ ಸಬ್ ಕೋರ್ಟಿನಲ್ಲಿ 13000 ರೂ ನುತ್ತು 19000 ರೂ, ವಸೂಲ್ಮಾಡಿಕೊಳ್ಳಲು ಎರಡು ಪ್ರೋನೋಟುಗಳನ್ನು ದಾಖಲುಮಾಡಿದ್ದನು. ಪ್ರತಿವಾದಿಗಳು ತಾವು ಜಮೀನುಳ್ಳ ರೈತರೆಂದೂ. ಋಣವಿಮೋಚನೆ ಕಾಯ್ದೆಯ ಪ್ರಕಾರ ಈ ಸಾಲಗಳು ಕಡಮೆಯಾಗತಕ್ಕದ್ದೆಂದೂ ಕೋರಿದರು. ಪ್ರಾಂತೀಕ ಸರಕಾರಕ್ಕೆ ಇಂಥಾ ಕಾಯ್ದೆಯು ಮಾಡುವ ಅಧಿಕಾರವಿಲ್ಲೆಂದೂ ಸಬಾರ್ಟಿನೇಟ್ ಜಡ್ಜರು ಅಭಿಪ್ರಾಯಪಟ್ಟರು. ಪ್ರತಿವಾದಿಗಳು ಇದರಮೇಲೆ ಹೈಕೋರ್ಟಿಗೆ ಸರ್ಟಿಫಿಜ್ ಅಪೀಲ್ಮಾಡಿದರು. ಹೈಕೋರ್ಟಿನ ಸ್ಪೆಷಲ್ ಬೆಂಚ್ ವಿಚಾರಣೆಯಾಗಿ ಇಂಥಾ ಕಾಯ್ದೆ ಮಾಡಲು ಪ್ರಾಂತೀಕ ಸರಕಾರಕ್ಕೆ ಅಧಿಕಾರವಿದೆಯೆಂದು ತೀರ್ಮಾನಕೊಟ್ಟರು

ಪ್ರಾಂತೀಕ ಸರಕಾರವು ಇಂಥಾ ಮುಖ್ಯ ಕಾಯ್ದೆಗಳನ್ನು ಮಾಡುವ ಅಧಿಕಾರವನ್ನು ಹೊಂದಿದೆಯೇ ಇಲ್ಲವೇ ಎಂಬ ಮುಖ್ಯ ವಿಷಯವು ನಿರ್ಣಯಿಸಲ್ಪಡಬೇಕಾದ ಕಾರಣ ಫೆಡರಲ್ ಕೋರ್ಟಿನ ನ್ಯಾಯಾಧೀಶರು ಇದನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳಲಾಯಿತು. ಇದಕ್ಕೆ ಹೈಕೋರ್ಟು ನ್ಯಾಯಾಧೀಶರು ಅಪೀಲ್ಮಾಡಲು ಸಮ್ಮತಿ ಇತ್ತರು.

1939ನೇ ಡಿಶಂಬರ್‌ನಲ್ಲಿ ನಡೆಯುವ ಕಾಂಗ್ರೆಸ್ ಅಧಿವೇಶನ

ಹಾರ್ದ ದೇಶದ ಪಟ್ಟಾಭಿ ನಗರಕ್ಕೆ 6 ಮೈಲಿ ದೂರದಲ್ಲಿರುವ ಸೌಲ್‌ನಾರಿ ಶರೀಫ್ ಎಂಬಲ್ಲಿ ಮುಂದಿನ ಕಾಂಗ್ರೆಸ್ ಅಧಿವೇಶನವನ್ನು ನಡೆಸಬೇಕೆಂದು ನಿರ್ಧರಿಸಲಾಗಿದೆ. ಬಾಬೂ ರಾಜೇಂದ್ರ ಪ್ರಸಾದರು ಬೀಹಾರ್ ಕಾಂಗ್ರೆಸ್ ಸಮಿತಿ ಸದಸ್ಯರ ಅಭಿಪ್ರಾಯಗಳನ್ನು ತಿಳಿದುಕೊಂಡು ಆ ನಿರ್ಧಾನವನ್ನು ಘೋಷ್ಟುಮಾಡಿದ್ದಾರೆ. ಸ್ವಾಗತ ಸಮಿತಿಯ ರಚನೆಯಾಗುತ್ತಲಿದೆ. ಅದರಲ್ಲಿ ಬೀಹಾರಿನ ಕೆಲ ಮುಂಡಿಗಳು ಸೇರಿಸುವರು

ಸಂಡೂರು ಸುಧಾರಣಾಸಮಿತಿ ಪ್ರಜೆಗಳ ಬೇಡಿಕೆ

[ನಮ್ಮ ಸುದ್ದಿಗಾರರಿಂದ]

ಕಂದಾಯದಲ್ಲಿ ಕಡಮೆ ಮಾಡಲು. ಮತ್ತು ಸುಧಾರಣೆಗಳನ್ನು ಸೂಚಿಸಲು ಎರಡು ಸಮಿತಿಗಳು ಪ್ರಜಾಪಕ್ಷದ ವರವಾಗಿ ನಿರ್ಮಿತವಾಗಿರುವುದು ಸರಿಯಷ್ಟೆ. 23 ನೇ ತಾ, ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳಾದ ಶ್ರೀ ವಿ. ಯಂ. ಗಿರಿಯವರು ಇಲ್ಲಿಗೆ ಬಂದು ಸರ್ಕಾರದಮುಂದೆ ಕೊಡಬೇಕಾಗಿರುವ ಸಾಕ್ಷ್ಯಕ್ಕೆ ಸೂಕ್ತ ಸಲಹೆಗಳನ್ನು ಕೊಟ್ಟರು. ಪ್ರಜಾ ಸಮಿತಿಯ ಅಧ್ಯಕ್ಷರಾದ ಶ್ರೀ ಅಯಿಕಲ್ ಗುರುಶಿದ್ದನವರು ಪ್ರಕಟಣೆಗಳನ್ನು ಹೊರಡಿಸಿರುತ್ತಾರೆ. ಭೂಕಂದಾಯ ಬಗ್ಗೆ ಉತ್ತಮ ಸೂಚನೆಗಳನ್ನು ಕೊಟ್ಟಿರುತ್ತಾರೆ. ಆದರೆ ರಾಜ್ಯ ಘಟನೆಯಬಗ್ಗೆ ಅವುಂಥ ಸಂತಾನವಂಧಹ ಘಟನೆ ಬೇಕೆಂದು ಬೇಡಿರುತ್ತಾರೆ. ಸಂಡೂರು ಪರಿಸ್ಥಿತಿಗನುಸರಿಸಿ ಸೂಚನೆಗಳನ್ನು ಕೊಡುವುದೊಳ್ಳೆಯದು. ನಮ್ಮ ಭಾರತದಲ್ಲಿ ಈ ಹಿಂದೆ ಪ್ರಕಟವಾದ ಸೂಚನೆಗಳನ್ನು ವಿಮರ್ಶಿಸಿ. ಸಂಡೂರು ಪ್ರಜಾ ಸಮಿತಿಯವರು ಸರಕಾರಕ್ಕೆ ಶಿಫಾರ್ಸು ಕಳುಹಿಸುವುದು ಸೂಕ್ತವಾಗಿದೆ ಸಂಡೂರು ಪ್ರಜೆಗಳು ನಿರ್ಭಯವಾಗಿ ಸುಧಾರಣೆಗಳ ವಿಷಯಕ್ಕೆ ಪ್ರಚಾರ ಕಾರ್ಯಕ್ರಮವನ್ನು ಕೈಗೊಳ್ಳುವರೆಂದೂ ಈ ಪತ್ರಿಕೆಯಲ್ಲಿ ಸೂಚಿತವಾದ ಅಂಶಗಳ ಬಗ್ಗೆ ಜನರನ್ನು ಜಾಗೃತಗೊಳಿಸುವರೆಂದೂ ನಂಬಲಾಗಿದೆ.

ತಲಚೇರ—ಸಂಸ್ಥಾನ.

ಪ್ರಜೆಗಳಿಗೂ, ರಾಜರಿಗೂ ಆದ ಒಪ್ಪಂದವು ಜಾರಿಗೆ ಬಂದಿಲ್ಲ.

ಮಹಾತ್ಮ ಗಾಂಧಿಯವರ ಲೇಖನ.

"ತಲಚೇರ ಸಂಸ್ಥಾನದ ನಿರಾಪದ ಪ್ರಕರಣ" ಎಂಬ ಶೀರ್ಷಿಕೆಯ ಮೆಯ ಕೆಳಗೆ ಮಹಾತ್ಮ ಗಾಂಧಿಯವರು ಹರಿಜನ್ ಪತ್ರಿಕೆಯಲ್ಲಿ ಒಂದು ಅಗ್ರಲೇಖನವನ್ನು ಬರೆದು ನಿರಾಶ್ರಿತ ಸಂಸ್ಥಾನಗಳ ಆಸಿಸ್ಟೆಂಟ್ ಸ್ಟೇಟಿಕಲ್ ಸಜಂಟರಾದ ಮೇಜರ್ ಹೆನ್ನಸಿಯವರಿಗೂ ಸಂಸ್ಥಾನದ ಪ್ರಜೆಗಳ ಪರವಾಗಿ ಶ್ರೀ ಹರಿಕೃಷ್ಣ ಮೆಹತಬ್‌ರವರಿಗೂ ಮಾರ್ಚ್ 21 ನೇ ತಾರೀಖಿನ ದಿನ ಆಗಿದ್ದ ಒಪ್ಪಂದದ ಷರತ್ತುಗಳನ್ನು ವಿವರಿಸಿ ಅವುಗಳನ್ನು ಇದುವರೆವಿಗೂ ಅಚರಣೆಗೆ ತಾರದೆ ಇರುವುದು ಅಪಾಯಕರವಾದುದು ಮಾತ್ರವೇ ಅಲ್ಲ. ಅಪರಾಧಕರವಾದುದೆಂದೂ ತಿಳಿಸಿದ್ದಾರೆ.

ತಲಚೇರ ಸಂಸ್ಥಾನದ ಸುಮಾರು 25000 ಮಂದಿ ನಿರಾಶ್ರಿತರು ಬ್ರಿಟಿಷ್. ಒರಿಸ್ಸಾ ಪ್ರಾಂತ್ಯದ ಅಂಗಾಲ್ ಎಂಬ ಆಡವಿಯಲ್ಲಿ ವಾಸ ಮಾಡುತ್ತ ಬಹಳ ಕಷ್ಟದಿಂದ ಜೀವಿಸುತ್ತಿರುವರೆಂದೂ ಶ್ರೀಗಳಾದ ಘಾಕರ್‌ಬಾಷ್ ಮತ್ತು ಶ್ರೀ ಹರಿಕೃಷ್ಣ ಮೆಹತಬ್ ಇವರುಗಳು ಕೊಟ್ಟಿರುವ ಅಂಕಿ ಅಂಶಗಳ ಆಧಾರದ ಮೇಲೆ ತಾವು ಈರೀತಿ ಹೇಳುತ್ತಿರುವುದಾಗಿಯೂ ಮಹಾತ್ಮರು ಸೂಚಿಸಿ ತಮ್ಮ ಲೇಖನವನ್ನು ಈರೀತಿ ಮುಂದುವರಿಸಿದ್ದಾರೆ—

"ಉಭಯ ಪಕ್ಷದವರಿಗೂ ಒಪ್ಪಂದವಾದ ಪ್ರಯುಕ್ತ ತಲಚೇರ ಸಂಸ್ಥಾನದ ನಿರಾಶ್ರಿತರು ಆ ಸಂಸ್ಥಾನಕ್ಕೆ ಸದ್ಯದಲ್ಲಿಯೇ ಹೋಗುವರೆಂದು ಕೆಲವು ದಿನಗಳ ಕೆಳಗೆ ನೃತ್ತ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿತ್ತು. ಆದರೆ ಮೇಜರ್ ಹೆನ್ನಸಿಯವರು ಮಾಡಿಕೊಟ್ಟ ಒಪ್ಪಂದಕ್ಕೆ ಗೌರವ ಕೊಡಲು ತಲಚೇರ ಸಂಸ್ಥಾನದ ಪ್ರಭುಗಳು ನಿರಾಕರಿಸಿದರೆಂದು ಸೂಚಿಸಿ ಒಪ್ಪಂದವಾಗಿದ್ದ ವಿಚಾರವು ಸುಳ್ಳೆಂದು ಮರುದಿನವೇ ಪತ್ರಿಕೆಗಳಲ್ಲಿ ಪ್ರಕಟಿಸಲಾಯಿತು. ಮಾರ್ಚ್ 21ನೇ ತಾರೀಖಿನ ದಿನ ಆದ ಒಪ್ಪಂದವು ಈ ರೀತಿ ಇದೆ—

1. ಕಂದಾಯದ ಮೇಲೆ ಹೇರುತ್ತಿರುವ ವಿವಿಧ ತೆರಿಗೆಗಳನ್ನು 5 ಆಣೆಗಳಿಂದ 3 ಆಣೆಗೆ ಇಳಿಸುವುದು. ಕಂದಾಯದ ವಿಚಾರವಲ್ಲಿ ಬರುವ ನವಂಬರ್ ತಿಂಗಳಿನಲ್ಲಿ ವಿಚಾರಣೆ ನಡೆಯತಕ್ಕದ್ದು. ಈ ಕಂದಾಯವೂ ಆದರ ಮೇಲೆ ಪಾಕುವ "ಸೆಸ್ಸ್" ಸೇರಿ ಆ ನೆರೆಯ ಪ್ರಾಂತವಾದ ಅಂಗೂಲ್‌ನಲ್ಲಿರುವ ಕಂದಾಯಕ್ಕಿಂತ ಹೆಚ್ಚಾಗಿರಕೂಡದು.

2. ಜಮೀನುಗಳು, ಕೊಂಬುಗಳು, ಗಾಂಜಾ, ಆಫೀಮು, ಭಂಗಿ ಮತ್ತು ಮಾದಕ ದ್ರವ್ಯಗಳು, ಇವುಗಳ ವಿನಹ ಇನ್ನುಳಿದ ವಸ್ತುಗಳ ಮೇಲೆ (ಜೀವನ ನಿರ್ವಹಣಕ್ಕೆ ಬೇಕಾದವುಗಳು) ಇರುವ ಗುತ್ತಿಗೆಗಳನ್ನು ರದ್ದು ಗೊಳಿಸತಕ್ಕದ್ದು.

3. ಧರ್ಮ ಸಂಸ್ಥೆಗಳೂ ಮತ್ತು ಪಂಚಾಯತಿಗಳೂ ವಿಧಿಸುವ ದಂಡಗಳನ್ನು ವಸೂಲ್ಮಾಡುವುದಕ್ಕೆ ಅಡಳಿತ ಯಂತ್ರವನ್ನು ಪಯೋಗಿಸಕೂಡದು.

4. ಬಿಟ್ಟಿ ಕೆಲಸ ತೆಗೆಸುವುದನ್ನು ನಿಲ್ಲಿಸಿಬಿಡಬೇಕು. ಸಾರ್ವಜನಿಕರ ಉಪಯೋಗಾರ್ಥವಾಗಿ ಒಂದು ವೇಳೆ ಬಿಟ್ಟಿ ಚಾಕರಿ ಮಾಡಿಸಬೇಕಾದರೆ ಕೂಲಿ ಕೊಟ್ಟು ಮಾಡಿಸಬೇಕು.

5. ಕೈಗಾರಿಕೋದ್ಯಮಗಳಲ್ಲಿ ನಿರತರಾದವರ ಮೇಲೆ ಹಾಕುತ್ತಿರುವ ವಿಶೇಷ ತೆರಿಗೆಗಳನ್ನು ರದ್ದುಗೊಳಿಸಬೇಕು.

6. ನಿರಾಶ್ರಿತರು ಸಂಸ್ಥಾನಕ್ಕೆ ಹಿಂದಿರುಗಿದರೆ ಅವರನ್ನು ಹಿಂಸೆಗೆ ಗುರಿಪಡಿಸಕೂಡದು.

7. ಸುಧಾರಣೆಗಳನ್ನು ಆಚರಣೆಗೆ ತಂದು ಪ್ರಜೆಗಳು ತಮ್ಮ ಪ್ರತಿನಿಧಿಗಳ ಮೂಲಕ ಆಡಳಿತವನ್ನು ನಡೆಸುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು.

8. ರಾಜದ್ರೋಹಕರವಲ್ಲದ ಭಾಷಣಗಳಿಗೂ ಸಭೆಗಳಿಗೂ ಅವಕಾಶ ವಿರತಕ್ಕದ್ದು.

9. ತಮ್ಮ ತಮ್ಮ ಜಮೀನುಗಳಲ್ಲಿರುವ ಕ್ರೂರ ಜಂತುಗಳನ್ನು ಕೊಲ್ಲುವುದಕ್ಕೆ ಪ್ರಜೆಗಳಿಗೆ ಅವಕಾಶವಿರತಕ್ಕದ್ದು. ಆರೀತಿ ಕೊಂದರೆ ದಂಡ ಮುಂತಾದವುಗಳನ್ನು ವಿಧಿಸಕೂಡದು"

ಮಹಾತ್ಮರು ತಮ್ಮ ಲೇಖನವನ್ನು ಮುಂದುವರಿಸುತ್ತ.

ಈ ರೀತಿ ಒಪ್ಪಂದವಾದಾಗ ಮೇಜರ್ ಹೆನ್ನಸಿ, ಮಿಲಿಟರಿ ಇಂಟಲಿಜೆನ್ಸ್ ರಾಜಿಯ ಮೇಜರ್ ಗ್ರೆಗೇರಿ, ಶ್ರೀ ಹರಿಕೃಷ್ಣ ಮೆಹತಬ್, ಸಾಲ್ಟ್ ಸೆಷನ್ ಸೈನ್ಯ ಪಡೆಯ ಅಡ್ಜೂಟೆಂಟ್‌ರವರಾದ ಶ್ರೀ ವುಡ್ಸ್ ಮತ್ತು ಒರಿಸ್ಸ ಸರ್ಕಾರದ ಪರವಾಗಿ ಆ ಪ್ರಾಂತ್ಯದ ರೆವಿನ್ಯೂ ಕಮೀಷನರ್ ಇವರುಗಳು ಹಾಜರಿದ್ದರು. ಶ್ರೀ ಘಾಕರ್‌ಬಾಷರವರು ಹೇಳಿದ ಪ್ರಕಾರ ಮೇಜರ್ ಹೆನ್ನಿಸಿಯವರು ತಾವು ಮಾಡಿಕೊಂಡ ಒಪ್ಪಂದಕ್ಕೆ ತಲಚೇರ ಸಂಸ್ಥಾನದ ರಾಜರು ರುಜು ಹಾಕವರೆಂಬ ಭರವಸೆ ಇರುವುದಾಗಿ ಸೂಚಿಸಿದ್ದರಂತೆ. ಈಗ ಆ ಒಪ್ಪಂದಕ್ಕೆ ರುಜು ಹಾಕಲು ತಲಚೇರ ಸಂಸ್ಥಾನದ ರಾಜರು ಹೇಗೆ ನಿರಾಕರಿಸಿರುವರೋ ಆದು ತಿಳಿಯದಾಗಿದೆ. ತಲಚೇರ ಸಂಸ್ಥಾನದ ಪ್ರಭುಗಳ ಸನ್ನದನ್ನು ಗಮನಕ್ಕೆ ತಂದರೆ ಈ ಸಮಸ್ಯೆಯು ಮತ್ತಷ್ಟು ಆಳವಾಗಿ ಕಾಣಬರುವುದು" ಎಂಬುದಾಗಿ ಸೂಚಿಸಿದ್ದಾರೆ.

ಈಗಿನ ವೈಸ್ ರಾಯರು 26-2-39ನೇ ತಾರೀಖಿನ ದಿನ ಒರಿಸ್ಸಾ ಸಂಸ್ಥಾನಗಳ ಸಣ್ಣ ಪುಟ್ಟ ರಾ

Supplement to NAVA BHARAT, 29-4-39.

ಸೊಂಡೂರು ಪ್ರಜೆಗಳ ಬೇಡಿಕೆ.

ಭೂ ಕಂದಾಯದ ವಿಷಯ.

[ಸೊಂಡೂರು ಸರಕಾರದಿಂದ ನಿಯಮಿತವಾದ ಘಟನಾ ಸಮಿತಿಯವರು ಹೊರಡಿಸಿದ ಪ್ರಶ್ನೆ ಮಾಲಿಕೆಯಲ್ಲಿನ ಭೂಕಂದಾಯದ ವಿಷಯಕ್ಕೆ ಸೂಚನೆಗಳನ್ನು ಈ ಕೆಳಗೆ ಕೊಡಲಾಗಿದೆ.]

ಸೊಂಡೂರು ಸಂಸ್ಥಾನದ ಸಂಬಂಧಿಸಿದ ಬ್ರಿಟಿಶ್ ಇಲಾಖಾ ಗ್ರಾಮಗಳ ಭೂಕಂದಾಯಕ್ಕೆ ೫–4 ರಷ್ಟು ಹೆಚ್ಚಿಗೆ ಸೊಂಡೂರಿನಲ್ಲಿ ಕಂದಾಯವು ವಿಧಿಸಲಾಗಿದೆ. ಭೂಗುಣದಲ್ಲಿ ಅಲ್ಲಿಗೂ. ಇಲ್ಲಿಗೂ ಭೇದವೇ ಇಲ್ಲ. ಅಲ್ಲಿಗಿಂತ ನಮ್ಮಲ್ಲಿ ವ್ಯವಸಾಯದ ಖರ್ಚುಗಳು ಹೆಚ್ಚಿಗೆ ಬರುತ್ತವೆ. ಸರ್ವೆಸೆಟಲ್ ಮೆಂಟ್ ಆಗಿ ಸುಮಾರು ಮೂವತ್ತು ವರ್ಷಗಳಾಗಿವೆ. ಮಳೆ. ಬೆಳೆ. ವ್ಯವಸಾಯದ ಪರಿಸ್ಥಿತಿ, ಮೇಲಾಗಿ ರೈತನ ಕರುಣಾ ಜನಕ ಪರಿಸ್ಥಿತಿ ಇವುಗಳನ್ನು ಲಕ್ಷಿಸಿ ಸೊಂಡೂರು ಸರಕಾರದವರು ರಿಸೆಟಲ್ಮೆಂಟ್ ಮಾಡಿಸಿ ಬ್ರಿಟಿಶ್ ಇಲಾಖೆ ಮತ್ತು ಸೊಂಡೂರು ಜಮೀನುಗಳಿಗೆ ಸಮಾನವಿರುವಂತೆ ಏರ್ಪಡಿಸಬೇಕು. ಅಂದರೆ ಉತ್ತಮ ತರಗತಿ ಜಮೀನುಗಳಿಗೂ ಸಹ ಯಕರೆ ವಂದಕ್ಕೆ ರೂಪಾಯಿ 3-0-0 ಮೂರು ರೂಪಾಯಿಗಳು ಮೀರದಂತೆ ತರಮು ಕಡಮೆ ಮಾಡಬೇಕು. ಪ್ರಸಃ ರಿಸೆಟಲ್ಮೆಂಟು ಮಾಡಿಸುವವರೆಗೂ ಹಾಲಿ ಇರುವ ಕಂದಾಯದಲ್ಲಿ ಖಾಲ್ತಿ ವರ್ಷದಿಂದ ರೂಪಾಯಿಗೆ 0-8-0 ಎಂಟಾಣೆ ತರವು ಕಡಮೆಮಾಡಿ ವಸೂಲ್ಮಾಡ ಬೇಕು.

ಶ್ರೀ ಕೊಮಾರಸ್ವಾಮಿ. ಶ್ರೀ ನರಸಿಂಹಸ್ವಾಮಿ ದೇವಸ್ಥಾನಗಳ ಜಹಗೀರು ಗ್ರಾಮಗಳಲ್ಲಿನ ಜಮೀನುಗಳು ಒಂದು ವರ್ಷದೊಳಗೆ ಸರ್ವೆಸೆಟಲ್ಮೆಂಟ್ ಮಾಡಿಸಬೇಕು. ದೇವಸ್ಥಾನಗಳಿಗೆ ಸಂಬಂಧಿಸಿದ, ಸರ್ಕಾರಿ ಗ್ರಾಮಗಳಲ್ಲಿನ ಸಪರಿ ಜಮೀನುಗಳನ್ನು ಸಾಗು ಮಾಡುವ ರೈತರಿಗೆ ವಂಶ ಪಾರಂಪರ್ಯವಾಗಿ ಸಾಗುವಳಿಗೆ ಕೊಡುವ ಕಾಯ್ದೆಯಾಗಬೇಕು. ಒಬ್ಬನೇ ರೈತನಿಗೆ ಹೆಚ್ಚಿನ ಭೂಮಿಗಳನ್ನು ಕೂಡದ ಭೂಮಿಗಳಲ್ಲಿರುವ ರೈತರಿಗೂ ಈ ಭೂಮಿಗಳನ್ನು ಕೊಡಿಸಲು ಏರ್ಪಡಿಸಬೇಕು. ಸಾಗುವಾಡುವ ರೈತನು ಮೂರು ವರ್ಷದವರೆಗೂ ಸಾಗುವೊತ್ತುವನ್ನು ಕೊಡದೆ ಇದ್ದಲ್ಲಿ ಜಮೀನು ಕೈ ತಪ್ಪಿಸಬೇಕು. ಸಾಗು ಮೊತ್ತವು ಸೆಟಲ್ಮೆಂಟ್ ತರಮಿನ ಎರಡರಷ್ಟಕ್ಕಿಂತ ಹೆಚ್ಚಿಗೆ ಇರಬಾರದು. ಸರ್ವೆ ಸೆಟಲ್ಮೆಂಟ್ ಆಗುವವರಿಗೂ ಖಾಲ್ತಿ ವರ್ಷದಿಂದ ಹಾಲಿ ಇರುವ ಸಾಗುವಳಿ ನೊತ್ತದಲ್ಲಿ ಅರ್ಧವನ್ನು ಮಾತ್ರ ವಸೂಲು ಮಾಡಿಕೊಳ್ಳಲು ಏರ್ಪಡಿಸಬೇಕು.

ಸಂಸ್ಥಾನದ ಆಯ ವ್ಯಯ ಪಟ್ಟಿಯನ್ನು ಪ್ರಜಾ ಮಂಡಲದಲ್ಲಿ ಮಂಡಿಸಿದಾಗ ಸರಕಾರಕ್ಕೆ ಕಡಮೆಯಾಗುವ ಮೊತ್ತವನ್ನು ಭರ್ತಿಮಾಡಲು ಸೂಚನೆಗಳು ಕೊಡಲಾಗುತ್ತವೆ.

ಮೇಲ್ಕಾಣಿಸಿದ ನಮ್ಮ ಸೂಚನೆಗಳನ್ನು ಸರಕಾರದಿಂದ ನಿಯಮಿಸಲ್ಪಟ್ಟ ಘಟನಾ ಸಮಿತಿಯವರು ಒಪ್ಪಿ ಸರಕಾರಕ್ಕೆ ಸಿಫಾರ್ಸುಮಾಡಬೇಕೆಂದು ಕೋರುತ್ತೇನೆ. ಅಲ್ಲದೆ ಪ್ರಜಾಪ್ರೇಮಿಗಳಾದ ಶ್ರೀಮಂತ ರಾಜಾಸಾಹೇಬರು ನಮ್ಮ ಸೂಚನೆಗಳನ್ನೊಪ್ಪಿ ರೈತರ ಮತ್ತು ಬಡ ಪ್ರಜೆಗಳ ಸಂಕಷ್ಟಗಳನ್ನು ದೂರಮಾಡುವರೆಂದು ಆಶಿಸುತ್ತೇನೆ.

ಪ್ರಜೆಗಳ ಪರವಾಗಿ,
ಅ ಯಿ ಕ ಲ್ ಗು ರು ಸಿ ದ್ದ ಪ್ಪ
ಅಧ್ಯಕ್ಷ, ಪ್ರಜಾ ಸಮಿತಿ.

ಸೊಂಡೂರು
25—4—1939.

Supplement to NAVA BHARAT, 29-4-39.

ಸೊಂಡೂರು ಸಂಸ್ಥಾನದ ಪ್ರಜೆಗಳ ಅಭಿಪ್ರಾಯ.

ರಾಜ್ಯ ಘಟನೆ.

ಸೊಂಡೂರು ಸರಕಾರದವರು ಘಟನಾ ಸಮಿತಿಗೆ ನಿಯಮಿಸಿದ ಸದಸ್ಯರಲ್ಲಿ ಅನೇಕರು ಜವಾಬ್ದಾರೀ ಸರಕಾರದ ನಿರ್ಣಯಕ್ಕೆ ವಿರೋಧವಾಗಿ ಪ್ರಜಾ ಮಂಡಲದಲ್ಲಿ ತಮ್ಮ ಮತಗಳನ್ನು ಕೊಟ್ಟಿರುತ್ತಾರೆ. ಇಂಥಾ ಘಟನಾ ಸಮಿತಿಯ ಮೂಲಕ ಪ್ರಜೆಗಳಿಗೆ ಯೋಗ್ಯ ಸುಧಾರಣೆಗಳು ದೊರೆಯುವವೆಂಬ ನಂಬಿಕೆಯೇ ಇಲ್ಲ. ಆದರೂ ಪ್ರಜಾಭಿಪ್ರಾಯಗಳನ್ನು ಸರಕಾರಕ್ಕೆ ತಿಳಿಸಬೇಕಾದುದು ನಮ್ಮ ಕರ್ತವ್ಯವಾಗಿದೆ.

ಚಾರಿಯಲ್ಲಿರುವ

ಪ್ರಜಾ ಮಂಡಲ ಮತ್ತು ದರ್ಬಾರ.

1931ನೇ ಇಸ್ವಿಯ 3ನೆಯ ಕಾಯ್ದೆಯ ಪ್ರಕಾರ ಸ್ಥಾಪಿತವಾದ **ಪ್ರಜಾ ಮಂಡಲಕ್ಕೆ** ಯಾವ ಅಧಿಕಾರಗಳೂ ಇಲ್ಲ. ಸರಕಾರದವರು ಮಂಡಿಸುವ ವಿಷಯಗಳ ಬಗ್ಗೆ ಅವರ ಇಚ್ಛೆಯ ಪ್ರಕಾರ ಶಿಫಾರಸ್ ಮಾಡಲನುವಾಗುವಂತೆ, ಅದರ ನಿರ್ಮಾಣವಾಗಿದೆ. ಸದರೀ ಮಂಡಲದ ತೀರ್ಮಾನಗಳಾಗಲಿ, ಕಾಯ್ದೆಗಳಾಗಲಿ ಸರಕಾರಕ್ಕೆ ಬದ್ಧಕಾರಕವಾಗಿಲ್ಲವಾದ ಕಾರಣ, ಅವುಗಳಿಗೆ ಬೆಲೆಯೇ ಇಲ್ಲ.

1939ನೆಯ ಫಿಬ್ರವರಿ 4ನೇ ತಾರೀಖಿನ ರಾಜಶಾಸನದ ಪ್ರಕಾರ ಸ್ಥಾಪಿಸಲ್ಪಟ್ಟ **ದರ್ಬಾರದಲ್ಲಿ** ಸರಕಾರದಿಂದ ನಿಯಮಿಸಲ್ಪಟ್ಟವರೇ ತುಂಬಿರುತ್ತಾರೆ. ಪ್ರಜಾ ಮಂಡಲದಲ್ಲಿ ಪಾಸಾದ ತೀರ್ಮಾನವನ್ನು ದರ್ಬಾರದವರು ಬೇಕಾದಂತೆ ತಿದ್ದುಪಡಿ ಮಾಡಬಹುದು. ಹಾಗೆ ತಿದ್ದುಪಡಿಯಾದ ಮೇಲೂ ಅದು ಶ್ರೀಮಂತ ರಾಜಾಸಾಹೇಬರ ವಪ್ಪಿಗೆಗೆ ಹೋಗಬೇಕೆಂಬ ನಿಯಮವು ಇದೆ. ಇದು ಪ್ರಜಾ ಸತ್ತಾತ್ಮಕ ರಾಜ್ಯ ತತ್ವಕ್ಕೆ (Democracy) ವಿರುದ್ಧವಿದೆ. ಇದು ಪ್ರಜೆಗಳಲ್ಲಿ ವಿಶ್ವಾಸವನ್ನುಟ್ಟು ತಯಾರಿಸಿದ್ದಲ್ಲವೆಂಬುದು ಸ್ಪಷ್ಟವಾಗಿದೆ.

ಸೊಂಡೂರು ಸಂಸ್ಥಾನಕ್ಕೆ

ಅವುಂಧ ಸಂಸ್ಥಾನದಂತಹ ರಾಜ್ಯಘಟನೆ ಬೇಕು.

ದಕ್ಷಿಣ ಸಂಸ್ಥಾನಗಳ ಪೈಕಿ, ನಮ್ಮಷ್ಟೇ ಸಣ್ಣ ಸಂಸ್ಥಾನವಾದ ಔಂಧ ಸಂಸ್ಥಾನಕ್ಕೆ ಅಲ್ಲಿಯ ಅಧಿಪತಿಗಳು ದಯಪಾಲಿಸಿದ ಸುಧಾರಣೆಗಳು, ನಾಗರೀಕ ಹಕ್ಕುಗಳು (Civil Liberties) ನಮ್ಮೆರಿನವುಗೂ ಬೇಕು. ಅಂಥಾ ಘಟನೆಯನ್ನೇ ನಮ್ಮ ಸಂಸ್ಥಾನಕ್ಕೂ ದಯಪಾಲಿಸಬೇಕೆಂದು ನಾವು ಸವಿನಯವಾಗಿ ಬೇಡುತ್ತೇವೆ ಹೀಗೆ ಘಟನಾ ಸಮಿತಿಗೆ ಕಳುಹಿಸಲು ಸರ್ವರ ವಪ್ಪಿಗೆ ಇದೆ.

ಎಲ್ಲಾ ಸಂಸ್ಥಾನಗಳಿಗಿಂತಲೂ ಮುಂಚೆ ಅಸ್ಪೃಶ್ಯತಾ ನಿವಾರಣೆಯ ಸದುದ್ದೇಶದಿಂದ, ದೇವಸ್ಥಾನ ಪ್ರವೇಶಕ್ಕನುಕೂಲವಾಗಿ ಕೀರ್ತಿ ಪಡೆದಂತೆ, ಉದಾರ ರಾಜಕೀಯ ಸುಧಾರಣೆಗಳನ್ನೊಳಗೊಂಡ ರಾಜ್ಯ ಘಟನೆಯನ್ನು ದಯಪಾಲಿಸಿ ತನ್ಮೂಲಕ **ಜವಾಬ್ದಾರೀ ಸರಕಾರವನ್ನು** ಸ್ಥಾಪಿಸಿ, ಕೀರ್ತಿ ಪಡೆಯಬೇಕೆಂದು ಶ್ರೀಮಂತ ರಾಜಾಸಾಹೇಬರವರಲ್ಲಿ ಪ್ರಾರ್ಥಿಸಲಾಗಿದೆ.

ಪ್ರಜೆಗಳ ಪರವಾಗಿ,

ಅಯಿ ಕಲ್ ಗುರುಸಿದ್ದಪ್ಪ.

ಅಧ್ಯಕ್ಷ, ಪ್ರಜಾ ಸಮಿತಿ.

ಸೊಂಡೂರು
25—4—1939.

ಜರಿಗೆ ಕೊಟ್ಟಿದ್ದ 'ಸನ್ನದ್' ನಲ್ಲಿರುವ ವಿಧಗಳನ್ನು ಚರ್ಚಿಸಿದ ತರುವಾಯ ಮಹಾತ್ಮರು,

'ಆ ಸನ್ನದಿನ 6ನೇ ವಿಧಿಪ್ರಕಾರ, ವೈಸ್‌ರಾಯರ ಪರವಾಗಿ ನಿಯಮಿಸಲ್ಪಟ್ಟಿರುವ ಗೌರ್ನರ್ ಜನರಲ್ ಏಜಂಟರಾಗಲೀ ಇಲ್ಲವೇ ವೈಸ್‌ರಾಯರ ಪರವಾಗಿ ಕೆಲಸ ಮಾಡುವ ಇತರ ಅಧಿಕಾರಿಗಳಾಗಲೀ ಹೇಳಿದಂತೆ ತಲಚೇರಿ ಸಂಸ್ಥಾನದ ರಾಜರು ನಡೆದುಕೊಳ್ಳಬೇಕಾಗಿದೆ. ಆದುದರಿಂದ, ಆಸಿಸ್ಟೆಂಟ್ ಪೊಲಿಟಿಕಲ್ ಏಜಂಟರ ಸಲಹೆಯ ಪ್ರಕಾರ ನಡೆದುಕೊಳ್ಳದಿ ಬೇರೆ ಮಾರ್ಗವೇ ತಲಚೇರಿ ಸಂಸ್ಥಾನದ ಅರಸರಿಗಿಲ್ಲ. ಆದ್ದರಿಂದ ಮಾಡಿಕೊಂಡಿರುವ ಒಪ್ಪಂದವನ್ನು ಆಚರಣೆಗೆ ತರುವುದರಲ್ಲಿ ಇಷ್ಟೇಕೆ ತಡಪಾಗುತ್ತಿದೆ ಎಂಬ ಪ್ರಶ್ನೆ ಏಳುವುದು. ಮನೆಮಠಗಳಿಲ್ಲದ ಅರೆ ಹೊಟ್ಟೆ ಊಟಮಾಡುತ್ತಿರುವ 20,000 ಮಂದಿ ನಿರಾಶ್ರಿತರ ಪರಿಸ್ಥಿತಿಯು ಇಂದು ಶೋಚನೀಯವಾಗಿದೆ. ತಡಮಾಡುವುದು ಅಪಾಯಕರವಾದುದಲ್ಲದೆ ಅಸಂತಾಧಕರವಾದುದು ಎಂಬುವಾಗಿ ಸೂಚಿಸಿದ್ದಾರೆ.

ಬಳ್ಳಾರಿನಗರದ ಸುದ್ದಿಗಳು.

ವೀರಭದ್ರದೇವರ ಆವೇಶದಿಂದ ಮರಣ.

೩ನೇ ಶಾನಿ ದಿನ ಶ್ರೀ ಜಂತಕಲ್ ರಾಚಪ್ಪನವರ ಮನೆಯಲ್ಲಿ ನಡೆದ ಮದುವೆಯ ಸಡಗರಂಭದ ಸಂಬಂಧದಲ್ಲಿ ಶ್ರೀ ವೀರಭದ್ರದೇವರ ಪೂಜೆಯ ಪೆರವಣಿಗೆಯು ಹೊರಟಾಗ ಟಿಂಗಳೂರು ರಸ್ತೆಯಲ್ಲಿ ಪೆರವಣಿಗೆಯಲ್ಲಿದ್ದ ಹನುಮಂತಪ್ಪ ಎಂಬಾತನಿಗೆ ಆವೇಶ ಬಂದು ಮೂರ್ಛೆ ಹೊಂದಿದನು ಆತನನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ಉಪಚಾರವಾದರೂ ಸೂರ್ಯೋದಯ ತಿರುಗದೆ ಮರಣ ಹೊಂದಿದನು. ಇದರಿಂದ ಆನೇಕರಿಗೆ ಆಶ್ಚರ್ಯಕರವಾಗಿದೆ.

ಯುದ್ಧ ವಿರೋಧ ದಿನ.

ಕಾಂಗ್ರೆಸ್ ಅಧ್ಯಕ್ಷರ ಆಜ್ಞೆಯ ಮೇರೆಗೆ ೩ನೇ ತಾರೀ ದಿನ ಇಲ್ಲಿ ಯುದ್ಧ ವಿರೋಧ ದಿನವು ಆಚರಿಸಲ್ಪಟ್ಟಿತು. ಸರ್ಕಲ್ ಕಾಂಗ್ರೆಸ್ ಕಮಿಟ್ಟಿ ಆಶ್ರಯದಲ್ಲಿ ಶ್ರೀ ವೀರಸ್ವಾಮಿಯವರ ಅಧ್ಯಕ್ಷತೆಯ ಕೆಳಗೆ ಬಂದು ನಿರ್ಣಯವು ಸ್ವೀಕರಿಸಲ್ಪಟ್ಟು, ಭಾವೀ ಯುದ್ಧದಲ್ಲಿ ಭಾರತೀಯರು ಧನದಿಂವಾಗಲೀ, ಜನಗಳಿಂದಾಗಲೀ ಸಹಾಯನೀಡತಕ್ಕದ್ದಲ್ಲವೆಂದು ನಿಶ್ಚಯಿಸಲ್ಪಟ್ಟಿತು

ಮುನಿಸಿಪಲ್ ಸಭೆ.

೪ನೇ ತಾರೀ ನ ಸಭೆಯಲ್ಲಿ ಈ ಕೆಳಗಿನ ವಿಷಯಗಳು ನಿರ್ಣಯಿಸಲ್ಪಟ್ಟವು. ಎಲೆಕ್ಟ್ರಿಕ್ ಪವರ್ ಹೌಸ್‌ಗೆ ಟೀಫ್ ಎಂಜನಿಯರ್‌ರವರ ಶಿಫಾರ್ಸು ಮೇರೆಗೆ ಹಳೆಯ ಎಂಜನ್ ಕೊಂಡುಕೊಳ್ಳತಕ್ಕದ್ದಲ್ಲ. ಸರ್ಕಾರದವರಿಗೆ ವಿದ್ಯುತ್ ಶಾಖೆಯನ್ನು ಆಸಿಸುವುದರ ಪೂರ್ವ ಕೆಲ ವಿವರಗಳನ್ನು ಕೊಡಬೇಕೆಂಬುದಾಯಿತು. ನಗರದಲ್ಲಿ ಚರಂಡಿ ವ್ಯವಸ್ಥೆಯ ಅತೃಪ್ತಿಕರವಾದ ಕೆಲಸದ ಬಗ್ಗೆ ಮುನಿಸಿಪಲ್ ಕಮಿಟಿಯಿಂದ ಬಂದ ವರದಿಯನ್ನು ಒಪ್ಪಲಾಯಿತು. ಇದನ್ನು ಸುಧಾರಿಸಲು ಸೂ. ಎಂಜನಿಯರ್‌ರವರಿಗೆ ತಿಳಿಸಲು ನಿಶ್ಚಯಿಸಲ್ಪಟ್ಟಿತು ಶ್ರೀಗಿರಾದ ಸ್ಯಾಟೆ ವೆಂಕೋಬಾಚಾರ್ಯ ಮತ್ತು ಶಿವಾಜಿಪ್ಪ ಬಸಪ್ಪನವರು ತಂದ ಕನ್ನಡ ಶಿಕ್ಷಣ ವಿಷಯ ಸ್ಯಾಪ್ತಿಮಿಕ ಶಾಲೆಗಳಲ್ಲಿ ಕನ್ನಡ ಟ್ರೈನಿಂಗ್ ಆದ ಉಪಾಧ್ಯಾಯರಿರಬೇಕೆಂಬ ನಿರ್ಣಯವು ವಾಪಾಯಿತು. ವ್ಯಾಪಾರದ ಮೇಲೆ ಕರ ಹಾಕಬಾರದೆಂಬರ್ಥದ ತೀರಾವು (Sales Tax) ಪಾಸಾಯಿತು.

ಬಳ್ಳಾರಿ ಜಿಲ್ಲೆಯಲ್ಲಿ ಹರಿಜನರಿಗಾಗಿ ೧೦ ಭಾವಿಗಳು

ನೀರಿಗೆಲ್ಲಿ ಕಷ್ಟವಿಹೆ? ತಿಳಿಸಿರಿ

೧೯೩೮-೩೯ನೆಯ ಸಂವತ್ಸರ ಜಿಲ್ಲೆಯ ೯ ಹಳ್ಳಿಗಳಲ್ಲಿ ಹರಿಜನರಿಗಾಗಿ ೫೮೦೦ ವ್ಯಯದಿಂದ [ಆಲ್ ಇಂಡಿಯಾ ಗ್ರಾಂಟು] ಭಾವಿಗಳನ್ನು ತೆಗಿಸಲಾಯಿತು. ಸರ್ಕಾರದವರು ಬಳ್ಳಾರಿ ಜಿಲ್ಲೆಗಾಗಿ ಕೊಟ್ಟ ೫೦೦೦ ಹಣದಲ್ಲಿ ೯ ಭಾವಿಗಳಿಗಾಗಿ ೫೮೦೦ ಗಳನ್ನು ಕಲೆಕ್ಟರ್‌ರವರು ಲೇಬರ್ ಶಾಖೆಯ ಮೂಲಕ ಖರ್ಚು ಮಾಡಿದರು. ಇದು ಸಾಲದೆಂದೂ ಕುಡಿಯುವ ನೀರಿಗಾಗಿ ಅನೇಕ ಹಳ್ಳಿಗಳಲ್ಲಿ ಹರಿಜನರು ಪರಿತಪಿಸುತ್ತಲಿರುವರೆಂದೂ, ಕಾರ್ಯದರ್ಶಿಗಳು ಕಲೆಕ್ಟರ್‌ರವರಿಗೆ ಸಲಹಾಸಮಿತಿಯಲ್ಲಿ ಸಲಹೆ ಕೊಟ್ಟರು. ಸಾರ್ವಜನಿಕರಿಂದ ಸಹಾಯ ಬಂದರೆ ತಾವು ಮತ್ತಿಷ್ಟು ಸಹಾಯ ಮಾಡಲು ಕಲೆಕ್ಟರ್‌ರವರು ತಿಳಿಸಿದರು. ಜಿಲ್ಲಾ ಮಹಾನುಭಾವರು ಸಹಾಯ ನೂಡಲು ಮುಂದೆ ಬಂದರೆ ಅನುಕೂಲ. ಇದಕ್ಕೆ ದೆಹಲಿ ಹರಿಜನ ಸೇವಕ ಸಂಖದವರು ರೂ. ೨೦೦೦, ಸರ್ಕಾರದವರು ರೂ ೪೦೦೦ ಒಟ್ಟು ೬ ಸಾವಿರದಲ್ಲಿ ಹತ್ತು ಭಾವಿಗಳನ್ನು ತೆಗೆಸಬೇಕೆಂಬ ಯೋಜನೆಯು ಸರ್ಕಾರದ ಒಪ್ಪಿಗೆಗೆ ಹೋಗಿದೆ. ಸರ್ಕಾರದವರು ಶೀಘ್ರವಾಗಿ ಒಪ್ಪಿಗೆ ಕೊಡಬಹುದೆಂದು ನಂಬಲಾಗಿದೆ ಬಳ್ಳಾರಿ ಜಿಲ್ಲೆಯ ಯಾವ ಹಳ್ಳಿಗಳಲ್ಲಿ ಹರಿಜನರಿಗೆ ವಿಶೇಷ ನೀರಿನ ಕೊರತೆ ಇದೆ ಎಂಬುದನ್ನು ಓದುವ ಮಹನೀಯರು ಯಾರೇ ಆಗಲಿ ನಮಗೆ ತಿಳಿಸಬೇಕೆಂದು ವಿನಂತಿ.

ಟಿ. ಬಿ. ಕೇಶವರಾವ್,
ಕಾರ್ಯದರ್ಶಿ
ಜಿಲ್ಲಾ ಹರಿಜನ ಸೇವಕ ಸಂಘ, ಬಳ್ಳಾರಿ.

K. B. & SONS.

[Estd 1935.]

General and Paper Merchants.

Car Street, **BELLARY.**

(Prefer Hoogly Printing inks for neat and attractive Printing)

Best reliabe and cheapest house for all kinds of Novelties, Oilman stores, Thermas Flasks, Food. Jars, Fountain Pens of numerous qualities and makes, Patent Medicines, Perfumes Toilet and Washing Soaps, Glass ware Tea, Coffee, all kinds of Papers and agents for Hoogly Printing inks

ಎಲ್ಲಾವಿಧವಾದ ಸ್ಟೇಷನರಿ, ಕಾಗದಗಳು ಔಷಧಗಳು, ಸಬ್ಬು, ಸುಗಂಧ, ಕಾಸ್ಮಿಟ್ಸ್, ಗಾಜಿನ ಸಾಮಾನು, ಅಂದವಾದ ಮುದ್ರಣಕ್ಕೆ ಬೇಕಾಗುವ ಹೊಗ್ಗಿ ಮಸಿ, ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತೆ.

ಕೆ. ಬಿ ಅಂಡ್ ಸನ್ಸ್, ತೇರು ಬೀದಿ, ಬಳ್ಳಾರಿ

ರಾಜಕೋಟೆ ಸಂಸ್ಥಾನ ದರ್ಬಾರ ವೀರವಾಲರ ಕುಹಕತನ

ಸರ್ ಮಾರಿಸ್ ಗ್ವೈಯರ್‌ರವರು ಸರ್ದಾರ ವಲ್ಲಭಭಾಯಿಯವರ ಪರವಾಗಿ ತೀರ್ಪುಕೊಟ್ಟನಂತರ ಮಿ. ಗಾಂಧಿಯವರು ರಾಜಕೋಟೆಗೆ ಬಂದು 15 ದಿನಗಳ ಸತತ ಪ್ರಯತ್ನ ನಡೆಸಿದರು. ದರ್ಬಾರ ವೀರವಾಲರು ಮುಸಲ್ಮಾನರನ್ನೂ, ಭಯಾಚರನ್ನೂ ಎಂಗೆಗೆಬ್ಬಿಸಿದರು. ಡಾ. ಅಂಬೇಡ್ಕರವರನ್ನು ಬೊಂಬಾಯಿಯಿಂದ ಕರೆಸಿದರು ಮುಸಲ್ಮಾನರಿಗೆ ಪ್ರೋತ್ಸಾಹ ಕೊಡಲು ಮುಸ್ಲಿಂಲೀಗಿನವರನ್ನು ಪ್ರೋತ್ಸಾಹಿಸಿದರು. ಗಾಂಧಿಯವರ ಯಾವ ಸೂಚನೆಗಳಿಗೂ ಫಾಕೋರ್ ಸಾಹೇಬರು ಒಪ್ಪಲಿಲ್ಲ. ತಮ್ಮದೇ ಒಂದು ಸಮಿತಿಯನ್ನು ರಚಿಸಿ ಅದರ ವಿಸ್ತಾರಸ್ಸುಗಳನ್ನು ಹಿಂದೂಸ್ಥಾನದ ಮುಖ್ಯ ನ್ಯಾಯಾಧೀಶರಿಗೆ ಆರ್ಬಿಸಬೇಕೆಂದು ರೆಸಿಡೆಂಟರ ಒಪ್ಪಿಗೆಪಡೆದು ದರ್ಬಾರಕ್ಕೆ ಸೂಚಿತವಾಯಿತು. ಅದನ್ನೂ ಕೂಡ ಒಪ್ಪಲಿಲ್ಲ. ಮಹಾತ್ಮ ಗಾಂಧಿಯವರು ಬೇಸತ್ತು ಕಲ್ಕತ್ತೆಗೆ ಹೋಗುವ ಪೂರ್ವ ಒಂದು ಹೇಳಿಕೆಯನ್ನು ಕೊಟ್ಟರುವರು. ಆದರಲ್ಲಿ ಕಾಥಿಯವಾಡದ ರಾಜಕಾರಣದ ಕುಹಕತನವನ್ನು ವ್ಯಕ್ತಗೊಳಿಸಿ ದರ್ಬಾರ ವೀರವಾಲರ ಭಾಗವನ್ನು ವಿವರಿಸಿದ್ದಾರೆ. ಅಹಿಂಸೆಯ ಘೋರ ಪರೀಕ್ಷೆಯಾಗಿ ತಮ್ಮ ಶಕ್ತಿಯು ಕುಗ್ಗಿತೆಂತಲೂ ತಾವು ಸೋತೆವೆಂಬುದಾಗಿಯೂ ಇನ್ನು ಫಾಕೋರ್ ಸಾಹೇಬರು ತಮಗೆ ತೋಚಿದ್ದನ್ನು ಕೊಟ್ಟು ಪ್ರಜೆಗಳನ್ನು ಸಮಾಧಾನಪಡಿಸಬೇಕೆಂತಲೂ ಬರೆದಿದ್ದಾರೆ. ಪ್ರಜಾ ಸರಿಷತ್ತಿನವರಿಗೆ ಶಾಂತತೆಯಿಂದಿರಲು ಕೋರಿರುವರು.

ಸರದಾರ ಪಟೇಲರು ಐ. ಆಯ್. ಸಿ. ಸಿ. ಸಭೆಗೆ ಹೋಗಬಾರದೆಂದು ನಿಶ್ಚಯಿಸಿರುತ್ತಾರೆ. ಈ ನಿರ್ಣಯಕ್ಕೆ ಮಹಾತ್ಮ ಗಾಂಧಿಯವರು ಬೆಂಬಲ ಕೊಟ್ಟರುವರು.

ಕಲ್ಕತ್ತಾ ನ್ಯೂ, ಕಾರ್ಪೋರೇಶನ್‌ದಲ್ಲಿ ಹಿಂದೂಗಳಿಗೂ, ಅಸ್ಪೃಶ್ಯರಿಗೂ ಎಷ್ಟು ಸ್ಥಾನಗಳನ್ನು ಕೊಡಬೇಕೆಂಬುದರ ಬಗ್ಗೆ ಬಂಗಾಲ ಮಂತ್ರಿ ಮಂಡಲದಲ್ಲಿ ತೀವ್ರ ಮತ ಭೇದವುಂಟಾಗಿದೆ. ಅಸೆಂಬ್ಲಿಯಲ್ಲಿ ತರಲ್ಪಟ್ಟ 'ಬಿಲ್'ನ ವಿಸರ್ಜನೆಯು ಮುಂದಕ್ಕೆ ಬಿದ್ದಿದೆ.

ರಾಮದುರ್ಗ ಸಂಸ್ಥಾನದಲ್ಲಿ ನಡೆದ ಭಯಂಕರ ಖೂನಿ ಮತ್ತು ಅಂಗಡಿಗಳ ಲೂಟಿ ಮತ್ತು ಇತರ ಅತ್ಯಾಚಾರಗಳ ವಿಚಾರಣೆಗೆ ದರ್ಬಾರದವರು ಒಂದು ಸಮಿತಿಯನ್ನು ನಿರ್ಮಿಸಲಿರುವರು.

ತುಂಗಭದ್ರಾ ಯೋಜನೆಗೆ ಬೆಂಬಲ ಕೊಡಿರಿ

"ಈ ಯೋಜನೆಯು ಸುಮಾರು 50 ವರ್ಷಗಳಿಂದಲೂ ಆಲೋಚನೆಯಲ್ಲಿದೆ ಕಾಂಗ್ರೆಸ್ ಮಂತ್ರಿವರ್ಗದವರು ಇದನ್ನು ಪೂರೈಸಲು ಯತ್ನಿಸುತ್ತಿರುವರು. ಈ 20 ತಿಂಗಳೊಳಗಾಗಿಯೇ ಪ್ರಾರಂಭ ಕಾರ್ಯವನ್ನು ಮುಗಿಸಿ ಆಯವ್ಯಯ ಪಟ್ಟಿಯಲ್ಲಿ ಹಣ ತೆಗೆದಿಡುವುದು ಕಷ್ಟ ಕೆಲಸ. ಇನ್ನೂ ತೊಂದರೆಗಳಿವೆ. ಇನ್ನೆಲ್ಲಾ ಪರಿಹಾರವಾದಾವು' ಎಂದು ಮಂತ್ರಿಗಳಾದ ಶ್ರೀ ಗೋಪಾಲರೆಡ್ಡಿಯವರು ಕುರುಗೋಡಿನ ಸಭೆಯಲ್ಲಿ ಹೇಳಿದರು.

ಶ್ರೀ ಮರಿಬಸನನಗೌಡರು ಕ್ಷಾಮದ ಕಷ್ಟಗಳನ್ನು ನಿರ್ಣಯಿಸುತ್ತಾ ತುಂಗಭದ್ರಾ ಯೋಜನೆ ಇಲ್ಲದಿದ್ದರೆ ಕ್ಷಾಮವು ನೀಗಲಾರದೆಂದೂ, ಕಾಂಗ್ರೆಸ್ ಸರಕಾರವರು ತಮ್ಮ ಹಯಾವಿನಲ್ಲಿ ಇದನ್ನು ಮುಗಿಸಲು ಬದ್ಧ ಕಂಕಣರಾಗಬೇಕೆಂದೂ ಸ್ಪೂರ್ತಿದಾಯಕ ಉತ್ತರವಿತ್ತರು.

ಯೂರೋಪಿನ ರಾಜಕಾರಣ

ರೂಸವೆಲ್ಟರ ಹೇಳಿಕೆಯನಂತರ.

ಅಮೆರಿಕಾದ ಅಧ್ಯಕ್ಷರಾದ ರೂಸವೆಲ್ಟರು ಯೂರೋಪಿನ ಹಿಟ್ಲರ್ ಮುಸೋಲಿರ್ಯರಿಗೆ ಒಂದು ವಿನಂತಿ ಪತ್ರವನ್ನು ಬರೆದದ್ದು ಸರಿಯಷ್ಟೆ. ಮುಸೋಲಿನಿಯು ಅದನ್ನು ತಿರಸ್ಕರಿಸಿ ಬಿಟ್ಟರುವನು. ಜರ್ಮನಿಯ ಹಿಟ್ಲರನು 28ನೇ ತಾ, ಹೇಳಿಕೆ ಕೊಡುವುದರ ಪೂರ್ವ ಸಣ್ಣ ಸಣ್ಣ ದೇಶಗಳನ್ನು ಕೇಳಿ ಜರ್ಮನಿಯಿಂದ ದಾಳಿಯಾಗುವ ಭಯವಿದೆಯೇ ಎಂಬುದನ್ನು ಕೇಳಿರುವನು ಅಂಥಹ ಭಯವೇನೂ ಇಲ್ಲವೆಂದು ಅನೇಕ ದೇಶಗಳು ಜವಾಬು ಕೊಟ್ಟವೆ ಬಾಲ್ಟ್ ರಾಷ್ಟ್ರಗಳನ್ನು ತಮ್ಮ ಕಡೆಗೆ ಸೂಡಿಕೊಳ್ಳಲು ಇಟಲೀ-ಜರ್ಮನೀ ದೇಶಗಳು ಪ್ರಯತ್ನ ಪಡುತ್ತಲಿವೆ. ಇತ್ತ ಬ್ರಿಟ್ ಫ್ರಾನ್ಸುಗಳೊಂದಿಗೆ ರಷ್ಯಾ ದೇಶವು ಸಹಕರಿಸುವ ಲಕ್ಷಣಗಳು ತೋರಿಬರುತ್ತಲಿವೆ.

ಬ್ರಿಟಿಶ ಸರ್ಕಾರದ ನಿಶ್ಚಯ

ಒತ್ತಾಯ ಸೈನಿಕ ಶಿಕ್ಷಣ

ಯುದ್ಧಕಾಲದಲ್ಲಿ ಎಲ್ಲರನ್ನೂ ಒತ್ತಾಯದಿಂದ ಸೈನ್ಯದಲ್ಲಿ ಸೇರಿಸಿಕೊಳ್ಳುವೇಕೆಂಬ ತತ್ವವನ್ನು ಪಾರ್ಲಿಮೆಂಟ್ ಸಭೆಯವರು ಮೊನೇ ತಾ! ಒಪ್ಪಿಕೊಂಡರು. ಇದರ ವಿಷಯದಲ್ಲಿ ನಿರ್ಣಯ ಸೂಚನೆಗಳು ಪಾರ್ಲಿಮೆಂಟಿನ ಮುಂದೆ ಇಡಲ್ಪಡುವ ತನಕ ಮಂತ್ರಿಮಂಡಲವು ತಮ್ಮ ಹೇಳಿಕೆಯನ್ನು ಕೊಡಬಹುದು ಪರೋಪಾನಕ್ಕನು ಸುಣ್ಣವಾಗಿ ಗುಂಪುಗಳನ್ನು ಮಾಡಿ ಪ್ರಶ್ನೆಮದಲ್ಲಿ ಇದರಿಂದ ತೀರ್ಮಯಿಸಿನವರಿಗೆ ಈ ಕಾರ್ಯವನ್ನು ಸ್ವಯಿನಬೇಕೆಂದು ಸರ್ಕಾರದ ಇಚ್ಛೆಯನ್ನಿಂತೆ ತೋರಿರುತ್ತದೆ.

ಅಂಬಾ ಭವನ ಕಾಫೀ ಕ್ಲಬ್

(ರಿಜಿಸ್ಟರ್ಡ್)

ಮತ್ತು

ಕಾಫಿ — **ಊಟದ - ಹೋಟೆಲ್.**

ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಒಳಗೆ ನಮ್ಮ ಪದಲ್ಲಿದೆ ರುದ್ಧತಾಪ್ಪದಲ್ಲಿ ಪರಿಯಾರಿಸಿದ ರುಚಿಕರವಾದ ಫಲಾಹಾರ - ಗಾರ್ -ಜೆಗಳು ಮತ್ತು ಇತರ ಅನುಕೂಲಗಳುವ ಕೊಠಡಿಗಳು, ಭೋಜನ ಸಮಾರಂಭ ಟೇಪಾರ್ಟಿಗಳ ಏರ್ಪಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆಮಾಡುವೆವು.

ಪ್ರೊಪ್ರಯಿಟರ್ಸು—

ಶಿ. ಕನ್ನಯ್ಯ, ಜೆಚ್. ಕರಿಬಸಪ್ಪ.

ಕೆಲಸಗಳನ್ನು ಕಳೆದುಕೊಂಡ ಗ್ರಾಮಾಧಿಕಾರಿಗಳಿಗೆ ಪುನಃ ಪಟ್ಟ

ಈ ಇಪ್ಪತ್ತು ವರ್ಷಗಳೊಳಗಾಗಿ ರಾಜಕೀಯ ಚಳವಳಿಯಲ್ಲಿ ಬಾಗವಹಿಸಿದರೆಂಬ, ಸಹಾಯಮಾಡಿದರೆಂಬ, ಅಥವಾ ಇತರ ಕಾರಣಗಳಿಂದ ಸಂಬಂಧಿಸಿದವರೆಂಬ ಕಾರಣಗಳಮೇಲೆ ಉದ್ಯೋಗಗಳನ್ನು ಕಳೆದುಕೊಂಡ ಕರಣಂ ಮತ್ತು ರೆಡ್ಡಿ ವರ್ಗೀಕರ ಗ್ರಾಮಾಧಿಕಾರಿಗಳಿಗೆ ಪುನಃ ಉದ್ಯೋಗವನ್ನು ಕೊಡಿಸಲನುವಾಗುವದಕ್ಕೆ ರೆವಿನ್ಯೂ ಮಂತ್ರಿಗಳಾದ ಶ್ರೀ ಪ್ರಕಾಶಂರವರು ಒಂದು 'ಬಿಲ್' ತಂದರು. ಇದಕ್ಕೆ ಎಲ್ಲಾ ಪಕ್ಷದವರೂ ಸಮರ್ಥನೆಮಾಡಿ ಈಗ ಉದ್ಯೋಗದಲ್ಲಿರುವನರಿಗೆ ಸಹಾಯಮಾಡುವುದವಶ್ಯವೆಂದರು. ಗ್ರಾಮಾಧಿಕಾರಿಗಳಲ್ಲಿ ಯಾರಾದರೂ ಮರಣಹೊಂದಿದ್ದರೆ ಅಂಥಹವರ ಮಕ್ಕಳು ಉದ್ಯೋಗ ಪಡೆಯಲು ಅರ್ಹತೆ ಪಡೆಯುವರು.

ಸರಕಾರೀ ಡಾಕ್ಟರುಗಳೂ ಮತ್ತು ಖಾಸಗಿ ವೈದ್ಯ

ಮದ್ರಾಸ್ ಸರಕಾರದವರು ಒಂದು ಆಜ್ಞೆ ಹೊರಡಿಸಿ ಸರಕಾರೀ ಡಾಕ್ಟರುಗಳು ಖಾಸಗೀ ವೈದ್ಯಮಾಡಿ ಹಣ ಸಂಪಾದನೆ ಮಾಡಬಾರದೆಂದು ಹೇಳಿದ್ದಾರೆ. ಆಜ್ಞೆಯು 1-1-1940 ರಿಂದ ಜಾರಿಯಲ್ಲಿ ಬರುತ್ತದೆ. ಆದರ ಮುಖ್ಯ ವಿಧಿಗಳು ಹೀಗಿವೆ.

(1) ಪೂರ್ಣಕಾಲ ಸೇವೆ ಮಾಡಬೇಕಾದ ವೈದ್ಯ ಶಾಖೆಯ ಅಧಿಕಾರಿಗಳು ಖಾಸಗಿ "ಪ್ರಾಕ್ಟೀಸ್" ಇಟ್ಟುಕೊಳ್ಳಕೂಡದು.

(2) ಹಾಗೆ ಇಟ್ಟುಕೊಳ್ಳಬಹುದೆಂದು ಸರಕಾರದವರು ಕೊಟ್ಟಿದ್ದ ಆಜ್ಞೆಯನ್ನು ತೆಗೆದು ಹಾಕಲಾಗಿದೆ. 1-1-1940 ರಿಂದ ಹೊಸ ಆಜ್ಞೆಯು ಆಚರಣೆಗೆ ಬರತಕ್ಕದ್ದು.

(3) ಖಾಸಗಿ 'ಪ್ರಾಕ್ಟೀಷನರ್'ಯಾರಾದರೂ ಬಂದು ಸರಕಾರೀ ಡಾಕ್ಟರುಗಳ ಸಲಹೆ ಕೇಳಿದರೆ ಅವರಿಗೆ ವೃತ್ತಿಗೆ ಸಂಬಂಧಪಟ್ಟಂತೆ ಸಲಹೆ ಕೊಡಬಹುದು. ಮತ್ತು ಕೊಟ್ಟ ಸಲಹೆಗಿಷ್ಟೆಂದು ಫೀಸನ್ನು ಹಾಕಬಹುದು. ಆದರೆ ಪ್ರತಿ ತಿಂಗಳೂ ಹತ್ತನೆಯ ತಾರೀಖಿನೊಳಗಾಗಿ ಹಿಂದಿನ ತಿಂಗಳು ಎಷ್ಟು ಮಂದಿ ಖಾಸಗಿ ಡಾಕ್ಟರುಗಳು ಸಲಹೆಗಾಗಿ ಬಂದಿದ್ದರು. ಎಷ್ಟು ಫೀ ಬಂತು ಎಂಬ ಲೆಕ್ಕದ ಪಟ್ಟಿಯನ್ನು 'ಸರ್ಜನ್ ಜನರಲ್' ರವರ ಮೂಲಕ ಸರಕಾರಕ್ಕೆ ಕಳುಹಿಸಿಕೊಡಬೇಕು.

(4) ಫೀ ರೂಪವಾಗಿ ಬಂದ ಹಣದಲ್ಲಿ ಶೇಕಡ 5ರಷ್ಟನ್ನು ಸರಕಾರಕ್ಕೆ ಕೊಡಬೇಕು.

(5) ಈ ಆಜ್ಞೆಯು ಸ್ತ್ರೀ "ಡಾಕ್ಟರು" ಗಳಿಗೆ ಅನ್ವಯಿಸುವುದಿಲ್ಲ.

ಸರಕಾರೀ ಉದ್ಯೋಗಗಳಲ್ಲಿರುವವರಿಗೆ ಒಳ್ಳೆಯ ಸಂಬಳ ಸಾರಿಗೆಗಳು ಸಲ್ಲುತ್ತವೆ. ಅವರು ತಮ್ಮ ಪೂರ್ಣಕಾಲವನ್ನೆಲ್ಲಾ ಸರಕಾರಕ್ಕೆ ಅಂದರೆ ಸಾರ್ವಜನಿಕರ ಹಿತಕ್ಕೆ ವಿನಿಯೋಗಿಸಬೇಕಾದು ಧರ್ಮ. ಹಾಗೆಬಿಟ್ಟು ಖಾಸಗಿ ಪ್ರಾಕ್ಟೀಸು ಮಾಡುವುದರಿಂದ ಪೂರ್ಣಸೇವೆ ಸಲ್ಲಿಸಿದಂತಾಗದು. ಇಷ್ಟು ದಿನ ಖಾಸಗೀ ವೈದ್ಯರು ಸ್ವಲ್ಪ ವಿದ್ದರು. ಆದರೆ ಈಗ ಬೇಕಾದಷ್ಟು ಮಂದಿ ಇದ್ದಾರೆ. ಅವರ ಹಿತವನ್ನು ನೋಡುವುದೂ ಸರಕಾರದ ಕರ್ತವ್ಯ ಈಗಿನ ಕಾಲಕ್ಕೆ ವೈದ್ಯ ವೃತ್ತಿ ವಿದ್ಯಾಸಂತರ ಮುಖ್ಯ ಜೀವನಾಧಾರವಾಗಿದೆ. ವಕೀಲರಂತೆ ವೈದ್ಯರ ಸಂಖ್ಯೆಯೂ ಹೆಚ್ಚಿ ವೈಪರೀತ್ಯಗಳಾರಂಭವಾಗಿದೆ. ಅವರ ಜೀವನವು ಕಠಿಣವಾಗುತ್ತಲಿದೆ. ಈ ಕಾರಣ ಕೈತುಂಬ ಸಂಬಳಬರುವ ಸರಕಾರೀ ಡಾಕ್ಟರರು ಖಾಸಗೀ ಕೆಲಸವಾಡಬಾರದೆಂದು ಸರಕಾರದವರು ಆಜ್ಞೆಮಾಡಿದ್ದು ಎಲ್ಲಾ ವಿಧದಲ್ಲೂ ತೃಪ್ತಿಕರವಾಗಿದೆ.

ಹಿಟ್ಲರನ ಭಾಷಣದ ಸಾರಾಂಶ.

ಇಂಗ್ಲೀಷಿನವರೇ ಯುದ್ಧದ ಆತುರತೆಗೆ ಕಾರಣ

"ನಾವು ಯುದ್ಧಕ್ಕಾಗಿ ಆತುರಿಸುತ್ತಿರುವುದಿಲ್ಲ. ಪ್ರಜಾಸರಕಾರಗಳೇ ಇದಕ್ಕೆ ತಯಾರಿಮಾಡುತ್ತಲಿವೆ. ಬ್ರಿಟನ್ ಜನವಾಬ್ದಾರಿಯನ್ನು ವಹಿಸಿದೆ ಈಕಾರಣ ಆಂಗ್ಲ–ಜರ್ಮನ್ ಸೌಕಾ ಒಪ್ಪಂದವನ್ನು ಸಮಾಧಿಮಾಡಬೇಕಾಗಿದೆ. ಜರ್ಮನಿಯಬೇಡಿಕೆಗಳೆಲ್ಲರಿಗೂ ತಿಳಿದಿವೆ. ಪೋಲೆಂಡಿನಲ್ಲಿ ನನಗೆ ದಾರಿಬೇಕು. ಡ್ಯಾಂಜಿಂಗ್ ಪಟ್ಟಣವನ್ನು ಸ್ವತಂತ್ರ ಮಾಡಬಹುದು. ಅದರಲ್ಲಿ ಪೋಲೆಂಡಿನವರು ಸ್ವತಂತ್ರವಾಗಿ ಬಂದರು ಕಟ್ಟಿಕೊಳ್ಳಬಹುದು. ಪೋಲೆಂಡಿನವರು ನಮ್ಮ ಬೇಡಿಕೆಯನ್ನು ತಿರಸ್ಕರಿಸಿರುವರು. ಜರ್ಮನ್ ಪೋಲೀಷ್ ಒಪ್ಪಂದವೂ ಮುರಿದಂತಾಯಿತು. ರಾಷವೆಲ್ಟರು ೩೪ ದೇಶಗಳು ನಾಶವಾದವೆಂದು ಹೇಳುತ್ತಾರೆ. ದೇಶಗಳಿದ್ದರಲ್ಲವೇನಾಶ. ತಾವೇಕೃತಕದೇಶಗಳನ್ನು ನಿರ್ಮಿಸಿದ್ದರೆ ಅದು ಯಾರತಪ್ಪು. ಅಮೆರಿಕಾದೇರವು ಕಂಡು ಹಿಡಿಯಲ್ಪಡುವ ಮುಂಚೆಯೇ ಜರ್ಮನಿಯು ಮೊಡ್ಡೆಸಾಮ್ರಾಜ್ಯವಾಗಿದ್ದಿತು. ಜರ್ಮನಿಗೆ ಕಾನ್‌ಳರೆನ್ಸ್‌ಗಳಲ್ಲಿ ಎಳ್ಳಷ್ಟು ನಂಬಿಕೆಯಿಲ್ಲ. ಲೀಗ್‌ಆಸ್‌ನೇಷನ್ಸ್ ಎಂಬ ಅಂತರಾಷ್ಟ್ರೀಯ ಸಂಸ್ಥೆಯು ಈ ಇಪ್ಪತ್ತು ವರ್ಷಗಳಲ್ಲಿ ಒಂದು ಸಮಸ್ಯೆಯನ್ನಾಗಲೀ ಬಗೆಹರಿಸಿಲ್ಲವೆಂಬುದು ಎಲ್ಲರಿಗೂ ತಿಳಿದಿದೆ. ಜರ್ಮನಿಯು ತನ್ನ, ಶಕ್ತಿಸಾಮರ್ಥ್ಯಗಳಮೇಲೆ ನಿಂತಿದೆ. ನಮಗೆ ವಸಾಹತುಗಳು ಬೇಕು. ಇದಕ್ಕೆ ಯುದ್ಧಮಾಡುವ ಅನಿವಾರ್ಯತೆಯೇ ಇಲ್ಲ. ಯುದ್ಧದ ಪ್ರಸಂಗವೇ ಬಂದರೆ ಜರ್ಮನಿಯು ಜಂಬದ ಬೀಳುವುದಿಲ್ಲ.

ವಂದೇ ಮಾತರಂ.

ಭಾರತ ಸ್ವದೇಶಿ ಭಾಂಡಾರ ಕೊಟ್ಟೂರು

ನಮ್ಮಲ್ಲಿ ಅಖಿಲ ಭಾರತ ಚರಖಾ ಸಂಘದಿಂದ (Certified by A. I. S. A.) ಪ್ರಮಾಣೀತವಾದ ಶುದ್ಧವಾದ ಖಾದಿಯು ಸರಿಯಾದ ಬೆಲೆಗೆ ದೊರೆಯುತ್ತದೆ. ಸ್ವದೇಶೀ ವಸ್ತುಗಳೂ ದೊರೆಯುತ್ತವೆ.

ಪ್ರೋತ್ಸಾಹಿಸಿರಿ.

ಶರಣಪ್ಪ ಗೊರ್ಲಿ.

ವಾಚಕರಿಗೆ ಸೂಚನೆ.

ಮೇ 12 ರಿಂದ 17ನೆಯ ತನಕ ಹರಪನಹಳ್ಳಿ ಜೋಡ್ಲು ಹೈಸ್ಕೂಲಿನ ಸುವರ್ಣ ಮಹೋತ್ಸವದ ಕಾರಣ, 13ನೆಯ ತಾ|| ನಂಜಿಕೆಯು ಹೊರಡುವುದಿಲ್ಲ.

THE NAVA BHARAT
ನವ ಭಾರತ
ಸಂಪಾದಕ-ಟಿ.ಪಿ.ಕೈಲಸಂ

ಶನಿವಾರ ಏಪ್ರಿಲ್ 6, 1939.

ಗ್ರಾಮ - ಮಾರ್ಗಗಳು

ಹಳ್ಳಿಗಳಿಗಿರುವ ಅನೇಕ ಕೊರತೆಗಳಲ್ಲಿ ಮಾರ್ಗ ಸೌಕರ್ಯವು ಮುಖ್ಯವಾದುದಾಗಿದೆ. ಬಹಳ ಜನಸಂಪತ್ತಿರುವ ದೊಡ್ಡ ಹಳ್ಳಿಗಳಿಗೂ ಕೂಡ ರಸ್ತೆಗಳಿಲ್ಲದಿರುವುದು ಶೋಚನೀಯವಾಗಿದೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ಈ ಕೊರತೆಯು ವಿಶೇಷ. ದೊಡ್ಡದೊಡ್ಡ ಗ್ರಾಮಗಳಿಗೆ ರಸ್ತೆಯ ಮಾರ್ಗಗಳಿಲ್ಲ. ತಾಲೂಕಿನ ರಸ್ತೆಗಳಾದರೂ ತೃಪ್ತಿಕರವಾಗಿಲ್ಲ. ರಾಯದುರ್ಗದ ತಾಲೂಕಿನಲ್ಲಿಯೂ ಕೂಡ ಮಾರ್ಗಗಳೇರ್ಪಡಬೇಕಾಗಿದೆ. ಹರಪನಹಳ್ಳಿ ತಾಲೂಕು ಅರಸೀಕೆರೆಯಿಂದ ಉಚ್ಚಂಗಿದುರ್ಗ ಮಾರ್ಗವಾಗಿ ಅಣಜೀ ಡಾವಣಗೆರೆ ರಸ್ತೆಗೆ ಕೂಡಿಸಬೇಕಾದ ಮಾರ್ಗವು ಅತ್ಯಾವಶ್ಯಕವಾಗಿದೆ. ಇವು ಅತಿ ಆವಶ್ಯಕವಾದುವುಗಳಲ್ಲಿ ಕೆಲ ಉದಾಹರಣೆಗಳಾಗಿವೆ. ಜಿಲ್ಲಾ ಬೋರ್ಡು ಮೆಂಬರುಗಳು ತಮ್ಮ ತಮ್ಮ ಭಾಗಗಳಲ್ಲಿನ ಮುಖ್ಯ ಮುಖ್ಯ ರಸ್ತೆಗಳ ಅವಶ್ಯಕತೆಯನ್ನು ತಿಳಿಸಿದರೆ ಜಿಲ್ಲಾ ಬೋರ್ಡು ಮೀಟಿಂಗ್‌ನಲ್ಲಿ ಎಲ್ಲರೂ ಸೇರಿ ಯಾವ ಮುಖ್ಯವಾದುವುಗಳನ್ನು ಪ್ರಾರಂಭಿಸಬೇಕೆಂಬುದು ನಿಶ್ಚಯಿಸಲ್ಪಡಬಹುದು. ಜಿಲ್ಲಾ ಬೋರ್ಡಿನಲ್ಲಿ ರಸ್ತೆಗಳಿಗಾಗಿ ಹಣವು ಇಲ್ಲ. ಹೊಸ ರಸ್ತೆಗಳನ್ನು ಪ್ರಾರಂಭಿಸಲು ಸರಕಾರದ ಸಹಾಯ ಪಡೆಯಲು, ಸಾಧಿಸಬೇಕು.

ಕಲೆಕ್ಟರರನ್ನೊಪ್ಪಿಸಿ ಆಲ್ ಇಂಡಿಯಾ ಗ್ರಾಂಟಿನಿಂದ ರಸ್ತೆಗಳಿಗಾಗಿ ಹಣ ಪಡೆಯಬೇಕು.

ಹೊಸವಾಗಿ ರಸ್ತೆಗಳನ್ನು ಪ್ರಾರಂಭಿಸಲು ಜನವರಿ ತಿಂಗಳಿನಿಂದ ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ರಸ್ತೆಗಳ ಅವಶ್ಯಕತೆಯು ತಿಳಿಯುವಂತೆ ಆ ಭಾಗದ ಮಹಾಜನರು ತೀವ್ರ ಪ್ರಚಾರವನ್ನು ಕೈಕೊಳ್ಳಬೇಕು. ಸಭೆಗಳನ್ನು ಸೇರಿಸಿ ನಿರ್ಣಯಗಳನ್ನು ಮಾಡಿ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಬೇಕು. ಜಿಲ್ಲಾ ಬೋರ್ಡು ಸಭೆಗಳಲ್ಲಿ ನಿಶ್ಚಿತವಾದ ಕಾರ್ಯಕ್ರಮವು ಏರ್ಪಟ್ಟು ಮಾರ್ಗಸೌಕರ್ಯಗಳಿಗಾಗಿ ಅನರು ಸುಸೂತ್ರವಾಡಲಿರುವಂತೆಂಬುದು ಎಲ್ಲರಿಗೂ ತಿಳಿಯುವಂತೆ ಆಗಬೇಕು. 13-ನೇಯ ತಾ|| ನಡೆಯುವಲಿರುವ ಜಿಲ್ಲಾ ಬೋರ್ಡು ಸಭೆಯಲ್ಲಿ ಸದಸ್ಯರು ತಮ್ಮ ಭಾಗಗಳಲ್ಲಿನ ರಸ್ತೆಗಳನ್ನು ಸೂಚಿಸುತ್ತ ಸೀರಿನ ಕೊರತೆಯನ್ನು ತಿಳಿಸಿ ಮುಂದಿನ ಸಭೆಯಲ್ಲಿ ಕಾರ್ಯಕ್ರಮವನ್ನು ನಿಶ್ಚಯಿಸಲು ಸೌಕರ್ಯಗಳನ್ನೇರ್ಪಡಿಸುವಂತೆಂದು ಆಶಿಸುತ್ತೇವೆ

ಸ್ವೀಕಾರ

'ಹಂಸ'

ನರಸಿಂಹರಾಜರೋಡ್ ಬೆಂಗಳೂರು.
ವಾರ್ಷಿಕ ಚಂದಾ 3—12—0

ಬೆಂಗಳೂರಿನಿಂದ ಹೊರಡುವ ಕನ್ನಡ ವಾರ ಪತ್ರಿಕೆ. 'ನಮ್ಮ ಪ್ರಕೃತ್ಯನುಸಾರ ಯೋಗ್ಯರೀತಿಯಲ್ಲಿ, ಎಲ್ಲರೂ ಮೆಚ್ಚುವಂತೆ, ರಾಷ್ಟ್ರಸೇವೆಯನ್ನೂ, ಪ್ರಜಾಸೇವೆಯನ್ನೂ, ರಾಜಸೇವೆಯನ್ನೂ, ಭಾಷಾಸೇವೆಯನ್ನೂ ಸಲ್ಲಿಸುತ್ತಾ ಹೋಗುವೆನೆಂಬುದಾಗಿ ಮನನಮಾಡಿಕೊಳ್ಳುವೆವು ಎಂಬುದಾಗಿ ಸಂಪಾದಕೀಯದಲ್ಲಿದೆ ಎಲ್ಲರನ್ನೂ ಮೆಚ್ಚಿಸುವ ಈ ಕಾರ್ಯದಲ್ಲಿ ಸಂಪಾದಕರಿಗೆ ಯಶಸ್ಸು ದೊರೆಯಲೆಂದೂ, 'ಹಂಸ' ವು ಕರ್ನಾಟಕದಲ್ಲಿ ಹೆಬ್ಬುತ್ತಿರುವ ಜಾತೀಯತೆ ಸ್ವಾರ್ಥ ಮುಂತಾದ ಕೊಳೆಯನ್ನು ದೂರಮಾಡುವ 'ಹಂಸ' ನಾಗಲೆಂದೂ ಹಾರೈಸುತ್ತೇವೆ.

ಹಿಂದೂಸ್ಥಾನ

ಶ್ರೀ ಸುಭಾಸಚಂದ್ರಬೋಸರು ಕಾಂಗ್ರೆಸ್ಸಿನ ತೀವ್ರಗಾಮಿಗಳ ಪಕ್ಷವೊಂದನ್ನು ಮೇ 3ನೇ ತಾ, ಸ್ಥಾಪಿಸಿದರು. ಮ. ಗಾಂಧಿಯವರ ಅಹಿಂಸಾತ್ಮಕ ಅಸಹಕಾರ ನೀತಿಯನ್ನೂ, ಕಾರ್ಯ ರೀತಿಯನ್ನೂ ಹೊಸ ಪಕ್ಷವು ಅಂಗೀಕರಿಸುತ್ತದೆ. ಸುಭಾಸರು ಮುಖಂಡರಾಗಬಹುದು.

K. B. & SONS.
[Estd 1935.]
General and Paper Merchants.
Car Street, **BELLARY.**
(Prefer Hoogly Printing inks for neat and attractive Printing)
Best reliable and cheapest house for all kinds of Novelties, Oilman stores, Thermas Flasks, Food. Jars, Fountain Pens of numerous qualities and makes, Patent Medicines. Perfumes Toilet and Washing Soaps, Glass ware Tea Coffee, all kinds of Papers and agents for Hoogly Printing inks
ಎಲ್ಲಾವಿಧವಾದ ಸ್ಟೇಷನರಿ, ಕಾಗದಗಳು ಔಷಧಗಳು, ಸಬ್ಬು, ಸುಗಂಧ, ಕಾಫಿ ಟೀ, ಗಾಜಿನ ಸಾಮಾನು, ಅಂದವಾದ ಮುದ್ರಣಕ್ಕೆ ಬೇಕಾಗುವ ಹೊಸ್ಲಿ ಮಸಿ ಇವೆಲ್ಲವನ್ನೂ ಸುಲಭ ಬೆಲೆಗೆ ದೊರೆಯುತ್ತೆ.
ಕೆ. ಬಿ. ಅಂಡ್ ಸನ್ಸ್, ತೇರು ಬೀದಿ, ಬಳ್ಳಾರಿ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ

★

ಕಾಂಗ್ರೆಸಾ ಅಧ್ಯಕ್ಷರಾದ ಬಾಬೂ ರಾಜೇಂದ್ರ ಪ್ರಸಾದರವರು ಈ ಕೆಳಗೆ ಕಾಣಿಸಿದ ಮಹನೀಯರನ್ನು ವರ್ಕಿಂಗ್ ಕಮಿಟೀ ಸದಸ್ಯರನ್ನಾಗಿ ನಿಯಮಿಸಿಕೊಂಡಿರುವರು. ಈ ಮಂತ್ರಿಮಂಡಲಕ್ಕೆ ಮಹಾತ್ಮರ ಒಪ್ಪಿಗೆ ಇರುವದೆಂದು ಅಧ್ಯಕ್ಷರು ತಿಳಿಸಿದರು.

1. ಮೌಲಾನಾ ಅಬುಲ್‌ಕಲಾಂ ಆಜಾದ್
2. ಶ್ರೀಮತಿ. ಸರೋಜಿನಿನಾಯಿಡು.
3. ಸರ್ದಾರ ವಲ್ಲಭಭಾಯಿ ಪಟೇಲ
4. ಸೇಟ ಜಮನಾಲಾಲ ಬಜಾಜ್
5. ಶ್ರೀ ಜಯರಾಮದಾಸ್, ದೌಲತ ರಾಮ್
6. ಖಾನ್ ಅಬ್ದುಲ್‌ಗಫರ್‌ಖಾನ್
7. ಶ್ರೀ ಜೆ. ಬಿ. ಕೃಪಾಲಿನಿ
8. ಪಟ್ಟಾಭಿ ಸೀತಾರಾಮಯ್ಯ
9. ಭೂಲಾಭಾಯಿ ದೇಶಾಯಿ
10. ಶಂಕರರಾವ ದೇವ್
11. ಹರಿಕೃಷ್ಣಮಹತಬ್
12. ಬಿಧನ ಚಂದ್ರರಾಯ್
13. ಡಾ. ಪ್ರಫುಲ್ಲ ಚಂದ್ರಘೋಷ್

ಇಂಗ್ಲೆಂಡಿನ ಮಾಂಚೆಸ್ಟರ್-ಗಾರ್ಡಿಯನ್ ಮತ್ತು ಡೇಲಿ ಟೆಲಿಗ್ರಾಫ್ ಪತ್ರಿಕೆಗಳು ಮಹಾತ್ಮ ಗಾಂಧಿಯವರಿಗೆ ವಿಜಯಸಾಯಿತೆಂದು ಬರೆದಿವೆ.

ಆಲ್-ಇಂಡಿಯಾ - : ಕಾಂಗ್ರೆಸ್ ಕಮಿಟಿ.

ತೀರ್ಮಾನಗಳು.

ಯುದ್ಧದ ಆಪಾಯ—

ಪಂಡಿತ ಜವಾಹರಲಾಲರಿಂದ ಸೂಚಿತವಾಗಿ. ಶ್ರೀ ಭೂಲಾಭಾಯಿ ದೇಶಾಯಿಯವರಿಂದ ಅನುಮೋದಿತವಾಯಿತು. ಅಂತರಾಷ್ಟ್ರೀಯ ಯುದ್ಧವು ಸಂಭವಿಸುವಪ್ರಸಂಗವುಸಮಿಪಿಸಿರುವದರಿಂದ ಎ. ಐ. ಸಿ. ಸಿ. ಸಭೆಯು ರಾಷ್ಟ್ರೀಯ ತತ್ವದ ವಿಷಯಕ್ಕೆ ಎಲ್ಲರನ್ನೂ ಎಚ್ಚರಿಸುತ್ತದೆ. ತಾನು ವ್ಯಕ್ತಪಡಿಸಿದ ಈ ತತ್ವವನ್ನು ದೃಢವಾಗಿ ಪಾಲಿಸುವದರಲ್ಲಿ ಬದ್ಧವಾಗಿ ಯುದ್ಧಕ್ಕಾಗಿ ಹಿಂದೂಸ್ಥಾನದ ಸಂಪತ್ತಿಯನ್ನು ಪ್ರಯೋಗಿಸುವ ಪ್ರಯತ್ನಗಳನ್ನೆಲ್ಲಾ ಎದುರಿಸಲು ಕಾಂಗ್ರೆಸ್ ನಿಶ್ಚಯಮಾಡಿದೆ. ಹಿಂದೂಸ್ಥಾನದ ಸೈನ್ಯಭಾಗವಷ್ಟನ್ನು ತನ್ನ ಸಾಮ್ರಾಜ್ಯೋಪಜನೆಗಳಿಗಾಗಿ ಏಡನ್ ಕಡೆ ಕಳುಹಿಸಿರುವುದಕ್ಕೆ ಈ ಸಭೆಯು ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸುತ್ತದೆ.

ಬ್ರಿಟಿಶ ಸಾಮ್ರಾಜ್ಯದ ಏಜಂಟನಾಗಿ ಕೆಲಸ ಮಾಡುವ ಕೇಂದ್ರಸರಕಾರಕ್ಕೆ ಯುದ್ಧಕಾಲದಲ್ಲಿ ಎಲ್ಲಾ ಅಧಿಕಾರಗಳನ್ನೂ ಕೊಡಲು ಗವರ್ನಮೆಂಟ್ ಆಫ್ ಇಂಡಿಯಾ ಕಾಯ್ದೆಯಲ್ಲಿ ಬದಲಾವಣೆ ಮಾಡಲೆತ್ನಿಸಿದ ಬ್ರಿಟಿಶ ಸರಕಾರದ ಪ್ರಯತ್ನವನ್ನು ಈ ಸಭೆಯು ನಿಷೇಧಿಸುತ್ತದೆ. ಸದರಿ "ಆಕ್ಟ್"ನ್ನು ಕೊನೆಗಾಣಿಸಲು ಒದ್ದಾಡುವ ಕಾಂಗ್ರೆಸ್ ಅದರಲ್ಲಿನ ಒದಲಾವಣೆಗಳಿಗೆ ವಿಶೇಷಗಮನ ಕೊಡದಿದ್ದರೂ ಯುದ್ಧಕಾಲದಲ್ಲಿ ಕೇಂದ್ರಸರ್ಕಾರಂದ ಪ್ರೇ ಎಲ್ಲಾ ಅಧಿಕಾರಿಗಳನ್ನಿಡುವ ಪ್ರಯತ್ನಗಳನ್ನು ಎಲ್ಲಾ ವಿಧದಿಂದಲೂ ಕಾಂಗ್ರೆಸ್ ಎದುರಿಸುವುದು ಎ. ಐ. ಸಿ. ಸಿ. ಯಿಂದಲಾದರೂ, ಅಥವಾ ವರ್ಕಿಂಗ್ ಕಮಿಟಿಯಿಂದಲಾದರೂ ಈ ವಿಷಯದಲ್ಲಿ ನಿರ್ಣಯನಾಗುವ ಪ್ರಕಾರ ನಡೆದುಕೊಳ್ಳಲು ಸಿದ್ಧರಿರಬೇಕೆಂದು ಪ್ರಾಂತೀಯ ಸರ್ಕಾರಗಳೆಲ್ಲಾ ಈ ಸಭೆಯು. ಎಚ್ಚರಿಕೆಯನ್ನು ಕೊಡುತ್ತದೆ.

ಕಾಂಗ್ರೆಸ್ ಶುದ್ಧತೆ:-

ತ್ರಿಪುರೀ ಕಾಂಗ್ರೆಸ್ ಅಧಿವೇಶನದಲ್ಲಿ ತೀರ್ಮಾನಿಸಲ್ಪಟ್ಟಿಂತೆ ಕಾಂಗ್ರೆಸ್ಸಿನಲ್ಲಿ ಶುದ್ಧತೆಯನ್ನು ಕಾಪಾಡಲೋಸುಗ ಸೂಚನೆಗಳನ್ನು ಕೊಡಲು ಕೆಳಗಿನ ಸದಸ್ಯರಿಂದ ಕೂಡಿದ ಒಂದು ಸಮಿತಿಯನ್ನು ಈ ಸಭೆಯು ನಿಯಮಿಸುತ್ತದೆ.

(1) ಅಧ್ಯಕ್ಷರು- ಬಾಬೂರಾಜೇಂದ್ರ ಪ್ರಸಾದ (2) ಪಂ॥ ಜವಾಹರಲಾಲ ನೆಹರೂ, (3) ಡಾ. ಪಟ್ಟಾಭಿ ಸೀತಾರಾಮಯ್ಯ (4) ಆಚಾರ್ಯ ನರೇಂದ್ರದೇವ (5) ಶ್ರೀ ಜೆ. ಬಿ. ಕೃಪಾಲಿನಿ.

ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯರ ಹಿತಕ್ಕಾಗಿ ಕಾಂಗ್ರೆಸ್ ಸಹಾನುಭೂತಿಯನ್ನು ಅರ್ಪಿಸುವ ನುತ್ತು ಬಂಗಾಳ ಪಂಜಾಬಗಳಲ್ಲಿ ರಾಜಕೀಯ ಕೈದಿಗಳನ್ನು ಶೀಘ್ರವಾಗಿ ಮುಕ್ತಮಾಡಬೇಕೆಂಬುವ 3-4 ನೇ ನಿರ್ಣಯಗಳು ಚರ್ಚೆಯಿಲ್ಲದೆ ಪಾಸಾದವು.

ಬೀಹಾರಿನಲ್ಲಿ ವಿದ್ಯಾಭ್ಯಾಸದ ಪ್ರಗತಿ.

ಜನತೆಯನ್ನು ನಿರಕ್ಷರತೆಯಿಂದ ದೂರಮಾಡಲು ಪ್ರಾಂತದಲ್ಲಿ ಜನತಾ ವಿದ್ಯಾ ಸಂಘವು ಈ 5 ತಿಂಗಳಲ್ಲಿ 3 ಲಕ್ಷ ಜನರಿಗೆ ಓದು ಬರಹವನ್ನು ಕಲಿಸಿದೆ. ಹರಿಜನರು ವಿಶೇಷವಾಗಿ ವಿದ್ಯೆಯನ್ನು ಕಲಿಯಲು ಆತುರಸ್ಥರಿರುವರು. ಜೈಲಿನಲ್ಲಿ ಕೈದಿಗಳಿಗೆಲ್ಲಾ ವಿದ್ಯೆಯು ಕಲಿಸಲ್ಪಡುತ್ತಲಿದೆ. ವಿದ್ಯಾಖಾತೆಯ ಮಂತ್ರಿಗಳಾದ ಡಾ. ಮಹಮ್ಮದ್‌ರು ಇದರಲ್ಲಿ ವಿಶೇಷ ಆಸ್ಥೆಯನ್ನು ವಹಿಸಿರುವರು.

ಬೃಂದಾವನದಲ್ಲಿ ಗಾಂಧೀ ಸೇವಾಸಂಘದ ಸಭೆ

ಬೀಹಾರ ದೇಶದ ಬೃಂದಾವನವಲಿ ಏ.ನೇಯ ತಾ॥ ನಿಂದ ಗಾಂಧೀಸೇವಾ ಸಂಘದ ಸಭೆಯು ನಡೆಯುತ್ತಲಿದೆ. ಮಹಾತ್ಮ ಗಾಂಧೀಯವರು ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರ ಸಮೇತರಾಗಿ ಕಲ್ಕತ್ತೆಯಿಂದ ಆಗಮಿಸಿದರು. ನಿವಿಧ ಪ್ರಾಂತಗಳಿಂದ ಗಾಂಧಿ ಭಕ್ತರು ಬಂದಿರುವರು.

ಅಂಬಾ ಭವನ ಕಾಫೀ ಕ್ಲಬ್

(ರಜಿಸ್ಟರ್ಡ್)

ಮತ್ತು

ಶಾಖೆ— **ಊಟದ - ಹೋಟೆಲ್.**

ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪದಲ್ಲಿದೆ ಶುದ್ಧತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾಳಿ ಬೆಳಕು ಮತ್ತು ಇತರ ಅನುಕೂಲಗಳಿರುವ ಕೊಠಡಿಗಳು, ಭೋಜನ ಸಮಾರಂಭ ಟೀಪಾರ್ಟಿಗಳ ವಿಷಾಟುಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆಮಾಡುವೆವು.

ಪ್ರೊಪ್ರಯಿಟರ್ಸು—

ಕಿ. ಕೆಸ್ಸಯ್ಯ, ಹೆಚ್. ಕರಿಬಸಪ್ಪ.

ರಾಮದುರ್ಗ ಸಂಸ್ಥಾನದಲ್ಲಿ ನಡೆದ ಹಿಂಸಾಕೃತ್ಯ.

ಮಹಾತ್ಮ ಗಾಂಧಿಯವರ ಲೇಖನ.

ರಾಮದುರ್ಗ ಅತ್ಯಾಚಾರವನ್ನು ಕುರಿತು ನಾನು ಇಮಸರಿಗೆ ಒಂದು ಸಾರವನ್ನೂ ಸಹ ಆಡಿಲ್ಲ. ತಮ್ಮ ಹೇಳಿಕೆಯನ್ನು ಕೇಳಿಕೊಳ್ಳಬೆ ನಾನು ಯಾವದೇ ಆಪೇಕ್ಷೆಯನ್ನೂ ಕೂಡಬಾರದೆಂದು ಡಾ ಹರಡೀಕರರಿಂದ ನನಗೊಂದು ತಂತಿಯ ಬಂದಿತ್ತು. ಆತ್ತ ರಾಜಕೋಟೆಯ ತೊಡಕಿನಿಂದ, ನನಗೆ ಬೇರೆ ಯಾವ ಕಲಸಕ್ಕೂ ಅವಕಾಶ ಸಿಕ್ಕಿರಲಿಲ್ಲ. ಶ್ರೀ ದಿವಾಕರ, ಶ್ರೀ ಕೌಜಲಗಿ ಮತ್ತು ಡಾ ಹರಡೀಕರರು ಸಿದ್ಧಪಡಿಸಿದ ವರದಿಯನ್ನು ನಾನು ಇಂದಿಗೆ ಗಾಡಿಯಲ್ಲಿ ಓದಿಮುಗಿಸಿದೆನ. ಇದೇ ಸಂಬಂಧವಾಗಿ ಶ್ರೀ ದಿವಾಕರರು ಒರಪ ಟಿಪ್ಪಣಿಯನ್ನು ನೋಡಿರುವೆನು. ರಾಮದುರ್ಗ ಸ್ವಕರಣವನ್ನು ಕುರಿತು ಶ್ರೀ ಗಂಗಾಧರರಾವ ದೇಶಪಾಂಡೆಯವರು ಬರದ ಟಿಪ್ಪಣಿಯನ್ನೂ ನಾನು ಅಭ್ಯಾಸಮಾಡಿರುವನು. ನ್ಯಾಯಸಂಪಾದ ಅಧ್ಯಕ್ಷರಾದ ಶ್ರೀ ಮುನವಳ್ಳಿಯವರು ಮತ್ತು ಶ್ರೀ ನಾಗಡಿಯವರು ನನ್ನ ಬೆಟ್ಟಗೆ ಬಂದಿದ್ದರು. ಶ್ರೀ ದಿವಾಕರ, ಶ್ರೀ ಕೌಜಲಗಿ ಮತ್ತು ಡಾ. ಹರಡೀಕೆರರು ಸಿದ್ಧಪಡಿಸಿದ ವರದಿಯು ನಿರ್ದಿಕಾರವು, ನಿಷ್ಪಕ್ಷಪಾತವೂ ಯೋಗ್ಯವೂ ಆದ ಲಿಖಿತವಾಗಿದೆ

ಆದರೆ ಕೊನೆಯಲ್ಲಿ ಹೀಗೆ ಹೇಳಿದೆ.

'ಅಧಿಕಾರಿಗಳು ಬಹಳ ಆಚಾತುರ್ಯದಿಂದ ವರ್ತಿಸಿ ಪೋಲೀಸರನ್ನು ಸಡಿಲು ಬಿಟ್ಟರೆಂದು ನಮಗೆನಿಸುತ್ತದೆ. ಜನರು ಸ್ವಲ್ಪ ತಾಳ್ಮೆಯಿಂದ ವರ್ತಿಸಿ, ಹಿಂದೆ ಎಷ್ಟೋಸಲ ಮಾಡಿದಂತೆ ಈಸಲವೂ ಪ್ರಜಾಸಂಘದ ಕಾರ್ಯಕರ್ತರ ಮೇಲೆಯೇ ಜವಾಬದಾರಿಯನ್ನು ಹಾಕಿದ್ದರೆ ಪರಿಸ್ಥಿತಿಯನ್ನು ತಮ್ಮ ಸ್ವಾಧೀನದಲ್ಲಿಟ್ಟು ಕೊಳ್ಳಲು ಸಾಧ್ಯವಾಗಬಹುದಾಗಿತ್ತು. ಆದರೆ ಒಂದು ವೇಳೆ ದರ್ಬಾರದವರಿಂದ, ಸಿಟ್ಟಿಗೆಬ್ಬಿಸುವಂತಹ ಕೃತ್ಯಗಳು ಆಗಿದ್ದರೂ, ಇಂತಹ ಅಮಾನುಷ ಅತ್ಯಾಚಾರವನ್ನಾಚರಿಸುವಷ್ಟು ಅವು ಭಾರಿಯಾಗಿದ್ದವೆಂದು ನಾವುಗನಿಸುವದಿಲ್ಲ ಉದ್ರೇಕಗೊಂಡ ಜನರ ಸಿಟ್ಟೇ ಇದಕ್ಕೆ ಕಾರಣವೆಂದು ಹೇಳಬಹುದು ಅಲ್ಲಿಲ್ಲಿ ಹೊಟ್ಟೆಕಿಚ್ಚಿನ ಹಳೆಯ ವೈಷಮ್ಯಗಳನ್ನು ನೆಂಬಿ ಜನರು ಒಬ್ಬರಮೇಲೆ ಸಿಟ್ಟಿಗೆದ್ದಂತೆ ತೋರುತ್ತದೆ

'ಆದರೆ ಸಿಟ್ಟಿಗೆಬ್ಬಿಸುವ ಕೃತ್ಯಗಳು ಎಷ್ಟೇ ಆಗಿದ್ದರೂ ಜನರು ಹಿಂಸೆಯನ್ನಾಶ್ರಯಿಸುವರು ಸ್ವಲ್ಪವೂ ಸರಿಯಲ್ಲ. ಹಾಗೆ ನೋಡುವದು ಎಂದಿಗೂ ನ್ಯಾಯವೆನಿಸಲಾರದು. ಅತ್ಯಾಕೆ ಸಿಟ್ಟಿಗೆಬ್ಬಿಸುವಂತಹ ಕೃತ್ಯಗಳು ಹಚ್ಚಿ ದಷ್ಟೂ ಅಹಿಂಸಾಮಯ ಪ್ರತಿರೋಧವನ್ನು ತೋರಿಸುವ ಸುವರ್ಣಾವಕಾಶಗಳು ಹೆಚ್ಚಾಗಿ ಬರುತ್ತವೆ ಇದೇ ನಮ್ಮ ಆದರ್ಶತತ್ವವಾಗಿರಬೇಕು ಹೀಗಿರುವಾಗ ಎಂತಹ ಪರಿಸ್ಥಿತಿಯಲ್ಲಿ ಹಿಂಸಾಚಾರವಾಗಿದ್ದರೂ ಅವನ್ನೆಂದಿಗೂ ನಾವು ಸಮರ್ಥಿಸಬಾರದೆನ್ನ ಜನತೆಯಲ್ಲಿ ಅಡಗಿದ್ದ ಹಿಂಸಾತ್ಮಕ ಭಾವನೆಗಳನ್ನು ತಡೆಗಟ್ಟಲು ಪ್ರಜಾಸಂಘವು ಸರ್ವದಾ ವಿರಲಿಲ್ಲವೇನು ಈ ಘಟನೆಗಳಿಂದ ತಾನಾಗಿಯೇ ನ್ಯಾಕ ಪಾಗುತದೆ ಇದು ಬಹಿ ನಿಷ್ಠಾದಾರ ನಂಗತಿಯು ಸಂಸ್ಥಾನಗಳಲ್ಲಿ ನಡೆಯುತ್ತಿರುವ ನ್ಯಾಯಾ ಜಳವಳಿಗಳ ಮೂಲಕ ಈ ಮುರಂತದಿಂದ ಒಳಿತು ಕಟ್ಟು ಕಾರಣಾಮನಾಗುವದು ಖಂಡಿತ ಸಂಸ್ಥಾನಗಳಲ್ಲಿ ವಾಸಿಸುವ ಎಲ್ಲ ಕಾರ್ಯಕರ್ತರಿಗೂ ಇದೊಂದು ಬೆಳೆಯ ಎಚ್ಚರಿಕೆಯ ತಿಪೆ. ಜನರು ಸರಿಯಾದ ಶಿಕ್ಷಣವನ್ನು ಪಡೆದು ಅಹಿಂಸಾತ್ಮಕ ತತ್ವವು ಅವರಲ್ಲಿ ಚನ್ನಾಗಿ ಭೇದಿಸಿದೆ ಎಂದು ಮನವರಿಕೆಯಾಗುವನರೆಗೆ ದೊಡ್ಡ ಪ್ರಮಾಣದ ಚಳವಳಿಗಳನ್ನು ಹೂಡುವದು ಅವಿವೇಕವು

ನನ್ನ ಮುಂದಿರುವ ಸಾಕ್ಷ್ಯಗಳನ್ನು ಅಭ್ಯಾಸ ಮಾಡಿ ನೋಡಲಾಗಿ ಎಷ್ಟೇ ಸಿಟ್ಟಿಗೆಬ್ಬಿಸಲ್ಪಟ್ಟಿದ್ದರೂ ಜನರ ರೌದ್ರಾವೇಶವೂ ಸ್ವಚ್ಛಂದ ವೃತ್ತಿಯೂ ಕ್ರೂರವಾಗಿರುವದೆಂಬ ಬುದ್ಧಿಪೂರ್ವಕವಾಗಿ ಮಾಡಲ್ಪಟ್ಟಿದ್ದಿರುವದೆಂದು ನನಗೆನಿಸುತ್ತದೆ. ಸೇಡು ತೀರಿಸಿಕೊಳ್ಳುವದಕ್ಕಾಗಿ ಸುಮಾರು ಎರಡು ಸಾವಿರಕ್ಕಿಂತ ಹೆಚ್ಚು ಜನರು ಒಂದು ಕಡೆ ಸೇರಿದ್ದರು ಅಧ್ಯಕ್ಷರನ್ನು ಮತ್ತು ಬೇರೆ ಕೆಲವು ಸೆರೆಯಾಳುಗಳನ್ನು ಬಿಡುಗಡೆ ಮಾಡಬೇಕೆಂದರು ಅವರ ಉದ್ದೇಶವಾಗಿತ್ತು. ಜನರು ಮಾಡಿದ ಅತ್ಯಾಚಾರದ ಅಪರಾಧದಿಂದ ಕಾಂಗ್ರೆಸ್ಸಿಗರು ಎಂದೂ ಪಾರಾಗಲಾರರು ಹಳ್ಳಿಗರಿಗೆ ಕೆಟ್ಟ ಖಾತರನ್ನು ಜೋಡಿಸಲಾಗಿತ್ತು ಅದರಂತೆಯೇ ಅವರು ನಡೆದರು. ಬಿಸಿಸ್ಸಾಪ ರಾಣಪುರದಲ್ಲಿ ಈ ಬಗೆಯ ಮೊದಲನೇ ಅತ್ಯಾಚಾರವು ಸಂಭವಿಸಿತು ಈಗ ರಾಮದುರ್ಗದಲ್ಲಿ ಎರಡನೆಯದಾಗಿದೆ

ರಾಮದುರ್ಗದ ರಾಜಾನಾಹೇಬರು ಕಾಂಗ್ರೆಸ್ಸಿನೊಡನೆ ಮಿತ್ರತ್ವದಿಂದ ನಡದುಕೊಳ್ಳುತ್ತಿದ್ದರೆಂಬದನ್ನು ಯಾರೂ ಅಲ್ಲಗಳೆಯುವದಿಲ್ಲ ಅದರಿಂದ ಅವರ ಒಳ್ಳೆಯ ಯೋಗ್ಯ ರೀತಿಯಿಂದ ನಡೆಮಾಡಿಕೊಳ್ಳಜೇಕಾಗಿತ್ತು ಜನರನ್ನು ಸಿಟ್ಟಿಗೆಬ್ಬಿಸುವಂತಹ ಕೃತ್ಯಗಳ ಸತ್ಯಾಸತ್ಯತೆಯನ್ನು ಕುರಿತು ನಾನು ಈಗ ವಿಚಾರಮಾಡುವದಿಲ್ಲ. ಈ ಸಂಬಂಧವಾಗಿ ಸಾಕಷ್ಟು ಗಂಭೀರ ಆರೋಪಣೆಗಳವೆ ಆದರೆ ಆ ಕೃತ್ಯಗಳು ಎಷ್ಟೇ ಭಯಂಕರವಾಗಿದ್ದರೂ ಅವುಗಳ ಆಧಾರದಿಂದ ಜನತೆಯು ಮಾಡಿದ ಹಿಂಸಾಚಾರವನ್ನು ಸಮರ್ಥಿಸಿಕೊಳ್ಳುವದು ಎಂದಿಗೂ ಕಾಂಗ್ರೆಸ್ಸಿನ ಧೋರಣವಾಗಿಲ್ಲ ಕಾಂಗ್ರೆಸ್ಸಿನ ಈ ಮೂಲಭೂತ ತತ್ವವಬಗ್ಗೆ ಹುದುಗಾಟ ಮಾಡಿದರೆ ನಾವು ಸರ್ವಸ್ವವನ್ನೂ ಕಳಿದುಕೊಳ್ಳುವೆವು. ಹಿಂಸಾಚಾರದ ಸಾಸನೆಯು ನನಗೆ ಒಬ್ಬ ವಿಷಯವೆಂದು ಈ ರಾಮದುರ್ಗ ಸಂಸ್ಥಾನಕ್ಕಿಂತಲೂ ಮೊದಲೇ ಬರೆದಿದ್ದೆನು. ಹಿಂಸೆ ಅಥವಾ ಅಸತ್ಯಗಳು ತೀರಸ್ಪಲ್ಪ ಕಂಡುಬಂದರೂ ಅವನ್ನು ನಾನು ಬಲು ಬೇಗ ತಿಳಿದುಕೊಳ್ಳಬಲ್ಲೆನು ಅಸೆರಪೂ ಅವಶ್ಯವಿಲ್ಲದ ಮಕ್ಕಳೇತರಿದುವವ.

ಕಾಂಗ್ರೆಸ್ಸಿನಲ್ಲಿ ಮನೋಸಾಕ್ಷ್ಯಾಧ್ಯಯಗಳಿಂದ ಹಿಂಸಾಚಾರವನ್ನು ತೊಡೆದು ಹಾಕಲು ಪ್ರಾಂತಿಕ ಕಾಂಗ್ರೆಸ ಕಮೀಟಿಗಳವರೂ, ಹೊಸ ವರ್ಕಿಂಗ ಕಮೀಟಿಯು ಸ್ಥಾಪಿಸಲ್ಪಟ್ಟ ಮೇಲೆ ಅದೂ ಉಗ್ರೋಪಾಯಗಳನ್ನು ಕೈಕೊಳ್ಳಬೇಕಾಗುವದು ಎಷ್ಟೋಸಲ ಸತ್ಯ ಅಹಿಂಸೆಗಳನ್ನು ಸಹ ಬಿಟ್ಟು ನಡೆಯಲಾಗುತ್ತಿದೆಯೆಂದು ನಾನು ಪಮವ ಹಲಕೆಲವು ವೃತ್ತಪತ್ರಗಳಿಂದ ನನಗೆ ಕಾಣುಬರುತ್ತದೆ ಈ ಅನಿಷ್ಟವನ್ನು ಹೇಗೆ ಹೋಗಲಾಡಿಸಬೇಕೆಂದು ನನಗೆ ತಿಳಿಯದಂತಾಗಿದೆ ಕಾಂಗ್ರೆಸ ಜನರಿಂದ ನಡೆಸಲ್ಪಡುವ ವೃತ್ತ ಪತ್ರಗಳು ನೈತಿಕ ಅಧಿಕಾರಕ್ಕೆ ತಲೆಬಾಗಿ ನಡೆಯಬಹುದು ಆದರೆ ಹಳ್ಳಿಗಳಲ್ಲಿ ಕೆಲಸ ಮಾಡುವ ಕಾಂಗ್ರೆಸ ಜನರಿಂದ ನಡೆಸಲ್ಪಡುವ ವೃತ್ತಪತ್ರ

ಗಳು ನೈತಿಕ ಅಧಿಕಾರಕ್ಕೆ ತಲೆಬಾಗಿ ನಡೆಯಬಹುದು. ಆದರೆ ಹಳ್ಳಿಗಳಲ್ಲಿ ಕೆಲಸ ಮಾಡುವ ಕಾಂಗ್ರೆಸ ಜನರಿಂದಲೇ ಹೆಚ್ಚು ಕಿರಿಗೇಡಿ ತನವಾಗುತ್ತದೆಂದು ನನಗನಿಸಹತ್ತಿದೆ. ಇವರನ್ನು ಕಾಲುತರಮದ ಶಿಸ್ತಿಗೊಳಪಡಿಸಬೇಕು. ಇದೇನೂ ಅಷ್ಟೊಂದು ಕಷ್ಟತರವಾಗಲಿಕ್ಕಿಲ್ಲ.

ಈ ಘಟನೆಗಳನ್ನು ಕುರಿತು ನಿಷ್ಪಕ್ಷಪಾತ ವಿಚಾರಣೆಯನ್ನು ನಡೆಸಬೇಕೆಂದು ನಾನು ಸೂಚಿಸುತ್ತೇನೆ ಈ ಕೆಲಸವನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಒಬ್ಬ ಹಾಯಕೋರ್ಟ ನ್ಯಾಯಾಧೀಶರಿಗೆ ಒಪ್ಪಿಸಬೇಕು. ಈ ಕೆಲಸಕ್ಕೆ ರಾಜಾಸಾಹೇಬರು ಸಹಾಯಮಾಡಿದರೆ ಅದು ಬಹಳ ಸುಲಭವಾಗುವದು. ಒಂದು ವೇಳೆ ಅವರು ಮಾಡದಿದ್ದರೂ ಸತ್ಯವನ್ನು ಕಂಡುಹಿಡಿಯಲು ಕಷ್ಟವೇನೂ ಆಗದು.

ರಾಮದುರ್ಗದ ಚಳವಳಿಯಿಂದ ಮತ್ತೊಂದು ದುರ್ದೈವದ ಪರಿಣಾಮವಾಗಿದೆ. ಈ ಚಳವಳಿಯು ಈಗ ಜಾತೀಯ ಸ್ವರೂಪವನ್ನು ತಾಳಿದೆ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಎಂಬೆರಡು ವರ್ಗಗಳಿವೆ. ಕರ್ನಾಟಕವು ಈ ಬಗೆಯ ಜಾತೀಯ ವಿಷದಿಂದ ದೂರವಾಗಿರುವದೆಂದು ಇದುವರೆಗೆ ನನ್ನ ಭಾವನೆಯಾಗಿತ್ತು. ಆದರೆ ಅಲ್ಲಿಯೂ ಈ ವಿಷವು ಬಹಳ ಪ್ರಮಾಣದಲ್ಲಿ ವ್ಯಾಪಿಸಿರುವದೆಂದು, ನನಗೆ ಕಳಿಸಿಕೊಡಲ್ಪಟ್ಟಿರುವ ವೃತ್ತಪತ್ರಿಕೆಗಳ ತವತಂಣಿಕೆಗಳನ್ನೋದಿದರೆ ಕಂಡುಬರುತ್ತದೆ ಈ ಅನಿಷ್ಟವನ್ನು ಕೂಡಲೇ ಹೋಗಲಾಡಿಸುವದು ಅತ್ಯಂತ ಅವಶ್ಯವಾಗಿದೆ.

ಈ ವಿಷಯದಲ್ಲಿ ಯೋಗ್ಯ ಹಾದಿ ತೋರಿಸಬೇಕೆಂದು ನನ್ನನ್ನು ಕೇಳಿಕೊಂಡಿದ್ದಾರೆ ನಿಷ್ಪಕ್ಷಪಾತ ವಿಚಾರಣೆಯನ್ನು ಸಂಪೂರ್ಣವಾಗಿ ಅಭ್ಯಾಸ ಮಾಡದೆ, ಸೂಚನೆ ಕೊಡುವದು ಸಾಹಸದ ಮಾತಾಗುವದು. ಈ ಜಾತೀಯ ವೈಮನಸ್ಸನ್ನು ಹೋಗಲಾಡಿಸಬೇಕೆಂಬ ಆಸಕ್ತಿಯುಳ್ಳ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಸಾಕಷ್ಟು ಜನವಿದ್ದಾರೆ, ಇವರು ಆಸ್ಪದೇಶದಲ್ಲಿ ಸಂಚರಿಸಿ, ಈ ವೈಮನಸ್ಸಿನ ಕಾರಣಗಳನ್ನೆಂಬದನ್ನು ಕಂಡು ಹಿಡಿದು, ಅವುಗಳನ್ನು ನಿವಾರಿಸಲು ಪ್ರಯತ್ನ ಪಡಬೇಕು. ಈ ವೈಮನಸ್ಸು ದೇಶದಲ್ಲಿ ಹಿಂಸಾಚಾರದ ಪ್ರವೃತ್ತಿ ಹೆಚ್ಚುತ್ತಿದೆ ಯೆಂಬುದರ ಲಕ್ಷಣವಾಗಿದೆ.

ಸಂಡೂರು ಸಂಸ್ಥಾನ

ಸಂಡೂರು

30ನೇ ತಾ, ಪ್ರಾಂತಿಕಾಲ ಸರಕಾರದ ಘಟನಾ ಸಮಿತಿಗಳಿಗೆ ಉತ್ತರ ಕೊಡಲು ಪ್ರಜೆಗಳ ಪರವಾಗಿ ವರ್ಷಟ್ಟಿ ಘಟನಾ ಮತ್ತು ಕಂದಾಯದ ಕಮಿಟಿಗಳು ಕೂಡಿ ಉತ್ತರಗಳನ್ನು ಕಳುಹಿಸಬೇಕೆಂದು ನಿರ್ಧಾರಿತವಾಯಿತು. ಸಂಬಂಧಿಸಿದ ಸದಸ್ಯರೆಲ್ಲಾ ಸಹಿಗಳನ್ನು ಹಾಕಿದ ತರುವಾಯ ಉತ್ತರಗಳು ಸರಕಾರಕ್ಕೆ ಕಳುಹಿಸಲ್ಪಟ್ಟಿವೆ.

ಕಣವೀಹಳ್ಳಿ

ಇಲ್ಲಿಗೆ ಹೋದವಾರ ಜಿಲ್ಲೀ ದಾರರಾದ ಶ್ರೀ ಷಣ್ಮುಖರಾಯರೂ. ಸ್ಕೂಲ್ಮಾಷ್ಟರು ಫಕ್ರೋದ್ದೀನಸಾಹೇಬರೂ ಬಂದು ಸರಕಾರದವರು ನಿಯಮಿಸಿದ ಘಟನಾ ಸಮಿತಿಯಿಲ್ಲಿ ನಮಗೆಲ್ಲಾ ವಿಶ್ವಾಸವಿದೆ ಎಂಬುದಕ್ಕೆ ಊರಿನವರೆಲ್ಲಾ ಸಹಿಮಾಡಿರಿ. ಕೆಲವರು ಹಳ್ಳಿಗಳಲ್ಲೆಲ್ಲಾ ಹೋಗಿ, ವಿರೋಧ ಚಳವಳಿ ಹೂಡಿದ್ದಾರೆ. ಇದು ತಪ್ಪಾಗಿದ್ದು' ಎಂದು ಮೀಟಿಂಗ್ ಕೂಡಿಸಿ ಕೇಳಿದರು. ಪ್ರಜೆಗಳ ಪರವಾಗಿ ರಾಮಭೋಗ ಕೊಮಾರಪ್ಪನವರು ಪ್ರಜೆಗಳಿಗಿರುವ ಕಷ್ಟಗಳನ್ನೆಲ್ಲಾ ಸಾಧ್ಯಂತವಾಗಿ ವಿವರಿಸಿ ಸರಕಾರದವರಿಂದ ಇಲ್ಲಿಯವರೆಗೂ ಏನೂ ಆಗಿಲ್ಲವೆಂದು ಹೇಳಿದರು. ಖುದ್ದು ರಾಜಾಸಾಹೇಬರೇ ಬಂದಾಗ ಪುಲ್ಲಿನ ಮನೆಗಳಿಂದ ಬೆಂಕಿಯ ಅನಾಹುತ ವಿದೆಯೆಂದು ಕೇಳಿಕೊಂಡರೆ ಮನೆ ಮುಟ್ಟು ಉಚಿತವಾಗಿ ಕೊಡಿಸುವುದಾಗಿ ಹೇಳಿದರು. ಆಗ ಶ್ರೀ ಷಣ್ಮುಖ ಸಾಹೇಬರೂ ಹಾಜರಿದ್ದರು. ಅವರು ಹೋದಮೇಲೆ ಅಜೀ ಇಟ್ಟುಕೊಂಡದಿನವೂ ಉತ್ತರ ಬರಲಿಲ್ಲ. ಇಂಥಾ ಕಷ್ಟಗಳೆಷ್ಟೋ ಇವೆ ಮೆಂಬರ್ ತೋಟಪ್ಪನವರ ಮಾತುಕೂಡ ಸಾಗುವುದಿಲ್ಲ. ಎಂಬುದಾಗಿ ವ್ಯಾ. ಕೊಮಾರಪ್ಪನವರು ಹೇಳಿದರು. ಆಗ ಜಿಲ್ಲೀ ದಾರರೂ, ಫಕ್ರೋದ್ದೀನಸಾಹೇಬರೂ ಈ ಕಷ್ಟಗಳನ್ನೆಲ್ಲಾ ನಿವಾರಿಸಲು ಅವರನ್ನು ರಾಜಾಸಾಹೇಬರ ಪತ್ತರ ಕರಕೊಂಡು ಹೋಗುವುದಾಗಿಯೂ ಅವರ ಕುಂದು-ಕೊರತೆಗಳನ್ನು ತಪ್ಪದೆ ನಿವಾರಿಸುವುದಾಗಿಯೂ ವಾಗ್ದಾನಮಾಡಿದ ಕಾರಣ ಕಣವಿಹಳ್ಳಿಯನ್ನರು ಸರಕಾರದ ಘಟನಾ ಸಮಿತಿಯಲ್ಲಿ ವಿಶ್ವಾಸವಿದೆಯೆಂಬ ಪತ್ರಕ್ಕೆ ಸಹಿ ಮಾಡಿದರು.

ಪ್ರಜೆಗಳ ಬೇಡಿಕೆಗಳಿಗೂ ರಾಜಕೀಯ ಸುಧಾರಣೆಗಳಿಗೂ ಕಣವೆಹಳ್ಳಿಯವರು ವಿರುದ್ಧವಿರುವರೆಂದು ಯಾರೂ ತಿಳಿದುಕೊಳ್ಳಬಾರದು.

ಒರಿಸ್ಸಾ ಸಂಸ್ಥಾನದಲ್ಲಿ ಗುಂಡು ಹಾರಿಸಲಾಯಿತು.

20 ಜನರು ಸತ್ತರು. 45 ಜನರಿಗೆ ತೀವ್ರ ಘಾಯ

ಗಂಗಪುರ ಸಂಸ್ಥಾನದ ರಾಜಕೀಯ ಚಳವಳಿಗಾಗಿ ಕೆಲವರನ್ನು ಬಂಧಿಸಿದರು. ಇದಕ್ಕೋಸ್ಕರ ಗಲಭೆಗಳು ನಡೆದವೆಂದೂ, ಪ್ರಜೆಗಳನ್ನು ಚದರಿಸಲು ಪೋಲೀಸಿನವರೂ. ಸೈನಿಕರೂ ಗುಂಡು ಹಾರಿಸಿದ ಪರಿಣಾಮವಾಗಿ 20 ಜನರು ಕೊಲ್ಲಲ್ಪಟ್ಟರೆಂದೂ 45 ಜನರು ಘಾಯ ಹೊಂದಿದರೆಂದೂ ಒಂದು ಸುದ್ದಿಯು ಬಂದಿದೆ. ಒರಿಸ್ಸಾ ಸಂಸ್ಥಾನಗಳ ಪ್ರಜಾ ಸಮ್ಮೇಳನದ ಗೌರವ ಕಾರ್ಯದರ್ಶಿಗಳಾದ ನಾರಂಗಧರದಾಸರು 65 ಜನರು ಸತ್ತಿರುವರೆಂದು ತಂತೀ ಕೊಟ್ಟಿರುತ್ತಾರೆ.

ಮಿನಾಕ್ಷಿ ಭವನ ಕಾಫಿಕ್ಲಬ್

[ರಿಜಿಸ್ಟರ್ಡ್]

ಶಾಖೆಗಳು—

ಕಾಫಿ ಕ್ಲಬ್ ಬೆಂಗಳೂರು ರೋಡ್

ಊಟ ವಸತಿಗೃಹ ಬ್ರಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪದಲ್ಲಿ ತಯಾರಿಸಿದ ಸಿಹಿಯೂರದ ಫಲಹಾರವಸ್ತುಗಳು.

ಒಳ್ಳೆಯ ಊಟದವ್ಯವಸ್ಥೆ ಧಾರಾಳವಾಗಿ ಗಾಳಿ, ಬೆಳಕು ಬರುವ ಮಹಡಿಯ ಮೇಲಿನ ಕೋಠಡಿಗಳು ಆಧುನಿಕ ವ್ಯವಸ್ಥೆ.

ಇಂದು ಸಲ ಬಂದು ಪರೀಕ್ಷಿಸಿರಿ.

ಕಾಂಗ್ರೆಸ್ಸಿನಲ್ಲಿ ಹೊಸಪಕ್ಷ

ಬಂಗಾಳದಿಂದಲೂ, ಜೇರೆ ಪ್ರಾಂತಗಳಿಂದಲೂ ಬಂದಿದ್ದ ಸುಮಾರು ೨೦೦ ಜನ ಕೆಲಸಗಾರರು 1-ನೇ ತಾ॥ ರಾತ್ರಿ ಕಲ್ಕತ್ತನಗರದಲ್ಲಿ ಸೇರಿ ಒಂದು ಹೊಸಪಕ್ಷವನ್ನು ಸ್ಥಾಪಿಸಿದರು. (League of Radical Congressmen.) ಕಾಂಗ್ರೆಸ್ ಕಾರ್ಯಕ್ರಮಗಳನ್ನು ಚುರುಕುಗೊಳಿಸಿ, ಅಂತಹ ಕಾರ್ಯ ಕ್ರಮಗಳನ್ನು ನಡೆಸಿಕೊಂಡು ಬರುವುದರಲ್ಲಿ ಕೊಂಚವೂ ಸಡಿಲವುಂಟಾಗದಂತೆ ಬಲಪಡಿಸುವುದೇ ಈ ಪಕ್ಷದವರ ಉದ್ದೇಶ. ತಕ್ಕ ವ್ಯವಸ್ಥೆಯನ್ನೂ, ಕಾರ್ಯ ಕ್ರಮವನ್ನು ಸಿದ್ದಗೊಳಿಸಲು ಶ್ರೀ ಯುಂ. ರ್ಯ. ರಾಯ್‌ರವರಿಗೆ ಅಧಿಕಾರವಹಿಸಲಾಯಿತು.

ರಾಜಕೋಟಿ ಸುಧಾರಣೆಗಳು

ಮೇ 12 ರ ನಳಗಾಗಿ ರಾಜಕೋಟೆಯ ಥಾಕೋರ್ ಸಾಹೇಬರು ಸ್ವಜಿಗಳೊಡನೆ ಒಪ್ಪಂದ ಮಾಡಿಕೊಳ್ಳಲಿದ್ದಾರೆ, ಮಹಾತ್ಮ ಗಾಂಧಿಯವರು ರಾಜಕೋಟೆಗೆ ಹೋಗಬಹುದೆಂದು ತಿಳಿಸಲಾಗಿದೆ. ಅಧಿಕಾರಿಗಳು ಈ ಕೆಳಗಣ ಸುಧಾರಣೆಗಳನ್ನು ಕೊಡಲು ಒಪ್ಪಿರುವರು.

ಪೌರ ಸಭೆ, ಗ್ರಾಮ ಪುನರುಜ್ಜೀವನ, ಆರೋಗ್ಯ, ನೈರ್ಮಲ್ಯ, ವಿದ್ಯಾಭ್ಯಾಸ ಮತ್ತು ಪಬ್ಲಿಕ್ ವರ್ಕ್ಸ್ ಈ ಶಾಖೆಗಳು ಜನರಿಗೆ ಬಿಟ್ಟು ಕೊಡಲಾಗುತ್ತವೆ. ಇಂಡಿಯಾ ಮತ್ತು ಇತರ ಖಾತೆಯನರೊಡನೆ ಸಂಬಂಧ, ಕಂದಾಯ, ನ್ಯಾಯ, ರಾಜಕೀಯ, ಪೋಲೀಸ್, ಖಜಾನೆ, ಧರ್ಮ ಸಂಸ್ಥೆಗಳು ಈ ಅಧಿಕಾರಗಳು ರಾಜರ ವಶದಲ್ಲಿರುತ್ತವೆ. ಇವುಗಳನ್ನು 10 ವರ್ಷಗಳಲ್ಲಿ ಕೊಡಲಾಗುತ್ತದೆ. ಥಾಕೋರ್ ಸಾಹೇಬರ ಮತ್ತು ರಾಜಮನೆತನದ ವರ್ಷಾಶನವು 1,80,000 ರೂ.ಗೆ ನಿರ್ಧರಿಸಲಾಗುವುದು. ಅಯುಷ್ಯಯಸೆಲ್ಲಾ ಶಾಸನ ಸಭೆಯು ವೋಟಿಗೆ ಒಳಪಡಿಸಲಾಗುವುದು. ಮಂತ್ರಿ ಮಂಡಲದ ತೀರ್ಮಾನಗಳಲ್ಲಿ ಇಬ್ಬರು ಸಾರ್ವಜನಿಕರಿಂದ ಆರಿಸಲ್ಪಟ್ಟವರಿರಬಹುದು ಒಬ್ಬರು ರಾಜರಿಂದ ನಿಯಮಿಸಲ್ಪಡುವರು. ಮಂತ್ರಿಗಳಹೊರತು ಉಳಿದವರೆಲ್ಲಾ ಶಾಸನ ಸಭೆಗೆ ಜವಾಬ್ದಾರರಿರುವರು. ಎರಡುಸಾರೆ ಯಾವ ಅಧಿಕಾರಿಯು ವಿಚಾರದಲ್ಲಾದರೂ, ಆಸನಂಬಿಕೆಯು ವ್ಯಕ್ತವಾದರೆ ಆ ಅಧಿಕಾರಿಯನ್ನು ಕೆಲಸದಿಂದ ತೆಗೆಯಬಹುದು. ಮಾನೆಕಂದಾಯ ಹೆಚ್ಚಳಪಲ್ಪಟ್ಟಿರುವ ರಾಲಾ ಫೀಜು ನೀರಿನತೆರಿಗೆ ಇವುಗಳನ್ನು ಕಡಮೆಮಾಡಬೇಕು. ಬಂದಿಗಳನ್ನೆಲ್ಲಾ ಬಿಡುಗಡೆಮಾಡಿ, ಈಗ ಆಚರಣೆಯಲ್ಲಿರುವ ಶಾಸನಗಳನ್ನೆಲ್ಲಾ ಕೊನೆಗಾಣಿಸಬೇಕು. ಈ ಸುಧಾರಣೆಗಳನ್ನು ರಾಜರು ತಮ್ಮ ನಿರೂಪದಿಂದ ಹೊರಡಿಸುವರು.

ಪ್ರಜಾಪಕ್ಷದವರು ಇದನ್ನು ವಿರೋಧಿಸಿರುತ್ತಾರೆ. ಈ ಸುಧಾರಣೆಗಳನ್ನು ಪಡೆಯಲು ಮುಸ್ಲೀಮರೂ ಭಯತರೂ ಇನ್ನೂ ಕೆಲ ರಾಜಭಕ್ತರೂ ಸಿದ್ಧರಿರುತ್ತಾರೆ.

ಮಹಾತ್ಮರೊಡನೆ ಸಂಧಾನ.

ಸುಭಾಸ ಬೋಸರ ರಾಜೀನಾಮೆ.

ಕಾಂಗ್ರೆಸ್ ಅಧ್ಯಕ್ಷರ ಆರಿಸುವಿಕೆಯಾದಮೇಲೆ ಬಂದ ಬಿಕ್ಕಟ್ಟನ್ನು ಪರಿಹರಿಸಲು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟೀ ಸೇರುವಪೂರ್ವ ಮಹಾತ್ಮ ಗಾಂಧಿ ಮತ್ತು ಸುಭಾಸಬೋಸರೊಡನೆ ಸಂಧಾಷಣೆಗಳು ವಿಫಲವಾದ್ದರಿಂದ ಸುಭಾಸಚಂದ್ರಬೋಸರು ರಾಜೀನಾಮೆಯಿತ್ತರು ಹೊಸವರ್ಕಿಂಗ್ ಕಮಿಟಿಯನ್ನು ರಚಿಸುವ ಕಾರ್ಯವಲ್ಲಿ ಮಹಾತ್ಮ ಗಾಂಧಿ ಯವರಿಗೂ ಸುಭಾಸ ಬೋಸರಿಗೂ ಭಿನ್ನಾಭಿಪ್ರಾಯವಾಗಿ ರಾಜೀನಾಮೆಯ ಕಾರಣವಾಯಿತು. ಅದನ್ನು ಹಿಂದೆಗೆದುಕೊಳ್ಳಬೇಕೆಂದು ಪಂಡಿತ ಜವಹಾರಲಾಲರು ಬಹಳ ಪ್ರಯತ್ನಪಟ್ಟರು. ಸಾಧ್ಯವಾಗಲಿಲ್ಲ. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ಬಾಬೂ ರಾಜೀಂದ್ರಪ್ರಸಾದರನ್ನು ಅಧ್ಯಕ್ಷರನ್ನಾಗಿ ಆರಿಸಿದರು.

ಹೊಸಪೇಟೆ.

೯ ಜನ ಕೌಂಸಿಲರು ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟರು.

ಹೋದ ವರ್ಷ ಮೇ ತಿಂಗಳಲ್ಲಿ ಮುನಿಸಿಪಲ್ ಚುನಾವಣೆಗಳಾದ ಮೇಲೆ ಅಧ್ಯಕ್ಷ ಪದವಿಯ ವಿಷಯವು ಪ್ರಾಂತೀಯ ಕಾರ್ಯದರ್ಶಿಗಳಾದ ಶ್ರೀ ಹಳ್ಳಿಕೇರಿಯನರಿಗೂ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ರಾಘವೇಂದ್ರರಾಯರಿಗೂ ಒಪ್ಪಿಕಲ್ಪಟ್ಟಿತ್ತು. ಅವರಿಬ್ಬರಲ್ಲೂ ಮತಭೇದವಾಗಿ ರಾಯರು ಇವರಿಂದ ಸರಿದರು. ಶ್ರೀ ಹಳ್ಳಿಕೇರಿಯನರು ಶ್ರೀಮುರಾರಿ ವೆಂಕಟಸ್ವಾಮಿಯವರನ್ನು ಅಧ್ಯಕ್ಷರನ್ನಾಗಿ ಆರಿಸಿದರು. ಅಧ್ಯಕ್ಷ ಪದವಿಗೆ ನುತ್ತೊಬ್ಬ ಹುರಿಯಾಳಾದ ಶ್ರೀ ಕೃಷ್ಣರಾಯರು ಕೆ. ಪಿ. ಸಿ. ಸಿ ಕೌನ್ಸಿಲ್‌ಗೆ ಅಪೀಲ್ ಮಾಡಿದರು. ಕೌನ್ಸಿಲ್‌ನವರು ಈ ವಿಷಯವನ್ನು ವಿಮರ್ಶಿಸಿ ಮುರಾರಿಯವರು ಒಂದು ವರ್ಷದ ನಂತರ ರಾಜೀನಾಮೆ ಕೊಡಬೇಕೆಂದೂ, ಕೃಷ್ಣರಾಯರು ಅಧ್ಯಕ್ಷರಾಗಬೇಕೆಂದೂ ತೀರ್ಮಾನ ಕೊಟ್ಟರು. ಅಧ್ಯಕ್ಷರು ರಾಜೀನಾಮೆ ಕೊಡಲಿಲ್ಲ. ಕೆ. ಪಿ. ಸಿ. ಸಿ. ಯವರು ಕೇಳಿದಾಗ ೨ ಜನ ಸದಸ್ಯರು ಕಾಂಗ್ರೆಸ್ಸಿನಲ್ಲಿ ತಮಗೆ ವಿಶ್ವಾಸವಿಲ್ಲೆಂದು ಕಾಂಗ್ರೆಸ್‌ಪಾರ್ಟಿಗೆ ರಾಜೀನಾಮೆ ಕೊಟ್ಟರುವರು.

ಹರಪನಹಳ್ಳಿ ಬೋರ್ಡು ಹೈಸ್ಕೂಲ್

ಸುವರ್ಣ ಮಹೋತ್ಸವ.

ಕಾರ್ಯಕ್ರಮ.

12-೬-39ನೇ ಬುಧವಾರ ಅಧ್ಯಕ್ಷರ ಆಗಮನ ಮತ್ತು ಬಹಿರಂಗ ಸ್ವಾಗತ.

13ನೇ ಶನಿವಾರ. ಸುವರ್ಣ ಮಹೋತ್ಸವದ ದಿನ ತತ್ಸಂಬಂಧೋತ್ಸವಗಳು

14ನೇ ಭಾನುವಾರ. ಪೂರ್ವವಿದ್ಯಾರ್ಥಿಗಳ ದಿನ ಉತ್ಸವಗಳು

15ನೇ ಸೋಮವಾರ ಸಾಹಿತ್ಯ ಮತ್ತು ಕಲೆಗಳ ಹಬ್ಬ.

ಹರಪನಹಳ್ಳಿ ಬೋರ್ಡು ಹೈಸ್ಕೂಲಿನ ಪೂರ್ವ ವಿದ್ಯಾರ್ಥಿಗಳೂ ಹಿತಚಿಂತಕರೂ ಆಗಮಿಸಬೇಕೆಂದು ಕೋರಿಕೆ.

ಬಿ. ಪಕ್ಕಿರಪ್ಪ, ಅಧ್ಯಕ್ಷ
ಜಾ. ರಾಮಣ್ಣ, ಕಾರ್ಯದರ್ಶಿ.

ಬಳ್ಳಾರಿ ನಗರ ವಾರ್ತೆಗಳು

ಸ್ವಾಮಿ ಅದ್ವೈತಾನಂದರು:-

ಭಾರತಸೇವಾಶ್ರಮಸಂಘದ ಪ್ರಮುಖ ಮುಖಂಡರಲ್ಲೊಬ್ಬರಾದ ಶ್ರೀಸ್ವಾಮಿ ಅದ್ವೈತಾನಂದರು ತಮ್ಮ ಸಂಗಡಿಗರಿಬ್ಬರೊಡನೆ ಇಲ್ಲಿಗೆ ಬಂದು 1-ನೇ ತಾ॥ ಸಾಯಂಕಾಲ ಕೋಲಾಚಲಪುರ ಭವನದಲ್ಲಿ ಹಿಂದೂ ಆರ್ಯ ಸಂಸ್ಕೃತಿಯಮೇಲೆ ಆಂಗ್ಲಭಾಷೆಯಲ್ಲಿ ಅಮೋಘ ಭಾಷಣವಿತ್ತರು. ಶ್ರೀ ಆರ್. ಆರ್. ನಿಷಾಣಿಯವರು ಪರಪ್ರಾಂತಗಳಲ್ಲಿರುವ ಭಾರತೀಯರಿಗಾಗಿ ಸಹಾಯಮಾಡಬೇಕೆಂದು ಸ್ವಾಮಿಜಿಯವರನ್ನು ಪ್ರಾರ್ಥಿಸಿದರು. ಅಧ್ಯಕ್ಷರಾದ ಶ್ರೀ ಬಿ. ಕೆ. ಗುರುರಾಜರಾಯರು ಸ್ವಾಮಿಜಿಯವರ ಆಧ್ಯಾತ್ಮಿಕ ತತ್ವಗಳನ್ನು ಸ್ವಲ್ಪಂಸೀಕರಿಸಿ ಭಾರತಸೇವಾಶ್ರಮಸಂಘಕ್ಕೆ ಸಹಾಯ ಮಾಡಬೇಕೆಂದರು.

ತಾಲೂಕ ಕಾಂಗ್ರೆಸ್ ಕಾರ್ಯದರ್ಶಿಗಳು ಶ್ರೀ ವೆಂಕೋಬರಾಯರು -ಸುಭಾಸಚಂದ್ರಬೋಸರು ರಾಜೀನಾಮೆ ಯಿತ್ತ ಕಾರಣ ಈಗಿನ ಕಾಂಗ್ರೆಸ್ ಅಧಿಕಾರ ವರ್ಗವು ಸಂಯುಕ್ತ ರಾಜ್ಯಘಟನೆಯನ್ನು ಕೆಲವುತ್ಯಾಗಗಳೊಂದಿಗೆ (Federation) ಸ್ವೀಕರಿಸಬಹುದೆಂಬ ಅಂಜಿಕೆ ಯಿರುವುದೆಂದು ರಾಜೀನಾಮೆಯಿತ್ತಿರುವರು. ಕಾರ್ಯದರ್ಶಿ ಚುನಾವಣೆಗಾಗಿ ಇಷ್ಟರಲ್ಲೇ ತಾಲೂಕ್ ಕಾಂಗ್ರೆಸ್ ಕಮಿಟೀಸಭೆಯು ಸೇರಲಿದೆ.

ಬೃಂದಾವನದಲ್ಲಿ
ಗಾಂಧೀಸೇವಾಸಂಘದ ಸಭೆ

೫-ನೇ ತಾ॥ ಪ್ರಾತಃಕಾಲ ಬಾಬೂ ರಾಜೇಂದ್ರ ಪ್ರಸಾದರು ಧ್ವಜಾರೋಹಣವನ್ನು ಮಾಡುತ್ತಾ ಸತ್ಯ ಅಹಿಂಸೆಗಳ ಮಹತ್ವವನ್ನು ಹೇಳಿದರು. ಧ್ವಜದ ಅಪಮಾನವು ಬೇರೆವಿಧಗಳಿಂದ ಇನ್ನೂ ಆಗುತ್ತಿರುವದೆಂತಲೂ ಅದನ್ನು ರಕ್ಷಿಸಿ, ಅದರ ಗೌರವವನ್ನು ಕಾಪಾಡಬೇಕೆಂದರೆ ಸತ್ಯ ಅಹಿಂಸೆಗಳ ಪಾಠವು ಆವಶ್ಯಕವೆಂತಲೂ ತಿಳಿಸಿದರು.

ಮಹಾತ್ಮ ಗಾಂಧಿಯವರು ಪ್ರದರ್ಶನವನ್ನು ಪ್ರಾರಂಭಿಸುವಾಗ ಒಂದು ಮಹತ್ವ ಭಾಷಣವನ್ನು ಮಾಡಿದರು. ಗ್ರಾಮೋದ್ಯೋಗಗಳು ಬೆಳೆದು ಮತ್ತು ಇತರ ಗೃಹೋದ್ಯೋಗಗಳಿಗೆ ಪ್ರೋತ್ಸಾಹ ಕೊಡಬೇಕೆಂದು ಉಪದೇಶಿಸಿದರು. ರಾಜಕೋಟೆಯು ತನ್ನ ಸತ್ಯ ಅಹಿಂಸೆಗಳ ಪ್ರಯೋಗ ಶಾಲೆಯಾಗಿ ಪರಿಣಮಿಸಿತೆಂದೂ ತನ್ನ ಪ್ರಯೋಗಗಳ ಪರಿಣಾಮವು ಏನಾಗುವುದೋ ತನಗೇ ತಿಳಿಯದೆಂದೂ ತಾವು ಅಂಜಬುರುಕರಲ್ಲವೆಂದೂ ಕೊನೆಯವರೆಗೂ ಹೋರಾಡುವರೆಂದೂ ಹೇಳಿದರು.

ಯೂರೋಪಿನಲ್ಲಿ

ರಷ್ಯಾದ ಪರನೇರ ರಾಯಭಾರಿಗಳಾದ ಲಿಟ್ವಿನಾನ್‌ರವರು ರಾಜೀನಾಮೆ ಯಿತ್ತದರಿಂದ ಬ್ರಿಟಿಶರಾಜಕೀಯ ಕ್ಷೇತ್ರಗಳಲ್ಲಿ ಆಶ್ಚರ್ಯವನ್ನುಂಟುಮಾಡಿದೆ. ಬ್ರಿಟಿಶ ರಷ್ಯಾಸಂಬಂಧಗಳಲ್ಲಿ ಶೀಘ್ರವಾಗಿ ಇತ್ಯರ್ಥವಾಗದಿರುವ ಅಂಶಗಳ ಕಾರಣ ಅವರು ರಾಜೀನಾಮೆ ಕೊಟ್ಟಿರಬಹುದೆಂದು ಊಹಿಸಲಾಗಿದೆ. ಜರ್ಮನಿಯಿಂದ 6 ಬ್ರಿಟಿಶರನ್ನು ಜೊತೆಗೆ ಹಾಕಲಾಗಿದೆ. ನಾಜೀಪ್ರಚಾರಕ್ಕಾಗಿ ಅನೇಕ ಜರ್ಮನರನ್ನು ಇಂಗ್ಲೆಂಡಿನಿಂದ ಹೊರಹಾಕುವ ಆಲೋಚನೆ ಇದೆ. ಯುದ್ಧವಾದರೆ, ಉತ್ತರ ಯೂರೋಪಿನ ದೇಶಗಳವರು ತಟಸ್ಥ ನೀತಿಯನ್ನು ವಹಿಸಲನುಕೂಲವಾಗುವಂತೆ ಮೇ 9 ನೇ ತಾ॥ ಸ್ಟಾಕ್‌ಹಾಂನಗರದಲ್ಲಿ ನಾರ್ವೇ, ಸ್ವೀಡನ್, ಡೆನ್‌ಮಾರ್ಕ್, ಫಿನ್‌ಲೆಂಡ್ ದೇಶಗಳ ಪ್ರತಿನಿಧಿಗಳು ಸಭೆಕೂಡಲಿರುವರು.

★

Sarada Ink. [Regd]

Awarded Gold Medal and Certificate of Merit at the All India Swadeshi Exhibition Bellary.

For Fountain Pens and Steel Pens

Blue-Black, Red, Blue, Green & Violet

SARADA INK WORKS, (Regd.)
K. V. & Sons. BELLARY.

ಶಾರದಾಇಂಕ್ (ರಿಜಿಸ್ಟರ್ಡ್)

ಬಳ್ಳಾರಿ ಅಖಿಲ ಭಾರತ ಸ್ವದೇಶೀ ಪ್ರದರ್ಶನದಲ್ಲಿ ಸುವರ್ಣಪದಕಸನ್ಮಾನ, ಯೋಗ್ಯತಾಪತ್ರವನ್ನೂ ಪಡೆದಿದೆ!

ಫೌಂಟನ್‌ಪೆನ್ನುಗಳಿಗೂ, ಇತರ ಲೇಖನಿಗಳಿಗೂ, ಉಪಯೋಗಿಸಲು ಶ್ರೇಷ್ಠವಾದ ಬ್ಲೂ-ಬ್ಲಾಕ್ ಕೆಂಪು ನೀಲಿ ಹಸರು, ವೈಲೆಟ್ ವರ್ಣಗಳಲ್ಲಿ ದೊರೆಯುತ್ತದೆ.

ಕೆ. ವಿ. ಅಂಡ್ ಸನ್ಸ್, ಬಳ್ಳಾರಿ

The Lakshmi Medical Stores
Chemists & Druggists, Car Street, Bellary.
ದಿ ಲಕ್ಷ್ಮೀ ಮೆಡಿಕಲ್ ಸ್ಟೋರ್ಸ್
ಔಷಧಾಲಯ ತೇರು ಬೀದಿ, ಬಳ್ಳಾರಿ.

ನಮ್ಮಲ್ಲಿ ಇಂಗ್ಲೀಷ್ ಔಷಧಗಳು, ಇಂಜೆಕ್ಷನ್, ಆಂಪೂಲ್ಸ್, ಟಿಂಕ್ಚರ್ಸ್, ಶಸ್ತ್ರ ಚಿಕಿತ್ಸೆಗೆ ಬೇಕಾಗುವ ಶಸ್ತ್ರಗಳು, ಆಸ್ಪತ್ರೆಯು ಬೇಡಿಕೆಗಳು ಮತ್ತು ಅಸಂಬಂಧದ ಔಷಧಗಳೆಲ್ಲಾ ದೊರೆಯುತ್ತವೆ.

ವಿವಿಧ ವರ್ಣದ 'ಲಕ್ಷ್ಮೀ-ಸಿರಪ' ಪಾನಗಳನ್ನು ನಾವು ತಯಾರಿಸುತ್ತೇವೆ ನಮ್ಮ ಔಷಧಾಲಯವು ದಿನ ರಾತ್ರಿಯೆಲ್ಲಾ ತೆರೆದಿರುತ್ತದೆ. ದರಗಳು ಸುಲಭ ಪರೀಕ್ಷಿಸಿ ತೃಪ್ತಿ ಹೊಂದಿರಿ.

ನವ ಭಾರತ

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ

ಪರಿಶುದ್ಧ ಪಾದಭಂಗಾರ ಮತ್ತು ಜಿಲ್ಲೆಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿನ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ ಪೆನ್ಸ್ ಅಂಡ್ ನಾತುಗಳೂ, ದೊಡ್ಡ ಗಣಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಮ್ಮೆಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

Patent medicines, Tonics, injections
Ayurvedic Preparations &
Oilman-stores —Moderate Rates
Trial earnestly solicited

M. S. V. Bros,

Car Street, **BELLARY.**

ಇಂಗ್ಲೀಷ್ ಔಷಧಗಳು, ಇಂಜೆಕ್ಷನ್ ಮತ್ತು ಇತರ ಆಯುರ್ವೇದೀಯ ಔಷಧಗಳು, ಸ್ಟೇಷನರಿ ವಗೈರೆ ಸುಲಭ ಬೆಲೆಯಲ್ಲಿ ದೊರೆಯುತ್ತವೆ.

ಎಂ. ಎಸ್. ವಿ. ಬ್ರದರ್ಸ್,

ತೇರು ಬೀದಿ, ಬಳ್ಳಾರಿ.

★ **ಎಂಪೈರ್ ಆಫ್ ಇಂಡಿಯಾ** ★

ಲೈಫ್ ಅಶೂರೆನ್ಸು ಕಂಪನಿ ಲಿಮಿಟೆಡ್.

ಸ್ಥಾಪಿತ 1897.

ಉದಾರವಾದ ಯೋಜನೆಗಳು.

ಆಸ್ತಿಯ ಪೊತ್ತ	ರೂ.	5,13,00,000	ಗಿಂತಲೂ ಹೆಚ್ಚಿದೆ.
ಜಾರಿಯಲ್ಲಿರುವ ಪಾಲಿಸಿಗಳ ಪೊತ್ತ	,,	14,29,00,000	,,
ಪಾರಸುವಾರರಿಗೆ ಸಲ್ಲಿಸಿದ ಹಣ	,,	6 15,00,000	,,

ಭವಿಷ್ಯದಲ್ಲಿ ಕುಟುಂಬ ಭರಣಕ್ಕೇರ್ಪಾಟು ಮಾಡಬೇಕಾದುದು, ಪ್ರತಿಯೊಬ್ಬ ಕುಟುಂಬಿಕನ ಕರ್ತವ್ಯವಾಗಿದೆ ವಿಶೇಷ ಪರಿಸ್ಥಿತಿಯಿಂದ ಸಂಪಾದನೆಯು ಕುಗ್ಗಿ ಹೋಗುವ ದಿನಗಳು ಬರಬಹುದು. ಅಂಥಾ ಕಾಲಕೋಸ್ಕರ ಜೀವ ವಿಮೆಯ ಪಾಲಿಸಿಯನ್ನು ರಕ್ಷಿಸಬೇಕಾದುದು ಅತ್ಯಗತ್ಯವಾಗಿದೆ

ಮುಖ್ಯ ಕಾರ್ಯಾಲಯ.
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

★

ಶಾಖೆ.
152/53 ಕಮರ್ಶಿಯಲ್ ಸ್ಟ್ರೀಟ್,
ಬೆಂಗಳೂರು.

NAVA BHARAT, BELLARY.
(With which is incorporated 'Congress Bulletin')
The leading Nationalist Weekly.
'ನವ ಭಾರತ ಬಳ್ಳಾರಿ.
[ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ]

The Rates of Subscription.	ಚಂದಾ ವಿವರ
Annual	ವರ್ಷ
Local 1—8—0	ಸ್ಥಳದವರಿಗೆ 1-8-0
Moffusil 2—0—0	ಪರಸ್ಥಳದವರಿಗೆ 2-0 0
Half Yearly	6 ತಿಂಗಳು
Local 1—0—0	ಸ್ಥಳದವರಿಗೆ 1-0.0
Moffusil 1—4—0	ಪರಸ್ಥಳದವರಿಗೆ 2-0-0

Nava Bharat, Bellary.

REG. NO. M. 3937.

Sri ___

Printed at Vittal Press, Car Street Edited & Published by T. B. Keshava Rao
BELLARY.

'ವಂದೇ ಮಾತರಂ'



(ಇದರಲ್ಲಿ 'ಕಾಂಗ್ರೆಸ್' ಬುಲೆಟಿನ್' ಸಮಾವೇಶವಾಗಿದೆ)

ಉಜ್ವಲ-ರಾಷ್ಟ್ರೀಯ ವಾರ ಪತ್ರಿಕೆ.

ಪ್ರೈ

ವಾರ್ಷಿಕ ಪೋಷಕ ದ್ರವ್ಯ
ರಾಜ ಪೋಷಕರು, 1-0-0
ಪೋಷಕರು, 5-0-0

ಸಂಪಾದಕ – ಟಿ. ಬಿ. ಕೇಶವರಾವ್.

ವಾರ್ಷಿಕ ಚಂದಾ
ಪರಸ್ಥಳದವರಿಗೆ, 2-0-0
ಬೆಳ್ಳಾರಿಯವರಿಗೆ, 1-8-0

ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ.

ಸಂಚಿಕೆ ೧ | ಬಳ್ಳಾರಿ. ಮೇ ೨೨ನೇ ಶನಿವಾರ ೧೯೨೯. | ಸಂಪುಟ ೪೨

★ ಎಂಪೈರ್ ಆಫ್ ಇಂಡಿಯಾ ★

ಲೈಫ್' ಅಶೂರೆನ್ಸ್ ಕಂಪನಿ ಲಿಮಿಟೆಡ್'.

ಸ್ಥಾಪಿತ 1897.

ಉಪಾರನಾದ ಯೋಜನೆಗಳು.

ಆಸ್ತಿಯ ಮೊತ್ತ	ರೂ	5,18,00,000	ಗಿಂತಲೂ ಹೆಚ್ಚಿದೆ.
ಜಾರಿಯಲ್ಲಿರುವ ವಾಲಿಸಿಗಳ ಮೊತ್ತ	,,	14,29,00,000	,,
ವಾರಸುದಾರರಿಗೆ ಕೊಟ್ಟಿಸಿದ ಹಣ	,,	6,15,00,000	,,

ಭವಿಷ್ಯನಲ್ಲಿ ಕುಟುಂಬ ಭರಣಕ್ಕೆರ್ಸಾಟು **ಮಾಡಬೇಕಾದುದು**, ಪ್ರತಿಯೊಬ್ಬ ಕುಟುಂಬೀಕನ ಕರ್ತವ್ಯವಾಗಿದೆ ವಿಶೇಷ ಪರಿಸ್ಥಿತಿಯಿಂದ ಸಂಪಾದನೆಯು ಕುಗ್ಗಿ ಹೋಗುವ ದಿನಗಳು ಬರಬಹುದು. ಅಂಥಾ ಕಾಲಕ್ಕೋಸ್ಕರ ಜೀವ ವಿಮೆಯು ವಾಲಿಸಿಯನ್ನು ರಕ್ಷಿಸಬೇಕಾದುದು ಅತ್ಯಗತ್ಯವಾಗಿದೆ

ಮುಖ್ಯ ಕಾರ್ಯಾಲಯ
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

★

ಶಾಖೆ.
152/53 ಕಮರ್ಶಿಯಲ್ ಸ್ಟ್ರೀಟ್,
ಬೆಂಗಳೂರು.

ನಮ್ಮ-ಚಂದಾದಾರರಿಗೆ

'ನವಭಾರತ, ಪ್ರತಿಕೆಗೆ ಇಲ್ಲಿಯವರೆವಿನಿಗೂ ಚಂದಾಗಳನ್ನು ಸಲ್ಲಿಸದವರು ವಾರ್ಷಿಕ ಚಂದಾಹಣವನ್ನು 2-0-0 ಮು. ಅ. ಮೂಲಕ ಕಳುಹಿಸಲು ಕೋರಿಕೆ ನಿ. ಪಿ. ಯಿಂದ 0-4-0 ವ್ಯರ್ಥಾಖರ್ಚಾಗುವುದು. ಮ್ಯಾನೇಜರ

ಶನಿವಾರ ಮೇ 20. 1939

ಮದರಾಸ್ ಸರಕಾರದ ಹೊಸ-ಕಾಂಪ್ಲಿಗಳು

ಮದ್ರಾಸ್ ಅಸೆಂಬ್ಲೀ ಅಧಿವೇಶನದಲ್ಲಿ ವಿಶೇಷ ಚರ್ಚೆಯಾಗಿ ಕೊನೆಯಲ್ಲಿ ಬಹುಮತದಿಂದ ತೀರ್ಮಾನಿಸಲ್ಪಟ್ಟ ಹೊಸಕಾಯ್ದೆಗಳಲ್ಲಿ ಹೊಸೆಸೊಪ್ಪಿನ ಕರ, ವ್ಯಾಪಾರ ಕರ, [Sales tax] ಕೆಲಸಗಳನ್ನು ಕಿತ್ತುಕೊಂಡ ಗ್ರಾಮಾಧಿಕಾರಿಗಳಿಗೆ ಪುನರುದ್ಯೋಗ ಕೊಡಿಸಲು ಬೇಕಾಗುವ ಕಾಯ್ದೆಗಳು, ಬಹುಮುಖ್ಯವಾಗಿವೆ.

ಯಾವಹೊಸಕರಗಳನ್ನೇ ಪ್ರಸ್ತಾಪಿಸಿದರೂ, ಪ್ರಜಾವರ್ಗದ ಕೆಲಭಾಗಗಳಿಂದ ನಿಷೇಧವಾಣಿಯೂ ಹೊರಡುವುದು ಸಾಧಾರಣವಾಗಿದೆ. ಯಾವಾಗಲೂ ಇವೇ ಮಾತಾಡಲಿಕ್ಕೆ ಬಾಯಿವ್ವವು. ಹಳ್ಳಿಗರಿಗೆ ಮಾತಾಡಲಿಕ್ಕೆ ಬಾಯಿಲ್ಲ. ಅವರು ಸಭೆಗಳನ್ನು ಸೇರಿಸಲಾರರು. ತೀರ್ಮಾನಗಳನ್ನು ಮಾಡಲಾರರು, ತಮ್ಮ ಸಮ್ಮತಿ ಯಾ ಅಸಮ್ಮತಿಯನ್ನು ಸೂಚಿಸಲಾರರು ಸ್ವಹಿತಾಸಕ್ತಿಯುಳ್ಳ ಕೆಲವರಿಂಭ ಪ್ರಾಯವೇ ವಿಶೇಷವಾಗಿ [Vested Interests] ಸೂಚಿತವಾಗುತ್ತಲಿದೆ. ರೈತರುಣವಿಮೋಚನ ಬಿಲ್‌ಮಾಡಿದಾಗಲೂ ಎತ್ತಿಗೆಕೊಡುವ ಸಾಹುಕಾರರು ಬೊಬ್ಬೆ ಇಟ್ಟರು. ಸಾಲವನ ಹೊರೆಯಲ್ಲಿ ಜನ್ಮ ಜನ್ಮಾಂತರ ನರಳುತ್ತಿದ್ದ ರೈತರು ಸ್ವತಂತ್ರರಾಗಿದ್ದರು. ಈಗ ಯಾರೇ ಹಳ್ಳಿಗಳಿಗೆ ಹೋಗಲಿ ರೈತನು ವಂದನಾ ಪೂರ್ವಕ ಕೃತಜ್ಞತಾಭಾವನೆಯೊಂದಿಗೆ ಕಾಂಗ್ರೆಸ್‌ಸರಕಾರಕ್ಕೆ ಜೈಜೈಕಾರಹಾಕುತ್ತಾನೆ.

ಬೀಡಿ, ಸಿಗರೇಟ್ ಸೇದುವವರೂ, ಅವನ್ನೂ, ಹೊಗೆಸೊಪ್ಪನ್ನೂ ಮಾರುವವರೂ ಕರ ಕೊಡಬೇಕು ಇದರಿಂದ ಅನರ್ಥವೇನೂ ಆಗಲಾರದು. ಹೊಗೆಸೊಪ್ಪನ್ನು ಬೆಳೆಯುವವರಿಗೆ ಒಳ್ಳೆಯ ಧಾರಣೆಯು ಸಿಗುವುದು. ಮದ್ರಾಸ್ ಪ್ರಾಂತ್ಯದಲ್ಲಿ ಮದ್ಯಪಾನ ಪ್ರತಿಬಂಧವನ್ನೇರ್ಪಡಿಸಬೇಕೆಂದರೆ ಸೇಲ್ಸ್-ಟ್ಯಾಕ್ಸ್ ಇಲ್ಲದೆ ಸಾಧ್ಯವಿಲ್ಲ ಹಣವಿರವನವರೂ ಲಾಭಸಂಪಾದಿಸುವವರೂ, ಟ್ಯಾಕ್ಸ್‌ಕೊಡದೆ ಪುತ್ತು ಕೊಡಬೇಕು ಇದಕ್ಕೆ ರಾಷ್ಟ್ರಾಭಿಮಾನವು ಬೇಕಾಗುತ್ತದೆ. ಸತ್ಯಾಗ್ರಹ ಸಮರದಲ್ಲಿ ಕೆಲಸಗಳನ್ನು ಕಳೆದುಕೊಂಡ ಗ್ರಾಮಾಧಿಕಾರಿಗಳಿಗೆ ಪುನರ್ ಉದ್ಯೋಗ ಕೊಡಿಸುವವರೆಗೆ ಕೌನ್ಸಿಲ್‌ನಲ್ಲಿ ರಾಜಭಕ್ತಿಪ್ರಚೋದಕರಾದ ಕೆ ವಿ. ರೆಡ್ಡಿಯವರು ಪರಿರೋಧಿಸಿದರು. ಇವರ ಸುಸೋನ್ಮತ್ತಿಯು ವಿಚಿತ್ರವಾಗಿದೆ. ಕಾಂಗ್ರೆಸ್ ವೈರಿಗಳಾದ ಇವರು ಯಾವ ಕೊಲುಬಿಕ್ಕರೂ, ಆದರಿಂದ ಕಾಂಗ್ರೆಸ್ ಸಂಸ್ಥೆಯನ್ನು ಪ್ರಹರಿಸಲು ಹಿಂದು ಮುಂದು ನೋಡವುದಿಲ್ಲ.

ಸಾರ್ವಜನಿಕರಿಗೆ, ಹಳ್ಳಿಗಳಲ್ಲಿ ಸಾಸನಮಾಡುವ ಬಹುಸಂಖ್ಯಾಕರಿಗೆ, ಹಿತಸಾಧನ ಉದ್ದೇಶ್ಯವೇ ಕಾಂಗ್ರೆಸ್ ಪಾಲ್ಲಿಮೆಂಟರಿ ಕಾರ್ಯವನ್ನು ಕೈಗೊಂಡಿದೆ. ಇದಕ್ಕೆ ಎಲ್ಲರೂ ಸಹಾಯಮಾಡಬೇಕಾದುದು ದರ್ಮವಾಗಿದೆ. ಇದರಲ್ಲಿ ಸ್ವಾರ್ಥವಿಲ್ಲ. ವ್ಯಕ್ತಿಗತ ಪ್ರತಿಷ್ಠೆಯಿಲ್ಲ. ಈಕಾರ್ಯೆಗಳಿಂದ ಪ್ರಜಾಹಿತವಾಗುವದಷ್ಟೇ ಅಲ್ಲ. ದೇಶದ ಸಂಪತ್ತುಕೂಡಾ ಹೆಚ್ಚುವುದು. ಇದನ್ನು ಕಾಲವೇ ತೋರಿಸುವುದು.

ಬಳ್ಳಾರಿಜಿಲ್ಲೆಯಲ್ಲಿ ಭೂಕಂದಾಯದ ಸೌಲಭ್ಯಗಳು

ಭೂಕಂದಾಯದ ವಸೂಲಿಕ್ರಮದ ವಿಷಯಕ್ಕೆ ಬಳ್ಳಾರಿ ಅನಂತಪುರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಸರಕಾರದವರು ಆಜ್ಞೆಹೊರಡಿಸುವರು.

(1) ಬಳ್ಳಾರಿಜಿಲ್ಲೆಯ ರಾಯದುರ್ಗ ಸಿರುಗುಪ್ಪ ಅದವಾನಿ ಮತ್ತು ಆಲೂರು ತಾಲೂಕುಗಳಲ್ಲಿ ಫಸಲಿ 1347 ರಲ್ಲಿ ಮುಂದೆಹಾಕಲ್ಪಟ್ಟು ಕಿಸ್ತಿನ ಅರ್ಧಭಾಗ ಹಣವನ್ನು ಮಾತ್ರ ವಸೂಲಿಮಾಡಕ್ಕಷ್ಟೆ ಈವರ್ಷದ ಫಸಲಿಯ ಕೊನೆಯ ಕಿಸ್ತನ್ನು ವಸೂಲಿಮಾಡಿ ಮುಂದಿನ ಅರ್ಧದ ವಸೂಲಿಯನ್ನು 1340 ನೇಯ ಫಸಲಿಗೆ ಮಾಡಬೇಕು.

(2) ಈತಾಲೂಕುಗಳಲ್ಲಿಯೂ ಮತ್ತು ಬಳ್ಳಾರಿತಾಲೂಕಿನಲ್ಲಿಯೂ, ಈವರ್ಷದ ಕಿಸ್ತುವಸೂಲಿ ಜೊತೆಯಲ್ಲಿ ಹಿಂದಿನ ವರ್ಷಗಳಲ್ಲಿನ ಬಾಕಿಸೆಸ್‌ಗಳನ್ನು ವಸೂಲಿ ಮಾಡಬೇಕು.

(3) ಈವರ್ಷದ ಫಸಲಿಯ ಬಾಕಿ ಮತ್ತು ಇದುವರೆಗೆ ಮುಂದೆಹಾಕಲ್ಪಟ್ಟಿದ್ದ ಬಾಣಭೂಮಿ **ಕಂದಾಯದ ಬಾಕಿಯೆಲ್ಲವನ್ನೂ** ಹೊಸಪೇಟೆ ಹಡಗಲಿ ಕೂಡ್ಲಿಗೆ ತಾಲೂಕುಗಳಲ್ಲಿ ವಸೂಲಿಮಾಡತಕ್ಕದ್ದು. ಈ ಫಸಲಿಯಲ್ಲಿ ಕೊನೆಯ ಕಿಸ್ತನ್ನೂ ಕೂಡ ಇದರ ಜೊತೆಯಲ್ಲಿ ವಸೂಲಿ ಮಾಡಬೇಕು.

ಮೀನಾಕ್ಷಿ ಭವನ ಕಾಫಿಕ್ಲಬ್
[ರಿಜಿಸ್ಟರ್ಡ್]
ಶಾಖೆಗಳು—
ಕಾಫಿ ಕ್ಲಬ್ ಬೆಂಗಳೂರು ರೋಡ್.
ಊಟ ವಸತಿಗೃಹ ಬ್ರಾಹ್ಮಣ ಬೀದಿ.
ರುಚಿಕರವಾದ ಶುದ್ಧ ತುಪ್ಪ ವಲ್ಲಿ ತಯಾರಿಸಿದ ಸಿಹಿಖಾರದ ಫಲಹಾರವಸ್ತುಗಳು
ಒಳ್ಳೆಯ ಊಟದವ್ಯವಸ್ಥೆ ಧಾರಾಳವಾಗಿ ಗಾಳಿ, ಬೆಳಕು ಬರುವ ಮಹಡಿಯ ಮೇಲಿನ ಕೊಠಡಿಗಳು ಅಧುನಿಕ ವ್ಯವಸ್ಥೆ.
ಒಂದು ಸಲ ಬಂದು ಪರೀಕ್ಷಿಸಿರಿ.

ಭಾರತಮಾತೆಯ

ಹತ್ತು ಆಜ್ಞೆಗಳು.

೧ ಭರತಖಂಡದಲ್ಲಿ ಸಿದ್ಧವಾಗುವ ಪದಾರ್ಥಗಳನ್ನೇ ತೆಗೆದುಕೊಳ್ಳಿರಿ.

೨. ಭರತಖಂಡದಲ್ಲಿ ಯಾವ ಪದಾರ್ಥಗಳುಂಟಾಗುವದಿಲ್ಲವೋ ಅಥವಾ ದೊರೆಯುವುದಿಲ್ಲವೋ ಅಂತಹ ಅಗತ್ಯವಿದ್ದಲ್ಲಿ ವಿದೇಶದವುಗಳನ್ನು ತೆಗೆದುಕೊಳ್ಳಿರಿ.

೩. ಒಕ್ಕಲಿತನವನ್ನು ಹೆಚ್ಚಿಸಿ ಹೊಸ ಹೊಸ ಪದಾರ್ಥಗಳನ್ನುಂಟುಮಾಡಿರಿ.

೪. ಕೈಗಾರಿಕೆಗಳನ್ನು ಪರಸ್ಪರ ಸಹಾಯದಿಂದ ಸಿದ್ಧಗೊಳಿಸಿರಿ. ಮತ್ತು ಉತ್ತಮ ಪದಾರ್ಥಗಳನ್ನು ಮಾಡುವುದರಲ್ಲಿ ನಿಮ್ಮ ಕೌಶಲ್ಯವನ್ನು ಪ್ರಕಟಗೊಳಿಸಿರಿ ಸ್ವಲ್ಪ ವೆಚ್ಚದಲ್ಲಿ ಜಾತ್ತಮ ಪದಾರ್ಥಗಳನ್ನು ಹೆಚ್ಚಾಗಿ ಸಿದ್ಧಗೊಳಿಸಲು ಪ್ರಯತ್ನಿಸಿರಿ.

೫. ಭರತಖಂಡದ ಪದಾರ್ಥಗಳನ್ನು ಪರದೇಶಗಳಿಗೆ ಕಳುಹಿಸಿ ಈ ದೇಶದ ವ್ಯಾಪಾರವನ್ನು ಹೆಚ್ಚಿಸಿರಿ.

೬. ನಿಮ್ಮ ಕಾರ್ಯಕ್ಕೆ ಭಾರತೀಯರನ್ನೇ ನಿಟ್ಟುಕೊಳ್ಳಿರಿ. ಭಾರತೀಯ ಪತ್ರಗಳಲ್ಲಿಯೇ ನಿಮ್ಮ ಪದಾರ್ಥಗಳನ್ನು ಕಳುಹಿಸಿರಿ. ಭಾರತೀಯ ಬ್ಯಾಂಕ ನಿಮಾ ಕಂಪನಿಗಳಿಗೇನೇ ಪ್ರೋತ್ಸಾಹಿಸಿರಿ.

೭ ಕಚ್ಚಾ ಪದಾರ್ಥಗಳಿಂದ ಪಕ್ಕಾ ಸಾಮಾನುಗಳನ್ನು ಭರತಖಂಡದಲ್ಲಿಯೇ ಮಾಡಿರಿ.

೮ ಹೊಸ ಉದ್ಯೋಗಗಳನ್ನು ಪ್ರಾರಂಭಿಸಿ. ಇವು ಉದ್ಯೋಗಗಳಲ್ಲಿ ಸುಧಾರಣೆಯನ್ನು ಮಾಡಿರಿ. ಶಾಸ್ತ್ರಜ್ಞಾನದ ಪೂರ್ಣ ಪ್ರಯೋಜನ ಹೊಂದಲು ಹಿಂಜರಿಯಬೇಡಿರಿ.

೯. ಪದಾರ್ಥಗಳ ಪ್ರಸಿದ್ಧಿಯು ಪ್ರಾಪ್ತವಾಗಬೇಕೆಂದು ಹೆಚ್ಚು ಪದಾರ್ಥಗಳನ್ನುಂಟುಮಾಡುವುದರಕಡೆಗೆ ಲಕ್ಷಿಸದೆ ಉತ್ತಮ ಪದಾರ್ಥಗಳನ್ನು ಮಾಡುವದರಕಡೆಗೇನೇ ಲಕ್ಷಿಸಿರಿ

೧೦. ಭಾರತೀಯ ಉದ್ಯೋಗಾಧಿನಿಯಧ್ಯಕ್ಷಿಗೆ ಭಾರತೀಯ ಬಂಡವಾಳವನ್ನು ಸಯೋಗದಲ್ಲಿ ತಂದುಕೊಳ್ಳಿರಿ.

ಬಳ್ಳಾರಿಜಿಲ್ಲಾ ಜೋರ್ಡುಸಭೆ

13-ನೇಯ ತಾ॥ ಶನಿವಾರ ಮಧ್ಯಾಹ್ನ ಹರಪನಹಳ್ಳಿಯ ಜೋರ್ಡುಹೈಸ್ಕೂಲ್ ಭವನದಲ್ಲಿ ಡಾ. ನಾಗನಗೌಡರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಪ್ರಾರಂಭದಲ್ಲಿ ಅಧ್ಯಕ್ಷರು ಪಾರ್ಲಿಮೆಂಟರಿ ಸೆಕ್ರಟರಿಗಳಾದ ಶ್ರೀ. ಎ. ವಿ. ಶೆಟ್ಟಿಯವರ ಪರಿಚಯವನ್ನು ಮಾಡಿಕೊಟ್ಟರು. ಶ್ರೀ. ಶೆಟ್ಟರು ಜಿಲ್ಲಾ ಜೋರ್ಡು ಕಾರ್ಯಕಲಾಪಗಳಿಗೆ ಯಶಸ್ಸನ್ನು ಕೋರಿ ಡಾಕ್ಟರ್‌ಗೌಡರ ಆಳಿಕೆಯಲ್ಲಿ ಒಳ್ಳೆಯ ರಸ್ತೆಗಳು, ಭಾವಿಗಳು, ನಗೈರಿ ಗ್ರಾಮಪಾಠಶಾಲೆಗಳೊದಗಲೆಂದು ಆಶಿಸಿದರು.

ರಾಯದುರ್ಗ-ಹರಪನಹಳ್ಳಿ ಜೋರ್ಡು ಹೈಸ್ಕೂಲುಗಳಲ್ಲಿ ಒಂದನೇಯ ಫಾರಂನಿಂದ 3-ನೇಯ ಫಾರಂನವರೆಗೆ ಅನಿವಾರ್ಯರೂಪದಲ್ಲಿ ಹಿಂದಿಯನ್ನು ಕಲಿಸಲು ಸರಕಾರದ ಆಜ್ಞಾಪ್ರಕಾರ ಬಲುನ ಜೂನ್ ತಿಂಗಳಿಂದ ಇಬ್ಬರು ಹಿಂದೀ ಉಪಾಧ್ಯಾಯರನ್ನು ನಿಯಮಿಸಲು ನಿಶ್ಚಯವಾಯಿತು ಜೋರ್ಡುಮಿಡಲ್ ಶಾಲೆಗಳಲ್ಲಿಉಪಾಧ್ಯಾಯರನ್ನಕ ತಮೆನಾತಿ ಖರ್ಚುಳಿಸುವ ಜಿಲ್ಲಾ ವಿದ್ಯಾಧಿಕಾರಿಗಳ ಸೂಚನೆಯು ಸ್ವಗತವಾಯಿತು. ಸರ್ಕಾರದ ಕೈಗಾರಿಕ ಶಾಲೆಯನವರಿಗೆ ಪೂರ್ವದಂತೆ ವಿದ್ಯಾರ್ಥಿ ವೇತನಗಳನ್ನು ಕೊಡಲು ನಿರ್ಣಯವಾಯಿತು. ಹೆಡ್ ಕ್ವಾರ್ಟರ್ಸ್ ಆಸ್ಪತ್ರೆಯ ಸಲಹೆಸಮಿತಿಗೆ ಶ್ರೀ ಮರಿಬಸವನಗೌಡರನ್ನು ಆರಿಸಲಾಯಿತು. ಆಡಳಿತಕ್ಕೆ ಸಂಬಂಧಿಸಿದ ಮುಖ್ಯವಲ್ಲದ ಇನ್ನು ಕೆಲವಿಷಯಗಳಬಗ್ಗೆ ಚರ್ಚೆಯಾಗಿ ಸಭೆಯು ಮಧ್ಯಾಹ್ನ 3-ಕ್ಕೆ ಮುಗಿಯಿತು.

ಬಳ್ಳಾರಿ ನಗರ ಧರ್ಮದೇವ-ವಿದ್ಯಾವಾಚಸ್ಪತಿ- ಆರ್ಯಸಮಾಜದ ಪ್ರಮುಖ ಮುಖಂಡರಲ್ಲೊಬ್ಬರಾದ ಶ್ರೀ ಧರ್ಮದೇವ ವಿದ್ಯಾವಾಚಸ್ಪತಿಯವರು 11-ನೇಯ ತಾ॥ ಸಾಯಂಕಾಲ ಹಿಂದೀ ಭಾಷೆಯಲ್ಲಿ ಹೈದರಾಬಾದಿನ ಅತ್ಯಾಚಾರಗಳನ್ನು ಕುರಿತು ವಿಶದೀಕರಿಸಿ ಅಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನು ಸಂಪಾದಿಸಲು ಕೈಗೊಂಡ ಸತ್ಯಾಗ್ರಹಕ್ಕೆ ಸಹಾಯ ನೂಡಲು ಕೋರಿದರು. ಶ್ರೀ ವೀರಣಾಮಿಯವರು ತಮ್ಮ ಸ್ವಂತ ಅನುಭವವನ್ನು ಹೇಳಿ ಅಲ್ಲಿ ಧರ್ಮಾಚರಣೆಗೆ ಏನೂ ಸ್ವಾಧೀನವಿಲ್ಲೆಂದು ತಿಳಿಸಿ ಆರ್ಯರ ಸತ್ಯಾಗ್ರಹವು ನ್ಯಾಯವಾದುದೆಂದೂ ಇದು ಮುಸಲ್ಮಾನರ ಯಾ ನೈಜಾಮರ ವಿರುದ್ಧದ ಚಳವಳಿಯಲ್ಲವೆಂತಲೂ ತಿಳಿಸಿದರು.

ಭಾರತ ಸೇವಾಶ್ರಮ ಸಂಘ:- ಭಾರತ ಸೇವಾಶ್ರಮ ಸಂಘ (ಕಲ್ಕತ್ತ)ದ ಸ್ವಾಮಿ ಅದ್ಭೈತಾನಂದರು ತಮ್ಮ ಶಿಷ್ಯಮಂಡಲಿ ಸಮೇತರಾಗಿ ಬಂದು ಊರಿನ ಮುಖ್ಯಮುಖ್ಯ ಸ್ಥಳೇತರಗಳಲ್ಲಿ ಧಾರ್ಮಿಕ ಸಂಬಂಧದ ಉಪನ್ಯಾಸಗಳನಿತ್ತರು. ತಮ್ಮಿಂದ ಸ್ಥಾಪನಲ್ಪಟ್ಟ ಸಂಸ್ಥಗಳಿಗೆ ಜನರಿಂದ ದ್ರವ್ಯ ಸಹಾಯ ಪಡೆಯುತ್ತಿರುವರು.

ಅಂಬಾ ಭವನ ಕಾಫೀ ಕ್ಲಬ್

(ವಿಜಿಟೆರಿಯನ್)

ಮತ್ತು

ಕಾಫಿ — **ಊಟದ - ಹೋಟೆಲ್.**

ಬೆಂಗಳೂರು ರೋಡ್, ಬಳ್ಳಾರಿ.

ಕೈಲ್ವೆ ಸ್ಟೇಷನ್ನಿಗೆ ಒಹಳ ಸಮೀಪವಿರುವಲ್ಲಿ ರುಚ್ಯವಾಗಿಯೂ ಶುಚಿಯಾಗಿಯೂ ತಯಾರಿಸಿದ ರುಚಿಕರವಾದ ಫಲಾಹಾರ - ಸಾರು - ಪಲ್ಯ ಕಾಫಿ ಮತ್ತು ಇತರ ಅನುಕೂಲಗಳೆನಿಸಿದ **ಕೊಠಡಿಗಳು, ಭೋಜನ** ಸಮಾರಂಭ ಪಾರ್ಟಿಗಳ ವಿಷಯವು ಕೆಲ ಭೇಟಿಗೆ ಮುಂಚೆ ತಿಳಿಸಿದರೆ **ಸಾಕು** ಅತ್ಯುತ್ತಮವಾದ ವ್ಯವಸ್ಥೆಮಾಡುವೆವು.

ಪ್ರೊಪ್ರಯಿಟರ್ಸು —

ಪಿ. ಕನ್ನಯ್ಯ, ಹೆಚ್. ಕರಿಬಸಪ್ಪ.

ಹರಪನಹಳ್ಳಿಯಲ್ಲಿ ಬೋರ್ಡು ಹೈಸ್ಕೂಲಿನ ಸುವರ್ಣ ಮಹೋತ್ಸವ

13-5-39 ನೇ ತಾ. ಶನಿವಾರ

ಸುವರ್ಣ ಮಹೋತ್ಸವಕ್ಕೆ ವಿದ್ಯಾಖಾತೆಯ ಮಂತ್ರಿಗಳಾದ ಶ್ರೀ ವಾಕಿರಿಯವರು ಬರಬೇಕಿದ್ದಿತ್ತು. ಅಸೆಂಬ್ಲಿ ಸಮಾವೇಶವಿದ್ದ ಕಾರಣ ಅವರು ಬರಲಾಗಲಿಲ್ಲ. ಆರೋಗ್ಯ ಶಾಖೆಯ ಉಪಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟರು 13ನೇ ತಾ. ಸ್ವಾತಃ ಕಾಲ ಬಂದರು. ಅವರಿಗೆ ವಿಜೃಂಭಣೆಯಾದ ಸ್ವಾಗತವು ಕೊಡಲ್ಪಟ್ಟಿತು. ಮೆರವಣಿಗೆಯಿಂದ ಅವರು ಕೊಂಡೊಯ್ಯಲ್ಪಟ್ಟರು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ತಿರುಮಲರಾಯರು ಮಾನ್ಯ ಅತಿಥಿಗಳನ್ನು ಸ್ವಾಗತಿಸುತ್ತಾ ಶಾಲೆಯ ಸಂಕ್ಷಿಪ್ತ ವರದಿಯನ್ನು ವಿವರಿಸಿ ಅದರ ಅಭಿವೃದ್ಧಿಗೆ ಕಾರಣರಾದವರನ್ನು ವಂದಿಸಿದ ನಂತರ ಅಧ್ಯಕ್ಷ ಚುನಾವಣಯ ವೈಶಿಷ್ಟ್ಯವು ಆಯಿತು. ಮಾ. ರಾಘವೇಂದ್ರರಾಯರು ಇಂಗ್ಲೀಷು ಮತ್ತು ಕನ್ನಡ ಭಾಷೆಗಳಲ್ಲಿ ಬಂದ ಸಂದೇಶಗಳನ್ನು ಓದಿದರು. ಅಧ್ಯಕ್ಷರು ಪ್ರಾರಂಭಿಕ ಭಾಷಣಮಾಡಿ ತಮ್ಮನ್ನು ಕರೆಸಿ ಇಂಥಾ ಸಂದರ್ಭದಲ್ಲಿ ಭಾಗವಹಿಸಲನಕಾಶಕೊಟ್ಟದ್ದಕ್ಕೆ ಕೃತಜ್ಞತಾಪೂರ್ವಕ ವಂದನೆಗಳನ್ನು ಸಮರ್ಪಿಸಿದರು.

ಶ್ರೀ ಕೆ. ಗುರುರಾಜರಾಯರು ಆಂಗ್ಲ ಭಾಷೆಯಲ್ಲಿಯೂ, ಶ್ರೀ ಎಂ. ಪೆಚ್. ಎಂ. ಸಂಜುಂಡಯ್ಯನವರು ಕನ್ನಡ ಭಾಷೆಯಲ್ಲೂ ವರದಿಗಳನ್ನೋದಿದರು. ಆ ವರದಿಗಳು ಸಭಿಕರಿಗೆಲ್ಲಾ ಹಂಚಲ್ಪಟ್ಟವು.

ಹರಪನಹಳ್ಳಿ ರಾಜಕೀಯ - ಸಾಮಾಜಿಕ ದೃಷ್ಟಿಯಿಂದ ಮುಂದುವರಿದಿದ್ದು ಈ ಶಾಲೆಯಲ್ಲಿ ವಿದ್ಯಾಭ್ಯಾಸಹೊಂದಿದ ವಿದ್ಯಾರ್ಥಿಗಳು ದೇಶದ ಎಲ್ಲಾ ಕಡೆಗಳಲ್ಲೂ ಗೌರವನೀಯ ಸ್ಥಾನಗಳಲ್ಲಿರುವುದು ಪ್ರತಂ ಸಾಯೋಗ್ಯವಾಗಿದೆ. ಮುಂಗಳೂರು ಜಿಲ್ಲೆಯು ಮದ್ರಾಸ್ ಪ್ರಾಂತ್ಯದಲ್ಲಿ ಪ್ರಗತಿಯನ್ನು ಹೊಂದಿದೆ. ಸುವರ್ಣ ಮಹೋತ್ಸವದ ಮುಖ್ಯವಿಶೇಷವೆಂದರೆ ಪೂರ್ವವಿದ್ಯಾರ್ಥಿಗಳೆಲ್ಲಾ ಒಂದೆಡೆಯಲ್ಲಿಕೂಡಿ ತಮ್ಮ ವಿದ್ಯಾರ್ಥಿ ದಿನಗಳ ಸ್ಮರಣೆಯನ್ನು ಮಾಡಿಕೊಂಡು ತಮಗೆ ವಿದ್ಯಾಭ್ಯಾಸಕೊಟ್ಟು ಮುಂದೆ ತಂದವಕ್ಕೆ ಕಾರಣವಾದ ಶಾಲೆಯ ಪಾಠ್ಯತ ಪುರೋಭಿವೃದ್ಧಿಗೆ ತಕ್ಕ ಉಪಾಯಗಳನ್ನು ಸೂಚಿಸುವುದಾಗಿದೆ. ಈ ಕಾರ್ಯದಲ್ಲಿ ಯಶಸ್ಸು ದೊರೆಯಲಿ ಬಳ್ಳಾರಿಜಿಲ್ಲೆಯಲ್ಲಿ ಹರಪನಹಳ್ಳಿಯು ರಾಜಕೀಯದಲ್ಲಾ ಮುಂದುವರಿದಂತೆ ಇಲ್ಲಿನ ಶಿಕ್ಷಣಾಕ್ರಮವೇ ಸಾಧಕವೆನ್ನಬಹುದು. ಇದೇ ಅಧ್ಯಕ್ಷಭಾಷಣದ ಸಾರಾಂಶ. ಶ್ರೀ ತಿರುಮಲಾಚಾರ್ಯರು ಆಕ್ಷಕನ್ನಡಭಾಷೆಯಲ್ಲಿ ಶೆಟ್ಟರ ಭಾಷಣವನ್ನು ಅನುವಾದಿಸಿದರು.

ಮಧ್ಯಾಹ್ನೋತ್ಸವ ಬಡಹುಡುಗರನಿಧಿಯ ವರದಿಯು ಆಸಕ್ತಿವಹಿಸಿತು. ಉಪಾಧ್ಯಾಯ ಸಂಘದವರು ತಮ್ಮ ಬೇಡಿಕೆಗಳನ್ನು ಶೆಟ್ಟರಿಗೆ ಹೇಳಿಕೊಂಡರು. ದಂಡಿನ ಅನಂತರಾವ್ ಪುಂಡ್ರಿ ಗುಂಡೂರಾವ್ ಲ. ಶ್ರೀನಿವಾಸರಾವ್ ಪಿ. ವೆಂಕಟಸುಬ್ಬರಾವ್ (ಬಳ್ಳಾರಿ) ಇವರುಸುವರ್ಣಉತ್ಸವದ ಮಹತ್ವಪೇಳಿ ಚಾಲಕರನ್ನು ವಂದಿಸಿದರು. ಶ್ರೀಗೋವಿಂದದಾಸರು ಈ ಸಂದರ್ಭದಲ್ಲಿ ತಮ್ಮ ಹಾಸ್ಟೆಲ್‌ಗೆ ಸಹಾಯ ಕೋರಿದರು.

ಡಾಕ್ಟರ್ ನೋಕನರಾಯರು ಹಿಂದೀಭಾಷೆಯಲ್ಲಿ ಸುವರ್ಣಮಹೋತ್ಸವದ ಈ ಸುಸಮಯದಲ್ಲಿ ಅಭಿಸಂಪಗಳನ್ನರ್ಪಿಸಿ ಶಾಲೆಯ ಉತ್ತರೋತ್ತರ ಜೆಳೆಯಲೆಂದು ಹರಸಿದರು.

14-5-39 ಭಾನುವಾರ

ಶ್ರೀ. ಎ ಬಿ. ಶೆಟ್ಟರು ಸಾರ್ವಜನಿಕ ಆರೋಗ್ಯ ಮಸೂದೆ (Public Health Act) ಯ ವಿಷಯದಲ್ಲಿ ಎಲ್ಲಾ ವಿವರಗಳನ್ನೂ ಕನ್ನಡಭಾಷೆಯಲ್ಲಿ ಉಪನ್ಯಾಸಿಸಿದರು. ಶ್ರೀ. ಬಿ. ಅನಂತಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು.

ಸಾಯಂಕಾಲ-- ನ್ಯಾಯಾಮ ಪ್ರದರ್ಶನವಾಯಿತು. (ಮಲ್ಲಸಜ್ಜನ ವ್ಯಾಯಾಮಶಾಲೆ) ಶ್ರೀ ಗಂಗಾವತಿ ಶ್ರೀ. ಟಿ. ಹೆಚ್. ಯಂ. ಸದಾಶಿವಯ್ಯನವರು ವ್ಯಾಯಾಮ ಪ್ರಚಾರಕ ಸಂಘಕ್ಕೆ ಸಹಾಯವನ್ನು ಕೋರಿದರು ಇದಾದನಂತರ ಶ್ರೀ. ವಿ. ಯಸ್. ನರಸಿಂಹಾಚಾರ್ಯರಧ್ಯಕ್ಷತೆಯಲ್ಲಿ ಹಳೆಯ ವಿದ್ಯಾರ್ಥಿಗಳ ಕೂಟವಾಗಿ ಹಳೆಯವಿದ್ಯಾರ್ಥಿಗಳು ತಮ್ಮ ಪೂರ್ವದಿನಗಳ ಕುರುಹುಗಳನ್ನು ಸ್ಮರಿಸುತ್ತಾ ಆನಂದಪರವಶರಾಗಿ ಸಭಿಕರನ್ನು ಆನಂದಗೊಳಿಸಿದರು. ಶ್ರೀಗಳಾ ಪದಂಡಿನ ಅನಂತರಾವ್. ಲ. ಶ್ರೀನಿವಾಸರಾವ್, ಪುಂಡ್ರಿ ಗುಂಡೂರಾವ್ ಎಂ. ಭೀಮಶೇನರಾವ್ ಮಾಸಿಂಸಾಹೇಬ್ ತಾ. ಶ್ರೀನಿವಾಸಾಚಾರ್ ರಾಂಭಟ್ ಜೋಶಿ ವಗೈರೆ ಯವರೆಲ್ಲಾ ಮಾತಾಡಿದರು. ಈ ಸಭೆಯು ನಿಜೆಯುತ್ತಿರಬೇಕಾದರೆ ಶ್ರೀ. ಎ. ಬಿ. ಶೆಟ್ಟರನ್ನು ಬೀಳ್ಕೊಡುವ ಸಮಾರಂಭವಾಯಿತು. ಪರಸ್ಪರ ವಂದನ ಕೃತಜ್ಞತೆಯು ಅರ್ಪಣವಾಯಿತು ಶ್ರೀ. ವಿ ಯಸ್. ನರಸಿಂಹಾಚಾರ್ಯರು ತಮ್ಮ ಅಂತ್ಯಭಾಷಣದಲ್ಲಿ ತಮ್ಮ ವಿದ್ಯಾರ್ಥಿದಿನಗಳ ಮನೋರಂಜಕ ವೃತ್ತಾಂತಗಳನ್ನು ಅರುಹಿ ಸಭೆಯನ್ನು ಮುಕ್ತಾಯ ಗೊಳಿಸಿದರು.

15-5-39 ಸೋಮವಾರ

ಸಾಹಿತ್ಯ ಕಲೆಗಳ ಉತ್ಸವ ಶ್ರೀ ವಟ್ಟಂಶಾಮರಾಯರೇ ಅಧ್ಯಕ್ಷರು. ಶ್ರೀಹೊನ್ನಪ್ಪನವರ ಲಾವಣಿಯಾಯಿತು. ಹಳ್ಳಿಗಳ ಕವನಗಳು ಮತ್ತೊಬ್ಬ ಮಹಾಶಯರಿಂದ ಓದಲ್ಪಟ್ಟುವು ಭಾರತ ನಾಚನವು ಕ್ರಮಪ್ರಕಾರವಾಗಿ ಶ್ರೀ ತಿರುಮಲರಾವ ಶ್ರೀ ಲ. ಶಾಮರಾವ್ ಶ್ರೀ ತಿರುಮಲಾಚಾರ್ಯರಿಂದ ಆಯಿತು. "ವ್ಯಭಿಚಾರವು ದೇಶದ್ರೋಹ" ಎಂಬ ವಿಷಯಕ್ಕೆ ಕವನವನ್ನಾಡಿ ಓದುವವರಿಗೆ ತಾವು ಬಹುಮಾನ ಕೊಡುವುದಾಗಿ ಬಳ್ಳಾರಿಯ ಶ್ರೀ. ಬಿ. ವಿ. ಶೇಷಗಿರಿರಾಯರು ಪ್ರಸಿದ್ಧಿಪಡಿಸಿದರು. ಸಾಯಂಕಾಲ ಆಟಪಾಟಾದಿಗಳಲ್ಲಿ ಗೆದ್ದ ಬಾಲಕರಿಗೆ ಬಹುಮಾನಗಳು ಹಂಚಲ್ಪಟ್ಟವು. ಬಾಲಕಿಯರ ನಾಟಕ ಪ್ರದರ್ಶನವಾಯಿತು. ಶೇಷಗಿರಿರಾಯರ ಬಹುಮಾನವು ರಾಯಸಂ ಭೀಮಶೇನರಿಗೆ ಹೋಯಿತು.

ಸಂಡೂರು-ಸಂಸ್ಥಾನ

ಸ್ಕೂಲ್ಮಾಸ್ಟರು, ಡಾಕ್ಟರು ಪಶುವೈದ್ಯಶಾಲೆಯ ಡಾಕ್ಟರು, ಲೇಂಜರ್ ರೆವಿನ್ಯೂ ಇನ್‌ಸ್ಪೆಕ್ಟರ್ ಮುಂತಾದವರ ಕಡೆಯಿಂದ ಸಂಡೂರು ಸರಕಾರದವರು ಪ್ರಜಾರ ನಡೆಯಿಸಿ ಪ್ರಜಾಸಮಿತಿ ಕಾರ್ಯಕಲಾಪಗಳನ್ನು ಅಲ್ಲಗಳೆಯಲು ಯತ್ನಿಸಿದಕಾರಣ ಪ್ರಜಾಸಮಿತಿಯವರು ಸರಕಾರದ ಘಟನಾಸಮಿತಿಗೆ ತಿಲಾಂಜಲಿಯನ್ನಿತ್ತುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಆದರೆ ಅನಪ್ರಚಾರವು ಇನ್ನೂ ಸಾಗುತ್ತಿರುವುದಕ್ಕೆ ದುಃಖಿಸಬೇಕಾಗಿದೆ. 8ನೇಯ ತಾ॥ ಶ್ರೀ ಸಂಗಪ್ಪನವರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ 150 ಜನರಿಗಿಂತ ಹೆಚ್ಚಿರಲಿಲ್ಲ ಮತ್ತು ಹೋದವರೆಲ್ಲಾ ಆಲ್ಲೇನುನಡೆಯುವುದೋ ಎಂಬುದನ್ನು ಸ್ವತಃ ಕಣ್ಣಾರೆ ತಿಳಿಸಲಿಕ್ಕೆ ಹೋಗಿದ್ದರು. ಜಿಲ್ಲೆಯ ತಮ್ಮ ಬೇಡಿಕೆಗಳನ್ನು ಹೇಳಲಿಕ್ಕೆ ಸಭೆಯ ಕೆಲವರು ಎದ್ದರೆ **ಇದು ಸಮಯವಲ್ಲ** ಎಂದು ಕೂಡಿಸಿಬಿಟ್ಟರು. ಹೀಗಿದ್ದೂ ಸಂಯುಕ್ತ ಕರ್ನಾಟಕದ ಸ್ವಂತ ಸುದ್ದಿಗಾರರೆಂಬುವರು ಆಪತ್ರಿಕೆಗೆ ಸುಳ್ಳುಸುದ್ದಿಗಳನ್ನು ಕಳುಹಿಸುತ್ತಾರೆ. ಇದು ಪ್ರಜೆಗಳ ಸಭೆಯಲ್ಲ. ಸರಕಾರದವರಿಂದ, ಸರಕಾರದಬಾಲಬಡೆಯುವವರಿಂದ. ಏರ್ಪಡಿಸಲ್ಪಟ್ಟಸಭೆ, ಪ್ರಜಾವರ್ಗದಲ್ಲಿ ಭೇದವನ್ನು ಕಲ್ಪಿಸಲು ಹೂಡಿದಸಭೆ. ಪ್ರಜಾಪ್ರತಿನಿಧಿಗಳನ್ನು ನಿಂದಿಸಲು ಏರ್ಪಡಿಸಿದಸಭೆ, ಪ್ರಜೆಗಳನ್ನು ಕೆಲಕಾಲ ಕೆಲವಸಮಯಗಳಲ್ಲಿ ಅಂಧಕಾರದಲ್ಲಿಡಬಹುದು. ಅವರನ್ನು ಎಲ್ಲಾಕಾಲ ಎಲ್ಲಾ ಸಮಯದಲ್ಲಿ ಗುಲಾಮರನ್ನಾಗಿಡುವ ಪ್ರಯತ್ನಗಳಿಗೆ ಎಂದಿಗೂ ಯಶಸ್ಸು ದೊರೆಯಲಾರದು. ಇವನ್ನು ಅಧಿಕಾರಿಗಳು ಜ್ಞಾಪಕದಲ್ಲಿಡಬೇಕು ಸಂಸ್ಥಾನಗಳ ಜಾಗೃತಿಯನ್ನು ಅನುಲಕ್ಷಿಸಿ ಅನೇಕ ರಾಜ ಮಹಾರಾಜರು ಉದಾರವಾಗಿ ವಯಸ್ಕಾಲಿಸಿರುವ ರಾಜ್ಯಘಟನೆಯ ಆದರ್ಶಗಳನ್ನು ಮನಕ್ಕೆ ತಂದುಕೊಂಡು ಸಂಡೂರು ಪ್ರಭುಗಳಾದರೂ ಜವಾಬ್ದಾರಿ ಸರಕಾರವನ್ನು ಶೀಘ್ರದಲ್ಲೇ ಸ್ಥಾಪಿಸಬೇಕು. ತಾವೇ ಘಟನಾಸಮಿತಿಯನ್ನು ರಚಿಸಿ ಪ್ರಶ್ನೆಮಾಲಿಕೆಯನ್ನು ಹೊರಡಿಸಿದುದಕ್ಕೆ ಪ್ರಜಾಸಮಿತಿಯೆಂಬುದು ನಿರ್ಮಿತವಾಗಿ ಜವಾಬ್ದಾರೀಯುತವಾಗಿ ಜವಾಬು ಕೊಡಬೇಕಾಯಿತು ಇಷ್ಟಕ್ಕೆ ಸರಕಾರದವರು ವ್ಯರ್ಥಗೊಂದಲ ಎಬ್ಬಿಸಿದರೆ ಯಾರೇನು ಮಾಡಬೇಕು?

'ಕಾಲಾಯ ತಸ್ಮೈನಮಃ'

ಕಾಲಕ್ಕೆ ನಮಸ್ಕಾರ ಆದರೆ ರಾಜರೂ ಕೂಡಾ ಕಾಲಪರಿಸ್ಥಿತಿಗೆ ನಮಸ್ಕರಿಸುವ ತಲೆಬಾಗುವ ಸಮಯವು ಬರುವುದೆಂದು ನಂಬಿರುತ್ತೇವೆ

ಸಂಡೂರಿನನೊಬ್ಬ

ತಿರುಗುಪ್ಪ ತಾಲೂಕು ರೈತರಸಭೆ

ನಮ್ಮಸುದ್ದಿಗಾರರಿಂದ

ತಿರುಗುಪ್ಪೆ ತಾಲೂಕು ರೈತರ ಸಭೆಯು 15-ನೇಯ ತಾ॥ ಶ್ರೀ ರಾಣಿ ರಂಗರಾಯರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ದಿವಂಗತ ಶ್ರೀ ಭೀಮಸೇನರಾಯರ ನಳದಲ್ಲಿ ಅವರ ಸೋದರರಾದ ಶ್ರೀ ಪಿ ಕಲ್ಲುರಾವ್ ಬಿ.ಎ. ಬಿ.ಯಲ್.ರವರು ತಾಲೂಕು ರೈತರ ಸಂಘಕ್ಕೆ ಅಧ್ಯಕ್ಷರಾಗಿರಬೇಕೆಂದು ನಿರ್ಣಯವಾಯಿತು.

ಶ್ರೀ. ಎಸ್. ಕೆ ಭೀಮಶೇನರಾಯರ ಆಕಸ್ಮಿಕಮರಣಕ್ಕೆ ದುಃಖಸಂತಾಪಗಳನ್ನು ಸೂಚಿಸುವ ನಿರ್ಣಯವಾಗಿ ಸಹಾನುಭೂತಿಯನ್ನು ಕುಟುಂಬೀಕರಿಗೆ ತಿಳಿಸಬೇಕೆಂಬುವ ತೀರ್ಮಾನವಾಯಿತು

ಕೆಂಚನಗುಡ್ಡದ ಆನೆಕಟ್ಟೆಸಲ್ಲಿ (ತುಂಗಭದ್ರಾನದಿ) ಭದ್ರತೆಯಿಲ್ಲದೆ ನೀರು ಹೊರಸೂಸುತ್ತಿದ್ದು ನೀರಾವರಿ ಭೂಮಿಗಳಲ್ಲಿರುವ ಸ್ಟೈರುಗಳು ನೀರಿನ ಸಪ್ಲೇಇಲ್ಲದೆ ಕ್ಷೀಣಿಸುತ್ತಿರುವಕಾರಣ ಅದನ್ನುಕೂಡಲೇ ಸರಿಪಡಿಸಬೇಕೆಂದು ಸರ್ಕಾರದ ಸಂಬಂಧಿಸಿದ ಅಧಿಕಾರಿಗಳನ್ನು ಬೇಡಲು ತೀರ್ಮಾನಿಸಲ್ಪಟ್ಟಿತು

ಹರಪನಹಳ್ಳಿ ಕಾಂಗ್ರೆಸ್ ಸಭೆ

15-ನೇ ತಾ॥ ಸ್ಥಾನಿಕಾಲ ಶ್ರೀ ಹೆಚ್. ಕೆ. ಗುರುಬಸವರಾಜ ಇವರ ಅಧ್ಯಕ್ಷತೆಯಲ್ಲಿ ಹರಪನಹಳ್ಳಿಯಲ್ಲಿ ಕಾಂಗ್ರೆಸ್‌ಜನರ ಸಭೆಯೊಂದು ನೆರೆದಿದ್ದಿತು. ಶ್ರೀ ಆರ್. ಆರ್. ನಿಸಾಣಿಯವರು ಸಂಸ್ಥಾನ ಚಳವಳಿ ಬಿ. ವಿ. ಶೇಷಗಿರಿರಾಯರು ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್‌ನವರ ಕರ್ತವ್ಯ ಮತ್ತು ವಿ. ಯಂ ಗಿರಿಯವರು ಕಾಂಗ್ರೆಸ್ಸಿನ ನಿರ್ಮಾಣಕಾರ್ಯಕ್ರಮ ಈ ಬಗ್ಗೆಉಪನ್ಯಾಸಗಳನ್ನು ಕೊಟ್ಟರು

ರಾಜಕೋಟೆ ಮಾ॥ ಗಾಂಧಿಯವರ ಹೇಳಿಕೆ

ನನ್ನ ಉಪವಾಸದಲ್ಲಿ ಹಿಂಸೆಯು ತುಂಬಿದ್ದಿತು.

'ನನ್ನ ಜೊತೆಗಾರೊಡನೆ ಚರ್ಚಿಸಿದಸಂತರ ಸರ್ ಗೈಯರ್‌ರವರ ನಿರ್ಣಯವನ್ನು ಬಿಟ್ಟುಕೊಟ್ಟಿರುವೆನು. ಕೇಂದ್ರ ಸರ್ಕಾರದಸರು ಇದರಲ್ಲಿ ಕೈ ಹಾಕುವಂತೆ ಸ್ವೇಚ್ಛೆಯಿಸಲು ನಾನು ಉಪವಾಸ ಮಾಡಿದೆನೆಂಬುದು ಈಗ ಹೊಳೆದಿದೆ. ಠಾಕೋರ್ ಸಾಹೇಬರ ಮನ ತಿರುಗಿಸಲು ನಾನು ಉಪವಾಸ ಮಾಡಿದ್ದರೆ ಜೆಸ್ಟಾಗಿತ್ತು. ಮಿತ್ರರಂತಿದ್ದ ಮುಸಲ್ಮಾನರೂ ಭಯತರೂ ನನಗೆ ಶತ್ರುಗಳಾದರು. ವೈಸ್‌ರಾಯರಿಗೂ ಗೈಯರ್‌ರವರಿಗೂ ಶ್ರಮಕೊಟ್ಟದ್ದಕ್ಕಾಗಿ ಆವರ ರಕ್ಷಮೆ ಬೇಡುತ್ತೇನೆ. ನನ್ನ ತಪ್ಪನ್ನು ಒಪ್ಪಿಕೊಳ್ಳುವುದರಲ್ಲಿ ಸತ್ಯಾಗ್ರಹದ ಕಳೆಯು ಹೆಚ್ಚುತ್ತದೆ. ಆತ್ಮಶುದ್ಧಿಯಿಂದ ಅದರ ಶಕ್ತಿಯು ಇಮ್ಮಡಿಯಾಗುವುದು. ಠಾಕೋರಸಾಹೇಬ ಮತ್ತು ಅವರ ಸಲಹೆಗಾರರು ಜನರ ಚೀಡಿಕೆಗಳನ್ನು ಪೂರ್ತಿಸಲೆಂದು ಆತಿಸುತ್ತೇನೆ'

ರಾಜಕೋಟೆಯ ಅಧಿಕಾರಿಗಳು ಐದೆರಡು ದಿನಗಳಲ್ಲಿ ಸುಧಾರಣೆಗಳನ್ನು ಪ್ರಕಟಿಸಲಿರುವರೆಂದು ತಿಳಿದುಬಂದಿದೆ.

ಹೈದರಾಬಾದ ಆರ್ಯ ಸತ್ಯಾಗ್ರಹ.

(ಸಂಯುಕ್ತ ಧರ್ಮವೀರ ನಿಜಾಮಾಬಾದ ಸ್ಥಿತಿ)

ಬಹಳ ವಿಸಂಗತವಾದ ಸ್ಥಿತಿಯಲ್ಲಿ, ಅಲ್ಲಿನ ಸರ್ಕಾರವು ಕಡೆಯಿಂದ ನಡೆಸಲ್ಪಡುತ್ತಿರುವ ಧಾರ್ಮಿಕ ಅತ್ಯಾಚಾರಗಳ ವಿರುದ್ಧವಾಗಿ ಸಮಸ್ತ ಆರ್ಯ ಜಗತ್ತಿನಲ್ಲಿಯೂ ಜಾಗೃತಿಯು ಸೆಲೆಗೊಂಡು, ಆ ಅತ್ಯಾಚಾರಗಳು ನೀಚ ದಿನೇ ದಿನೇ ಹಚ್ಚುತ್ತಿದ್ದುದರಿಂದ ಈಗ ಆರ್ಯ ಸಮಾಜ ದ್ವಾರಾ ಅಹಿಂಸಾತ್ಮಕ ಸತ್ಯಾಗ್ರಹ ಚಳುವಳಿಯು ಸ್ವಾರಂಭವಾಗಿ, ಸುಮಾರು ಹತ್ತು ಸಾವಿರ ಜನರು ಅಲ್ಲಿನ ಜೈಲುಗಳಲ್ಲಿ ಕೂಕೆಯುತ್ತಿರುವ ಸಂಗತಿಯು ಅನೇಕರಿಗೆ ತೀರಿದಿರಬಹುದು. ಸವಣಾಗರಿ ಕತೆಯು ಎಲ್ಲೆಲ್ಲಿಯೂ ಹರಡುತ್ತಿರುವ ಈ ಎರಡನೇ ರತಪಾನವಲ್ಲಿಯೂ ಎಲ್ಲೆಲ್ಲಿಯೂ ಆಳರಸರು ತಮ್ಮ ತಮ್ಮ ಪ್ರಜೆಗಳಿಗೆ ಜಾತಿ ಮತ ಮುಂತಾದ ಭೇದಗಳಿಲ್ಲದೆ ಎಲ್ಲರಿಗೂ ಸಾಮಾನ್ಯವಾದ ಹಕ್ಕನ್ನೂ, ಧಾರ್ಮಿಕ ಸ್ವಾತಂತ್ರ್ಯವನ್ನೂ ಪೂರಕಿಸಲು ಪ್ರಯತ್ನಪಡುತ್ತಿರುವ ಈ ಕಾಲದಲ್ಲಿಯೂ, ಯಾವ ಹೈದರಾಬಾದ ಸಂಸ್ಥಾನದಲ್ಲಿ ಈಗಿನ ನಿಜಾಮರ ಉದಾತ್ತರವರ ತಂದೆಯವರ ಕಾಲದಲ್ಲಿ ಪ್ರಜೆಗಳೆಲ್ಲರೂ ಒಂದೇ ದೃಷ್ಟಿಯಿಂದ ಮುಕ್ತಕಂಠತೆ ಕಾಣಲ್ಪಡುತ್ತಿದ್ದರೂ, ಯಾವ ಹೈದರಾಬಾದು ಸಂಸ್ಥಾನದಲ್ಲಿ ಆರ್ಯ ಯಾ ಹಿಂದೂಗಳ ಜನ ಸಂಖ್ಯೆಯು ಶೇಕಡಾ ಅಱವತ್ತು ಇರುವೋ ಅದೇ ಸಂಸ್ಥಾನದಲ್ಲಿ ಸರ್ಕಾರವು ಬಹು ಸಂಖ್ಯೆಯುಳ್ಳ ಪ್ರಜೆಗಳನ್ನೇ ಕೇವಲ ಸಾಮಾನ್ಯವಾದ ಮಾನುಷಿಕ ಹಕ್ಕು ಬಾಧ್ಯತೆಗಳಿಂದ ವಂಚಿಸಿ, ಧರ್ಮವನ್ನು ಆಚರಿಸಲು ಕೂಡ ಸ್ವಾತಂತ್ರ್ಯವಿಲ್ಲದವರನ್ನಾಗಿಮಾಡಿರುವದು ಮಹದಾಶ್ಚರ್ಯಕರವಾದ ಸಂಗತಿಯಲ್ಲವೆ, ಅತ್ಯಂತ ಶೋಚನೀಯವಾಗಿಯೂ ಇರುವುದು. ಹಿಂದೆ ನಾದಿರ್ ಷಾ, ಔರಂಗಜೇಬ್ ಇತ್ಯಾದಿಗಳ ಕಾಲದಲ್ಲಿ ನಡೆಸುತ್ತಿದ್ದ ಅತ್ಯಾಚಾರಗಳ ಫಲಿತಾಂಶ ಕೂಡ ಆ ಸರಕಾರದವರ ಕಣ್ಣುಗಳನ್ನು ತೆರೆಯಲಿಲ್ಲ ವಲ್ಲಾ ಎಂದು ವೇದನೆಪಡಬೇಕಾಗಿದೆ. ನಮ್ಮಲ್ಲಿ, ನ್ಯಾಯವೂ ರಾಷ್ಟ್ರಹಿತ ಮಾತ್ರವಲ್ಲದೆ ಶ್ರೇಯಸ್ಕರವೂ ಆಗಿದೆ. ಅತ್ಯಾಚಾರವು ಎಂದಿಗೂ ಶ್ರೇಯಸ್ಕರವಲ್ಲ

ಇಲ್ಲಿ ಬರೆದಿರುವ ಸಂಗತಿಗಳೆಲ್ಲಿ ಸ್ವಲ್ಪವಾದರೂ ಚಿತ್ಯುಕ್ತಿಯಿಲ್ಲಿ ಅಲ್ಲಿ ನಡೆಯುತ್ತಿರುವ ಅತ್ಯಾಚಾರಗಳನ್ನು ಪೂರ್ತಿಯಾಗಿ ವರ್ಣಿಸಿ ಮಾಡಬೇಕಾದರೆ ಒಂದು ದೊಡ್ಡ ಪುಸ್ತಕವನ್ನೇ ಬರೆಯಬೇಕಾದೀತು.

(೧) ಹಿಂದೂಗಳು ಹೊಸ ದೇವಸ್ಥಾನಮಂದಿರಗಳನ್ನು ಕಟ್ಟಿಸಲೂ ಹಳೇ ಮಂದಿರಗಳನ್ನು ಸರಿಪಡಿಸಲೂ ಸರ್ಕಾರದ ಆಜ್ಞೆಯನ್ನು ಪಡೆಯಬೇಕು. ಆಜ್ಞೆಯನ್ನು ಕೇಳಿದರೆ ಕೊಡುವುದಿಲ್ಲ.

[೨] ತಮ್ಮ ಧರ್ಮ ಮಂದಿರಗಳಲ್ಲಿ ಆರ್ಯರು ಸರ್ಕಾರದ ಆಜ್ಞೆಯಿಲ್ಲದೆ ಧರ್ಮೋಪದೇಶಗಳನ್ನೂ, ವ್ಯಾಖ್ಯಾನಗಳನ್ನೂ ಮಾಡಕೂಡದು.

(3) ಆರ್ಯಸಮಾಜದಲ್ಲಿ "ಓಂ" ವನ್ನು ಸರ್ಕಾರದ ಆಜ್ಞೆಯಿಲ್ಲದೆ ಹಾಡಿಸಕೂಡದು. ನಗರಕೀರ್ತನೆ, ಭಜನೆ ಮೊದಲಾದವನ್ನು ಹೊರಡಿಸಕೂಡದು.

(೪) ತಮ್ಮ ಮಕ್ಕಳಿಗೆಲ್ಲ ಕೂಡ ಹೆಸರು ಕೊಡಗಳನ್ನು ನ್ಯಾಸಿಸಕೂಡದು.

[೫] ಸೊಪರಂ ಕಾಲದಲ್ಲಿ ಹಿಂದುಗಳು ಮಮಸೆ ಸೊದಲಾದ ಮೆರವಣಿಗೆಯನ್ನು ಮಾಡಕೂಡದು.

(೬) ಈ ಕಟ್ಟಾಜ್ಞೆಗೆ ಪ್ರತಿಯಾಗಿ ಮಾತಿತ್ತಿವರೆ ಜನರನ್ನು ಜೈಲಿನಲ್ಲಿ ಹಾಕುತ್ತಾರೆ.

(೭) ಹೀಗೆ ಜೈಲಿಗೆ ಹಾಕಲ್ಪಟ್ಟ ಹಿಂದೂ, ಯಾ ಆರ್ಯಕೈದಿಗಳಿಗೆ ಕಠಿಣ ನಂಡನೆಯನ್ನು ಕೊಡುತ್ತಾರೆ. ಮುತ್ತು ಆದೇಜ್ಯೆಲು ಖಾನೆಗಳಲ್ಲಿ ಇವರನ್ನು ಮುಸಲ್ಮಾನರನ್ನಾಗಿ ಮಾಡುವ ಪ್ರಯತ್ನವೂ ನಡೆಯುತ್ತದೆ. ನಾಲ್ಕು ಜನ ಕೈದಿಗಳನ್ನು ಮಾತ್ರ ಮುಸಲ್ಮಾನರನ್ನಾಗಿ ಮಾಡಿದೆ ಎಂದು ಸರಕಾರದವರು ತಾನೇ ಒಪ್ಪಿಕೊಂಡಿರುತ್ತಾರೆ.

[೮] ನೂರಾರು ಆರ್ಯರ ಮೇಲೆ ಇಲ್ಲದ ದೊಷಾರೋಪಣೆಗಳನ್ನು ಮಾಡಿ ಅವರನ್ನು ಜೈಲಿನಲ್ಲಿ ಹಾಕಿರುತ್ತಾರೆ. ಹಿಂದುಗಳಲ್ಲಿ ನವಜಾಗೃತಿಯನ್ನುಂಟುಮಾಡಿರುವುದೇ ಇದಕ್ಕೆ ಕಾರಣ.

(೯) ಅನೇಕ ಆರ್ಯ ಸಮಾಜಿಗಳಿಗೆ ೧೦-೧೦-೫೦-೨೦ ವರ್ಷಗಳ ಕಠಿಣ ಸಜೆಯನ್ನು ಕೊಟ್ಟಿರುತ್ತಾರೆ. ಗುಲ್ಬರ್ಗಾ ಆರ್ಯ ಸಮಾಜದ ಮಂತ್ರಿಯಾದ ಶ್ರೀ ಲಾಲಸಿಂಹ ಎಂಬುವರಿಗೆ ೧೦ ವರ್ಷದ ಕಠಿಣ ಸಜೆ ಕೊಟ್ಟಾಗ್ಗೆ, ಅಪ್ಪೀಲ್ ಮಾಡಿದ್ದರಲ್ಲಿ ಅವರಿಗೆ ಅಪ್ಪೀಲ್ ಕೋರ್ಟಿನಲ್ಲಿ ಮರಣ ದಂಡನೆಯನ್ನು ವಿಧಿಸಿದರು.

[೧೦] ಅನೇಕ ಆರ್ಯೋಪದೇಶಕರನ್ನು ನ್ಯಾಯಾಂ ರಾಜ್ಯದ ಒಳಗೇ ಬರಕೂಡದೆಂಬುದಾಗಿ ಕಟ್ಟುನಿಟ್ಟು ಮಾಡಿದ್ದಾರೆ. ಪಂಡಿತ ನರೇಂದ್ರರೆಂಬುವರಿಗೆ, ಯಾವ ಅಪರಾಧವನೆಯೂ ಇಲ್ಲದೆ ತಿಸುಮಾರನನ್ನು ಸಿನ್ನಕಡಿಸದೇ ಅಜ್ಞಾತ ಸ್ಥಳದಲ್ಲಿ ಬಂಧನದಲ್ಲಿಟ್ಟಿರುತ್ತಾರೆ.

[೧೧] ಆರ್ಯ ಸಮಾಜದ ಯಾವ ಸಮಾಚಾರ ಪತ್ರವೂ ಆ ರಾಜ್ಯದಲ್ಲಿ ಪ್ರಕಟಿಸಲ್ಪಡಲಾಗದು ಮತ್ತು ಹೊರಗಿನಿಂದ ಬರುವ ಮಿಲಾಪ್, ಹಿಂದೂ, ಇಂಗಿನ ಇತ್ಯಾದಿ ಪತ್ರಿಕೆಗಳ ಮೇಲೆ ಪ್ರತಿಬಂಧಕವು ಹಾಕಲ್ಪಟ್ಟಿದೆ. ಹೀಗೆ ಈ ರಾಜ್ಯದಲ್ಲಿ ಹಿಂದೂಗಳಿಗೆ ಸಮಾಚಾರವೂ ಒರೆಯಲೂ ಹಕ್ಕಿಲ್ಲ.

(೧೩) ಆರ್ಯ ಸಮಾಜದ ಪ್ರಚಾರವು ಹೈದರಾಬಾದ್ ಸಂಸ್ಥಾನದಲ್ಲಿ ನಿಲ್ಲಿಸಲ್ಪಟ್ಟಿದೆ. [ಯಾವ ರಾಜ್ಯದಲ್ಲಿ ಆರ್ಯ, ಯಾ ಹಿಂದೂಗಳು ಶೇಕಡಾ ಅಱ ಇದಾರೆಯೋ ಅವರ ಧರ್ಮ ಕೋಶ್ಮತಿಯ ವಿಷಯದಲ್ಲಿ ಇನ್ನೊಂದು ತೊಂದರೆಯು ಬಂದಿತೆ, ಬಡುಕುವುದು ಬೇಕೆ?]

(೧೩) ಕೆಲವು ಮತಾಂಧ ಮುಸಲ್ಮಾನರು ಶ್ರೀ ವೇದ ಪ್ರಕಾಶ, ಶ್ರೀ ಧರ್ಮ ಪ್ರಕಾಶ, ಶ್ರೀ ಮಹಾದೇವ ಇತ್ಯಾದಿ ೧೦ ಜನ ಆರ್ಯ ಸಮಾಜದ ಉತ್ಸಾಹೀ ಸಜ್ಜನರನ್ನು ಚೂರಿಯಿಂದ ತಿವಿದು ಕೊಂದುಹಾಕಿದರು ಈ ವಿಷಯವಾಗಿ ಸರ್ಕಾರದಲ್ಲಿ ಫಿರ್ಯಾದಿ ಹೋದಾಗ, ಸರಿಯಾದ ವಿಚಾರಣೆಯು ಆಗಲೇ ಇಲ್ಲ.

[೧೪] ಹಿಂದೂ ಸಂಸ್ಕೃತಿಯ ಉನ್ನತಿಗಾಗಿ ಪಾಠಶಾಲೆಗಳನ್ನೇರ್ಪಡಿಸಕೂಡದು ಇರುವ ಸರ್ಕಾರೀ ಸ್ಕೂಲುಗಳಲ್ಲಿ ಹಿಂದೂ ಜನಗಳ ಮಾತೃಭಾಷೆಗೆ ಸ್ಥಾನವಿಲ್ಲ–ಎಲ್ಲರೂ ಉರ್ದೂ ಭಾಷೆಯನ್ನೇ ಕಲಿಯಬೇಕೆಂದು ಕಟ್ಟಾಜ್ಞೆ.

[೧೫] ದೇಹದ ಆರೋಗ್ಯಕ್ಕಾಗಿ ವ್ಯಾಯಾಮ ಶಾಲೆಗಳನ್ನಿಡಲು ಹಿಂದೂಗಳಿಗೆ

ಉಪ್ಪನೆಯಿಲ್ಲ.

(೧೬) 'ವಂದೇ ಮಾತರಂ' ಎಂಬ ರಾಷ್ಟ್ರಗೀತೆಯನ್ನು ಹಾಡಲು ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯವಿಲ್ಲ. ಸುಮಾರು ೧೫೦೦ ಮಂದಿ ಹಿಂದೂ ವಿದ್ಯಾರ್ಥಿಗಳನ್ನು ಈ ಕಾರಣಕ್ಕಾಗಿ ಕಾಲೇಜುಗಳಿಂದ ಅಟ್ಟಿಬಿಟ್ಟರು.

(೧೭) ಬೀದರಿನಲ್ಲಿರುವ ಕಂಕಾಲೇಶ್ವರನ ಮಂದಿರದಲ್ಲಿ ಯಾವ ಹಿಂದೂ ಪೂಜೆಯನ್ನು ನಡಿಸಕೂಡದು

[೧೮] ಕಲ್ಯಾಣಿಯೆಂಬ ಸ್ಥಳದಲ್ಲಿರುವ ಬಸವೇಶ್ವರನ ದೇವಸ್ಥಾನದ ಜಗುಲಿಯ ಮೇಲೆ ಗೋಮಾಂಸವನ್ನು ಮಾರುತ್ತಾರೆ

(೧೯) ಸಾರ್ವಜನಿಕ ಸರ್ಕಾರೀ ಫಂಡಾರದಿಂದ ಸುಮಾರು ೬೫ ಲಕ್ಷ ರೂಪಾಯಿ ಮುಹಮ್ಮದೀಯರುತ ಮತ್ತು ಸಂಸ್ಕೃತಿಯ ಪ್ರಚಾರ ಮತ್ತು ವ್ಯೋತ್ಪಾಹಕ್ಕಾಗಿ ಉಪಯೋಗಿಸಲ್ಪಡುತ್ತಿದೆ.

(೨೦) ಪರಕಾಲನೆಂಬ ಸ್ಥಳದಲ್ಲಿರುವ ಸರ್ಕಾರಿ ನಿಮ್ನ ಜನರ ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಮುಸಲ್ಮಾನರನ್ನಾಗಿ ಮಾಡಿ ಸರ್ಕಾರಿಯ ದೊಡ್ಡ ಪಾರಶಾಲೆಗಳಲ್ಲಿ ಅವರಿಗೆ ಉಚಿತ ಶಿಕ್ಷಣವನ್ನು ಕೊಡುತ್ತಿದ್ದಾರೆ.

[೨೧] ಹೂಮೊಗಳಿಗೆ ರಾತ್ರಿ ಪಾಠಶಾಲೆಗಳಿಗೆ ಆಜ್ಞೆಯು ಹೊರಡಿಸಲ್ಪಟ್ಟಿದೆ.

(೨೨) ಬೀದರ್ ಎಂಬ ಸ್ಥಳದಲ್ಲಿ ಶ್ರೀರಾಮ ಮಂದಿರದ ಕಟ್ಟಡದ ಕೆಲಭಾಗವನ್ನು ನಿಷೇಧಿಸಿದಾಗ ಆವರಣವನ್ನು ಕಳುಹಿಸಿದಾಗ ಆವಕ್ಕೆ ಅನುಮತಿ ದೊರೆಯುವ ಮಾತು ಹಾಗಿರಲಿ, ಆ ಜಾಗದ ಮೇಲೆ ಮುಸಲ್ಮಾನರ ಹಕ್ಕಿದೆಯೆಂಬುದಾಗಿ ಹೇಳಿ ಆ ಕಟ್ಟಡವನ್ನು ಮುಸಲ್ಮಾನರಿಗೇ ಕೊಡಬೇಕೆಂದು ಆಜ್ಞೆಯಾಯಿತು.

(೨೩) ಅಂಲ್ಲಾ ಎಂಬ ಸ್ಥಳದಲ್ಲಿ (8—6—47 ಘಸ್ಟಿ) ಹಸನ್ ಖಾನ್ ಎಂಬೊಬ್ಬ ಮುಸಲ್ಮಾನನು ಸತ್ಯಾನಪ್ಪ ನೆಂಬೊಬ್ಬ ಹಿಂದೂನಿನ ಪ್ರಾಣವನ್ನು ಕತ್ತಿಯಿಂದ ತೆಗೆಯಲು ಪ್ರಯತ್ನಿಸಿದನು. ಕೊನೆಗೆ ಆ ಹಿಂದೂವು ಆ ಸ್ಥಾಯಗಳಿಂದ ಸತ್ತೇ ಹೋದನು. ಪೊಲೀಸಿನವರು ಸಹಾಯ ಮಾಡುವವರ ಬದಲು, ಗಂಭೀರ ನೆಕ್ಷನ್ನು ಪಯೋಗಿಸಿ ೨೮ ಮಂದಿ ಆರ್ಯ ಸಮಾಜಿಗಳನ್ನು ಚಾರ್ಜು ಮಾಡಿದರು.

(೨೪) ಇಸ್ಲಾಂ ಧರ್ಮವನ್ನು ಪ್ರಪಂಚದಲ್ಲೆಲ್ಲಾ ಹರಡುತ್ತೇವೆಂಬ ಅರ್ಥವುಳ್ಳ ಗೀತೆಗಳನ್ನು ಸೇರಿಸಿನವರು ಸಾರ್ವಜನಿಕ ಜಾಗಗಳಲ್ಲಿ ಹಾಡುತ್ತಾ ತಿರುಗುತ್ತಾರೆ.

[೨೫] ಇಚ್ಛೆ ಕೆ? ಕವಿಯಾಗಿರುವ ನಿಜಾಮರು ಉರ್ದೂವಿನಲ್ಲಿ ಸ್ವಯಂ ಒಂದು ಕವಿತೆಯನ್ನು ರಚಿಸಿದ್ದಾರೆ. ಅದರ ಅರ್ಥವು ಹೀಗಿರುತ್ತದೆ.

'ಕುರಾನ್' ಬಂದ ಮೇರ ಹಿಂದೂಗಳ ದೇವಾಲಯದ ಶಂಖಧ್ವನಿಯು ನಿಂತೆ ಹೋಯಿತು. ಜನಿವಾರಗಳು ಕಿತ್ತು ಹೋದವು" ಇದರ ಭಾವಾರ್ಥವು ಹಿಂದೂಗಳನ್ನು ಮುಸಲ್ಮಾನರನ್ನಾಗಿ ಮಾಡಬೇಕೆಂದಲ್ಲದೆ ಮತ್ತೇನು?

[೨೬] ಆರ್ಯ, ಯಾ ಹಿಂದೂಗಳು ತಮ್ಮ ಸಂಸ್ಕೃತಿಯನ್ನು ದ್ವಾರ ಮಾಡಲಾಗದು.

[೨೭] ಸರ್ಕಾರವು ಹೆಚ್ಚುಕಾಲು ಧನ ಸಹಾಯವನ್ನು ಮುಸ್ಲೀಮರಿಗಾಗಿ ಅವರಲ್ಲಿಯೂ ಹಿಂದೂಗಳನ್ನು ಮುಸಲ್ಮಾನರನ್ನಾಗಿ ಮಾಡಲು ಮಾಡತ್ತಿರುವರು

[೨೮] ಮರಾಠಿ, ಹಿಂದೀ ಮುಂತಾದ ಭಾಷೆಗಳಲ್ಲಿ ಹೊರಡುವ ಸುಮಾರು ೧೭ ಪತ್ರಿಕೆ ಇತ್ಯಾದಿಗಳು ನಿಷೇಧಿಸಲ್ಪಟ್ಟಿವೆ. ಮುಸಲ್ಮಾನ ಮತಪ್ರಚಾರಮಾಡುವ ಪತ್ರಿಕೆಗಳಿಗೆ ಸಹಸ್ರಾರು ರೂಪಾಯಿಗಳ ಉದಾರ ಸಹಾಯವು ದೊರೆಕುತ್ತಿದೆ.

[೨೯] ಹಿಂದೂ ಹಬ್ಬರುವ ಅನೇಕ ಊರುಗಳಿಗೆ ಜವುಗುಗಳನ್ನು ತೆಗೆದು ಮುಸಲ್ಮಾನ್ ಕೆಸರನ್ನಿ ಪಲಾಗಿದೆ.

[೩೦] ಸರ್ಕಾರವನರು ವ್ಯಾಪಾರದಲ್ಲಿಯೂ (ತಬ್ಲೀಗ) ಹಿಂದೂಗಳನ್ನು ಮುಸಲ್ಮಾನರನ್ನಾಗಿ ಮಾಡಿದ ವರದಿಯನ್ನು ತರಿಸಿಕೊಂಡು ಆ ಕಾರ್ಯಕ್ಕೆ ಉತ್ತೇಜನ ಕೊಡುತ್ತಿದ್ದಾರೆ.

ನೈಜಾಂ ರಾಜ್ಯದಲ್ಲಿ ಸರ್ಕಾರದ ಮೂಲಕ ಧಾರ್ಮಿಕ ಸಂಸ್ಥೆಗಳಿಗೆ ಸಲ್ಲುವ ಧನ ಸಹಾಯ

	ಒಟ್ಟು	ಮುಸ್ಲಿಂ	ಹಿಂದೂ	ಕ್ರೈಸ್ತ	ಪಾರ್ಸಿ
ವರ್ಷಂಪ್ರತಿ ಮತಗಳ ಪ್ರಯುಕ್ತ ಗ್ರಾಂಟು	೬೦೫೮೬೬	೫೫೯೬೬	೧೫೦೦	೧೫೬೬೦	—
ವರ್ಷಂಪ್ರತಿ ವಿಶೇಷ ಧಾರ್ಮಿಕ ಸಹಾಯ	೬೦೫೮೬೬	೬೦೦೬೬	೧೫೬೬	೩೬೬೦	೬೦೦
ಜನೋಪಕಾರಕ ಧಾರ್ಮಿಕ ಸಹಾಯ	೫೯೬೦	೫೯೬೦	—	—	—

ಸ್ನೇಹಿತ ಬಂಧುಗಳೇ ನೈಜಾಂ ಸರಕಾರದ ಈ ತರದ ಸಕ್ಷಪಾತವನ್ನು ನ್ಯಾಯವಂತನಾವ ಯಾವ ಮನುಷ್ಯನೂ ಸಮರ್ಥಿಸುವನೇ ಇಂಥಾ ಅತ್ಯಾಚಾರಗಳನ್ನು ಈ ಕಾಲದಲ್ಲಿ ಇನ್ನೆಲ್ಲಿಯಾದರೂ ಕೇಳಿದ್ದೀರಾ ಇನ್ನೂ ಎಷ್ಟೋ ಇವೆ ಅವನ್ನೆಲ್ಲಾ ಬರೆಯಲು ಅವಕಾಶವಿಲ್ಲ.

ಇಂಥಾ ಅತ್ಯಾಚಾರಗಳು ಕೊನೆಗಾಣಬೇಡವೇ? ಸುನ್ನುನೆ ಕುತಂತ್ರ ಅದೀತೆ? ಮನುಷ್ಯನಿಗೆ ಧಾರ್ಮಿಕ ಸ್ವಾತಂತ್ರ್ಯವು ಇಲ್ಲದಿದ್ದರೆ ಅವನು ಬದುಕಿ ತಾನೆ ಏನು ಫಲ?

ಈ ಸಂದರ್ಭದಲ್ಲಿ ಸಮಸ್ತ ಭ್ರಾತೃವರ್ಗದವರಲ್ಲಿ ಒಂದು ವಿನಂತಿ. ಈ ಲೇಖನವು ಯಾರ ಮನಸ್ಸನ್ನಾದರೂ ನೋಯಿಸುವುದಕ್ಕೋ ಆಗಲಿ, ಅಥವಾ ಪರಸ್ಪರರಲ್ಲಿ ದ್ವೇಷವನ್ನುಂಟುಮಾಡುವುದಕ್ಕೋ ಆಗಲಿ ಬರೆಯಲ್ಪಡಲಿಲ್ಲವೆಂದು ಖಂಡಿತವಾಗಿ ಹೇಳುತ್ತೇನೆ. ಹಾಗೇನಾದರೂ ಯಾರಾದರೂ ತಿಳಿದುಕೊಂಡ ಪಕ್ಷದಲ್ಲಿ ನನ್ನ ನೋಟ ತೀರ ಅನ್ಯಾಯಮಾಡಿದಂತಾಗುವುದು. ಇದರಿಂದ ಪರಮೇಶ್ವರನು ಎಂದಿಗೂ ಪ್ರೀತನಾಗಲಾರನು. ಸತ್ಯವಾದ ಸಂಗತಿಗಳನ್ನು ನಮ್ಮ ಬಂಧುಗಳ ಮುಂದಿಟ್ಟು, ಸತ್ಯಾನ್ವೇಷಣೆಗಳಾಗಿಯೂ, ನಿಷ್ಪಕ್ಷಪಾತಿಗಳಾಗಿಯೂ, ನ್ಯಾಯಾವಲಂಬಿಗಳಾಗಿಯೂ, ಇರುವ ನಮ್ಮ ಭ್ರಾತೃಗಳಿಗೆ ಯಥಾ ಧರ್ಮಸಾರ ಸಂಗತಿಯನ್ನು ತೀರಿಸಿ ಧರ್ಮ ಕಾರ್ಯಗಳಲ್ಲಿ ಅವರ ಸಹಾಯವನ್ನು ಕೋರಲು ಮಾತ್ರ ಪ್ರಚುರಪಡಿಸಲ್ಪಟ್ಟಿದೆ ಯಾಕಂದರೆ, "ಮಿತ್ರಸ್ಯ ಚಕ್ಷುಷಾಸರ್ವಾಣಿ ಭೂತಾನಿ ಸಮೀಕ್ಷೇ" ಎಂದರೆ, "ಮನುಷ್ಯ ಮಾತ್ರರನ್ನೆಲ್ಲ ಸಮಸ್ತ ಪ್ರಾಣಿಗಳನ್ನೇ ಮಿತ್ರದೃಷ್ಟಿಯಿಂದ ನೋಡುತ್ತೇನೆ," ಎಂಬ ವೇದಮಂತ್ರವನ್ನು ಜಪಿಸುವ ನಮಗೆ ಯಾವನ್ಯಕ್ತಿಯ ಮೇಲೂ ದ್ವೇಷವಿಲ್ಲ. ಆದರೆ ಪ್ರತಿಯೊಬ್ಬನಲ್ಲಿಯೂ ಇರುವ ದುಷ್ಟತನವನ್ನು ದೂರಮಾಡಿ ಶಾಂತಿಯನ್ನು ಹರಡಲು ಯತ್ನಿಸುವುದೂ ತದ್ವಾರಾ ತಾನೂ ಶಾಂತಿಯನ್ನು ಅನುಭವಿಸುವುದೂ ಪ್ರತಿ ಒಬ್ಬನ ಕರ್ತವ್ಯವಲ್ಲವೆ? ಇದೇ ರೀತಿ ನೈಜಾಂ ಸರ್ಕಾರದ ಘೋರನೀತಿಯನ್ನು ಸಾತ್ರ ಸೂರಾಡಿ ಅಲ್ಲಿ, ಎಲ್ಲರಿಗೂ ಶಾಂತಿಯನ್ನು ಹರಡಲು ಸಹಾಯನನ್ನೇ ಸ್ತಿಸುವುದೇ ಇವರ ಮುಖ್ಯ ಉದ್ದೇಶ. ಈಕಾರಣದಿಂದ ವಿಶ್ವಶಾಂತಿಯನ್ನೆ ಆಶಿಸುವ ಆರ್ಯ ಸಮಾಜವು, ಈ ಅತ್ಯಾಚಾರಗಳನ್ನು ತಾತ್ಕಾಲಿಯಿಂದ ನಾಲ್ಕಾರು ವರ್ಷಗಳು ಸಹಿಸಿ, ಸಹಿಸಿ, ನೈಜಾಂ ಸರ್ಕಾರದ ಪ್ರಧಾನ ಮಂತ್ರಿ ಮತ್ತು ದಿವಾನ್ ಜೆಟ್ ಇತ್ಯಾದಿ ದೊಡ್ಡ ದೊಡ್ಡ ಮನುಷ್ಯರಲ್ಲಿಯೂ ಅರಿಕೆ ಮಾಡಿ, ಮಾಡಿ, ಹತಾರಾಗಿ, ಕೊನೆಗೆ ೧೯೩೮ ನೇ ಡಿಸೆಂಬರ್, ೨೫, ೨೬, ೨೭ ನೇ ತಾರೀಕುಗಳಲ್ಲಿ ಸೋ

ಲಾಸ್ಪರವನ್ನು ದೇಶಭಕ್ತ ಶ್ರೀ. ಯಂ. ಯಸ್. ಆಸ್ಯಯವರ ಅಧ್ಯಕ್ಷತೆಯಲ್ಲಿ ಒಂದು ಅಖಿಲ ಭಾರತ ಆರ್ಯ ಕಾಂಗ್ರೆಸ್ಸನ್ನು ಸೇರಿಸಿ ನ್ಯಾಯಾ ರಾಜ್ಯದಲ್ಲಿ ಹಿಂದೂ ಯಾ ಆರ್ಯರ ಧಾರ್ಮಿಕ ಸ್ವಾತಂತ್ರ್ಯವನ್ನು ಗಳಿಸಲು ಹಿಂದೂ ಸಂಸ್ಥೆಯನ್ನು ಕಟ್ಟಿಸಿಕೊಳ್ಳಲು ನಿರ್ಣಯಗಳನ್ನು ಮಾಡಿ. ಇವರ ಪ್ರತಿನಿಧಿಗಳನ್ನು ನ್ಯಾಯಾ ಸರ್ಕಾರಕ್ಕೂ ಬ್ರಿಟಿಷ್ ಪಿಪಿಂಟರಿಗೂ ಕಳುಹಿಸಿ ಪಾವಕಾರಾಗಿ ನ್ಯಾಯವನ್ನು ಸ್ಥಾಪಿಸಕೊಳ್ಳಲು ಯತ್ನಿಸಿತು. ಈ ಸ್ಥಾಪನೆಯಲ್ಲಿ ಕಂಡ ನಿಷಯಗಳು ಮಾತ್ರಾರಿಗಳವು.-

೧. ಹೈದರಾಬಾದಿನಲ್ಲಿ ಹಿಂದೂ ಯಾ ಆರ್ಯರಿಗೆ ಧಾರ್ಮಿಕ ಕೃತ್ಯಗಳಲ್ಲಿಯೂ ಉತ್ಸವಗಳಲ್ಲಿಯೂ ಇತರ ಮತಗಳಿಗಿರುವ ಸ್ವಾತಂತ್ರ್ಯವನ್ನು ಕೊಡಬೇಕು.

೨. ಧಾರ್ಮಿಕ ಪ್ರಚಾರ, ಉಪದೇಶ, ಕಥಾ, ಸ್ವಸಜನ ವ್ಯಾಖ್ಯಾನ, ಭಜನೆ, ನಗರಕೀರ್ತನೆ, ಇವುಗಳನ್ನು ಮಾಡಲೂ, ಹಿಂದೂ ಯಾ ಆರ್ಯ ದೇವಮಂದಿರಗಳನ್ನು ನಿರ್ಮಾಣಮಾಡಲೂ, ಯಜ್ಞಯಾಗ, ಹವನಕುಂಡ ಇತ್ಯಾದಿಗಳನ್ನೆರ್ಪಡಿಸಲೂ, ಹಿಂದೂ ಧ್ವಜವನ್ನು ಹಾರಿಸಲೂ, ಹೊಸ ಸಮಾಜಗಳನ್ನು ಸ್ಥಾಪಿಸಲೂ, ನೈತಿಕ ಸಂಸ್ಥಿತಿಯ ಸಂಬಂಧವಾಗಿ ಪುಸ್ತಕ ಛಪಣ ಪತ್ರಿಕೆಗಳನ್ನು ಸ್ವಕಾರಪಡಿಸಲೂ ಸ್ವಾತಂತ್ರ್ಯವು ಬೇಕು

೩. ಸರ್ಕಾರವು [ಕರ್ಮಚಾರಿಗಳ ನೂಲಕರಾಗಲಿ, ಇತರ ನಿಘಗಳಲ್ಲಿಯಾಗಲಿ] ಮತ್ತು ರಾಷ್ಟ್ರಕರ್ಮಚಾರಿಗಳು [ಪೋಲೀಸಿನವರು, ಜೈಲು ಅಧಿಕಾರಿಗಳು ಇತ್ಯಾದಿ] ಹಿಂದೂಗಳನ್ನು ಮುಸಲ್ಮಾನರ ಸ್ನೇಹಿ ಮಾಡುವ ನಿರ್ಧಾರವಲ್ಲಿ ಭಾಗವಹಿಸಬಾರದು ಅಥವಾ ಪ್ರೋತ್ಸಾಹಿಸಬಾರದು. ಜೈಲುಗಳಲ್ಲಿ ಹಿಂದೂ ಕೈದಿಗಳನ್ನೂ, ಸ್ಕೂಲುಗಳಲ್ಲಿ ಹಿಂದೂ ಮಕ್ಕಳನ್ನೂ ಮುಸಲ್ಮಾನರನ್ನಾಗಿ ಮಾಡಕೂಡದು. ಹಿಂದೂ ಅನಾಥರನ್ನೂ ಮುಸಲ್ಮಾನರ ಸ್ವಾಧೀನ ಕೊಡಕೂಡದು.

(೪) ಸರ್ಕಾರದಲ್ಲಿರುವ ಧರ್ಮನಿಭಾಗವನ್ನು ಮುಚ್ಚಬೇಕು. ಅಥವಾ ಹಿಂದೂ ಯಾ ಆರ್ಯರ ಧಾರ್ಮಿಕ ನಿಷಯಗಳು ಮತ್ತು ದೇವಮಂದಿರಗಳ ಮೇಲೆ ಇದರ ಪ್ರಭುತ್ವವಿರಕೂಡದು.

[೫] ಹಿಂದೂ, ಯಾ ಆರ್ಯರನ್ನೆದಿರಿಸುವ ಧರ್ಮಾಂಧತೆ, ಸಾಂಪ್ರದಾಯಿಕತೆ, ಪಕ್ಷಪಾತ ಇವುಗಳಿಂದ ಕೂಡಿದ ಸಾಹಿತ್ಯಗಳಿಗೆ ಸರ್ಕಾರದಿಂದ ಸಿಗುತ್ತಿರುವ ಪ್ರೋತ್ಸಾಹವನ್ನು ನಿಲ್ಲಿಸಬೇಕು.

[೬] ನೊಕವ್ವಸೆಯೆನ್ನು ಹೂಡಿದೆ ಆಪಾದನೆಯನ್ನು ನಿವ್ವಸಡಿಸದೆ, ಆರ್ಯೋತ್ತಮ ಸದೇಶಕರು ರಾಜ್ಯದ ಒಳಗೆ ಬರಕೂಡದೆಂಬ ಯಾವ ನ್ಯಾಯಬಂಧಕನಿದೆಯೋ ಅದನ್ನು ತೊಲಗಿಸಬೇಕು.

(೭) ಪೋಲೀಸಿನವರು, ಮತ್ತು ಇತರ ರಾಜ್ಯದ ಕರ್ಮಚಾರಿಗಳು ಹಿಂದೂ ಯಾ ಆರ್ಯರನ್ನೆದಿರಿಸಿ, ಮುಸಲ್ಮಾನರ ಪಕ್ಷ ವಹಿಸಿ ಕೆಲಸಮಾಡುತ್ತಿರುವುದನ್ನು ನಿಲ್ಲಿಸಬೇಕು.

[೮] ಆರ್ಯ ಯಾ ಹಿಂದೂ ಬಾಲಕರಿಗೆ ಕನಿಷ್ಠ ಪಕ್ಷ ಪ್ರಾರಂಭಿಕ (Primary) ಮತ್ತು ಸೂಚ್ಯಮಿಕ (Secondary) ಶಿಕ್ಷಣವು ತಪ್ಪ ಮಾತೃಭಾಷೆಯಲ್ಲೇ ದೊರೆಯಬೇಕು

(೯) ಹಿಂದೂ ಯಾ ಆರ್ಯರಿಂದ ಸ್ಥಾಪಿಸಲ್ಪಟ್ಟ ಅಥವಾ ಸ್ಥಾಪಿಸಲ್ಪಡುವ ಬಾಲಕ ಬಾಲಕಿಯರ ಶಿಕ್ಷಣ ಸಂಸ್ಥೆಗಳಿಗೆ ಪುಸ್ತಕಾಲಯ ವಾಚನಾಲಯ ಇತ್ಯಾದಿಗಳಿಗೆ ಯಾವ ಪ್ರತಿಬಂಧಕವೂ ಇರಕೂಡದು ಇದರ ಪ್ರತಿಯೊಂದನ್ನು ಅಲ್ಲಿನ ರೆಸಿಡೆಂಟರಿಗೂ ಕಳುಹಿಸಿ, ನಿಜಾಮ ಸರ್ಕಾರದವರನ್ನೂ ಸ್ಥಾಧಿಸಲಾಯಿತು ಇವಕ್ಕೂ ಕಿವಿಗೊಡದೆ ಅತ್ಯಾಚಾರಗಳನ್ನು ಚಾಪ್ತಿ ಮಾಡುತ್ತಲೇ ಹೋದದ್ದು ಆಮೇಲಿಂದ ಜೇರೆ ದಾರಿಯಿಲ್ಲದೆ ಸತ್ಯಾಗ್ರಹವನ್ನು ಆಚರಿಸಬೇಕಾಗಿ ಬಂದಿತು. ಈಗ ಆರ್ಯ ಸಮಾಜದವರು 'ಧರ್ಮಾಣಾ ನಾಧಯೇ ಯರಿ, ರೋಗಂ ವಾಮಾತ ನಿಯಂ' [ಅಂದರೆ ಧರ್ಮವನ್ನು ಸಾಧಿಸುವೆನು, ಇಲ್ಲವಿದ್ದರೆ ಈ ಶರೀರವನ್ನು ಕಳೆಯುವೆನು] ಎಂಬ ದೃಢಸಂಕಲ್ಪ ಮಾಡಿಕೊಂಡು ಅಹಿಂಸಾ ಪ್ರತಧಾರಿಗಳಾಗಿ ರಣರಂಗಕ್ಕೆ ಇಳಿದಿದ್ದಾರೆ ಈಗಾಗಲೆ ೧೨೦೦೦ ಜನರು ಅಹುತಿಯಾಗಿದ್ದಾರೆ ಅಂದರೆ ಹೈದರಾಬಾದಿನ ಜೈಲುಗಳಲ್ಲಿ ನರಕಯಾತನೆಯನ್ನನುಭವಿಸುತ್ತಿದ್ದಾರೆ. ಆ ಯಾತನೆಯನ್ನು ಕೇಳಿದಮಾತ್ರಕ್ಕೆ ರೋಮಾಂಚನವಾಗುವುದು.

ಈ ಸತ್ಯಾಗ್ರಹಕ್ಕೆ ಭಾರತದಲ್ಲಿ ಮಾತ್ರವಲ್ಲದೆ, ಫಿಜಿ, ಆಫ್ರಿಕಾ ಮುಂತಾದ ಸ್ಥಳಗಳಿಂದಲೂ, ಸ್ವಯಂಸೇವಕರು ಬರುತ್ತಿದ್ದಾರೆ. ಹಣ ಸಹಾಯವೂ ದೊರೆಯುತ್ತಿದೆ ಹಿಂದೂ ಯಾ ಆರ್ಯರು ಮಾತ್ರವಲ್ಲದೆ ಈ ಅತ್ಯಾಚಾರಗಳನ್ನು ನೋಡಿ ಸಹಿಸಲಾರದ ಉದಾರರಾದ ಮುಸಲ್ಮಾನರು ಮತ್ತು ಕ್ರೈಸ್ತರು ಕೂಡಾ ಸಹಾಯ ಮಾಡುತ್ತಿದ್ದಾರೆ ಉದಾಹರಣೆಗಾಗಿ:— ಜೇಷಾನಾದಲ್ಲಿರುವ ಹುಸೇನ್‌ಖಾನ್ ಎಂಬ ಪಠಾಣ ಸಜ್ಜನರೊಬ್ಬರು ಈ ಸತ್ಯಾಗ್ರಹಕ್ಕೆ ಸ್ವಯಂಸೇವಕರಾಗಿ ಬರುವ ಸಾಧ್ಯಾನವನ್ನಿತ್ತಿದ್ದಾರೆ. ಕ್ರೈಸ್ತಮತದ ಒಬ್ಬರು ಬಹಳ ಧನ ಸಹಾಯಮಾಡಿರುತ್ತಾರೆ. ಶ್ರೀ ಮೌಲಾನಾ ಅಬುಲ್ ಕಲಾಂ ಆಜಾದ್‌ರವರು ನಿಜಾಮು ಸರ್ಕಾರದ ಈ ತರಹದ ವರ್ತನೆಯನ್ನು ಖಂಡಿಸಿರುತ್ತಾರೆ.

ಇಡೀ ಭರತ ಖಂಡದ ಮೂಲೆ ಮೂಲೆಗಳಿಂದಲೂ ಧನ ಜನ ಸಹಾಯವು ದೊರೆಯುತ್ತಿದೆ. ಸಿಖ್ಖರೂ ಸಹಾಯವೆನ್ನುತ್ತಿದ್ದಾರೆ ಬದರೀನಾಥ ಜ್ಯೋತಿರ್ಮಠದ ಶ್ರೀ ಶಂಕರಾಚಾರ್ಯರು ೬ ಲಕ್ಷ ಸನ್ಯಾಸಿಗಳನ್ನು ಜೊತಗೊಂಡು ತಾವೂ ಸತ್ಯಾಗ್ರಹಕ್ಕೆ ಬರುವೆನೆಂದು ವಾಗ್ದಾನ ಮಾಡಿರುತ್ತಾರೆ ಹಿಂದೂ ಮಹಾಸಭೆಯಿಂದಲೂ ಬೆಂಬಲ ದೊರೆಯುತ್ತಿದೆ. ಆದರೂ ಸತ್ಯಾಗ್ರಹ ಕ್ಷೇತ್ರವು ಅತೀವಿಶಾಲವಾಗಿಯೂ, ಕೆಲಸವು ಬಹಳ ಗಂಭೀರವಾಗಿಯೂ ಇರುವುದರಿಂದ ಈ ಕೆಲಸವು ಸಫಲವಾಗುವವರಿಗೂ ಧನಜನ ಸಹಾಯವು ಅವಶ್ಯವಾಗಿದೆ. ದಿನಕ್ಕೆ ಸುಮಾರು ೫೦೦ ರೂ. ಖರ್ಚಿದೆ. ಪ್ರತಿನಿತ್ಯವೂ ಸುಮಾರು ೯—೧೦ ಜನಗಡಗಳು ಸತ್ಯಾಗ್ರಹಕ್ಕೆ ತೆರಳುತ್ತಿವೆ.

ಭಾರತದ ಪ್ರತಿ ಒಂದು ಸ್ವಾಂತನ್ನೂ ಹಿಂದೂ ಧರ್ಮವನ್ನು ಳಿಸಲು ಈ ಧರ್ಮಯುದ್ಧಕ್ಕೆ ಸಹಾಯ ಮಾಡುತ್ತಿರುವಾಗ ನಮ್ಮ ಪ್ರಿಯ ಕರ್ನಾಟಕವು ಹಿಂದುಳಿದಿರುವದು ಧರ್ಮವೇ? ಕರ್ನಾಟಕಕ್ಕೆ ಇದು ಗೌರವವೇ? ಎಂದಿಗೂ ಅಲ್ಲ. ನಮ್ಮ ಇತರ ಪ್ರಾಂತಗಳ ಭ್ರಾತೃಗಳು ಘೋರಕಷ್ಟಗಳನ್ನನುಭವಿಸುತ್ತಿರುವಾಗ ನಾವು ಸುಮ್ಮನೆ ಇರುವುದು ಸರಿಯಲ್ಲ.

ಪ್ರಿಯ ಭ್ರಾತೃಭಗಿನಿಯರೆ! ಆರ್ಯಸಮಾಜವು The Vanguard of Hinduism ಎಂದು ಪ್ರಸಿದ್ಧಿಗೊಂಡಿದೆ. ಅಂದರೆ, ಹಿಂದೂ ಧರ್ಮದ ರಕ್ಷಣೆಗೋಸ್ಕರ ತನ್ನನ್ನು ಬಲಿದಾನಮಾಡಲು ಉದ್ಯುಕ್ತವಾದ ಸೈನ್ಯದ ಮುಂಭಾಗವೇ ಆರ್ಯಸಮಾಜವು. ನಮ್ಮ ನಮ್ಮಲ್ಲಿ ಅನೇಕ ಭೇಧಭಾವಗಳಿದ್ದರೂ ನಾವೆಲ್ಲರೂ ಒಳಸಿ ಹೋಗುವ ಸಮಯ ಬಂದಿದೆ ಪರಸ್ಪರ ಸಹಾಯ ಮಾಡೋಣ.

ರಾಯರಶೀಮೆ ಮಹಾಸಭೆ.

ಇನ್ನೇ ತಾ|| ಸಾಯಂಕಾಲ ಟೌನ್ ಹಾಲ್ ಆವರಣದಲ್ಲಿ ಶ್ರೀ ಡಿ. ಎಸ್. ಹನುಮಂತರಾಯರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ ಶ್ರೀ ವೀರಾಸ್ವಾಮಿ, ಎಸ್. ಎಂ. ಶಾಸ್ತ್ರಿ ಮದ್ರಾಸಿನ ಸುಪ್ರಸಿದ್ಧ ವಕೀಲರಾದ ಶ್ರೀ ಪಿ. ಎಸ್. ನರಸಿಂಹಾಚಾರ್ಯರು ರಾಯರಶೀಮೆ ಅಭಿವೃದ್ಧಿಯನ್ನು ಕುರಿತು ಭಾಷಣಗಳನ್ನು ಮಾಡಿ ಟೀಕಾಕಾರರಿಗೆ ತಕ್ಕ ಸಮಾಧಾನಗಳನ್ನು ಕೊಟ್ಟರು.

ಹರಪನಹಳ್ಳಿಯಲ್ಲಿ ಸುವರ್ಣಮಹೋತ್ಸವ,

(ಪ್ರತ್ಯಕ್ಷದರ್ಶಿಯಿಂದ)

"ಹರಪನಹಳ್ಳಿಯಲ್ಲಿ ಊಟದ ವಿಶೇಷವನ್ನು ಬಿಟ್ಟರೆ ಏನೂ ಇರುವುದಿಲ್ಲ. ಸುವರ್ಣ ಮಹೋತ್ಸವ ಕ್ಕಾಗಿ ಸಂಗ್ರಹಿಸಿದ ಬಹುಭಾಗದ ಹಣವು ಊಟಕ್ಕೇ ವ್ಯಯವಾಗಿ ಹೋಗುವುದು. ಇನ್ನೇನು ರಸಿಕರು ಕೆಲವರಿರುತ್ತಾರೆ. ಒಳ್ಳೆಯ ಸಂಗೀತ ವಷ್ಟು ದೊರೆಯಬಹುದು. ಇಷ್ಟೇ ಸರಿ" ಎಂಬಭಿಪ್ರಾಯವು ಹರಪನಹಳ್ಳಿಯಲ್ಲಿ ವಿದ್ಯಾರ್ಥಿಗಳಾಗಿ ಈಗದೇಶದ ವಿವಿಧಭಾಗಗಳಲ್ಲಿರುವ ಬಹುಸಂಖ್ಯಾಕ ಜನರಿಗೂ ಹರಪನಹಳ್ಳಿ ವಿದ್ಯಾಧಿಕರ ನೈಶಿಷ್ಟ್ಯವನ್ನರಿತವರಿಗೂ ಹೊಳೆದಿದ್ದಿತು. ಆದರೆ ಸುವರ್ಣಮಹೋತ್ಸವನ್ನು ನೋಡಿದನರಿಗೆ ನಿಷ್ಪಕ್ಷಪಾತ ದೃಷ್ಟಿಯ ವಿಮರ್ಶಕರಿಗೆ ಆಶ್ಚರ್ಯವಾಗುವಂತೆ ಅಭಿಪ್ರಾಯ ಬದಲಾವಣೆಯಾಯಿತು.

ಟೀಕೆಯು ಮನದಣಿ ಗಿರಬೇಕು. ಹಣಕೊಟ್ಟವರ ಮರ್ಮಭೇದೀ ಶಬ್ದಗಳು ಚಾಲಕರ ಹೃದಯವನ್ನು ಹೊಕ್ಕಿರಬೇಕು. ಹಿಡುವಿಲ್ಲದೆ ಖರ್ಚು ಮಾಡುವ ಪರಿಪಾಠವನ್ನು ಬಾಲ್ಯದಿಂದಕಲಿತ ಮೂರ್ತಿ ಅಚಾರ್ಯರು ಸಣ್ಣ ಪುಟ್ಟ 'ಐಟಂ' ಗಳಿಗೆ ಚಿತ್ರಿ ಹೊಡೆದು ಯುದ್ಧವನ್ನೇ ಹೂಡಿಮಿತವ್ಯಯದ ಮೂರ್ತಿಗಳಾಗಿ ಬಹಳ ಬರ್ಚನ್ನುಳಿಸಿದರು. ಒಟ್ಟಿಗೆ 6ಸಲ ಭೋಜನ ಒಂದು ಸಲ ಫಲಾಹಾರ (ಏಕಾದಶಿ) ಎಲ್ಲಾ ಬಹಳ ಸಿಂಪಲ್ ಆಗಿ ಹರಪನಹಳ್ಳಿ 'ಫಾನ್ಸ್ಲಿಯೇ ಕಂತುಬರಲಿಲ್ಲ. 'ಸೀ+ಬಾರಗಳ 'ಬಾಯ್ಕಾಟ್ ಆಗಿ ಸ್ವಚ್ಛವಾದ ಆರೋಗ್ಯಕರವಾದ ಆಹಾರಪು ಬೇಕಾದಷ್ಟೇ ಬಡಿಸಲ್ಪಡುತ್ತಿದ್ದಿತು

ಸುಮಾರು ಎರಡುಸಾವಿರ ಜನರನ್ನು ಹಿಡಿಯಬಹುದಾದ ಮಂಟಪವು ಅತಿಕುಲಭ ಖರ್ಚಿನಿಂದ ತಯಾರಿಸಲ್ಪಟ್ಟಿದ್ದಿತು. ಉಪನ್ಯಾಸ ವೇದಿಕೆಯನ್ನು ಎತ್ತರಿಸಲು ನೆಲಗಡಲೆ ಹೊಟ್ಟು ಸಹಾಯವಾಗಿ ತನ್ನ ಕೀರ್ತಿಯನ್ನು ಪಸರಿಸಿತು.

ಮನ್ಮಥ ವಿಜಯ ಸುಭದ್ರಾಪರಿಣಯ ನಾಟಕ ಪ್ರದರ್ಶನದಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಸೂತ್ರಧಾರಿಗಳಿಗೆ ಸಾಕಾದಷ್ಟು 'ಸ್ಪಾಕ್ಗೇಸು, ಇದ್ದಿಲ್ಲ. ಕಂಠಪಾಠ ಕಡಮೆ, ಹಾಡಿಕೆಯಲ್ಲಿ ಮಾಧುರ್ಯದ ಶೂನ್ಯತೆ, ಅಲ್ಲಲ್ಲಿ ಗೋಚರವಾಗಿ ಸ್ವಲ್ಪ ದಿನಗಳ ತಯಾರಿ ಎಂಬುದು ಪ್ರಕಟವಾಗುತ್ತಲಿತ್ತು. ಸುಪ್ರಸಿದ್ಧ ಸಾಹಿತಿಗಳಾದ ಜಿಲ್ಲೆಯಲ್ಲಿಹರರಾದ ದಂಡಿನಸೋದರರ ಮಹತ್ವಾಕಾಂಕ್ಷೆಯ ಯತ್ನಗಳಿಗೆ ಮುನಿಯಪ್ಪನವರ 'ಫಿಡಲ್, ಅತಿಸಹಾಯ ನೀಡಿತು. ಫಿಡಲ್ ನಾದನದ ಮೋಹಕಧ್ವನಿಯಿಂದ ಪ್ರೇಕ್ಷಕರಿಗೂ, ಸೂತ್ರಧಾರಿಗಳಿಗೂ ಇಮ್ಮಡಿಯಾದ ಪ್ರೋತ್ಸಾಹವಿದ್ದಿತು. ಇವರನ್ನು ಕಡೆತಂದ 'ಗೋವಿ, ಪರಾಕ್ರಮಕ್ಕೆ ಧನ್ಯವಾದಗಳು. ಕಡಬಗೇರಿ ಕುಮಾರಸ್ವಾಮಿಯವರ 'ಹಾರ್ಮೋನಿಯಂ, ವಿದ್ಯೆಯನ್ನರಿಯದವರು ಜಲ್ಲೆಯಲ್ಲಿ ವಿರಳ.

ಬಾಲಕಿಯರ ನಾಟಕದಲ್ಲಿ ಗಲಭೆ ಇದ್ದಿತಾದರೂ ಅವರಸಂಗೀತಾಭಿನಯವು ಬಹುಜನರನ್ನಾ ಕರ್ಷಿಸಿತು.

ಅಖಿಲಭಾರತ ಚರಕಾಸಂಘದವರು ಖಾದಿಯನ್ನು ತಂದಿದ್ದರು, ಹಬ್ಬಳ್ಳಿ ಸಾಹಿತ್ಯ ಭಂಡಾರದವರು ಪುಸ್ತಕಗಳನ್ನು ತಂದಿದ್ದರು. ಸಾಕಾದಷ್ಟು ವ್ಯಾಪಾರವಾಗಲಿಲ್ಲ. ಮುಳ್ಳಸಜ್ಜನ ವ್ಯಾಯಾಮಶಾಲೆಯು ಪ್ರದರ್ಶನವು ಸ್ತ್ರೀ ಪುರುಷರನ್ನು ಆಕರ್ಷಿಸಿತು.

ಬಾಯೀ ಭಾಯೀ ಸಮಾರಂಭವು ಜೇರೆಯವರನ್ನೂ ನಿರ್ಗರವನ್ನಾಗಿ ಮಾಡಿತು. ತನ್ಮೂಲಕ ದಿನಗಳ ಸುಸ್ಮರಣೆಯ ಘಟನೆಗಳನ್ನು ವಿವೇಚಿಸುತ್ತಾ ಪೂರ್ವ ವಿದ್ಯಾರ್ಥಿಗಳು ದೇಹ ಪರವಶರಾದರು. ಆನಂದಪುಲಕಿತರಾದರು. ಕ್ಷಣಿಕವಾಗಿ ಸಂಸಾರಿಕ ದುಃಖಗಳನ್ನು ಮರೆತರು. ಶ್ರೀ. ಕ. ಗುರುರಾಜರಾಯರಿಗೆ ವರದಿಯನ್ನೋದುವ ಕಾಲಕ್ಕೆ ತಮ್ಮ ಬಾಲ್ಯಸ್ನೇಹಿತರ ಹೆಸರನ್ನುಚ್ಚರಿಸಲು ಗದ್ಗದ ಕಂಠವಾಗಿ ದುಃಖಾಶ್ರುಗಳು ಬಂದವು. ದಂಡಿನ ಅನಂತರಾಯರು ಸಾತಶಾಲೆಯು ತಮ್ಮದೆಂದೂ ತಾವು ಇನ್ನೂ ಪುದ್ಯೋಗದಲ್ಲಿರುವೆವೆಂದೂ ಯುವಕರೆಂದೂ ಈ 3 ದಿನಗಳು ಭಾವಿಸಿದರು. ಟಿ. ಯಚ್. ಎಂ. ಕುಟುಂಬೀಕರು ಮುನ್ನಿಘ್ಸದಾಶಿವಯ್ಯನಪರೊಡನೆ ತಮ್ಮಮೇಧಾವಿ ಬಂಧುಗಳೊಡನೆ, ಶ್ರದ್ಧಾಳುಗಳಾಗಿ ಭಾಗತೆಗೆದುಕೊಂಡು ಉತ್ಸವದ ಕಳೆಯನ್ನು ಜೆಚ್ಚಿಸಿದರು. ಹೆಡ್ಮಾಷ್ಟರ್ಮಕ್ಕಳಾದವೆಂಕಟೇಶ್ವರ ಮತ್ತು ನರಸಿಂಹಾಚಾರ್ಯರ ಆಗಮನದಿಂದ ಉತ್ಸವಕ್ಕೆ ಶೋಭೆಯಾಯಿತು. ವಿಶೇಷ ಓಡಾಟದಿಂದ ಬಾನಪ್ಪನವರ ಕಾಲುಕುಂಟಾಯಿತು, ನದರಾಟದಿಂದ ಭಟ್ಟರ ಧ್ವನಿಯು ಒಡಕು ಸೋರೆಯಾಯಿತು. ವಸುಪಾಲಪ್ಪನವರಿಗೆ ಜೇನೆಯಾಯಿತು. ರಾಮರಾಯರಿಗೆ ಅಜೀರ್ಣವಾಯಿತು.ಅನೇಕ ಸ್ವಯಂಸೇವಕರಿಗೆ ನಿದ್ರಾಭಂಗವಾಯಿತು. ಇಂಥಾತ್ಯಾಗದಿಂದಲ್ಲವೆ. ಹರಪನಳ್ಳಿಯಹೆಸರು ಇಡೀಹಿಂದೂಸ್ಥಾನದಲ್ಲಿ ಪ್ರಶಿದ್ಧವಾಯಿತು. ಆ, ನರಸಿಂಹನು ಇದರ ಕೀರ್ತಿಯನ್ನು ಹಿಂದೂಸ್ಥಾನದ ರಾಜಪ್ರತಿನಿಧಿಯ ಈಗ ಸರಾಜಧಾನಿಗೆ ಹಿಮಾಲಯದ ಉನ್ನತ ಪ್ರದೇಶಕ್ಕೆ ಮುಟ್ಟಿಸಿ ಸೂರ್ಯಪುರಾಜಧಾನಿಗೆ ಹೊರಟೆರುವನು.

ಭಟ್ಟರ ಸಂಘಟನಶಕ್ತಿ, ರಾಮರಾಯರ ಕರ್ತವ್ಯ ಕುಶಲತೆ, ಕರ್ನಾಟಕ ರವಿಚಂದ್ರ ಪಿಕ್ಚರ್ (ವಸುಪಾಲ) ಬೀಳೀಮೋಸೇಮೇಲಿನ ಕಣ್ಣುಗಳಿಂದ ಹೊರಸೂಸುತ್ತಿದ್ದ ಅಧಿಕಾರ ದರ್ಪ. ಕಲಾಪ್ರೇಮಿಗಳಾದ ದಂಡಿನ ಸೋದರರ ಕಾರ್ಯಕ್ರಮ ಜಾಗೃತಿ. ಸಿಂಪಲ್ ತಿರುಮಲರಾಯರ ಸಿಂಪಲ್ ಅತಿಥಿಸತ್ಕಾರ.ಮತ್ತೀಹಳ್ಳಿಯವರ ಸೂತ್ರಧಾರತ್ವ. ಅನಂತಾಚಾರ್ಯರ ರಸಯುಕ್ತಹಾಸ್ಯ. ಗಿರೀ ಶೇಷಗಿರೀ ರಾಯರ ಓಡಾಟ, ಕೊಳಲಿನ ಸೊಬಗು. ಕುರುಡನ ಜಿಪಣಗು.

ಇವೆಲ್ಲಾ ವರ್ಣಿಸಬೇಕೇ ಸಾಧ್ಯವಿಲ್ಲ. ಅನೇಕರು ನೋಡಬೇಕಿತ್ತು. ಬರಬೇಕಿತ್ತು. ಬರಲೇಬೇಕಾದ ಬರದಿದ್ದವರನ್ನು ಶಪಿಸುವ ಇಚ್ಛೆಯುಂಟಾಗುತ್ತದೆ ತಡೆಯುತ್ತೇನೆ. 1950 ರಲ್ಲಿ ನಡೆಯುವ ವಜ್ರಮಹೋತ್ಸವಕ್ಕಾದರೂ ಬರುವ ಸಂಕಲ್ಪವನ್ನು ಅವರು ಇಂದೇ ಮಾಡಲಿ.

ಎಲುಬಿನ ಉಪಯೋಗ.

(ಡಿ. – ಸ್ಕಿ. ಶಿಂದಿಗ ತಿಪಲಿಂಗಪ್ಪ ವಿದ್ಯಾರ್ಥಿ)

ಎಲುಬು ಬಹು ಉಪಯುಕ್ತವಾದ ಪದಾರ್ಥವು. ಇದರ ಗೊಬ್ಬರವು ಹೊಲಗದ್ದೆಗಳಿಗೆ ಬಹು ಉತ್ತಮವಾದದ್ದು. ಎಲುಬುಗಳು ಜೀಕಾದಷ್ಟು ದೊರೆಯುವವು. ಆದೇ ಕಾರು ಹೊಲಗಳಲ್ಲಿ ಸ್ವಾಭಾವಿಕವಾಗಿ ಎಲುಬಿನ ಬಿಡಿರುವುದನ್ನು ನೋಡಬಹುದು. ಎಲುಬು ಬಹು ಗಟ್ಟಿಯಾದ ಪದಾರ್ಥವು. ಇದು ಕೂಡಿಯಬೇಕಾದರೆ ಅನೇಕ ದಿವಸಗಳು ಹಿಡಿಯುವವು ಎಲುಬು ಒಂದು ಕಡೆಗೆ ಬಿದ್ದಿದ್ದರೆ ಅದು ತನ್ನ ರತ್ತೆಯನ್ನು ತನ್ನ ಸುತ್ತಲೂ ಬಿಡುವುದು ಖಂಡಿತ. ಈ ಕಕ್ತಿಯಿಂದಲೇ ಉತ್ತಮವಾದ ಜೀಕೆಯು ಒದಗುವುದು.

ಎಲುಬಿನ ಗೊಬ್ಬರವು ಎಲ್ಲ ತರದ ಭೂಮಿಗಳಿಗೂ, ಉಪಯೋಗವಾಗುತ್ತದೆಂದು ಹೇಳಲಿಕ್ಕಾಗುವುದಿಲ್ಲ. ಬಳಕಲು ಮತ್ತು ಮರಾಲಿ ಭೂಮಿಗಳಿಗೆ ಎಲುಬಿನ ಗೊಬ್ಬರವನ್ನು ಹಾಕಕೂಡದು. ಇವುಗಳನ್ನು ಬಿಟ್ಟು ಉಳಿದ ಎಲ್ಲ ತರಹದ ಭೂಮಿಗಳಿಗೂ ಇದರ ಪ್ರಯೋಗವು ಜೆನ್ನಾಗಿಯಾಗುವುದು. ಎಲುಬಿನಲ್ಲಿರತಕ್ಕ ಒಂದು ತರಹದ ಶಕ್ತಿಯು ಬಹು ಮಹತ್ವದ್ದಾಗಿರುತ್ತದೆ. ಕೆಂಪುಬಣ್ಣದ ಭೂಮಿಗಳಲ್ಲಿ ಹಾಕುವದಕ್ಕಾಗಿ ಇದನ್ನು ಸಂಯೋಗಮಾಡ್ತಾರೆ.

ಒಂದು ಪಾವಿರ ಪೌಂಡು ಭಾಗವಾಗಿರತಕ್ಕ ಒಂದು ಎತ್ತಿನ ಶರೀರದಲ್ಲಿ ೫೦ ಪೌಂಡು ಖನಿಜದ್ರವ್ಯ | Mineral-Matter | ಇರುತ್ತದೆಂದು **ಕೋಥ್ ಮೇ ಸ್ಟೈಡ್** ಎಂಬ ಪ್ರಯೋಗ ಕ್ಷೇತ್ರದ ಮೇಲೆ **ಮಿ. ಲಾವೆಸ್** ಮತ್ತು **ಮಿ. ಗಿಲ್ಬರ್ಟ್** ಎಂಬುವವರು ಸ್ಪಷ್ಟವಾಗಿ ಹೇಳಿದ್ದಾರೆ ಸಾಧಾರಣ ಒಂದು ಪಾವಿರ ಪೌಂಡು ಭಾರವಾಗಿರತಕ್ಕ ಪ್ರಾಣಿಯಲ್ಲಿ ೧೦೦-೧೫೦ ಪೌಂಡು ಎಲುಬು ಇರುವುದು

ನಮ್ಮ ದೇಶದಲ್ಲಿ ಎಲುಬಿನ ಗೊಬ್ಬರವನ್ನು ಉಪಯೋಗಿಸುವದೂಢಿಯೇ ಇಲ್ಲ ಆದುದರಿಂದ ಒಕ್ಕಲಿಗರು ಹಳ್ಳಿಯಲ್ಲಿ ಬಿದ್ದ ಎಲುಬುಗಳನ್ನು ಸಂಗ್ರಹಿಸಿಡುವ ಪದ್ಧತಿ ಇರುವದಿಲ್ಲ. ಎಲುಬಿನ ಪುಡಿಯನ್ನು ಹೊಲದಲ್ಲಿ ಚೆನ್ನಾಗಿ ಹರಡಿದರೆ ಅದರಿಂದಾದ ಫಲವು ತೀವ್ರವೇ ಗೋಚರಕ್ಕೆ ಬರುವುದು. ಎಲುಬು ಹೊದಲು ಶಕ್ತಿರೂಪ ಮಾಡುವ ಕೆಲಸಕ್ಕೆ ಉಪಯೋಗವಾಗ್ಲಿಟ್ಟು ಆನಂತರ ಅದನ್ನು ಗೊಬ್ಬರದಂತೆ ಉಪಯೋಗಿಸುತ್ತಿದ್ದಾರೆ

ಎಲುಬಿನ ಉಪಯೋಗವನ್ನು ಇನ್ನೊಂದು ಪ್ರಕಾರದಿಂದ ಮಾಡಿಕೊಳ್ಳಲು ಸಾಧ್ಯವಿದೆ ಎಲುಬಿನಲ್ಲಿರತಕ್ಕ ಎಣ್ಣೆಯನ್ನು ತೆಗೆದು ಅದನ್ನು ಕೂಡ ಗೊಬ್ಬರದಂತೆ ಉಪಯೋಗಿಸುತ್ತಿದ್ದಾರೆ

ಎಣ್ಣೆಯು ತೀವ್ರವೇ ಮಣ್ಣಿನೆಲ್ಲ ಬೆರೆಯುವದರಿಂದ ಜೀಕೆಯು ಜೆನ್ನಾಗಿ ಬರುವುದು. ಇದಲ್ಲದೆ ಎಲುಬಿನಿಂದ 'ಬೂಸರ್ ಫಾಸ್ಫೇಟ್ ಆಫ್ ಲಾಯಿಮ್' ಎಂಬ ಹೆಸರಿನ ಗೊಬ್ಬರವು ಸಿದ್ಧವಾಗುತ್ತದೆ

ನಾವು ಹೊಲದಲ್ಲಿ ಅನೇಕ ಪ್ರಕಾರದ ಬೀಜಗಳನ್ನು ಬಿತ್ತಿ ಜೀಕೆಯನ್ನು ತೆಗೆಮಾಡಿಕೊಳ್ಳುತ್ತೇವೆ. ಇದರಿಂದ ಹೊಲದಲ್ಲಿನ ಶಕ್ತಿಯು ಕಡಿಮೆಯಾಗುವುದು. ನಾವು ಪುನಃ ಚೆನ್ನಾಗಿ ಜೀಕೆಯನ್ನು ತೆಗೆಮಾಡಿಕೊಳ್ಳಬೇಕೆಂದಿದ್ದರೆ ಅದರಲ್ಲಿ ಅಂಥ ಶಕ್ತಿಯನ್ನು ಸ್ಥಾಪಿಸುವಂಥ ಬೇರೆ ಪದಾರ್ಥವನ್ನು ಪ್ರಾಕೃತಿಕ ಅಥವಾ ಕೃತ್ರಿಮ ಅಂಥ ಶಕ್ತಿಯನ್ನು ಗೊಬ್ಬರವು ಮಾತ್ರ ಖಂಡಿತವಾಗಿ ಕೊಡುವುದು ಎಲುಬಿನ ಗೊಬ್ಬರವು ಬಹಳ ಮೆತ್ತು ಕಬ್ಬಿಗೆಗೆ ಬಹು ಪ್ರಯೋಜನವೆಂದು ಮುಂಬಯಿ ಇಲಾಖೆಯಲ್ಲಿ ಕೃಷಿಯೋಗದಿಂದ ತೋರಿಸಿದ್ದಾರೆ

ಒಬ್ಬ ವ್ಯಕ್ತಿಗೆ ಎಲುಬಿನ ಗೊಬ್ಬರವನ್ನು ಸಣ್ಣಾಗಿ ಪುಡಿಮಾಡಿ, ಕೆಸರಾಗುವ ಪೂರ್ವದಲ್ಲಿಯೇ ಅದನ್ನು ಚೆನ್ನಾಗಿ ಹರಡಬೇಕು. ಇದರಿಂದ ಬಹಳ ಜೀಕೆಯು ಬಹು ಸೊಗಸಾಗಿ ಜೀಕೆಯಾಗುವುದು ಜೀಕೆಗಾಗಿ ಜಿಲ್ಲೆಯ ಖಾನಾಪುರ ತಾಲೂಕಿನಲ್ಲಿ ಎಲುಬಿನ ಗೊಬ್ಬರದ ಉಪಯೋಗವನ್ನು ಹೆಚ್ಚಾಗಿ ಮಾಡಹತ್ತಿದ್ದಾರೆ.

ಹಣ್ಣಿನ ಗಿಡಗಳಿಗೆ ಈ ಗೊಬ್ಬರವು ಬಹು ಉಪಯೋಗವಾಗುತ್ತದೆ. ಅಳವಾದ ತಗ್ಗನ್ನು ತೋಡಿ ಅದರಲ್ಲಿ ಎಲುಬಿನ ತುಂಡುಗಳನ್ನು ಹರಡಿ, ಆ ಮೇಲೆ ಉತ್ತಮವಾದ ಮಣ್ಣನ್ನು ಹಾಕಿ ಗಿಡಗಳನ್ನು ಹಚ್ಚಿದರೆ ಬಹು ಪ್ರಯೋಜನ ವಾಗುವುದು. ಗಿಡಗಳು ಉತ್ತಮವಾದ ಫಲಗಳನ್ನು ಕೊಡುವುವು. ನೇಚಾಳ ಪ್ರಾಂತದಲ್ಲಿ ಈ ಪ್ರಕಾರ ಮಾಡುವ ರೂಢಿಯಿರುತ್ತದೆ. ಈ ಪ್ರಕಾರ ಹಚ್ಚಿದ ಗಿಡಗಳೇ ಒಳ್ಳೆಯ ಮಧುರವಾದ ಫಲಗಳನ್ನು ಕೊಡುವವೆಂದು ಅವರು ತಿಳಿದುಕೊಂಡಿದ್ದಾರೆ.

ಹುಲ್ಲುಗದ್ದೆಗಳಿಗೆ ಕೂಡ ಈ ಗೊಬ್ಬರವು ಉಪಯೋಗವಾಗುತ್ತದೆ. ಗದ್ದೆಯೊಳಗಿನ ಹುಲ್ಲನ್ನು ಕೊಯ್ದನಂತರ ಪ್ರತಿಯೊಂದು ಎಕರೆಗೆ ೪೦೦-೬೦೦ ಪೌಂಡು ಎಲುಬಿನ ಪುಡಿಯನ್ನು ಹಾಕಿದರೆ ಹುಲ್ಲು ಉತ್ತಮವಾಗಿ ಬೆಳೆಯುವದು.

ಮಹಾಯುದ್ಧವಾಗುವದಕ್ಕಿಂತ ಪೂರ್ವದಲ್ಲಿ ಜರ್ಮನಿ ಮತ್ತು ಸ್ವಿಟ್ಜರ್ಲ್ಯಾಂಡ ಈ ಎರಡು ದೇಶಗಳು ಮಾತ್ರ ಈ ವ್ಯವಹಾರದಲ್ಲಿಯ ಎಲುಬುಗಳನ್ನು ಕೊಂಡುಕೊಳ್ಳುತ್ತಿದ್ದವು. ಅವುಗಳಿಂದ ಅವರು ಹಿಡಿಕೆ ಗುಂಡಿ ಮೊದಲಾದ ಪದಾರ್ಥಗಳನ್ನು ಸಿದ್ಧಮಾಡಿಸುತ್ತಿದ್ದರು. ಮಹಾಯುದ್ಧದನಂತರ ಇದರ ಮಹತ್ವವು ಪರದೇಶಗಳಿಗೂ ತಿಳಿಯಿತು.

ಈಗ ಬರತಖಂಡದಲ್ಲಿ ಎಲುಬಿನ ಪುಡಿಯನ್ನು ಮಾಡತಕ್ಕ ಯಂತ್ರಾಲಯಗಳಿವೆ ಅವು ಪ್ರತಿಯೊಂದು ಪ್ರಾಂತದಲ್ಲಿ ಈ ಪ್ರಕಾರ ಇವೆ

ಮುಂಬಯಿ ೪, ಬಂಗಾಲ ೮, ಮದ್ರಾಸ ೩, ಮಧ್ಯಪ್ರಾಂತದ ೨, ಸಂಯುಕ್ತ ಪ್ರಾಂತ ೩.

ಎಲುಬಿನನಿರ್ಗತದಅಂಕೆಗಳು

ವರ್ಷ	ತೂಕ[ಬೆ]	ಬೆಲೆ [ರೂಪಾಯಿ]
೧೯೧೪	೧,೦೫,೪೧೫	೫,೭೨,೭೫೩
೧೯೧೫	೧೬,೭೫೪	೮೪,೪೦೦
೧೯೧೬	೪೫,೬೭೩	೨,೦೬,೪೮೨
೧೯೧೭	೯೯,೧೫೮	೬,೬೨,೦೬೩
೧೯೧೮	೮೯,೪೮೦	೬,೧೫,೪೧೦
೧೯೧೯	೪೪,೧೫೧	೬,೦೫,೫೯೦

ಬಹಳ ಉಪಯೋಗವುಳ್ಳ ಎಲುಬಿನ ಪುಡಿಯು ಪುಡಿಯು ಪರದೇಶಗಳಿಗೆ ಈ ಪ್ರಕಾರ ಹೋಗುವದನ್ನು ನೋಡಿದರೆ ಯಾರಿಗೆ ದುಃಖವಾಗಲಿಕ್ಕಿಲ್ಲ. ? ಒಕ್ಕಲ ತನವನ್ನು ಮಾಡುವವರು ಇನ್ನಾದರೂ ಎಲುಬನ್ನು ಪರದೇಶಗಳಿಗೆ ಕಳುಹಿಸದೆ ಅದರ ಗೊಬ್ಬರವನ್ನು ಭೂಮಿಗಳಿಗೆ ಹಾಕಿ ಅದರ ಫಲವನ್ನು ಹೊಂದಿ ಸುಖಿಗಳಾಗಬಾರದೇ ?

ಹೈದರಾಬಾದ ಸತ್ಯಾಗ್ರಹ

ಮೇ ತಿಂಗಳಲ್ಲಿ 5000 ಸತ್ಯಾಗ್ರಹಿಗಳನ್ನು ಮಾತ್ರ ಕಳುಹಿಸಬೇಕೆಂದು ಆರ್ಯಸತ್ಯಾಗ್ರಹಸಮಿತಿಯು ನಿಶ್ಚಯಿಸಿದೆ. ಪಂಜಾಬಿನಿಂದ 1000 ಯು. ಪಿ. 500, ರಾಜಪುತ್ರಸ್ಥಾನ 300 ಬಂಗಾಳ 300, ಸಿ. ಪಿ. ಬೇರಾರ 100, ಸಿಂಧ 100, ಬೊಂಬಾಯಿ 100. ಮದ್ರಾಸ್ 100 ಮತ್ತು ಹೈದರಾಬಾದ 1000. ಮೇತಿಂಗಳ ನೊದಲನೆಯ ತಾರೀಖಿನಿಂದ ಸುಮಾರು 2000 ಸತ್ಯಾಗ್ರಹಿಗಳು ಸೆರೆಮನೆಯನ್ನು ಸೇರಿರುವರು.

ರಾಜಕೋಟೆಯಲ್ಲಿ ಮಹಾತ್ಮ ಗಾಂಧಿಯವರು

ರಾಜಕೋಟೆಯಲ್ಲಿ ಪ್ರಜೆಗಳಿಗೂ ರಾಜರಿಗೂ ಗೌರವಯುತವಾದ ಯಾವ ವಿಷಯದಲ್ಲೂ ಆಗದ ಕಾರಣ ಮಹಾತ್ಮಗಾಂಧಿಯವರು ಅಲ್ಲಿಗೆ ಹೋಗಿರುವರು. 15ನೆಯ ತಾರೀಖು ಸುಮಾರು 3ಗಂ ನಿಂದ ವಿಚಿತ್ರವಾದಿಗಳೊಡನೆ ಮಾತುಕತೆಗಳನ್ನು ನಡೆಸಿದರು. ದರ್ಬಾರ ವೀರವಲ್ಲರು ಒಂದೆರಡು ಪುಸಲುಕಂಪು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಸಂಸ್ಥಾನದವರು ಎಷ್ಟು ಸುಧಾರಣೆಗಳನ್ನು ಕೊಡಲಿರುವರೆಂಬುದನ್ನು ವೀರವಲ್ಲರಿಂದ ಅರಿಯಲು ಮಹಾತ್ಮರು ಕುತೂಹಲುತ್ತರಾಗಿರುತ್ತಾರೆ.

ಮೈಸೂರು ಸೀಮೆಯ ಕೈಗಾರಿಕೆಯ ಕೇಂದ್ರಗಳಲ್ಲಿ ಮದ್ಯಪಾನ ಪ್ರತಿಬಂಧ

ತಿಂಗಳಿಗೆ ಒಂದು ದಿನ ಅಂದರೆ ಸಂಬಳಕೊಡುವದಿನಮಾತ್ರ ಸೈಸೂರು, ಭದ್ರಾವತಿ, ಹಾವನಗೆರೆ ಮತ್ತು ಕೋಲಾರದ ಚಿನ್ನದಗಣಿ ಮುಂತಾದ ಕಡೆಗಳಲ್ಲಿ ಹೆಂಡದಂಗಡಿಗಳನ್ನು ಮುಚ್ಚಿಸಬೇಕೆಂದು ಸರಕಾರದವರು ಆಜ್ಞೆಮಾಡಿರುವರು.

ಕನ್ಯಾ ವಿಕ್ರಯ ಬೆಂಗಳೂರಿನಿಂದ ಹೈದರಾಬಾದಿಗೆ

ಅನಾಥ ಬಾಲಿಕೆಯರನ್ನೂ, ತಮಗೆ ದೊರೆತ ಇತರಬಾಲಿಕೆಯರನ್ನೂ ಹೈದರಾಬಾದಿಗೆ ಸಾಗಿಸಿ ಅವರು ಬ್ರಾಹ್ಮಣಕನ್ಯೆಯರೆಂದು ವಿಕ್ರಯಿಸಿದರೆಂಬ ಆಪಾದನೆಯಮೇಲೆ ಮಹಾಲಕ್ಷ್ಮಮ್ಮ ಕೃಷ್ಣಮೂರ್ತಿ ಮತ್ತು ಹೊನ್ನಯ್ಯ ಎಂಬಮೂವರು ಬೆಂಗಳೂರಿನವರು ಹೈದರಾಬಾದಿನಲ್ಲಿ ದಸ್ತಗಿರಿ ಮಾಡಲ್ಪಟ್ಟು ವಿಚಾರಣೆಗಾಗಿ ಬೆಂಗಳೂರಿಗೆ ಕರೆತಂದಿದ್ದಾರೆ. ಹೈದರಾಬಾದಿನ ಶಿ. ಐ. ಡಿ. ಇನ್ಸ್ಪೆಕ್ಟರ್‌ರಾದ ಮಹಮ್ಮದ ಸಬೀಬುಲ್ಲಾ ಖಾರವರಿಗೆ ಬೆಂಗಳೂರಿನಲ್ಲಿ ಅನೇಕವಿಷಯಗಳು ತಿಳಿದುಬಂದಿವೆ. ಈ ವ್ಯವಹಾರವು ಬಹಳದಿನಗಳಿಂದ ನಡೆಯುತ್ತಿರುವುದು ಹೊರಬಿದ್ದಿದೆ.

ಸ್ವದೇಶ

ಕಾಥಿಯವಾಡದ ಭಾವನಗರ ಪ್ರಜಾಮಂಡಲ ಸಮ್ಮೇಳನದ 15ನೇ ಅಧಿವೇಶನದ ಅಧ್ಯಕ್ಷತೆ ವಹಿಸಲೋಸುಗ ಸರ್ದಾರ ವಲ್ಲಭಭಾಯಿ ಪಟೇಲರು ಬಂದಾಗ ಅವರ ಮೆರವಣಿಗೆಯನ್ನು ಮುಸಲ್ಮಾನರು ತಡೆದರು. ಈ ಜೊಜೆಯಾಟದಲ್ಲಿ ಪ್ರಜಾಮಂಡಲ ಪಕಾರ್ಯಕರ್ತನೊಬ್ಬನು ಸತ್ತನು. ಈಘಟನೆಯಿಂದ ಯಾರೂ ಉದ್ರೇಕಗೊಳ್ಳಬಾರದೆಂದು ಪಟೇಲರು ತಿಳಿಸಿರುತ್ತಾರೆ.

ಆಲ್‌ಇಂಡಿಯಾ ಕಾಂಗ್ರೆಸ್ ಕಮಿಟೀಸಭೆಯು ಜೂನ್ 18ಕ್ಕೆ ಸೇರಬೇಕೆಂದು ನಿಶ್ಚಯಿಸಲ್ಪಟ್ಟಿದೆ.

ಮುಸ್ಲಿಂಲೀಗಶಿಷ್ಟಮಂಡಲದ ಮೂವರು ಸದಸ್ಯರು ಪಂಜಾಬ್ ಮತ್ತು ವಾಯವ್ಯ ಸ್ಥಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಗಳವಿರುದ್ಧ ಅಪ್ರಚಾರಮಾಡಲು ಹೊರಟಿರುವರು.

ವಿದೇಶ

ಇಂಗ್ಲೆಂಡು ಮತ್ತು ತುರ್ಕಿಸ್ಥಾನ ಪ್ರಭುತ್ವಗಳಲ್ಲಿ ಪರಸ್ಪರ ಸಹಾಯಮಾಡಬೇಕೆಂಬ ಒಪ್ಪಂದವಾಗಿದೆ.

ಟ್ಯಾಂಜಿಗ್ ನಗರವಲ್ಲಿ ನಾಜಿಗಳ ಹಾವಳಿಯು ವಿಶೇಷವಾಗಿದೆ. ಪೋಲ್‌ಜನರನ್ನು ಹಿಂಸಿಸುತ್ತಲಿರುವರು.

ಯುದ್ಧಕಾಲದಲ್ಲಿ ಪರಸ್ಪರ ಸಹಾಯ ಮಾಡಬೇಕೆಂಬ ಒಪ್ಪಂದ ಮಾಡಿಕೊಳ್ಳಲು ಬ್ರಿಟಿಶರು ರಷ್ಯಾದವರೊಡನೆ ಸಂಧಾನ ನಡೆಸಿರುವರು ಇದರಿ ಕೆಲವಿವರಗಳ ಬಗ್ಗೆ ಏಕಾಭಿಪ್ರಾಯವಾಗಿಲ್ಲ.

ಇಂಗ್ಲೆಂಡಿನ ರಾಜದಂಪತಿಗಳು ಅಮೆರಿಕಾದೇಶದ ಯಾತ್ರೆ ಹೊರಟಿರುವರು.

K. B. & SONS.

[Estd 1935.]

General and Paper Merchants.

Car Street, **BELLARY.**

(Prefer Hoogly Printing inks for neat and attractive Printing)

Best reliable and cheapest house for all kinds of Novelties, Oilman stores, Thermas Flasks, Food. Jars, Fountain Pens of numerous qualities and makes, Patent Medicines. Perfumes Toilet and Washing Soaps, Glass ware Tea. Coffee. all kinds of Papers and agents for Hoogly Printing inks

ಎಲ್ಲಾವಿಧವಾದ ಸ್ಟೇಷನರಿ, ಕಾಗದಗಳು ಔಷಧಗಳು, ಸಬ್ಬು, ಸುಗಂಧ, ಕಾಫಿ ಟೀ, ಗಾಜಿನ ಸಾಮಾನು, ಅಲಂವಾಪ ಮುದ್ರಣಕ್ಕೆ ಬೇಕಾಗುವ ಹೂಗ್ಲಿ ಮಸಿ ನಸ್ಯೆರೆ ಸುಲಭ ಬೆಲೆಗೆ ದೊರೆಯುತ್ತೆ.

ಕೆ. ಬಿ. ಅಂಡ್ ಸನ್ಸ್, ತೇರು ಬೀದಿ, ಬಳ್ಳಾರಿ

ನವ ಭಾರತ

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಸರಿಯುದ್ಧವಾದ ಭಂಗಾರ ಮತ್ತು ಜೆಳ್ಳಿಯ ವಸ್ತು ಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲ್ ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿನ ವ ಹೊಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ನೇಚ್ಯೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇನೆ ಪೌನ್ ಎಂಡ್' ವಾಚುಗಳೂ, ಪೊಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದುಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

Sarada Ink. [Regd]

Awarded Gold Medal and Certificate of Merit at the All India Swadeshi Exhibition Bellary.

For Fountain Pens and Steel Pens

Blue-Black, Red, Blue, Green & Violet

SARADA INK WORKS, (Regd.)

K. V. & Sons. BELLARY

ಶಾರದಾಇಂಕ್ (ರಿಜಿಸ್ಟರ್ಡ್)

ಬಳ್ಳಾರಿ ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ ಸುವರ್ಣ ಪದಕವನ್ನೂ, ಯೋಗ್ಯತಾ ಪತ್ರವನ್ನೂ ಪಡೆದಿದ ಫೌಂಟನ್‌ಪೆನ್ನುಗಳಿಗೂ, ಇತರ ಲೇಖನಿಗಳಿಗೂ, ಉಪಯೋಗಿಸಲು ಶ್ರೇಷ್ಠವಾದ ಬ್ಲೂ-ಬ್ಲಾಕ್ ಕೆಂಪು. ನೀಲಿ ಹಸರು, ಪೈಲೆಟ್ ವಗೈರೆ ಬಣ್ಣಗಳಲ್ಲಿ ದೊರೆಯುತ್ತದೆ

ಕೆ. ವಿ. ಅಂಡ್ ಸನ್ಸು, ಬಳ್ಳಾರಿ.

NAVA BHARAT, BELLARY.

(With which is incarporated 'Congress Bulletin')

The leading Nationalist Weekly.

'ನವ ಭಾರತ ಬಳ್ಳಾರಿ.

[ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.]

The Rates of Subscription.	ಚಂದಾ ವಿವರ
Annual	ವರ್ಷ
Local 1—8—0	ಸ್ಥಳದವರಿಗೆ 1-8-0
Moffusil 2—0—0	ಪರಸ್ಥಳದವರಿಗೆ 2-0 0
	6 ತಿಂಗಳು
Half Yearly	
Local 1—0—0	ಸ್ಥಳದವರಿಗೆ 1-0.0
Moffusil 1—4—0	ಪರಸ್ಥಳದವರಿಗೆ 2-0-0

Patent medicines, Tonics, injections

Ayurvedic Preparations &

Oilman-stores —Moderate Rates

Trial earnestly solicited

M. S. V. Bros,

Car Street, **BELLARY.**

ಇಂಗ್ಲೀಷ್ ಔಷಧಗಳು, ಇಂಜೆಕ್ಷನ್ ಮತ್ತು ಇತರ ಆಯುರ್ವೇದೀ ಔಷಧಗಳು, ಸ್ಟೋಷನರಿ ಪನ್ಯೆರೆ ಸುಲಭ ಬೆಲೆಯಲ್ಲಿ ದೊರೆಯುತ್ತವೆ.

ಎಂ. ಯಸ್. ವಿ. ಬ್ರದರ್ಸ್,

ತೇರು ಬೀದಿ, ಬಳ್ಳಾರಿ.

The Lakshmi Medical Stores.

Chemists & Druggists, Car Street, Bellary.

ದಿ ಲಕ್ಷ್ಮೀ ಮೆಡಿಕಲ್ ಸ್ಟೋರ್ಸ್

ಔಷಧಾಲಯ ತೇರು ಬೀದಿ, ಬಳ್ಳಾರಿ.

ನಮ್ಮಲ್ಲಿ ಇಂಗ್ಲೀಷ್ ಔಷಧಗಳು, ಇಂಜೆಕ್ಷನ್, ಆಂಪೂಲ್ಸ್, ಟಿಂಕ್ಚರ್ಸ್, ಶಸ್ತ್ರ ಚಿಕಿತ್ಸೆಗೆ ಬೇಕಾಗುವ ಶಸ್ತ್ರಗಳು, ಆಸ್ಪತ್ರೆಯ ಜೀಡಿಕೆಗಳು ಮತ್ತು ಆಸಂಬಂ ಧದ ಔಷಧಗಳೆಲ್ಲಾ ದೊರೆಯುತ್ತವೆ.

ವಿವಿಧ ನರ್ಗದ **'ಲಕ್ಷ್ಮೀ-ಸಿರಸ'** ಪಾನಗಳನ್ನು ಸಾವ ತಯಾರಿಸುತ್ತೇನೆ ನಮ್ಮ ಔಷಧಾಲಯವು ದಿನ ರಾತ್ರಿಯೆಲ್ಲಾ ತೆಗೆದಿರುತ್ತದೆ. ದರಗಳು ಸುಲಭ ಪರೀಕ್ಷಿಸಿ ಪೈಸ್ತಿ ಹೊಂದಿರಿ.

Nava Bharat, Bellary.

REG. NO. M. 3937.

Sri ____

Printed at Vittal Press, Car Street Edited & Published by T. B. Keshava Rao BELLARY.

'ನಂದೇ ಮಾತರಂ'



(ಇದರಲ್ಲಿ 'ಕಾಂಗ್ರೆಸ್' ಬುಲೆಟಿನ್' ಸಮಾವೇಶವಾಗಿದೆ)

ಉಜ್ವಲ · ರಾಷ್ಟ್ರೀಯ ವಾರ ಪತ್ರಿಕೆ.

ಸಂಪಾದಕ — ಟಿ. ಬಿ. ಕೇಶವರಾವ್.

ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ.

ಸಂಚಿಕೆ ೧ | ಬಳ್ಳಾರಿ. ಮೇ ೨೭ ನೇ ಶನಿವಾರ ೧೯೨೯. | ಸಂಪುಟ ೧೩

ಔಂಧ ಸಂಸ್ಥಾನದ ರಾಜ್ಯಭಾರ ಕ್ರಮ.

[5ನೇ ಪುಟವನ್ನು ನೋಡಿರಿ]

★ ಎಂಪೈರ್ ಆಫ್ ಇಂಡಿಯಾ ★

ಲೈಫ್ ಅಶೂರೆನ್ಸ್ ಕಂಪನಿ ಲಿಮಿಟೆಡ್.

ಸ್ಥಾಪಿತ 1837.

ಭವಿಷ್ಯವಾದ ಯೋಜನೆಗಳು.

ಆಸ್ತಿಯ ಮೊತ್ತ	ರೂ	5,18,00,000	ನಿತ್ಯವೂ ಹೆಚ್ಚಿದೆ.
ಚಾಲ್ತಿಯಲ್ಲಿರುವ ಪಾಲಿಸಿಗಳ ಮೊತ್ತ	,,	14,29,00,000	,,
ವಾರ್ಷಿಕ ಆದಾಯಕ್ಕೆ ಸಲ್ಲಿಸಿದ ಹಣ	,,	6,15,00,000	,,

ಭವಿಷ್ಯವಲ್ಲಿ ಕುಟುಂಬ ಭರಣಕ್ಕೇರ್ಪಾಟು ಮಾಡಬೇಕಾದುದು ಪ್ರತಿಯೊಬ್ಬ ಕುಟುಂಬೀಕನ ಕರ್ತವ್ಯವಾಗಿದೆ. ವಿಶೇಷ ಪರಿಸ್ಥಿತಿಯಿಂದ ಸಂಸಾರವೆಲ್ಲಾ ಕುಗ್ಗಿ ಹೋಗುವ ದಿನಗಳು ಒದಬಹುದು. ಎಂಥಾ ಕಾಲಕ್ಕೂ ಸ್ವಂತ ಜೀವನ ವಿನೆಯ ಪಾಲಿಸಿಯನ್ನು ರಕ್ಷಿಸಬೇಕಾದುದು ಅತ್ಯಗತ್ಯವಾಗಿದೆ

ಮುಖ್ಯ ಕಾರ್ಯಾಲಯ.
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್ಸ್,
ಬೊಂಬಾಯಿ.

★

ಶಾಖೆ.
152/53 ಕಮರ್ಷಿಯಲ್ ಸ್ಟ್ರೀಟ್,
ಬೆಂಗಳೂರು

ನಮ್ಮ-ಚಂದಾದಾರರಿಗೆ

'ನವಭಾರತ, ಪ್ರತಿಕೆಗೆ ಇಲ್ಲಿಯವರೆವಿಗೂ ಚಂದಾಗಳನ್ನು ಸಲ್ಲಿಸದವರು ವಾರ್ಷಿಕ ಚಂದಾಹಣವನ್ನು 2-9-0 ಮು. ಅ. ಮೂಲಕ ಕೆಳುಹಿಸಲು ಕೋರಿಕೆ ವಿ. ಪಿ. ಯಿಂದ 0-4-9 ವ್ಯಥಾಖರ್ಚಾಗುವುದು ಮ್ಯಾನೇಜರ



ಶನಿವಾರ ಮೇ 27. 1939

ವಿದೇಶಗಳಲ್ಲಿ ಭಾರತೀಯರ - ಪರಿಸ್ಥಿತಿ

ದಕ್ಷಿಣ ಆಫ್ರಿಕಾದೇಶದಲ್ಲಿ ಭಾರತೀಯರ ವಿರುದ್ಧವಾದ ಚಳವಳಿಯು ಮತೆ ಕಾಣಿಸಿಕೊಂಡಿದೆ ಅಲ್ಲಿನ ಪಾರ್ಲಿಮೆಂಟಿನಲ್ಲಿ ಬಿಳಿಯರು ಒಮ್ಮುಖಿಲ್ ತಂದು ಭಾರತೀಯರ ಸ್ವಾತಂತ್ರ್ಯಾಪಹರಣ ಮಾಡುವರಿತಾರೆ ಅವಕ್ಕೆ ವಿರೋಧವಾಗಿ ಫೋಟುಮಾಡಿದ ಸಾರ್ವಜನಿಯ ಸದಸ್ಯರಾದ ಹಾಫ್ಮಿಯರ್ ಮುಂತಾದ ಭಾರತೀಯರಲ್ಲಿ ಸಹಾನುಭೂತಿಯನ್ನುಳ್ಳ ಜನರ ನಡತೆಯು ಖಂಡನೆಯಾಗಿದೆ ಸಿಂಹಲದ್ವೀಪದಿಂದ ನಮ್ಮ ಜನರನ್ನು ಹೊರಗಟ್ಟುವ ಮಸಲು ನಿಶ್ಚಯವಾಗಿ ಬಿಟ್ಟಿದೆ

ಸಮ್ಮಾದೇಶದಲ್ಲಿ ಜನಸಂಖ್ಯೆಯು ಹೆಚ್ಚುತ್ತಿರಬೇಕಾದರೆ ಇತರದೇಶಗಳವರು ಸಿರುವಂತೆ ನಮಗಾದರೂ ಪರದೇಶಗಳಿಗೆ ಮೋಗಿ ನೆಲೆಸುವ ಹಕ್ಕುಬೇಕು ಇಟಲೀ ಜರ್ಮನೀ ದೇಶಗಳು, ಕಾಲೋನಿಗಳನ್ನು ಸಂಪಾದಿಸಲು ಯುದ್ಧಮಾಡಿನೆ. ಯುದ್ಧ ಮಾಡಲು ಸಿದ್ಧವಾಗಿವೆ ಭರತಖಂಡವು ಗುಲಾಮೀ ದೇಶವಾಗಿರುವುದರಿಂದ ಪರದೇಶವರ ವಾಕಿಯನ್ನು ಎದುರಿಸಲು ಸತ್ಯಾಗ್ರಹಸ್ತ್ರವನ್ನು ಬಿಟ್ಟರೇ ಬೇರೊಂದಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹದ ಪ್ರಯತ್ನಗಳು ನಡೆದಿನೆ

ಮುಸ್ಲಿಂಲೀಗಿನ ಜಿನ್ನಾರವರೂ ಕೂಗಿ ದಕ್ಷಿಣ ಆಫ್ರಿಕಾ ಸರಕಾರದ ನಿರ್ಣಯವನ್ನು ಖಂಡಿಸಿರುವರು ಹಿಂದೂ ಸ್ಥಾನದ ಅಭಿಪ್ರಾಯವೆಲ್ಲಾ ಈ ವಿಷಯದಲ್ಲಿ ಒಂದಾಗಿದೆ ವಿದೇಶಗಳಲ್ಲಿ ಜಾತಿಶಯ ಕಷ್ಟ ಸಂಕಟಗಳಿಗೊಳಗಾಗಿರುವಭಾರತೀಯರಿಗೆ ನಾವು ಸಹಾಯ ಮಾಡಬೇಕೆಂದರೆ ಬಿಳಿಯರ ದೇಶದಿಂದ ಬರುವ ಮಾಲನ್ನು ಬಹಿಷ್ಕರಿಸಿ ಸ್ವದೇಶಿವಸ್ತುಗಳನ್ನೇ ಕೊಳ್ಳಬೇಕು ಇಂಡಿಯಾ ಸರಕಾರವು ಈ ವಿಷಯದಲ್ಲಿ ವೀಪ್ರಾವ ಮತ್ತು ತೀಕ್ಷ್ಣವಾದ ಚರ್ಯೆಯನ್ನು ತೆಗೆದುಕೊಳ್ಳಬೇಕೆಂದು ನಾವು ಸೂಚಿಸಬೇಕು.

ಯೋಟಾ ನಾಣ್ಯಗಳ ತಯಾರಿ

ಬಳ್ಳಾರಿಯಲ್ಲಿ ದಸ್ತಗಿರಿ

ಶಿರಸ್ತೇದಾರನೊಬ್ಬನೇ ಯೋಟೋ ಪ್ರಯೋಗಿಸಿದವರು ರಾಯದುರ್ಗ ಜೋಡ್ಡು ಹೈಸ್ಕೂಲು ಡ್ರಾಯಿಂಗ್ ಮಾಷ್ಟರು ಬಿ ಪಸುನುಂತಪ್ಪ ಎಂಬುವರನ್ನು ಬಳ್ಳಾರಿಯಲ್ಲಿ ದಸ್ತಗಿರಿ ಮಾಡಿದರು. ಇವರು ಪೋಲೀಸಾನಾಣ್ಯಗಳನ್ನು ಬಳಸಾರಿಯಲ್ಲಿ ಹಂಚುವಕಾಲಕ್ಕೆ ಹಿಡಿಯಲ್ಪಟ್ಟರೆಂದೂ. ಇವರಲ್ಲಿ 9 ಪೋಲೀಸ್ ರೂಪಾಯಿಗಳು ದೊರೆತ ನೆಂದೂ ಹೇಳಲಾಗಿದೆ ರಾಯದುರ್ಗದಿಂದ, ಶೇಖ್ ಹುಸೇನ್‌ಸಾಹೇಬನನ್ನು ಪೋಲಾ ನಾಣ್ಯಗಳ ತಯಾರಿ ಮಾಡುವ ಸಾಮಗ್ರಿಗಳೊಂದಿಗೆ ಕಾರ್ನಲ್ಲಿ ಕರೆತಂದವರು ಇಬ್ಬರನ್ನೂ ಬಂಧನದಲ್ಲಿಡಲಾಗಿದೆ. ಪೋಲೀಸರು ವಿಚಾರಣೆ ನಡೆಸುತ್ತಿರುವರು

ಮದ್ರಾಸ್ ಪ್ರಾಂತ್ಯದಲ್ಲಿ ಕನ್ನಡಿಗರ ಸಂಖ್ಯೆ

(1931 ರಲ್ಲಿನ ಜನಗಣನೆಯು ಎಲ್ಲಾವಿಧಗಳಿಂದಲೂ ಅಪೂರ್ಣವೆನ್ನಬಹುದು. ಏತಕ್ಕೆಂದರೆ ಹಿಂದೂಸ್ಥಾನದಲ್ಲಿನ ಬಲಾಢ್ಯ ಸಂಸ್ಥೆಯಾದ ಕಾಂಗ್ರೆಸ್ ಸಂಸ್ಥೆಯು 1931ರಲ್ಲಿ ಸೆನ್ಸಸ್ ಕ್ರಮವನ್ನು ಬಹಿಷ್ಕರಿಸಿತು. ಸತ್ಯಾಗ್ರಹ ಸಂಗ್ರಾಮವು ಜಾರಿಯಲ್ಲಿದ್ದಕಾರಣ ಸರಕಾರೀ ಅಧಿಕಾರಿಗಳಿಗೆ ಸರಿಯಾದ ಸಂಖೆಗಳು ದೊರೆಯಲಿಲ್ಲ. 1931 ರಲ್ಲಿ ಸರಕಾರದವರಿಗೆ ದೊರೆತ ಅಪೂರ್ಣ ಸಂಖೆಗಳನ್ನು ಈ ಕೆಳಗೆ ಕೊಡಲಾಗಿದೆ. 1911ರಲ್ಲಿ ಪ್ರಜಾ ಸಹಕಾರದಿಂದ ಕಾಂಗ್ರೆಸ್ ಸರಕಾರಗಳ ಸಹಾಯದಿಂದ ಮತಗಣನೆಯು ನಡೆಯುವುದಾದರೆ ಸರಿಯಾದ ಸಂಖೆಗಳು ದೊರೆಯತ್ತವೆ. ಕನಿಷ್ಟಕ್ಕೆ ಮದ್ರಾಸ್ ಪ್ರಾಂತ್ಯದಲ್ಲಿ 25 ಲಕ್ಷ ಕನ್ನಡಿಗರಿರಬೇಕೆಂದು ನಂಬಲಾಗಿದೆ)

1931 ರಲ್ಲಿ ತೆಗೆದ ಸರಕಾರೀ ಸಂಖೆಗಳು.

ಜಿಲ್ಲಾಗಳ ಹೆಸರು	ಕನ್ನಡಿಗರ ಸಂಖೆ.
1 ಬಳ್ಳಾರಿ	5 33 358
2 ಕೊಯಂಬತ್ತೂರು	2,96,585
3 ದಕ್ಷಿಣ ಕನ್ನಡ [ಮಂಗಳೂರು]	2,44,552
4 ಸೇಲಂ	1,65,254
5 ಮಧುರ	1,37,646
6 ಅನಂತಪುರ	1,00,11.0
7 ತಿರುಚಿನಾಪಲ್ಲಿ	39,967
8 ನೀಲಗಿರಿ	29,967
9 ರಾಮನಾಡು	22,178
10 ಉತ್ತರ ಆರ್ಕಾಟು	21,269
11 ಚಿತ್ತೂರು	20,194
12 ಮಲಬಾರ್	15,771
13 ತಿನ್ನೆವೆಲ್ಲಿ	9,960
14 ಕರ್ನೂಲು	8,321
15 ದಕ್ಷಿಣ ಆರ್ಕಾಟು	7,796
16 ಚೆಂಗಲ್ಪಟ್	5,470
17 ತಂಜಾವೂರು	5,003
18 ಮದ್ರಾಸ್	4 539
19 ಕಡಪ	2,001
20 ನೆಲ್ಲೂರು	1,042
21 ಪೂರ್ವಗೋದಾವರಿ	402
22 ಕೃಷ್ಣ	388
23 ವಿಶಾಖಪಟ್ಟಣ	284
24 ಪಶ್ಚಿಮ ಗೋದಾವರಿ	173
25 ಗುಂಟೂರು	173
26 ಗಂಜಾಂ	75
ಒಟ್ಟು	16,72,665

ಜಿಲ್ಲಾ ಬೋರ್ಡುಗಳವರು ಬಸ್ಸು-ಸರ್ವೀಸು ನಡೆಸುವ ವಿಷಯ

ಸೈದಾಪೇಟೆಯಲ್ಲಿ ಈ ಹಿಂದೆ ಜಿಲ್ಲಾಬೋರ್ಡ್ ಅಧ್ಯಕ್ಷರ ಸಭೆಯು ನೆರೆದು ಆಯಾಜಿಲ್ಲೆಗಳಲ್ಲಿ ಬಸ್‌ಸರ್ವಿಸ್ ನಡೆಸುವ ಜವಾಬ್ದಾರಿಯನ್ನು ಜಿಲ್ಲಾಬೋರ್ಡಿನವರೇ ಸಹಕಾರಿ-ಕೆಂದು ತೀರ್ಮಾನನಾಗಿರುವುದು ಸರಿಯಷ್ಟೇ. ಇದರಿಂದ ಖಾಸಗೀ ಸರ್ವಿಸ್ ಮಾಲೀಕರಲ್ಲಿ ಗೊಂದಲನೆದ್ದಿದೆ ಅವರು ಅಲ್ಲಲ್ಲಿ ಸಭೆಗಳನ್ನುಸೂತಿ ನಿಷೇಧವರ ತೀರ್ಮಾನಗಳನ್ನು ಸರಕಾರಕ್ಕೆ ಕಳುಹಿಸುತ್ತಲಿರುವರು.

ತಮ್ಮ ಹೊಸ ಬಸ್ಸುಗಳಿಲ್ಲವನ್ನೂ ಕೊಂಡು ಕೊಂಡು ತಕ್ಕ ಪರಿಹಾರ ದ್ರವ್ಯವನ್ನು ಒದಗಿಸಬೇಕು ಜಿಲ್ಲಾ ಬೋರ್ಡ್‌ಗಳವರಾದರೂ ಬಸ್‌ಸರ್ವಿಸ್ಸಿಲು ಟೆಂಡರು. ಗಳನ್ನು ಕೇಳಬೇಕಾಗಿರುವ ಕಾರಣ ಈ ಯೋಜನೆಯಲ್ಲಿ ಅರ್ಥವಿಲ್ಲ. ಇದರಿಂದ ಅನೇಕಮಾಲೀಕರಿಗೆ ಅತಿಶಯನಷ್ಟ ಒದಗುವುದು. ಪ್ರಯಾಣ ಸಾಕಾರ್ಯಗಳಿಗಾಗಿ ಬೇಕಾದರೆ ಹೊಸನಿಬಂಧನೆಗಳನ್ನೇರ್ಪಡಿಸ ಬಹುದು. ಇದೇ ಬಸ್ ಮಾಲೀಕರ ಸಾದ.

ಬಳ್ಳಾರಿನಗರ ಸುದ್ದಿ

ಕಾಂಗ್ರೆಸ್ ಕಾರ್ಯದರ್ಶಿಗಳು

24-ನೇ ತಾ॥ ಸಾಯಂಕಾಲ ಕೂಡಿದ ಕಾರ್ಯಕಾರಿಣೀ ಸಮಿತಿಯಲ್ಲಿ ಬಳ್ಳಾರಿ ನಗರ್ ಕಾಂಗ್ರೆಸ್ ಕಮಿಟೀ ಕಾರ್ಯದರ್ಶಿಗಳಾಗಿದ್ದ ಶ್ರೀ. ಡಿ. ಯಜ್. ವೆಂಕೋಬರಾಯರು ರಾಜೀನಾಮೆಯನ್ನು ಹಿಂದೆಗೆದು ಕೊಂಡರು. ಸುಭಾಸಬಾಬುಗಳ 'ಫಾರ್ವರ್ಡ್ ಬ್ಲಾಕ್' ತಮಗೆ ಸಮ್ಮತಿಇಲ್ಲವೆಂದು ಹೇಳಿದರು.

ಜಿಲ್ಲಾ ಆರೋಗ್ಯ ಶಾಖೆಯವರ ಸಭೆ:- ಜಿಲ್ಲಾ ಆರೋಗ್ಯಶಾಖೆಯವರಾದ ಹೆಲ್ತ್ ಇನ್‌ಸ್ಪೆಕ್ಟರ್ ಸ್ಯಾನಿಟರೀ ಇನ್‌ಸ್ಪೆಕ್ಟರ್, ವ್ಯಾಕ್ಸಿನೇಟರುಗಳಸಭೆಯು 22 ನುತ್ತು 23-ನೇ ತಾ॥ ಜಿಲ್ಲಾ ಹೆಲ್ತ್‌ಆಫೀಸರ್ ವೈದ್ಯ ನಾಥಯ್ಯರ್‌ರವರ ಅಧ್ಯಕ್ಷತೆಯಲ್ಲಿ ನೆರೆದಿದ್ದಿತು. ಅಧ್ಯಕ್ಷರು ಕಾಂಗ್ರೆಸ್ ಸರಕಾರದವರಿಂದ ತೀರ್ಮಾನಿಸಲ್ಪಟ್ಟ ಪಬ್ಲಿಕ್‌ಹೆಲ್ತ್‌ಆಕ್ಟ್ ನ ಕಲಂಗಳನ್ನು ಹೇಳಿದರು. 1939-40 ಕ್ಕೆ ಡಾ. ವೈದ್ಯನಾಥನ್‌ರವರು ಅಧ್ಯಕ್ಷರಾಗಿಯೂ, ಬಳ್ಳಾರಿ ಹೆಲ್ತ್ ಇನ್‌ಸ್ಪೆಕ್ಟರ್ ಹರಿನಾರಾಯಣರವರು ಕಾರ್ಯದರ್ಶಿಗಳಾಗಿಯೂ, ಆರಿಸಲ್ಪಟ್ಟರು. ವ್ಯಾಯಾಮ ಶಾಲೆಯವರು (ಮಲ್ಲಸಜ್ಜನ) ತಮ್ಮ ಪ್ರದರ್ಶನವನ್ನು ತೋರಿಸಿದರು ಶ್ರೀ. ಆರ್. ಆರ್. ನಿಪಾಣಿಯವರು ಹಾಸ್ಯವ್ಯಸ್ಪದ ಕಥೆಯನ್ನು ಹೇಳಿ ಮನರಂಜನೆನೀಡಿದರು. ವಂದನಾರ್ಪಣೆಯಾದಮೇಲೆ ಮೊದಲಿನದಿನದ ಸಭೆಯು ಮುಗಿಯಿತು. 23-ನೇಯ ತಾ॥ ಪ್ರಾತಃಕಾಲ ಆರೋಗ್ಯಶಾಖೆಯವರಿಗೆ ಸಂಬಂಧಿಸಿದ 30 ಕ್ಕಿಂತಲೂ ಹೆಚ್ಚಾಗಿ ನಿರ್ಣಯಗಳಾದುವು. ಒಕ್ಕಣಾಸು ಮಾಡಿದುದಕ್ಕೆ ಸರ್ಕಾರನನ್ನು ವಂದಿಸುವುದು. ಒದಕ್ಕು ಜನತೆಯಲ್ಲಿ ಪ್ರಸಾರಮಾಡಲು. ಸಾಕಾದಷ್ಟು ಸಾಮಾಗ್ರಿಗಳು, ವರ್ಷ ಜಾತ್ರೆ ಉತ್ಸವಗಳಲ್ಲಿ ನೀರಿನ ಸರಬರಾಯಿ, ಭಾಷೆ ತಿಳಿದವರನ್ನೇ ಆಯಾಪ್ರಾಂತ್ಯಗಳಿಗೆ ಮಾಕುವಪ್ರತಿ ಜಿಲ್ಲಾವೃತ್ತಪತ್ರಿಕೆಗಳನ್ನು ಪ್ರಚಾರಕ್ಕಾಗಿ ಉಪಯೋಗಿಸಿಕೊಳ್ಳುವ ವಿಷಯ ಇವೇಮುಖ್ಯ ವಿಷಯಗಳು.

ಕಾಂಗ್ರೆಸ್‌ಗೆ ಸಹಕಾರಬೇಡ- ಕಾಂಗ್ರೆಸ್‌ಗೆ ಯಾವವಿಧದಿಂದಲೂ ಸಹಕಾರನೀಡತಲಾಗದೆಂದೂ ಆ ಸಂಸ್ಥೆಯ ಸದಸ್ಯರಾಗಬಾರದೆಂದೂ ವರ್ತಕ ಸಂಘದಲ್ಲಿ ನಿರ್ಣಯವಾಯಿತು.

ಡಿಸ್ಟ್ರಿಕ್ಟು ಏಜ್ಯುಕೇಷನಲ್ ಕೌನ್ಸಿಲ್:- ಇದರ ಕೊನೆಯ ಸಭೆಯು 20-ನೇಯ ತಾ॥ ಸಾಯಂಕಾಲ ಕೂಡಿದ್ದಿತು. ವಾಲಿಗಳ ಮುಂಜಾರೀ ನಾಮಂಜೂರೀ ವಸ್ತುವೆ ಸಾಧಾರಣ ವಿಷಯಗಳ ನಿರ್ಣಯಾನಂತರ 4 ವರ್ಷಗಳಿಗಿಂತಲೂ ಹೆಚ್ಚಾಗಿದುಡಿದು ಜಿಲ್ಲೆಯ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸೇವೆಸಲ್ಲಿಸಿದ ಅಧ್ಯಕ್ಷ ಶ್ರೀ. ಸೀತಾರಾಮರೆಡ್ಡಿಯವರನ್ನು ಅಭಿನಂದಿಸುವ ಠರಾವಾಯಿತು. ಆ. ರಾತ್ರಿ ಸದಸ್ಯರಿಗೂ ಸ್ನೇಹಿತರಿಗೂ, ರೆಡ್ಡಿಯವರು ಭೂರಿಭೋಜನ ಮಾಡಿಸಿದರು.

ರಾಜಕೀಯ ಖೈದಿಗಳ ಬಿಡುಗಡೆ ದಿನ

21-ನೇ ತಾ॥ ಸಾಯಂಕಾಲ ಕಾಂಗ್ರೆಸ್ ಕಮಿಟೀ ಆಶ್ರಯದಲ್ಲಿ ಸೇರಿದ ಸಭೆಯಲ್ಲಿ ಪಂಜಾಬ್ ಬಂಗಾಲದಲ್ಲಿ ಇನ್ನೂಜೈಲಿನಲ್ಲಿರುವ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಬೇಕೆಂಬ ನಿರ್ಣಯವಾಯಿತು. ಶ್ರೀ. ಡಿ. ಯಸ್. ಹನುಮಂತರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು.

ಹಿಂದೀ ಭಾಷೆಯ ವಿರುದ್ಧ ಚಳವಳಿ ಹೂಡಿದ ಶ್ರೀ ಇ ವಿ. ರಾಮಸ್ವಾಮಿನಾಯಕರನ್ನು ಕೊಯಂಬತ್ತೂರು ಜೈಲಿನಿಂದ ಈ ವಾರ ಬಿಡುಗಡೆಮಾಡಿದರು.

ಹಿಂದೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸುಭಾಸ ಚಂದ್ರಬೋಸರು ಸ್ಥಾಪಿಸಿದ ಹೊಸ ಪಕ್ಷ (Forward Bloc)ದ ಅಖಿಲ ಭಾರತ ಸಭೆಯನ್ನು ಎ. ಐ. ಪಿ. ಪಿ. ಸಭೆಗೆ ಪೂರ್ವಬೊಂಬಾಯಿ ನಗರದಲ್ಲಿ ಕರೆಯಬೇಕೆಂಬುದಾಗಿ ಶ್ರೀ ನಾರಿಮನ್ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ನಿರ್ಣಯವಾಯಿತು.

ಅಂಬಾ ಭವನ ಕಾಫೀ ಕ್ಲಬ್

(ರಿಜಿಸ್ಟರ್ಡ್)

ಮತ್ತು

ಶಾಖೆ.— **ಊಟದ - ಹೋಟೆಲ್**

ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪದಲ್ಲಿಯೆ ರುಚ್ಯತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾಳಿ ಜೆಳಕು ಮತ್ತು ಇತರ ಅನುಕೂಲಗಳಿವೆ ಕೊಠಡಿಗಳು, ಭೋಜನ ಸಮಾರಂಭ ಟೀಪಾರ್ಟಿಗಳ ಏರ್ಪಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆಮಾಡುವೆವು.

ಪ್ರೊಪ್ರಯಟರ್ಸು—

ಶಿ. ಕೆನ್ನಯ್ಯ, ಬೆಚ್. ಕರಿಬಸಪ್ಪ.

ಎಂಪೈರ್ ಆಫ್ ಇಂಡಿಯಾ ಲೈಫ್ ಅಶ್ಯೂರೆನ್ಸು ಕಂಪನಿ ಲಿಮಿಟೆಡ್.

ಮುಖ್ಯ ಕಚೇರಿ ಮುಂಬೈ.
೪೩ನೆಯ ವಾರ್ಷಿಕ-ವರದಿ.

ಈ ವಿಮಾ ಸಂಸ್ಥೆಯ 42ನೇಯ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ಇದರಲ್ಲಿನ ಅಂಕೆಗಳನ್ನೂ, ಅಂಶಗಳನ್ನೂ ಇತರ ಸಂಸಗಳೊಂದಿಗೆ ಸೂಕ್ಷ್ಮವಾಗಿ ಅವಲೋಕಿಸಿ ನೋಡಿದರೆ ಈ ಕಂಪನಿಯು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಿರುವುದು ಸ್ಪಷ್ಟವಾಗುತ್ತದೆ.

ಹೊಸ ತೀಗಳು ಗಳಿಸಿದ್ದಾಗಿ 1,37,31,000 ರೂ. ಗಳಷ್ಟು ಹೊಸದಾಗಿ ವಿಮಾ ಕಾರ್ಯವಾಗಿ 8,667 ವಿಮಾ ಪತ್ರಗಳು ವಿಸ್ತೃ ಮಾಡಿವರಿಗೆ ಕೊಡಲ್ಪಟ್ಟ ಸ್ಥ. 14,29,36,000 ರೂ. ಬೆಲೆಯುಳ್ಳ 77500 ವಿಮಾಪತ್ರಗಳು ಕಂಪನಿಯ ಅಧೀನಸ್ಥವಿವೆ ಕಾಲ-ಪೂರ್ತಿಯಾಗುವ ಮುಂಚೆ ಮರಣ ಹೊಂದಿದ ವಿಮಾದಾರರ ವಾರಸುದಾರರಿಗೆ 10,83,000 ರೂ. ಮತ್ತು ಕಾಲಾವಧಿ ಪೂರ್ತಿಸಿದ ವಿಮಾದಾರರಿಗೆ, 25 82.000 ರೂ. ಈ ವರ್ಷ ಕೊಡಲಾಯಿತು. ತಮ್ಮ ಜೀವಿತ ಕಾಲದಲ್ಲಿ ಇಷ್ಟು ಜನರು ವಿಮಾ ಫಲವನ್ನು ಹೊಂದಿರುವುದು ತೃಪ್ತಿಕರವಾದ ಆರಂಭವಾಗಿವೆ ವಿಮಾ ಕಂತಿನ [Premium] ಉತ್ಪನ್ನವು ಶೇಕಡ 24 9 ರಷ್ಟು ಮಾತ್ರ ಖರ್ಚಿಗಾಗಿ ನಿಶ್ಚಯವಾಗಿದ ಅಂದರೆ ಹೊಸ ವರ್ಷಕ್ಕಿಂತ ಶೇಕಡ 1 ಭಾಗ ಕಡಮೆಯಾಯಿತು ವಿಮಾ ನಿಧಿಯೂ, ಅಪದ್ಧನಿಧಿಯೂ [Reservs fund] ಈಗ 4,96,74000 ರೂ. ಗಳಷ್ಟಿವೆ. ಕಂಪನಿಯ ಒಟ್ಟು ಆಸ್ತಿಗಳನ್ನು ಲೆಕ್ಕಿಸಿದರೆ 5,18,57.000 ರೂ. ಗಳಿಗೆ ಬರುವುದು. ಇಂಥಾ ಘನ ಬಲವಿರುವ ವಿಮಾ ಸಂಸ್ಥೆಯಲ್ಲಿ ಜೀವ ವಿಮೆಯನ್ನು ಮಾಡಿಸುವಂಗೆ ಯಾವ ತರಹದ ಧಕ್ಕೆಯೂ ಇಲ್ಲ. ವಾರಸುದಾರರಿಗೆ ಹಣವನ್ನು ಹಂಚುವದರಲ್ಲಾದರೂ, ವಿಳಂಬ ಮಾಡುವುದಿಲ್ಲ ದೇಶದ ವಿವಿಧ ಭಾಗಗಳಲ್ಲಿನ ಏಜಂಟರಲ್ಲನೇಕರು ಜನತೆಯಲ್ಲಿ ಗೌರವ ಸ್ಥಾನ ಪಡೆದವರಿರುತ್ತಾರೆ. ಇದೆಲ್ಲಾ ಗಮನಿಸಿದರೆ ಕಂಪನಿಯು ಮುಂದುವರಿಯುತ್ತಲಿದೆಯೆಂಬುದು ವ್ಯಕ್ತವಾಗುವುದು.

ಈ ಕಂಪನಿಯು ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಹಾರೈಸುತ್ತೇವೆ

ಸೋಲಾಪುರದಲ್ಲಿ ಹಿಂದೂ-ಮುಸಲ್ಮಾನ್ ದಂಗೆ.

ಹೈದರಾಬಾದಿನಲ್ಲಿ ಸತ್ಯಾಗ್ರಹ ಮಾಡಲು ಬಂದ ಆರ್ಯ ಸತ್ಯಾಗ್ರಹಿಗಳು ಜಯಘೋಷಮಾಡುತ್ತ ತಮ್ಮ ನಿವಾಸಸ್ಥಾನಕ್ಕೆ ಹೋಗುವಕಾಲದಲ್ಲಿ ಮಸೀದಿಯಮುಂದೆ ಜಯಘೋಷ ಮಾಡಿದರೆಂಬ ಕಾರಣದಿಂದ ಹಿಂದೂ ಮುನಲ್ಮಾನ್ ದಂಗೆಯು ಪ್ರಾರಂಭವಾಯಿತೆಂದು ತಿಳಿದುಬಂದಿದೆ. 21-22ನೇ ತಾರೀಖುಗಳಲ್ಲಿ ಇಬ್ಬರು ಸತ್ತಿರುವರು. ಅನೇಕರು ಘಾಯಗೊಂಡಿದ್ದಾರೆ.

24ನೇ ತಾರೀಖುವರೆವಿಗೆ 5 ಜನರು ಸತ್ತಿರುವರು. 46 ಜನರಿಗೆ ಘಾಯವಾಗಿದೆ ಪೂನಾದಿಂದ ಫಲು ಸೈನ್ಯಪಡೆಗಳು ಬಂದಿವೆ. ಅವರು ಬೀದಿಗಳಲ್ಲಿ ಅಡ್ಡಾಡುತ್ತಲಿರುವರು. ಸಾಯಂಕಾಲ 7 ರಿಂದ ಪ್ರಾತಃಕಾಲ 6ರ ವರೆವಿಗೆ ಯಾರೂ ತಿರುಗಾಡ ಬಾರದೆಂಬ ನಿರ್ಬಂಧವಿದೆ.

ಅಶುದ್ಧ ಖಾದಿ ತಯಾರಿಸುವವರಿಗೆ ಎಚ್ಚರಿಕೆ!

ಅಶುದ್ಧ ಖಾದಿಯನ್ನು (ಸರ್ಟಿಫೈ ಆಗದಿರುವುದು) ತಯಾರಿಸುವವರೂ ಮತ್ತು ಮಾರುವವರೂ ಯಾವ ಸಮಿತಿಯ ಜುನಾವಣೆಗೂ ನಿಲ್ಲಲ್ಲಾಗದು-ಹೀಗೆಂಬುದಾಗಿ ಕಾಂಗ್ರೆಸ್ಸಿನ ಮುಖ್ಯಕಾರ್ಯದರ್ಶಿಗಳಾದ ಶ್ರೀ ಜೆ. ಬಿ. ಕೃಪಾಲಿನಿಯವರು ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಕಛೇರಿಗಳಿಗೆ ಸೂಚನೆ ಕೊಟ್ಟಿದ್ದಾರೆ ಪಂಜಾಬು ಚರಖಾ ಸಂಘದ ಶಾಖೆಯಿಂದ ತಮಗೆ ಈ ವಿಚಾರದಲ್ಲಿ ದೂರು ಬಂದಿದೆಯೆಂದು ಅವರು ತಿಳಿಸಿದ್ದಾರೆ.

"ನಮ್ಮ ದೇಶಬಾಂಧವರ ತ್ಯಾಗ ಮತ್ತು ದೇಶಾಭಿಮಾನವಿಂದ ಕೂಡಿದ ಉತ್ಸಾಹದ ಮೇಲೆ ನಿಂತಿರತಕ್ಕಂತಹ ವ್ಯಾಪಾರದಲ್ಲಿ ಹೆಚ್ಚಿನ ಲಾಭ ಸಂಪಾದನೆ ಮಾಡಲಾಗದು. ನಾವು ಖಾದಿಗೆ ಹೆಚ್ಚಿನ ಬೆಲೆ ಕೊಡುವುದಾದರೆ ಅದರ ಫಲವಾಗಿ ಫಲವಾಗಿ ಬಡ ನಿರುದ್ಯೋಗಿಗಳಿಗೆ ಲಾಭವಾಗುತ್ತದೆ: ಖಾಸಗಿ ವ್ಯಾಪಾರಿಗಳಲ್ಲ' ಎಂದು ಶ್ರೀ ಕೃಪಾಲಿನಿಯವರು ತಿಳಿಸಿದ್ದಾರೆ.

ಆದವಾನಿ

ಶ್ರೀ ಶಿವಮೂರ್ತಿ ಶಾಸ್ತ್ರಿಗಳವರ ಉಪನ್ಯಾಸ

ಆದವಾನಿ ಕರ್ನಾಟಕ ಸಂಘದ ಆಶ್ರಯದಲ್ಲಿ 24-ನೇ ತಾ। ಸಾಯಂಕಾಲ ಬೆಂಗಳೂರು ಕರ್ನಾಟಕ ಏಕೀಕರಣ ಸಂಘದ ಕಾರ್ಯದರ್ಶಿಗಳೂ, ಸುಪ್ರಸಿದ್ಧ ಕೀರ್ತನಕಾರರೂ ಆದ ಶ್ರೀ ।। ಶಿವಮೂರ್ತಿ ಶಾಸ್ತ್ರಿಗಳು **ಕನ್ನಡನಾಡಿನ ಘನತೆ** ಮತ್ತು **ಕರ್ನಾಟಕ ಏಕೀಕರಣದ ಮಹತ್ವ** ವನ್ನು ಕುರಿತು. ತಮ್ಮ ಆವ್ಹಿತೀಯವಾಗ್ವೈಖರಿಯಿಂದ ಎರಡು ಘಂಟೆಗಳಕಾಲ ಉಪನ್ಯಾಸಿಸಿದರು. ಅಧ್ಯಕ್ಷರಾದ ಶ್ರೀ. ವೈ. ಗೋವಿಂದರಾಯರು ಸುಪ್ರಸಿದ್ಧ ಭಾಷಣಕಾರರ ಪಾದವನ್ನು ಸಮರ್ಥಿಸುತ್ತಾ ಆದವಾನಿಯು ಕನ್ನಡನಾಡಿಂತಲೂ ಆದರೆ ಕೆಲಕಾಲದಿಂದ ತೆಲುಗರ ಪ್ರಾಬಲ್ಯವಾಗಿದೆ ಎಂತಲೂ ತಿಳಿಸಿ ಶಾಸ್ತ್ರಿಗಳಂತಹ ಮಹನೀಯರು ಆಗಾಗ್ಗೆ ಈ ಭಾಗಗಳಿಗೆ ದಯಮಾಡಿಸಿ ಜಾಗೃತಿಯನ್ನುಂಟು ಮಾಡಬೇಕೆಂದು ಕೋರಿದರು.

ಶ್ರೀ. ರಾಚೋಟಯ್ಯನವರು ವಂದನಾರ್ಪಣ ಮಾಡಿದಮೇಲೆ ಸಭಾ ಕಾರ್ಯಕಲಾಪಗಳು ಮುಗಿದವು.

ಹರಿಜನಾಭಿವೃದ್ಧಿ

ಜಿಲ್ಲಾ ಹರಿಜನಸೇವಕ ಸಂಘದ ಕಾರ್ಯದರ್ಶಿಗಳು 25-ನೇ ತಾ। ಪ್ರಾತಃಕಾಲ ಜಿಲ್ಲಾ ಜೋರ್ಡ್ ವೈಸ್ ಪ್ರೆಸಿಡೆಂಟ್ ಶ್ರೀ. ಲೋಕಿರೆಡ್ಡಿ, ಆದವಾನಿ ಕಾಂಗ್ರೆಸ್ ಕಾರ್ಯಕರ್ತ ಶ್ರೀ. ಸೋಮಯಾಜುಲು ವಗೈರೆಯವರೊಡನೆ ಹರಿಜನ ಕೇರಿಗೆ ಹೋಗಿ ಅವರ ಕುಂದು ಕೊರತೆಗಳನ್ನು ವಿಚಾರಿಸಿಕೊಂಡು, ಅವರಿಗೆ ಹಿತೋಪದೇಶವನ್ನು ಕೊಟ್ಟರು. ಆದವಾನಿಯಲ್ಲಿ ಹರಿಜನರಿಗಾಗಿ ಹಾಸ್ಟೆಲ್ ಪ್ರಾರಂಭಿಸುವ ವಿಷಯವು ಚರ್ಚಿಸಲ್ಪಟ್ಟಿತು. ಪ್ರಾರಂಭವಾಗುವ ಸೂಚನೆಗಳಿವೆ.

ಮಾ॥ ಗಾಂಧಿಯವರ ಒಪ್ಪಿಗೆಯನ್ನು ಪಡೆದ ಔಂಧ ಸಂಸ್ಥಾನದ ರಾಜ್ಯಭಾರ ಕ್ರಮ

(ಔಂಧ ಸಂಸ್ಥಾನದ ರಾಜಾ ಸಾಹೇಬರು ತಮ್ಮ ಪ್ರಜೆಗಳಿಗೆ ಜವಾಬ್ದಾರೀ ಸರಕಾರವನ್ನು ಕೊಡುವ ಸದಿಚ್ಛೆಯಿಂದ ಮಹಾತ್ಮಾಗಾಂಧಿಯವರ ಬಳಿಹೋಗಿ ಅವರ ಸಲಹೆ ಸೂಚನೆಗಳಿಂದ ಒಂದು ರಾಜ್ಯಭಾರ ಕ್ರಮವನ್ನು ತಯಾರಿಸಿ ಅದನ್ನು ಜಾರಿಯಲ್ಲಿ ತಂದರು. ಇದು ಸಣ್ಣ ಸಂಸ್ಥಾನವಾದರೂ, ಇಂಥಾರಾಜ್ಯಭಾರ ಕ್ರಮವೂ, ಪ್ರಜಾಸೌಲಭ್ಯಗಳೂ ಹಿಂದೂ ಸ್ಥಾನದ ಬೇರೊಂದೆಡೆಯಲ್ಲಿ ಎಲ್ಲೂ ಇಲ್ಲ. ಸಂಸ್ಥಾನಾಧಿಪತಿಗಳು ಇದನ್ನು ಅನುಕರಿಸಲು ಯೋಗ್ಯವಿದೆ——ಸಂಪಾದಕ)

ಔಂಧ ಸ್ಟೇಟ್ ಗೆಜೆಟ್

(ಭಾನುವಾರ 1ನೆಯ ಜನವರಿ 1939)

ಔಂಧ ಸಂಸ್ಥಾನದ ರಾಜ್ಯಭಾರ ಕ್ರಮದ ಕಾಯ್ದೆ ೧-೧೧-೩೮ರ ದಿನ

ಅವುಂಧ ಸಂಸ್ಥಾನದ ಶ್ರೀಮಂತ ರಾಜಾಸಾಹೇಬರು ಕೃಪೆಯಿಟ್ಟು ತಮ್ಮ ಪ್ರಜಾವರ್ಗಕ್ಕೆ ಪೂರ್ಣ ಜವಾಬ್ದಾರೀ ಸರಕಾರವನ್ನು ದಯಪಾಲಿಸುವ ಉದ್ದೇಶನನ್ನು ಪ್ರಕಟಿಸಿದುದರಫಲವಾಗಿ

ಈ ಪ್ರಕಾರವಾಗಿ ಕಾಯ್ದೆಯನ್ನು ಮಾಡಲಾಗಿದೆ

1 (a) ಈ ಕಾಯ್ದೆಯು ಅವುಂಧ ಸಂಸ್ಥಾನದ ರಾಜ್ಯಭಾರಕ್ರಮದ 1939-ನೆಯ ವರ್ಷದ 1 ನೆಯ 'ಆಕ್ಟ್' ಎಂದು ಕರೆಯಲ್ಪಡುವುದು.

(b) ಶ್ರೀಮಂತ ರಾಜಾಸಾಹೇಬರವರಿಂದ ಸೂಚಿಸಲ್ಪಡುವ ದಿನದಿಂದ ಈ ಕಾಯ್ದೆಯು ಜಾರಿಯಲ್ಲಿ ಬರುವುದು.

2. ಅಹಿಂಸೆ ಮತ್ತು ಸಾರ್ವಜನಿಕ ನೀತಿಯು ತತ್ವಕ್ಕೊಳಪಟ್ಟು ಈ ರಾಜ್ಯಭಾರ ಕ್ರಮದಿಂದ ಕೆಳಗೆ ಕಂಡ ಸೌಲಭ್ಯಗಳು ಔಂಧ ಸಂಸ್ಥಾನದ ಪ್ರತಿಯೊಬ್ಬ ನಾಗರೀಕನಿಗೂ ದೊರೆಯುತ್ತವೆ. ವ್ಯಕ್ತಿ ಸ್ವಾತಂತ್ರ್ಯ, ಭಾಷಣ ಸ್ವಾತಂತ್ರ್ಯ, ಮುದ್ರಣ ಸ್ವಾತಂತ್ರ್ಯ, ಸಭೆಕೂಡುವ ಮತ್ತು ಚರ್ಚಿಸುವ ಸ್ವಾತಂತ್ರ್ಯ, ಪೂಜಾ ಸ್ವಾತಂತ್ರ್ಯ, ರಾಜಕೀಯ ಕುಂದು ಕೊರತೆಗಳಿಂದ ಅಂದರೆ ಜನನ ಲಿಂಗಭೇದ ಮತ ಜಾತಿ ಆಸ್ತಿಯಸ್ಥಾನ ಇವುಗಳ ನಿತ್ಯಾಸನನ್ನೆಣಿಸದ ಸ್ವಾತಂತ್ರ್ಯ, ಸುಲಭವಿಚಾರಣೆ, ಶೀಘ್ರವಾದ ಮತ್ತು ಎಲ್ಲರಿಗೂ ಸಮನಾದ ನ್ಯಾಯ ಪದ್ಧತಿಯನ್ನು ಒದಗಿಸುವುದು. ಸಾರ್ವತ್ರಿಕವಾದ ಒತ್ತಾಯದ ಪ್ರಾಥಮಿಕ ವಿದ್ಯಾಭ್ಯಾಸ ವಿದ್ಯೆಕಲಿತ ದೊಡ್ಡವರಿಗೆಲ್ಲಾ ಸಾರ್ವತ್ರಿಕ ಮತದಾನದ ಹಕ್ಕು, ಜೀವನ ನಿರ್ವಾಹಕ್ಕೆ ಸಾಕಾಗುವಷ್ಟು ಕೂಲಿಯನ್ನು ಸಂಪಾದಿಸಲು ಸಾರ್ವತ್ರಿಕವಾದ, ಸಮನಾದ ಹಕ್ಕು ಈ ಸೌಲಭ್ಯಗಳೆಲ್ಲಾ ಸಂಸ್ಥಾನದ ಅಧಿಕಾರದಿಂದ ನಿರ್ಣಯವಾಗುವ ಆಗಾಗಿನ ಕಾಯ್ದೆಗೇಗಸುಸರಿಸಿ ಜಾರಿಯಲ್ಲಿ ತರಲ್ಪಡುವುವು.

3. ಅವುಂಧ ಸಂಸ್ಥಾನದ ರಾಜ್ಯಭಾರಕ್ಕೆ ಸಂಬಂಧಿಸಿದ ಮತ್ತು ಶ್ರೀಮಂತ ರಾಜಸಾಹೇಬರವರಿಂದ ಇದುವರೆಗೆ ಚಲಾಯಿಸಲ್ಪಡುತ್ತಿದ್ದ ಹಕ್ಕುಗಳು, ಅಧಿಕಾರದ ಹದ್ದು ಇವೆಲ್ಲಾ ಈ ಕಾಯ್ದೆಗೊಳಪಟ್ಟು ಶಾಸನ ಸಭೆಯ ನಿರ್ಣಯದ ಪ್ರಕಾರ ತೀರ್ಮಾನಿಸಲ್ಪಡುತ್ತವೆ.

4. ಸರಕಾರದ ಅಜ್ಞೆಗೊಳಪಟ್ಟು ಎರಡು ಅಥವಾ ಹೆಚ್ಚು ಗ್ರಾಮಾದಿಗಳವರು ಒಂದೇ ಪಂಚಾಯ್ತಿಯನ್ನು ನಿರ್ಣಯಿಸಿಕೊಳ್ಳುವ ಸಂದರ್ಭವನ್ನುಬಿಟ್ಟು ಪ್ರತಿಯೊಂದು ಗ್ರಾಮದವರೂ, ಒಂದು ಪಂಚಾಯ್ತಿಯನ್ನು ಸ್ಥಾಪಿಸಿ 5 ಸಾಧಾರಣಸಭ್ಯರು, 2 ವಿಧಾಯಕ ಸಭ್ಯರನ್ನು 3 ವರ್ಷಕ್ಕೊಂದುಸಲ ಆರಿಸಿಕೊಳ್ಳಬೇಕು

5 (a) ಗ್ರಾಮದಲ್ಲಿನ ಬಹು ಸಂಖ್ಯಾಕ ಅಕ್ಷರಸ್ಥರ ಮತಗಳಿಂದ ಪಂಚಾಯ್ತಿ ಸಭ್ಯರನ್ನು ಚುನಾವಣೆ ಮಾಡಬೇಕು.

(b) ಪಂಚಾಯ್ತಿಬೋರ್ಡಿನ ಅಧ್ಯಕ್ಷರನ್ನು ಸರ್ಕಾರಾನುಮತದಿಂದ ಆರಿಸಬೇಕು. ಅಂಥಾ ಐಕಮತ್ಯವಿಲ್ಲದಿದ್ದರೆ, ಅಧ್ಯಕ್ಷನನ್ನು ಗ್ರಾಮದ ವೋಟಿರರೇ ಮೆಜಾರ್ಟಿಯಿಂದ ಆರಿಸಬೇಕು.

(c) ಸಂಸ್ಥಾನದ, ಸರಕಾರ. ತಾಲೂಕಾ ಕೌನ್ಸಿಲ್, ಅಧಿಕಾರಕ್ಕೊಳಪಟ್ಟು, ತನ್ನಸ್ವಾಧೀನದಲ್ಲಿರುವ ಹಣದ ಪ್ರಕಾರ ಪಂಚಾಯ್ತಿಯು ಈ ಕೆಳಗೆ ಕಂಡಂತೆ ಗ್ರಾಮಹಿತಕಾರ್ಯಗಳನ್ನು ಮಾಡಬೇಕು. ವಿದ್ಯಾಭ್ಯಾಸ, ನ್ಯಾಯ, ನೀರಿನ ಸೌಕರ್ಯ ಸ್ವಚ್ಛತೆ, ರಸ್ತೆ, ಚರಂಡಿ, ಒಳ್ಳು, ಸೇತುವೆಗಳನ್ನು ಏರ್ಪಡಿಸಿ, ಅವುಗಳನ್ನು ಸರಿಯಾದ ಸ್ಥಿತಿಯಲ್ಲಿಡುವುದು. ಸಾರ್ವಜನಿಕ ಕಟ್ಟಡಗಳು ಮತ್ತು ಹುಲ್ಲುಗಾವಲುಗಳನ್ನು ಕಾಪಾಡುವುದು. ಗ್ರಾಮಕ್ಕೆ ದೀಪಗಳ ವ್ಯವಸ್ಥೆ ಮಾಡುವುದು, ಸಂತೆಗಳ ವಿಚಾರಣೆ ಸರಕಾರದಿಂದ ಪ್ರಾಥಮಿಕ ವಿದ್ಯಾಭ್ಯಾಸ, ನೂಲುವುದರಿಂದ ನಿರುದ್ಯೋಗ ನಿವಾರಣೆಯಕ್ರಮ, ದನಗಳ 'ಠಾಸು' ಕಾಪಾಡಿ ಅಭಿವೃದ್ಧಿ ಪಡಿಸುವುದು ಇನ್ನಿತರಗ್ರಾಮದ ಆರೋಗ್ಯ, ಕ್ಷೇಮ, ವಿದ್ಯಾಭ್ಯಾಸ ಅನುಕೂಲ, ಸೌಕರ್ಯ ಮತ್ತು ಸಾಮಾಜಿಕ ಮತ್ತು ಆರ್ಥಿಕ ಹಿತಕ್ಕೆ ಸಂಬಂಧಿಸಿದ ವಿಷಯಗಳು.

6. ಈ ಕಾಯಿದೆಯು ಪ್ರಾರಂಭವಾದೊಡನೆ, ಅದಷ್ಟು ಶೀಘ್ರವಾಗಿ

ಸಂಸ್ಥಾನದಲ್ಲಿರುವ ಹಳ್ಳಿಗಳನ್ನೆಲ್ಲಾ ಐದು ಪಂಗಡಗಳಾಗಿ ವಿಭಾಗಿಸಿ ಕಾಯ್ದೆಯು ಅನುಕೂಲತೆಗೋಸುಗ ತಾಲೂಕಾ ಗಳೆಂದು ಕರೆಯಲಾಗುವುದು.

7. ತಾಲೂಕಾ ಸರಹದ್ದಿನಲ್ಲಿರುವ, ಹಳ್ಳಿ ಮತ್ತು ಪಟ್ಟಣಗಳ ಪಂಚಾಯಿತಿ ಅಧ್ಯಕ್ಷರು ತಾಲೂಕಾ ಕೌನ್ಸಿಲ್‌ನ ಸದಸ್ಯರಿದ್ದು ಜನರು ತಾಲೂಕಾ ಕೌನ್ಸಿಲ್ಲಿನ ಅಧ್ಯಕ್ಷರನ್ನು ಆರಿಸಬೇಕು.

8. ತಮ್ಮ ಹದ್ದಿನಲ್ಲಿರುವ ಪಂಚಾಯಿತಿಗಳಿಗೆ ತಮ್ಮ ತಮ್ಮ ಬೇಡಿಕೆಗಳಿಗನುಸಾರವಾಗಿ ಹಣವನ್ನು ಒದಗಿಸಲು ತಾಲೂಕಾ ಕೌನ್ಸಿಲುಗಳಿಗೆ ಸರ್ಕಾರದ ಕಡೆಯಿಂದ ಕೆಲ ಭಾಗದ ಹಣವು ಬರುವುದು. ತಾಲೂಕಾ ಕೌನ್ಸಿಲ್‌ಗಳು ಪಂಚಾಯಿತಿಗಳ ಆಯ ವ್ಯಯ ಪಟ್ಟಿಯನ್ನು ಪರಿಶೀಲಿಸಿ, ಪಂಚಾಯಿತಿಗಳಿಗಾಗಿ ಸರ್ಕಾರಕ್ಕೆ ಸ್ಪೆಶಲ್ ಗ್ರಾಂಟು ಕೊಡಿಸಲು ಸಿಫಾರ್ಸ್ ಮಾಡಬೇಕು. ಅಲ್ಲದೆ ಮೂರು ತಿಂಗಳಿಗೊಮ್ಮೆ ಸಲ ತಮ್ಮ ಹದ್ದಿನಲ್ಲಿರುವ ಪಂಚಾಯಿತಿಗಳ ಕಾರ್ಯದ ವರದಿಯನ್ನು ಸರ್ಕಾರಕ್ಕೆ ಕಳುಹಿಸಬೇಕು.

9 (a) ಶ್ರೀಮಂತ ರಾಜಾ ಸಾಹೇಬರಿಂದ ಕೊಡಿಸಿದ ಒಂದು ರಾಸನಸಭೆಯು ಸಂಸ್ಥಾನಕ್ಕೆ ಇರತಕ್ಕದ್ದು. ಅದಕ್ಕೆ ಲೆಜಿಸ್ಲೇಟಿವ್ ಅಸೆಂಬ್ಲಿ ಎಂದು ಹೆಸರು.

(b) ಲೆಜಿಸ್ಲೇಟಿವ್ ಅಸೆಂಬ್ಲಿ ಎಂಬ ರಾಸನಸಭೆಯು ಶ್ರೇಷ್ಠ ಅಧಿಕಾರವುಳ್ಳದ್ದಾಗಿ ಸಂಸ್ಥಾನದ ಸುವ್ಯವಸ್ಥಿತ ಆಡಳಿತಕ್ಕೆ ರಾಸನಗಳನ್ನೂ ನಿಬಂಧನೆಗಳನ್ನೂ ಮಾಡುವುದು. ಸಂಸ್ಥಾನದ ಪಣಕಾಸಿನ ಮೇಲೆ ಆದಕ್ಕೆ ಪೂರ್ಣ ಅಧಿಕಾರವಿರುವುದು

10. (a) 27-ನೇ (b) ಕಲಂಗೆ ಒಳಪಟ್ಟು ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ 15 ಸದಸ್ಯರಿರತಕ್ಕದ್ದು. ತಾಲೂಕಾ ಕೌನ್ಸಿಲ್‌ಗಳ ಅಧ್ಯಕ್ಷರು ಅಸೆಂಬ್ಲಿಯ ಅಧಿಕಾರೀ ಸದಸ್ಯರಿರುತ್ತಾರೆ

(b) ಪ್ರತಿಯೊಂದು ತಾಲೂಕಾ ಕೌನ್ಸಿಲ್ ತಮ್ಮ ಅಧ್ಯಕ್ಷರಲ್ಲದೆ ಮತ್ತಿಬ್ಬರನ್ನು ತಮ್ಮೊಳಗೇ ಅಸೆಂಬ್ಲಿಗೆ ಆರಿಸಬೇಕು. ಆವರಲ್ಲಿ ಒಬ್ಬರು ತಾಲೂಕಾ ಕೌನ್ಸಿಲ್ ಸದಸ್ಯರಲ್ಲದವರೂ ಇರಬಹುದು.

(c) ವಯಸ್ಸಿಗೆ ಬಂದ ವಿದ್ಯೆಯುಳ್ಳ ಯಾವ ಸಂಸ್ಥಾನದ ನಲ್ಲಿಯ ಮನುಷ್ಯನು ಅಸೆಂಬ್ಲಿ ಚುನಾವಣೆಗೆ ನಿಲ್ಲಲು ಬಾರದು.

11. ಲೆಜಿಸ್ಲೇಟಿವ್ ಅಸೆಂಬ್ಲಿಯು ಶಾಶ್ವತ ಸಂಸ್ಥೆಯಾಗಿದ್ದು ವಾಡಲಿಕ್ಕೆ ಬರುವಂತಿಲ್ಲ. ಕಲಂ 4 ಮತ್ತು 11ರ ಪ್ರಕಾರ 1/3 ಭಾಗದ ಸದಸ್ಯರು ಪ್ರತಿವರ್ಷವೂ ಹೊರಬರಬೇಕು.

12 ಲೆಜಿಸ್ಲೇಟಿವ್ ಅಸೆಂಬ್ಲಿಯು ಕನಿಷ್ಠಪಕ್ಷ ವರ್ಷಕ್ಕೆರಡು ಸಲವಾದರೂ ಕಲೆಯಬೇಕು. ಅದರ ಎರಡು ಅಧಿವೇಶನಗಳ ಮಧ್ಯೆ 7 ತಿಂಗಳಿಗಿಂತಲೂ ಹೆಚ್ಚು ಸಕಾಲವು ಗತಿಸಿರಬಾರದು

13 ಪ್ರಥಮ ಲೆಜಿಸ್ಲೇಟಿವ್ ಅಧಿವೇಶನದಲ್ಲಿಯೇ ಅಧ್ಯಕ್ಷ, ಉಪಾಧ್ಯಕ್ಷರನ್ನು ಆರಿಸಲ್ಪಡತಕ್ಕದ್ದು. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ತಾವು ಸದಸ್ಯರಾಗಿರುವವರೆಗೂ ತಮ್ಮ ಪದವಿಯನ್ನು ಅನುಭವಿಸುವರು. ಸರಕಾರದ ಅಧಿಕಾರಗಳನ್ನು ಸ್ವೀಕರಿಸಿದರೆ, ಅಸೆಂಬ್ಲಿಯ ಅವಿಶ್ವಾಸಕ್ಕೆ ಪಾತ್ರರಾದರೆ ಅಥವಾ ಇನ್ನಿತರ ಕಾರಣಗಳಿಂದ ರಾಜೀನಾಮೆ ಕೊಟ್ಟರೆ ಅವರ ಅಧಿಕಾರವು ಮುಗಿಯುತ್ತದೆ.

14 ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಬರುವ ಪ್ರಶ್ನೆಗಳೆಲ್ಲಾ ಹಾಜರಿದ್ದ ಸದಸ್ಯರ ಬಹುಸಂಖ್ಯಾಕಗಣನೆಯಿಂದ ನಿರ್ಣಯಿಸಲ್ಪಡುತ್ತವೆ. ಅಧ್ಯಕ್ಷರು, ಅಥವಾ ಅಧ್ಯಕ್ಷಸ್ಥಾನದಲ್ಲಿ ಆಸೀನರಿರುವವರು ಎರಡುಸಲವೂ ಸಮನಾಗಿ ವೋಟುಗಳು ಬಂದಾಗ ಮಾತ್ರ ತಮ್ಮ ವೋಟನ್ನು ಒಂದುಕಡೆ ಕೊಡಬೇಕು.

15 (a) ರಾಸನಗಳೆಲ್ಲಾ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಹಾಜರಿದ್ದ ಬಹುಸಂಖ್ಯಾಕ ಸದಸ್ಯರಿಂದ ತೀರ್ಮಾನಿಸಲ್ಪಡುತ್ತದೆ. **ಶ್ರೀಮಂತ ರಾಜಾಸಾಹೇಬರ ಒಪ್ಪಿಗೆಯನ್ನು ಪಡೆದಮೇಲೆಯೇ ಸದರೀ ಶಾಸನವು ಜಾರಿಯಲ್ಲಿ ತರಲ್ಪಡುವುದು.**

(b) ಶ್ರೀಮಂತ ರಾಜಾಸಾಹೇಬರು ತನಗೆ ತೋರಿದಂತೆ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಪಾಸಾದ ನಿರ್ಣಯಕ್ಕೆ ಒಪ್ಪಿಗೆ ಕೊಡದಿದ್ದರೆ, ಅದನ್ನು ಕಾರಣಗಳೊಂದಿಗೆ ಅಸೆಂಬ್ಲಿಗೆ ಪುನರ್ವಿಮರ್ಶೆಗಾಗಿ ಕಳುಹಿಸತಕ್ಕದ್ದು. ಹಾಗೆ ಅದು ಹಿಂದೆ ಬಂದಾಗ ಅದನ್ನು ಅಸೆಂಬ್ಲಿಯು ವಿಮರ್ಶಿಸಬೇಕು.

(c) ಅಸೆಂಬ್ಲಿಯು ರಾಜರ ಸಿಫಾರ್ಸುಗಳನ್ನಂಗೀಕರಿಸಿದರೆ ಕಾಯ್ದೆಯು ಕೂಡಲೇ ಜಾರಿಯಲ್ಲಿ ಬರುವುದು. ಅದು ನಿರಾಕರಿಸಿದರೆ ಪುನಃ ಅಸೆಂಬ್ಲಿಯು ಕೂಡುವನರೆಗೂ. ರಾಜಾಸಾಹೇಬರು ಅದನ್ನು ಮುಂದಕ್ಕೆ ಹಾಕಬಹುದು. ರಾಜಾಸಾಹೇಬರು ಮೂರುಸಲಕ್ಕಿಂತ ಹೆಚ್ಚಿಗೆಮುಂದೆ ಹಾಕಲು ಬರುವಂತಿಲ್ಲ. ಒಂದುವಾಸನವು ರಾಜರಿಂದ 3 ಸಲ ವಿಮರ್ಶೆಗೆ ಕಳುಹಿಸಲ್ಪಟ್ಟರೂ, ಅನ್ಯಥಾಸ್ವವಾಗದೆ ಮೆಜಾರ್ಟಿಯಿಂದ ಪಾಸಾದರೆ ಅದು ಕಾಯ್ದೆ ಸ್ವರೂಪನನ್ನು ಹೊಂದಿಜಾರಿಯಲ್ಲಿ ಬರುವುದು.

ಬಳ್ಳಾರಿ ನಗರ ಸುದ್ದಿ.

ಪೈಗಂಬರ್‌ರವರುಪದೇಶ:-

ಲಾಹೋರಿನ ಮೌಲಾನಾ ಅಮೀನ ರೆಂಬುವರು 21-ನೇಯ ತಾರೀಖಿನಂದು ಸಾಯಂಕಾಲ ಶ್ರೀ ಮ್ಯಂತುಂಜಯ ರಾಸ್ತಿಗಳ ಅಧ್ಯಕ್ಷತೆಯಲ್ಲಿ ಮಹಮ್ಮದ್ ಪೈಗಂಬರ ಉಪದೇಶ ಮತ್ತು ಇಸ್ಲಾಂಧರ್ಮದ ವಿಷಯವಾಗಿ ಉಪನ್ಯಾಸಿಸಿದರು

ರಾಯರ ಸೀಮೆ ಮಹಾ ಸಭೆ
ನಮ್ಮ ಕಷ್ಟವನ್ನು ಮೊದಲು ಪರಿಹರಿಸಿರಿ. ತುಂಗಭದ್ರಾ ಯೋಜನೆ ಮಹತ್ವ.

ಹೋದವಾರ ಶ್ರೀ. ಬಿ. ಯಸ್. ಹನುಮಂತರಾಯರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಕೆಲವು ಮಹನೀಯರು ಭಾಷಣ ಮಾಡಿದರು. ಅದರ ಸಾರಾಂಶವನ್ನು ಕೆಳಗೆ ಕೊಡಲಾಗಿದೆ.

ಶ್ರೀ. ಎ. ವೀರಾಸ್ವಾಮಿ--

ರಾಯದುರ್ಗ ಸೀಮೆಯು ಅರ್ಥಿಕವಾಗಿ ತನ್ನನ್ನು ಬಯಸುವವರು ಇಲ್ಲ. ತಮ್ಮ ತಮ್ಮ ಸ್ವಾರ್ಥಗಳನ್ನು ನೋಡಿಕೊಳ್ಳುತ್ತಾರೆ. ನಮಗೆ ಹೊಟ್ಟೆಗೆಹಿಟ್ಟಿಲ್ಲದಾಗ ಈ ಪ್ರಾಂತ್ಯದವರ ಗೊಂದಲ ವೇತಕ್ಕೆ? ನಮಗೆ ತುಂಗಭದ್ರಾ ಮುಂತಾದ ನೀರಾವರಿ ಯೋಜನೆಗಳು ಬಂದಮೇಲೆ ಆಂಧ್ರ-ಕರ್ನಾಟಕ ಪ್ರಾಂತ್ಯಗಳ ವಿಷಯ ನೋಡೋಣ. ನಮ್ಮಲ್ಲಿಯೇ ಕೆಲವರು ಸಾಗರ ಆಂಧ್ರರ ಬಲೆಗೆಬಿದ್ದು ಪ್ರೊದಟೂರಿನಲ್ಲಿ ನಾಟಕವನ್ನೇ ಪ್ರದರ್ಶಿಸಿ ರಾಯರಸೀಮೆ ಸಭೆಯೆಂದು ಕರೆದು ಜನರನ್ನು ಮುಜುಗರಕ್ಕೆ ಹಾಕಲು ಮಂತ್ರಿಗಳನ್ನು ಕರೆತಂದರು. ಆದವಾನಿ ಸಭೆಗೂ, ಅದಕ್ಕೂ ತಾರತಮ್ಯವೇ ಇಲ್ಲ. ನಮ್ಮ ಉದ್ದೇಶವೂ, ನಮ್ಮಗುರಿಯೂ, ಅರ್ಥಿಕಹಿತವಲ್ಲದೆ ಬೇರೆಯಿಲ್ಲ.

ಶ್ರೀ ಎಸ್. ಎಂ. ಶಾಸ್ತ್ರಿ

ಆಂಧ್ರ ಕರ್ನಾಟಕ ಸಮಸ್ಯೆಯು ಬಂದು ಕತೆಗಿರಲಿ, ನಾವು ಆಲೋಚಿಸಬೇಕಾದ ನಾಲ್ಕು ಅಂಶಗಳಿವೆ. ಪ್ರಾಂತ್ಯವು ಸೊದಲಾಗಬೇಕೋ. ಅರ್ಥಿಕ ಹಿತವು ಸೊದಲಾಗಬೇಕೋ? ಪ್ರಾಂತ್ಯಗಳನ್ನು ಬೇಕೆನ್ನುವವರು ನಮಗೆ ಹಿಂದಾವಾಗಲಾದರೂ ಹಿತವನ್ನು ಮಾಡಿದ್ದರೇ? ನಮಗೂ, ಉತ್ತರ ಸರ್ಕಾರದವರಿಗೂ, ನೀರಾವರಿ ಕಾರ್ಯಗಳಲ್ಲಿ ಎಷ್ಟು ಸಾಮ್ಯವಿದೆ? ನಮ್ಮ ೫ ಜಿಲ್ಲೆಗಳವರಿಗೂ, ಸರ್ಕಾರದ ೫ ಜಿಲ್ಲೆಗಳವರಿಗೂ, ಸರ್ಕಾರದ ಅಧಿಕಾರಗಳಲ್ಲಿ ಎಷ್ಟು ಸ್ಥಾನವಿದೆ? ಇವುಗಳನ್ನೆಲ್ಲಾ ಸೂಕ್ಷ್ಮವಾಗಿ ವಿಮರ್ಶಿಸಿದರೆ ಎಲ್ಲವೂ ಬಯಲಿಗೆ ಬೀಳುತ್ತದೆ. ಚಿತ್ತೂರಿನ ರಾಮಕೃಷ್ಣರೆಡ್ಡಿಯವರು ಮದರಾಸ್ ಬೀಜ್‌ನಲ್ಲಿ ಪ್ರಾಂತ್ಯದ ಬಗ್ಗೆ ಪ್ರಶ್ನೆಯು ಸಹಾನುಭೂತಿ ವ್ಯಕ್ತಿಪಡಿಸಿದುದು ಆಶ್ಚರ್ಯವಾಗಿದೆ. ಬೇಕಾದರೆ ಅವರು ರಾಜೀನಾಮೆ ಕೊಟ್ಟು ಆ ಪ್ರಶ್ನೆಯ ಮೇಲೆ ಪುನಃ ನಿಲ್ಲಲಿ ಕಾಂಗ್ರೆಸ್ಸನ್ನು ಬಲಪಡಿಸಬೇಕಾದುದು ನಮ್ಮ ಕರ್ತವ್ಯ. ಅದನ್ನು ಆಕ್ರಮಿಸಿಕೊಳ್ಳಬೇಕು. ಬಳ್ಳಾರಿ ವರ್ತಕ ನಿರ್ಣಯಕ್ಕೆ ಮೃಥೆಪಡಬೇಕಾಗಿದೆ. ನಮ್ಮ ಉದ್ದೇಶಸಾಧನೆಗೆ ನಾವು ನಿರ್ಭಯರಾಗಿ ನಾಗಬೇಕು

ಶ್ರೀ ವಿ. ಎಸ್. ನರಸಿಂಹಾಚಾರ್,

ರಾಯರಸೀಮೆ ಚಳವಳಿಯನ್ನು ಪತ್ರಿಕೆಗಳಲ್ಲಿ ಓದಿದಾಗ ನನಗೆ ಬಹಳ ಸಂತೋಷವಾಯಿತು ನಮಗೆ ಆಹಾರವಿಲ್ಲದಾಗ ಬೇರೆ ವೇದಾಂತ ವೇತಕ್ಕೆ? ನಮ್ಮಲ್ಲಿರುವ ಲೋಪಗಳನ್ನು ನಿವಾರಿಸಿಕೊಳ್ಳಬೇಕು. ಬೆಲ್ಲೋಣ ಭೀಮರಾಯರು ಮದ್ರಾಸ್ ಅಜ್ಜೊಕೇಟ್ಸ್ ಸಂಘದಲ್ಲಿ "ನಾನು ರಾಯರಸೀಮೆ" ಯನವೆಂದು ಹೇಳಿದಾಗ ಎಲ್ಲರೂ ನಕ್ಕರು. ಇಷ್ಟು ಕನಿಷ್ಟ ರೀತಿಯಲ್ಲಿ ನಮ್ಮನ್ನು ಕಾಣುತ್ತಾರೆ. ನಮ್ಮ ಆತ್ಮಗೌರವನನ್ನು ಳಿಸಿಕೊಳ್ಳಬೇಕಾದರೆ ನಮ್ಮ ಅರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕು. ತನ್ಮ ಸ್ವಲಾಭಗಳನ್ನು ಮಾಡಿಕೊಳ್ಳಲು ನಮ್ಮನ್ನು ಉಪಯೋಗಿಸುತ್ತಾರೆ. ಮುಂದಿನ ಚುನಾವಣೆಗಳು ಬಂದಾಗ ನಮ್ಮ ಅಭಿಪ್ರಾಯ ನಿರ್ಣಯವನ್ನೇ ಅರಿಸಬೇಕು.

ಶ್ರೀ ತಂಗೀ ಮಲ್ಲೇಶಪ್ಪ.

ನಮ್ಮ ೫ ಜಿಲ್ಲೆಗಳಿಂದ ಒಬ್ಬ ರಾವರೂ ಮಂತ್ರಿಮಂಡಲದಲ್ಲಿಲ್ಲದ ಕಾರಣ ನಮ್ಮ ಬೇಡಿಕೆಗಳು ಈ ರೀತಿಯಲ್ಲಿ ತುಚ್ಛೀಕರಿಸಲ್ಪಡುತ್ತಿವೆ. ರಾಜಾಜಿಯವರು ಅತ್ಯಂತ ಮೇಧಾವಿಗಳು ಬಹು ಸುಲಭರೀತಿಯಲ್ಲಿ ಗೆಲ್ಲುತ್ತಾರೆ. ತುಂಗಭದ್ರಾ ಯೋಜನೆ ಪರಿಷ್ಕಾರವಾಗದ ಹೊರತು ಪ್ರಾಂತ್ಯದಲ್ಲಿ ಸೇರುವುದು ಅಸಾಧ್ಯ. ಪ್ರತಿತಾಲೂಕಿನಲ್ಲಿಯೂ ಕಮಿಟಿಗಳನ್ನು ನಿರ್ಮಿಸಿ ಬಲವಾದ ಚಳವಳಿ ಹೂಡಬೇಕು.

ಡಾ. ನಾಗನಗೌಡ.

ತುಂಗಭದ್ರಾ ಯೋಜನೆಯಿಂದ ನಮ್ಮ ಭೂಮಿಗಳು ಕೆಡುವವೆಂದು ಕೆಲವರು ಯೋಚಿಸಿರುತ್ತಾರೆ. ಇದು ಶುದ್ಧ ತಪ್ಪುದಾರಿಗೆಳೆಯುವ ವಾದ ಪರೀಕ್ಷಕರೆಲ್ಲಾ ಭೂಗುಣವು ಶ್ರೇಷ್ಠವೆಂದು ನಾರಿರುತ್ತಾರೆ. ನಮ್ಮ ಜಿಲ್ಲೆಯಲ್ಲಿ ಸದ್ಯಕ್ಕೆ 15 ಸಾವಿರ ಯೆಕರೆ ತರಿಯು ಮಾತ್ರವಿದೆ. ಉತ್ತರ ಸರ್ಕಾರಗಳಲ್ಲಿ ಅನೇಕ ಲಕ್ಷ ಎಕರೆಗಳ ತರಿ ಉಂಟು, ನಮ್ಮ ಪರಿಸ್ಥಿತಿಯು ಸುಧಾರಿಸಬೇಕಾದರೆ, ಕ್ಷಾಮವು ನೀಗಬೇಕಾದರೆ, ತುಂಗಭದ್ರಾ ಯೋಜನೆ ಇಲ್ಲದೆ ಗತ್ಯಂತರವಿಲ್ಲ.

ಶ್ರೀ ಬಿ. ಯಸ್. ಹನುಮಂತರಾವು.

ಆದವಾನಿಯಲ್ಲಿ ಸಭೆಯಾದ ನಂತರ ನಾವು ಬಹಳ ಕೆಲಸಮಾಡಿರುತ್ತೇವೆ. ಚಿತ್ತೂರು, ಅನಂತಪುರ ಗಳಲ್ಲಿ ಕಾರ್ಯಕಾರಿಣೀ ಸಭೆಯು ಕೂಡಿ ತೀರ್ಮಾನಗಳನ್ನು ಮಾಡಿದೆ. ಸೆಕ್ರೆಟರೀ ಆಫ್ ಸ್ಟೇಟ್‌ರವರೆಗೂ ನಮ್ಮ ಬೇಡಿಕೆಗಳು ಹೋಗಿವೆ. ಪ್ರಚಾರ ಕಾರ್ಯವು ಚನ್ನಾಗಿನಾಗಿದೆ. ಕರ್ನೂಲಿನಲ್ಲಿ ರಾಯರಸೀಮೆಯು ೨ ನೆಯ ಅಧಿವೇಶನವು ಜುಲೈ ತಿಂಗಳಲ್ಲಿ ಸೇರಲಿದೆ. ಎಲ್ಲರೂ ಈ ನಮ್ಮ ಅರ್ಥಿಕ ಉದ್ಯಮಕ್ಕೆ ಸಹಾಯಮಾಡಬೇಕು. ಇದು ಕಾಂಗ್ರೆಸ್ ವಿರುದ್ಧ ಚಳವಳಿಯಲ್ಲ. ಸರ್ಕಾರದ ಆಂಧ್ರರೇ ವರ್ಕಿಂಗ್ ಕಮಿಟೀ ತರಾವಿನ ವಿರುದ್ಧ ಪ್ರಚಾರ ನಡೆಸುತ್ತಿರುವರು

ವಿದೇಶ

ಜೀನಾದೇಶದ ಗಂಡಾಂತರ ದಿನಗಳು ಕಳೆದವೆಂದೂ, ಜೀನನಗೆ ಬ್ಲುವುದು ಖಂಡಿತವೆಂಕಲೂ, ಸೇನಾ ಧಿವತಿಗಳಾದ ಜೆನ್ಸಾಚೆನ್‌ರು ಹೇಳಿರುತ್ತಾರೆ.

ಬ್ರಿಟಿಶ ಸರಕಾರವು ವಚನಭಂಗವನ್ನಾಡಿ ಯಹೂದ್ಯರಿಗೆ ವ್ಯಾಪ್ತಿ ಸ್ಥಾಯಿಸವಲ್ಲಿ ಅನ್ಯಾಯಮಾಡಿರುವದೆಂದು ಪಾರ್ಲಿಮೆಂಟ್‌ದಲ್ಲಿ ಟೀಕೆಯಾಯಿತು.

ನಂಜೂಕೋದಲ್ಲಿ ಜಪಾನ ಅಧಿಕಾರಿಯು ಕೊಲೆಯಾಗಿ ಜಪಾನ ರಷ್ಯಾ ನೈನೀಕರಲ್ಲಿ ಹೊಡೆದಾಟಗಳಾಗಿ ಇಬ್ಬರು ಸುರಣಿಸಿದರೆಂದು ತಿಳಿದು ಬಂದಿದೆ.

ಭಾರತ ಮಂತ್ರಿಗಳಾದ ಜೇಟ್ಲಿಂಷ ನಾಹೇಬರು ಪಾಂತೀಯ ಅಧಿಕಾರವನ್ನು ಒಪ್ಪಿಸಿ 8 ಕಾಂಗ್ರೆಸ್ ಸರಕಾರಗಳು ಬ್ರಿಟಿಶರ ಸಜಂಟರೊಂದಿಗೆ ಸಹಕರಿಸಿ ರಾಜ್ಯಭಾರಮಾಡುತ್ತಿರುವದನ್ನು ಹೇಳಿದರು.

ಯೂರೋಪಿನ ನಾಗರೀಕತೆಯು ಸಂಕಟಕ್ಕೀಡಾಗಿದೆಯೆಂಬಂತವನ್ನು ಕುರಿತು ಕಾನಡಾದೇಶಕ್ಕೆ ತೆರಳಿದ ಬ್ರಿಟಿಶ ಚಕ್ರವರ್ತಿಗಳು ತನ್ನ ಭಾಷಣವೊಂದರಲ್ಲಿ ತಿಳಿಸಿದರು.

ಇಟಲೀದೇಶವು ತನ್ನ ಆದಾಯಕ್ಕಿಂತ ಹೆಚ್ಚಾಗಿ ಶಸ್ತ್ರಾಸ್ತ್ರಗಳಿಗಾಗಿ ಖರ್ಚುಮಾಡಿದೆ. ಇವರಿಂದ ಅದರ ಆಯವ್ಯಯಪಟ್ಟಿಯು ಬುಡಮೇಲಾಗಿದೆ.

ಇಂಡಿಯಾ ಸರಕಾರವು ಬೇಸಿಗೆಯಲ್ಲಿ ಸಿಮ್ಲಾಕ್ಕೆ ಹೋಗುವ ವಧ್ವತಿಯನ್ನು ಈ ವರ್ಷದಿಂದ ನಿಲ್ಲಿಸಿರುತ್ತಾರೆ. ಇದರಿಂದ ಲಕ್ಷಾಂತರ ರೂ ವಾಯಿಗಳ ಉಳಿತಾಯವಾಗುತ್ತದೆ.

ಬೊಂಬಾಯಿ ಮ್ಯು ಕಾರ್ಪರೆಷನ್‌ದವರು ಸ್ಥಿರಾಸ್ತಿಯ ಮೇಲೆ ಕರ ಹಾಕಿರುವರು. ಅನುಮಾನದಿಂದ ಕೊಡದಿದ್ದ ಎರಡು ಬ್ಯಾಂಕುಗಳಮೇಲೂ ಒಬ್ಬವ್ಯಕ್ತಿಯ ಮೇಲೂ, ಚರ್ಯೆ ತೆಗೆದುಕೊಂಡಿರುವರು.

ಸೋಲಾಪುರದಲ್ಲಿದ್ದ ಆರ್ಯ ಸತ್ಯಾಗ್ರಹ ಸಮಿತಿಯವರು ಅಲ್ಲಿಜಾತೀಯ ದಂಗೆಯು ಹುಟ್ಟಿರುವುದರಿಂದ ತಮ್ಮ ಕೇಂದ್ರವನ್ನು 'ಪುಸದ' ಎಂಬ ಸ್ಥಳಕ್ಕೆ ನಾಗಿರುವರು.

ಇಂದೂರ ರಾಜಕೀಯ ಸುಧಾರಣೆ ಸಮಿತಿಯವರು ಸರ್ವಾನುನತದಿಂದ ವರದಿಯನ್ನು ಅರ್ಪಿಸಿ ಸುಧಾರಣೆಗಳನ್ನು ಸೂಚಿಸಿರುತ್ತಾರೆ.

ಸ್ವೀಕಾರ ಮತ್ತು ವಿಮರ್ಶೆ

1. ಶರಣ ಸಾಹಿತ್ಯ (ಬಸವ ಜಯಂತಿ - ವಿಶೇಷ ಸಂಚಿಕೆ) ಮಾಸಿಕ.

2 ಸ್ವತಂತ್ರ ಕರ್ನಾಟಕ (ಕನ್ನಡ ವಾರ ಪತ್ರಿಕೆ.) ವಾರ್ಷಿಕ ಚಂದಾ 30 0.

ಸಂಪಾದಕರು:- ಕೀರ್ತನಕೇಸರಿ - ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು, ಕನ್ನಡನಾಡಿಗೆ ಚಿರಪರಿಚಿತರಾದ ಶ್ರೀ ಶಿವಮೂರ್ತಿ ಶಾಸ್ತ್ರಿಗಳು ಬೆಂಗಳೂರು ನಗರದಿಂದ ಶರಣ ಸಾಹಿತ್ಯ ವೆಂಬ ಮಾಸಿಕವನ್ನೂ, ಸ್ವತಂತ್ರ - ಕರ್ನಾಟಕ ವೆಂಬ ವಾರ ಪತ್ರಿಕೆಯನ್ನೂ ನಡೆಸುವ ಸಾಹಸದ ಉದ್ಯಮವನ್ನು ಕೈಗೊಂಡಿರುವರು. ಶರಣ ಸಾಹಿತ್ಯದಲ್ಲಿ ಶಿವಶರಣರ ಮತ್ತು ಕನ್ನಡನಾಡಿನ ಇತರ ಭಕ್ತಿ ರೋಮಾಣಿಗಳ ಚರಿತ್ರೆ, ಕವಿತೆ, ಉಪದೇಶ ಸಾರವು ಮಹತ್ವವಡಿಗಿದೆ. 'ಸ್ವತಂತ್ರ ಕರ್ನಾಟಕ'ವು ತಿಂಗಳರಕಾರಗಳಲ್ಲಿ ಹರಿದು ಹಂಚಿಹೋದ ಕನ್ನಡನಾಡನ್ನು ಒಂದುಗೂಡಿಸುವ ಉದಾತ್ತ ಧ್ಯೇಯವನ್ನಳ್ಳುದಾಗಿದೆ. ಪ್ರತಿವಾರವೂ 8 ಪುಟವಷ್ಟು, ಸಾಹಿತ್ಯ ಮತ್ತು ಏಕೀಕರಣದ ಸಂಚಿಕೆಯೊಂದು ಪತ್ರಿಕೆಯ ಜೊತೆಯಲ್ಲಿರುವುದು ಕನ್ನಡಿಗರೆಲ್ಲರೂ ಸಾಕಾರವಷ್ಟು ಪ್ರೋತ್ಸಾಹವನ್ನಿತ್ತು ಶ್ರೀ ಶಾಸ್ತ್ರಿಗಳ ಉದ್ಯಮವನ್ನು ಯಶಶ್ವಿಯಾಗಿ ಮಾಡುವರೆಂದು ಆಶಿಸುತ್ತೇವೆ.

ಸರ್ಕಲ್ ಕಾಂಗ್ರೆಸ್ ಕಮಿಟೀ ಸಭೆ

ಮುಂದಿನರಿಸ ಸರ್ಕಲ್ ಕಾಂಗ್ರೆಸ್ ಕಮಿಟೀ ಸಭೆಯು 25 ನೇ ತಾ. ಸಾಯಂಕಾಲ ಆಗಡಿಯವರ ಛತ್ರದಲ್ಲಿ ಶ್ರೀ ಯುನ್. ನಿ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಕೂಡಿತು. ಕಾರ್ಯದರ್ಶಿಗಳಾದ ವೆಂಕೋಬರಾಯರು ಶುದ್ಧತೆಯ ವಿಚಾರವನ್ನೆತ್ತಿ ಕಾಂಗ್ರೆಸ್ ಕಲ್ಮಷವನ್ನು ಹೇಗೆ ನಿವಾರಿಸಬೇಕೆಂಬುದರಬಗ್ಗೆ ಡಿ. ಪಿ. ಸಿ. ಯವರ ಸಲಹೆ ಕೇಳಬೇಕೆಂದರು. ನಂತರ ಡಾಕ್ಟರ್ ಲಕ್ಷ್ಮೀದೇವಿಯವರು ಕಾಂಗ್ರೆಸ್ ಪ್ರಾಥಮಿಕ ಸದಸ್ಯರೂಕೂಡ ಆಗಿಲ್ಲನೆಂಬುದನ್ನು ಸಭಾಗಮನಕ್ಕೆ ತಂದರು. ಶ್ರೀ ಶಿವರುದ್ರಪ್ಪನವರು, ಕಾಂಗ್ರೆಸ್ ಶಾಸನ ಸಭ್ಯರು ಪ್ರಾಥಮಿಕ ಸಭ್ಯರಾಗುವ ಅವಶ್ಯಕತೆ ಹೇಳಿದರು. ಆರ್. ವಿ. ಕೃಷ್ಣರವರು, ಈ ವಿಷಯವನ್ನು ಹೆಚ್ಚಿಗೆ ಮುಂದುವರಿಸದೆ, ಅವರಮೇಲೆ ಚರ್ಯೆ ತೆಗೆದುಕೊಳ್ಳದೆ ಇರುವುದು ಒಳ್ಳೆಯದೆಂದರು. ಅವರ ಹೇಳಿಕೆಯನ್ನು ಅಧ್ಯಕ್ಷರು ಒಂದು ವಾರದಲ್ಲಿ ತರಿಸಬೇಕೆಂಬ ತೀರ್ಮಾನವಾಯಿತು.

ಕರಪತ್ರಗಳನ್ನು ಕನ್ನಡದಲ್ಲೇ ಪ್ರಕಟಿಸಬೇಕೆಂಬ ಶ್ರೀ ಶಿವರುದ್ರಪ್ಪನವರ ನಿರ್ಣಯವು ಪಾಸಾಯಿತು. ಕನ್ನಡ-ತೆಲುಗುಗಳಲ್ಲಿ ಪ್ರಕಟಿಸುವುದರಿಂದ ಕಾರ್ಯಕಲಾಪಗಳು ವಿಶೇಷ ಜನರಿಗೆ ತಿಳಿಯುವವೆಂದೂ, 'ಪ್ರೊಸೀಡಿಂಗ್ಸ್' ಕನ್ನಡ ಭಾಷೆಯಲ್ಲಿಟ್ಟು ಕೊಳ್ಳಬಹುದೆಂದೂ, ಅಧ್ಯಕ್ಷರು ಸೂಚಿಸಿದರು. 8ನೆಯ ವಾರ್ಡಿನಲ್ಲಿ ಕನ್ನಡ ಶಾಲೆಯನ್ನು ತೆರೆಯಬೇಕೆಂಬುವ ಬೇಡಿಕೆಯನ್ನು ಮ್ಯು. ಕಮೀಶನರಿಗೆ ತಿಳಿಸಬೇಕೆಂದು ನಿರ್ಣಯವಾಯಿತು.

ರಾಜಕೋಟಿಯಲ್ಲಿ,

ಮಹಾತ್ಮ ಗಾಂಧಿಯವರ ಉಪನ್ಯಾಸ.

ರಾಜಕೋಟೆ ಮೇ ೨೩

"ನಾನು ಮಾಡಿದ ತಪ್ಪನ್ನು ಒಪ್ಪಿಕೊಂಡು ಪಶ್ಚಾತ್ತಾಪ ಪಡುವುದರ ಮೂಲಕ ರಾಜಕೋಟೆಯ ಇತಿಹಾಸದಲ್ಲಿ ಹೊಸ ಹಾಳೆಯೊಂದನ್ನು ತೆರೆದಿಡುವುದಾಗಿ ನಾನು ನಂಬುತ್ತೇನೆ. ಇದಕ್ಕೆ ನಿಮ್ಮೆಲ್ಲರ ಸಹಾಯವು ನನಗೆ ಬೇಕಾಗಿದೆ. ಒಬ್ಬಂಟಿಗನಾಗಿ ನಾನು ಹೋಗಲಾರೆ ರಾಜ್ಯಾಡಳಿತ ನಡೆಸುವವರೂ (ನವೇಂಪ್ರರು) ಪ್ರಜೆಗಳೂ ಒಟ್ಟಿಗೆ ಕಲೆತು ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸಿದರೆ ಈಗತೋರಿ ಬಂದಿರುವ ಅಪಜಯವು ಜಯವಾಗಿ ಪರಿಣಮಿಸುವುದು."

"ನಾನು ನನ್ನ ವಿಚಾರವನ್ನು ತಿಳಿಸಲು ಬಂದಿರುವೆನು. ಪರಿಷತ್ತಿನ ಮುಂದೆಮಾತ್ರ ನಾನು ನನ್ನ ವಿಚಾರವನ್ನು ತಿಳಿಸಲಿಚ್ಛಿಸುವುದಿಲ್ಲ

ರಾಜಕೋಟೆಯ ಸಮಸ್ಯಾಪ್ರಜೆಗಳಿಗೂ ಅವರು ಯಾವ ಪಕ್ಷಕ್ಕೇ ಸೇರಿರಲಿ, ಅವರ ಮುಂದೆ ವರದಿನೂಡಲು ಬಂದಿರುವೆನು ನಾನು ಉಪವಾಸ ಮಾಡುತ್ತಿದ್ದಾಗ ವೈಸರಾಯರು ತಲೆಹಾಕಬೇಕೆಂದು ಇಚ್ಛಿಸುವುದು. ಮತ್ತು ದರಬಾರ್ ವೀರವಲ್ಲವರೊಡನೆ ಅನುಸರಿಸಿದ ನೀತಿಯೂ ತಪ್ಪೆಂದು ನುನಗಂಡಿದ್ದೇನೆ ನೀವು ನನ್ನನ್ನು ಅನುಸರಿಸುವುದಾದರೆ ಅಹಿಂಸೆಯ ಮೂಲಕ ನಿಮ್ಮ ಪರಮೈರಿಯ ಹೃದಯವನ್ನೂ ಪ್ರಭೇದಿಸುವ ನಂಬಿಕೆಯಿರಬೇಕು. ನೀವು ನಿಮ್ಮ ವಿಚಾರದಲ್ಲಿ ನಂಬಿಕೆಯುಳ್ಳವರಾಗಿಯೂ ಇರುವುದಾದರೆ ದರಬಾರ ವೀರವಲ್ಲರವರ ವಿಚಾರದಲ್ಲಿ ತಪ್ಪನ್ನೆಣಿಸಬೇಡಿ. ನೀವು ಅವರಲ್ಲಿ ತಪ್ಪನ್ನೆಣಿಸುವದಾದರೆ ನಿಮ್ಮ ಅಹಿಂಸೆಯು ಸರಿಯಾದುದಲ್ಲ. ನೀವು ನನ್ನನ್ನು ನಂಬಿ. ಕಳೆದ ೫೦ ವರ್ಷಗಳಿಂದ ನನಗೆ ಅಹಿಂಸೆಯ ಅನುಭವವಿದೆ. ನಾನು ಅಹಿಂಸೆಯ ಅನುನಾಯಿ."

"ಐಕಮತ್ಯವೇ ಪ್ರಗತಿಯ ಬೇರು ಮತ್ತು ಬಲ. ಪರಿಷತ್ತು ಎಲ್ಲ ಜನರ ಗುಂಪುಗಳನ್ನು ಪ್ರವೇಶಿಸಿ, ಅವರನ್ನು ತನ್ನ ಕಡೆಗೆ ಸೆಳೆದುಕೊಳ್ಳಬೇಕು. ಕೆಲವರು ತಮ್ಮ ದೌರ್ಬಲ್ಯದ ದೆಸೆಯಿಂದ ಮತ್ತು ಇನ್ನೂ ಹಲವರು ಭಿನ್ನಾಭಿಪ್ರಾಯದ ದೆಸೆಯಿಂದ ಪರಿಷತ್ತಿನೊಂದಿಗೆ ಕೆಲಸಮಾಡದೆ. ಇರಬಹುದು. ಆಗ ಕೂಡ ಅವರು ನಮ್ಮೊಡನಿದ್ದಂತೆಯೇ"

ದರಬಾರಿನವರು ಇನ್ನೊಂದು ಪ್ರಕಟನೆ ಹೊರಡಿಸಿ, ವೃತ್ತಪತ್ರಿಕೆಗಳಮೇಲಿನ ಬಹಿಷ್ಕಾರವನ್ನು ಸುಂದುವರಿಸಿದುದು ಶುದ್ಧ ಅನೆಬದ್ಧವಾಗಿದೆಯೆಂದು ಅವರು ಹೇಳಿದುದು ನ್ಯಾಯ ವಿರುದ್ಧವಾದುದೆಂದೂ, ಜವರಿಗೆ ಬಹಳ ಯಾತನೆಯನ್ನುಂಟುಮಾಡುವುದಾಗಿದೆಯೆಂದೂ ನುಡಿದರು ಕ್ರೂರವಾದ ಭಾಷೆಗಳಿಂದ ಕೂಡಿದ ಪತ್ರಿಕೆಗಳನ್ನೂ ಓದದಂತೆ ಜನರಿಗೆ ಮಹಾತ್ಮರು ಬುದ್ಧಿವಾದ ಹೇಳಿ, ಅಂತಹ ಭಾಷೆಯನ್ನು ಬಳಸುವುದರಿಂದ ಅವು ಸ್ವಾತಂತ್ರ್ಯದ ಉದ್ದಿಶ್ಯಕ್ಕೆ ಧಕ್ಕೆತರುವುದಾದರೆ ಅವುಗಳಿಗೆ ಬಹಿಷ್ಕಾರ ಹಾಕುವಂತೆ ಸೂಚಿಸುವುದು. ಪತ್ರಿಕೆಗಳವರು ಸಹ ಮನಃಕಷಾಯವನ್ನು ಹೆಚ್ಚಿಸತಕ್ಕಂತಹ ಲೇಖನಗಳನ್ನು ಒರೆಯುವಾರದೆಂದು ಸೂಚಿಸಿದರು ದರಬಾರಿನವರು ಸಂಸ್ಥಾನದ ಪ್ರಜೆಗಳ ಸಮುದ್ದಿಶ್ಯದಲ್ಲಿ ನಂಬಿಕೆಯಿಡಬೇಕೆಂದರು.

"ಕಳೆದ ಡಿಸೆಂಬರ್‌ನಲ್ಲಿ ಹೊರಡಿಸಲ್ಪಟ್ಟ ಪ್ರಕಟನೆಯನ್ನೇ ಆಧಾರವಾಗಿಟ್ಟುಕೊಂಡು ಸಮಿತಿಯು ಕೆಲಸಮಾಡುವುದೆಂದು ನಾನು ನಿರೀಕ್ಷಿಸಿದ್ದೇನೆ. ನಾನಾತೂ ನನ್ನ ಸರ್ವ ಅಸ್ತ್ರಗಳನ್ನು ಕೆಳಗಿಟ್ಟುಬಿಟ್ಟಿದ್ದೇನೆ ಆದ್ದರಿಂದ ಪರಪತ್ ಕೆಲಸಗಾರರು ಸುಧಾರಣೆ ಸಮಿತಿಯೊಂದಿಗೆ ಪೂರ್ಣವಾಗಿ ಸಹಕರಿಸಬೇಕೆಂದೂ ಮತ್ತು ಅದರ ಮುಂದೆ ತಮ್ಮ ವಾದವನ್ನು ಇಡಬೇಕೆಂದೂ ನಾನು ಸಲಹೆ ಮಾಡುವೆನು. ಇನ್ನು ನುಂದಿನ ಹೋರಾಟದ ವಿಚಾರ. ನಾನಿನ್ನೂ ಕತ್ತಲೆಯಲ್ಲೇ ಕೊಳೆಯುತ್ತಿದ್ದೇನೆ ತಕ್ಕಷ್ಟು ಬೆಳಕಿನ್ನೂ ನನಗೆ ಗೋಚರವಾಗಿಲ್ಲ. ನನ್ನ ಮನಸ್ಸಿಗೆ ಮುಂದಿನ ಮಾರ್ಗವು ಸ್ಪಷ್ಟವೆಂದು ತೋರಿಬಂದಾಗ ನೀವು ನನ್ನ ಸಹಾಯವನ್ನು ಪೇಕ್ಷಿಸುವುದಾದರೆ ಅದನ್ನು ನಿಮ್ಮ ಮುಂದಿಡುತ್ತೇನೆ. ಇಲ್ಲವಾದರೆ ಸ್ವಸ್ಥವಾಗಿ ನಾನು ನನ್ನ ಮನೆಯಲ್ಲಿರುತ್ತೇನೆ' ಎಂದರು

K. B. & SONS.

[Estd 1935.]

General and Paper Mrchants.

Car Street, **BELLARY.**

(Prefer Hoogly Printing inks for neat and attractive Printing)

Best reliable and cheapest house for all kinds of Novelties, Oilman stores, Thermas Flasks, Food Jars, Fountain Pens of numerous qualities and makes, Patent Medicines, Perfumers Toilet and Washing Soaps, Glass ware Tea, Coffee, all kinds of Papers and agents for Hoogly Printing inks

ಎಲ್ಲಾವಿಧವಾದ ಸ್ಟೇಷನರಿ, ಕಾಗದಗಳು ಔಷಧಗಳು, ಸಬ್ಬು, ಸುಗಂಧ, ಕಾಫಿ ಟೀ, ಗಾಜಿನ ಸಾಮಾನು, ಅಂದನಾದ ಮುದ್ರಣಕ್ಕೆ ಬೇಕಾಗುವ ಹೂಗ್ಲಿ ಮಸಿ ವಗೈರೆ ಸುಲಭ ಬೆಲೆಗೆ ದೊರೆಯುತ್ತೆ.

ಕೆ. ಬಿ. ಅಂಡ್ ಸನ್ಸ್, ತೇರು ಬೀದಿ, ಬಳ್ಳಾರಿ

ಮಿನಾಕ್ಷಿ ಭವನ ಕಾಫಿಕ್ಲಬ್

[ರಿಜಿಸ್ಟರ್ಡ್]

ಶಾಖೆಗಳು—

ಕಾಫಿ ಕ್ಲಬ್ ಬೆಂಗಳೂರು ಕೋಟ್ **ಊಟ ವಸತಿಗೃಹ** ಬ್ರಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪದಲ್ಲಿ ತಯಾರಿಸಿದ ಸಿಹಿಖಾರದ ಫಲಹಾರವಸ್ತುಗಳು.

ಒಳ್ಳೆಯ ಊಟದ ವ್ಯವಸ್ಥೆ ಧಾರಾಳವಾಗಿ ಗಾಳಿ, ಬೆಳಕು, ಬರುವ ಮಹಡಿಯ ಮೇಲಿನ ಕೊಠಡಿಗಳು ಅಧುನಿಕ ವ್ಯವಸ್ಥೆ

ಒಮ್ಮೆ ಸಲ ಬಂದು ಪರೀಕ್ಷಿಸಿರಿ.

ನವಭಾರತ

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಕೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಷ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ ವೆಸ್ಟ್ ಎಂಡ್ ವಾಚುಗಳೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದುಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

Sarada Ink. [Regd]

Awarded Gold Medal and Certificate of Merit at the All India Swadeshi Exhibition Bellary.

For Fountain Pens and Steel Pens.

Blue-Black, Red, Blue, Green & Violet

SARADA INK WORKS, (Regd.)

K. V. & Sons, BELLARY

ಶಾರದಾ ಇಂಕ್ (ರಿಜಿಸ್ಟರ್ಡ್)

ಬಳ್ಳಾರಿ ಅಖಿಲ ಭಾರತ ಸ್ವದೇಶೀ ಪ್ರದರ್ಶನದಲ್ಲಿ ಸುವರ್ಣ ಪದಕವನ್ನೂ, ಯೋಗ್ಯತಾ ಪತ್ರವನ್ನೂ ಪಡೆದಿದೆ. ಫೌಂಟನ್ ಪೆನ್ನುಗಳಿಗೂ, ಇತರ ಲೇಖನಿಗಳಿಗೂ, ಉಪಯೋಗಿಸಲು ಶ್ರೇಷ್ಠವಾದ ಬ್ಲೂ-ಬ್ಲಾಕ್ ಕೆಂಪು, ನೀಲಿ ಹಸರು, ವೈಲೆಟ್ ವಗೈರೆ ಬಣ್ಣಗಳಲ್ಲಿ ದೊರೆಯುತ್ತದೆ.

ಕೆ. ವಿ. ಅಂಡ್ ಸನ್ಸು, ಬಳ್ಳಾರಿ.

NAVA BHARAT, BELLARY.

(With which is incarporated 'Congress Bulletin')

The leading Nationalist Weekly.

'ನವ ಭಾರತ ಬಳ್ಳಾರಿ.

[ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.]

The Rates of Subscription.	ಚಂದಾ ವಿವರ
Annual	ವರ್ಷ
Local 1—8—0	ಸ್ಥಳದವರಿಗೆ 1-8-0
Moffusil 2—0—0	ಪರಸ್ಥಳದವರಿಗೆ 2-0-0
Half Yearly	6 ತಿಂಗಳು
Local 1—0—0	ಸ್ಥಳದವರಿಗೆ 1-0-0
Moffusil 1—4—0	ಪರಸ್ಥಳದವರಿಗೆ 2-0-0

Patent medicines, Tonics, injections Ayurvedic Preparations & Oilman stores —Moderate Rates Trial earnestly solicited

M. S. V. Bros,

Car Street, **BELLARY.**

ಇಂಗ್ಲೀಷ್ ಔಷಧಗಳು, ಇಂಜೆಕ್ಷನ್ ಮತ್ತು ಇತರ ಆಯುರ್ವೇದೀ ಔಷಧಗಳು, ಸ್ಟೇಷನರಿ ವಸ್ತುಗಳೆ ಸುಲಭ ಬೆಲೆಯಲ್ಲಿ ದೊರೆಯುತ್ತವೆ.

ಎಂ. ಯಸ್. ವಿ. ಬ್ರದರ್ಸ್,

ತೇರು ಬೀದಿ, ಬಳ್ಳಾರಿ.

The Lakshmi Medical Stores.

Chemists & Druggists, Car Street, Bellary.

ದಿ ಲಕ್ಷ್ಮೀ ಮೆಡಿಕಲ್ ಸ್ಟೋರ್ಸ್

ಔಷಧಾಲಯ ತೇರು ಬೀದಿ, ಬಳ್ಳಾರಿ.

ನಮ್ಮಲ್ಲಿ ಇಂಗ್ಲೀಷ್ ಔಷಧಗಳು, ಇಂಜೆಕ್ಷನ್, ಆಂಪೂಲ್ಸ್, ಟಿಂಕ್ಚರ್ಸ್, ಶಸ್ತ್ರ ಚಿಕಿತ್ಸೆಗೆ ಬೇಕಾಗುವ ಶಸ್ತ್ರಗಳು, ಆಸ್ಪತ್ರೆಯ ಜೇಡಿಕೆಗಳು ಮತ್ತು ಅಸಂಬಂಧದ ಔಷಧಗಳೆಲ್ಲಾ ದೊರೆಯುತ್ತವೆ.

ವಿವಿಧ ವರ್ಗದ **'ಲಕ್ಷ್ಮೀ-ಪರಿಷ'** ಸಾನಗಳನ್ನು ನಾವು ತಯಾರಿಸುತ್ತೇವೆ. ನಮ್ಮ ಔಷಧಾಲಯವು ದಿನ ರಾತ್ರಿಯೆಲ್ಲಾ ತೆರೆದಿರುತ್ತವೆ. ದರಗಳು ಸುಲಭ ಪರೀಕ್ಷಿಸಿ ತೃಪ್ತಿ ಹೊಂದಿರಿ.

Nava Bharat, Bellary.

REG. NO. M. 3937.

Sri ———

Printed at Vittal Press, Car Street Edited & Published by T. B. Keshava Rao BELLARY.

'ಸಂಜೀ ನಾತೆರಂ'

THE ಸ್ವರಾಜ್ಯ ನವ ಭಾರತ

(ಇದರಲ್ಲಿ 'ಕಾಂಗ್ರೆಸ್' ಬುಲೆಟಿನ್. ಸಮೂವೇಶವಾಗಿದೆ)

ಉಜ್ವಲ · ರಾಷ್ಟ್ರೀಯ ವಾರ ಪತ್ರಿಕೆ

ಸಂಪಾದಕ:— ಟಿ. ಬಿ. ಕೇಶವರಾವ್.

ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ.

ಸಂಪುಟ ೦ | ಬಳ್ಳಾರಿ. ಜೂ. ೩ನೇ ಶನಿವಾರ ೧೯೩೯. | ಸಂಪುಟ ೮೮

ಔಂಧ ಸಂಸ್ಥಾನದ ರಾಜ್ಯಭಾರ ಕ್ರಮ.

[4ನೇ ಪುಟವನ್ನು ನೋಡಿರಿ]

★ ಎಂಪೈರ್ ಆಫ್ ಇಂಡಿಯಾ ★

ಲೈಫ್ ಅಶೂರೆನ್ಸ್ ಕಂಪನಿ ಲಿಮಿಟೆಡ್.

ಸ್ಥಾಪಿತ 1897.

ಉದಾರವಾದ ಯೋಜನೆಗಳು.

ಅಪ್ಪಿಯ ಪೊತ್ತ	ರೂ. 5,18,00,000	ಗಿಂತಲೂ ಹೆಚ್ಚಿನ.
ಚಾರಿಯಲ್ಲಿರುವ ಪಾಲಿಸಿಗಳ ಪೊತ್ತ	,, 14,29,00,000	,,
ವಾರಸುದಾರರಿಗೆ ಸಲ್ಲಿಸಿದ ಹಣ	,, 6,15,00,000	,,

ಭವಿಷ್ಯದಲ್ಲಿ ಕುಟುಂಬ ಭರಣಕ್ಕೇರ್ಪಾಟು ಮಾಡಬೇಕಾದುದು, ಪ್ರತಿಯೊಬ್ಬ ಕುಟುಂಬೀಕನ ಕರ್ತವ್ಯವಾಗಿದೆ. ವಿಶೇಷ ಪರಿಸ್ಥಿತಿಯಿಂದ ಸಂಪಾದನೆಯು ಕುಗ್ಗಿ ಹೋಗುವ ದಿನಗಳು ಬರಬಹುದು. ಔಂಧ ಕಾಲಕೋಷ್ಠಕ ಜೀವ ವಿಮೆಯ ಪಾಲಿಸಿಯನ್ನು ರಕ್ಷಿಸಬೇಕಾದುದು ಅತ್ಯಗತ್ಯವಾಗಿದೆ

ಮುಖ್ಯ ಕಾರ್ಯಾಲಯ.
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

★

ಶಾಖೆ.
152/53, ಕಮರ್ಶಿಯಲ್ ಸ್ಟ್ರೀಟ್
ಬೆಂಗಳೂರು.

Nava Bharat
EDITOR-T. R. KESHAVA RAO.

June 3rd, 1939.

Taluk Education Advisory Committees.

We are afraid we cannot join the Hon'ble Minister Sri C. J. Varkey, Minister for Education in welcoming the new Taluk Education Advisory Commitees which are directed to function from 1 6-39. These Committees are expected to co-ordinate and direct the activivities of the various agencies engaged in the field of elementary education so as to spread elementary education as fast as possible. Among the several functions of the committees. arrangement of free meals, books, slates, securing rent-free buildings find a place Members are not eligible for any travelling or other allowance and unlike the present District Educational Councils, they are not office hunters. This advance certificate from such a high authority will certainly cheer up the incoming members. There is to be no time limit for membership and if the committees do not work sastisfactorily, the advisability of entrusting the whole adminstration to departmental heads will be considered.

So far as our district is concerned the selection of the Committees is highly unsatisfactory and disappointing. It is not known on what basis the selections are made. Of course the Congress Committees are studiously ignored and the recommendations of the Collector, who perhaps in his turn depended upon his subordinates, seem to be the basis for selection. The members are expected to be "interested in education" and out of 5 mofussil members 3 should be graduates or under-graduates If we see the list of several Committees like Siruguppa there is not one who has that qualification. Members selected come from a particular area in the Taluk and they are expected to visit schools more than 10 or 12 miles distant in the interior and that without any travelling or other allowance.

The committees cannot work success fully constituted as they are. If the idea of the Hon'ble Minister is to entrust the whole administration to departmental heads, this circutuous way is not necessary and it could straightaway be done.

Takavi instalment collection in Bellary Taluk.

It is to be thighly regretted that the Government have not been pleased to postpone the collection of Takavi instalment in Fasli 1348. The condition of the Ryots is becoming more and more miserable. The Mungari rains are holding off and the skies are clear. The Ryots will be grateful to the Goverument if they reconsider their order and postpone the collections to the Fasli 1349.

ಬಳ್ಳಾರಿ ನಗರದಲ್ಲಿ ಸಾರ್ವಜನಿಕ ಸಭೆಗಳು.

ಸ್ಥಳ— ಸಾಂಬಮೂರ್ತಿವೈದಾನ ಸಾಯಂಕಾಲ ೬-೩೦ ಘಂ.
ಭಾನುವಾರ [4.6.39] —ಮದ್ಯ ಪಾನ ನಿರೋಧ ಮತ್ತು ಮಾರಾಟಿಕರಣ ತಾಸನ
[Prohibition & Sales Tax]
ಬುಧವಾರ (7-6-39) ಬಳ್ಳಾರಿಯಲ್ಲಿ ವ್ಯಭಿಚಾರ ಗೃಹಗಳ ನಿವಾರಣೆ
[Brothels in Bellary & how to remove them.]
ಸರ್ವರೂ ದಯವಿಟ್ಟು ಬರಬೇಕಾಗಿ ವಿನಂತಿ.

ಬಿ. ವಿ, ಕೇಶವಗಿರಿರಾವ್,
ವ್ಯವಸ್ಥಾಪಕ.

ಬಳ್ಳಾರಿ ಜಿಲ್ಲೆಯ ಹಳ್ಳಿಗಳಲ್ಲಿ ನೀರಿನ ಸೌಕರ್ಯ

(ಸ್ಪೆಶಲ್ ಆಫೀಸರವರು ನಿಯಮಿಸಲ್ಪಟ್ಟಿರು)

ಬಳ್ಳಾರಿ ಜಿಲ್ಲೆಯ ಹಳ್ಳಿಗಳಲ್ಲಿ ಅದರಲ್ಲಿಯೂ, ಎರೆಭೂಮಿಯ ಪ್ರದೇಶಗಳಲ್ಲಿ ನೀರಿನ ಸೌಕರ್ಯವನ್ನೊದಗಿಸಿಕೊಡಲು ಕಲೆಕ್ಟರವರು ಒಂದು ಯೋಜನೆಯನ್ನು ಸಿದ್ಧಪಡಿಸಿರುವರು ಈ ಯೋಜನೆಯನ್ನು ಕುರಿತು ಕಲೆಕ್ಟರವರಿಗೆ ತಕ್ಕ ಸಲಹೆ, ಸೂಚನೆಗಳನ್ನು ಕೊಡಲು ಸರ್ಕಾರದವರು 3 ತಿಂಗಳವರೆಗೆ ಸ್ಪೆಶಲ್ ಅಸಿಸ್ಟೆಂಟ್ ಎಂಜನಿಯರ್‌ರವರನ್ನು ನಿಯಮಿಸಿರುವರು.

ಯೋಜನೆಯ ಮುಖ್ಯಾಂಶಗಳು

ಇರುವ ಭಾವಿಗಳನ್ನೂ, ಜಲಾಶಯಗಳನ್ನೂ ಸಂರಕ್ಷಿಸಿ, ಶುದ್ಧವಾಗಿಟ್ಟು ಬೇಕಾದೆಡೆಗಳಲ್ಲಿ ಆಳವನ್ನು ಹೆಚ್ಚಿಸುವುದು ಹೊಸದಾಗಿ ಭಾವಿಗಳನ್ನು ತೆಗೆಸಬೇಕಾಗುವ ಹಳ್ಳಿಗಳಲ್ಲಿ ಹಳ್ಳಿಗರು ಮೊದಲು ಕುಣಿಗಳನ್ನು ತೋಡಬೇಕು. ತರುವೆ ನೀರಿನ ಅಗತ್ಯವಿದೆಯೆಂಬುದು ಇವರಿಂದ ವ್ಯಕ್ತಪಡುವುದಲ್ಲದೆ ಭಾವಿಯನ್ನು ತೆಗೆಸುವ ಖರ್ಚಿನ ಕಡಮೆಯಾಗುತ್ತದೆ. ಹಳ್ಳಿಗರು ಮಾಡುವ ಈ ಕೆಲಸಕ್ಕೂ ಕೂಡ ಬೆಲೆಯನ್ನು ಕಟ್ಟಿ ಹಳ್ಳಿಗರು ನೂರಲ್ಲೊಂದು ಭಾಗವನ್ನು ಕೊಡಬೇಕೆಂದು ಸರಕಾರದವರು ವಿಧಿಸಿದ ಹಣದಲ್ಲಿ ಜಮಾ ಕಟ್ಟಿಕೊಳ್ಳಲಾಗುವುದು.

ಕಲೆಕ್ಟರವರು, ಹಡಗಲಿ, ಹರಪನಹಳ್ಳಿ, ಸಿರುಗುಪ್ಪೆ ತಾಲೂಕುಗಳಲ್ಲಿ ಸಂಚರಿಸಿ ಸ್ವಂತ ನಾಹಿತಿ ತೆಗೆದುಕೊಂಡು ಬಂದರು. ಹೊಸದಾಗಿ ತೆಗೆಸಬೇಕಾದ ಭಾವಿಗಳಿಗಾಗಿ ಆಲ್ ಇಂಡಿಯಾ ಸರಕಾರ ಮತ್ತು ಸ್ಥಾಂತೀಕ ಸರಕಾರದವರು ಈಯೋಜನೆಗೆ ಹಣವನ್ನೊದಗಿಸಲಿರುವರು.

ಗೊಬ್ಬರದ ಗುಂಡಿಗಳು — ಎಲ್ಲಿರಬೇಕು

[ಕಲೆಕ್ಟರಪರ ವರ್ತಮಾನ.]

ಹಳ್ಳಿಗಳಲ್ಲಿ ಗೊಬ್ಬರದ ಗುಂಡಿಗಳು ಮನೆಯ ಹತ್ತರ ಅಥವಾ ಊರಿನ ಸಮೀಪದಲ್ಲಿದ್ದು ಮಳೆಯ ನೀರು ಬಿತ್ತಿ, ದುರ್ವಾಸನೆ ಹೊಡೆಯುತಿರುವುದು ಅಲ್ಲದೆ ಅನೇಕ ಅಂಟು ಜಾಡ್ಯಗಳಿಗೆ ಕಾರಣವಾಗಿದ್ದಿತು. ವೂರಿಗೆ ದೂರಪ್ರದೇಶದಲ್ಲಿ ಒಂದೇಕಡೆಯಲ್ಲೀ ಅಂದರೆ ಸರಕಾರಕ್ಕೆ ಸೇರಿದ ಪೊರಂಬೋಕು ಜಮೀನುಗಳಲ್ಲಿ ಊರಿನವರು ಗೊಬ್ಬರದ ಗುಂಡಿಗಳನ್ನು ತೋಡಬೇಕೆಂದು ಜಿಲ್ಲಾ ಆರ್ಥಿಕ ಸಂಸ್ಥದವರು ಸಲಹೆ ಕೊಟ್ಟಿದ್ದರು ಆದರೆ ಎಲ್ಲಾ ಹಳ್ಳಿಗಳಲ್ಲೂ ಪೊರಂಬೋಕು ಜಮೀನುಗಳಿರುವುದಿಲ್ಲವಾದ್ದರಿಂದ ಈ ಸಲಹೆಯು ಅಂಗೀಕರಿಸಲ್ಪಡಲಿಲ್ಲ. ಹಳ್ಳಿಗಳಲ್ಲಿ ಗೊಬ್ಬರದ ಗುಂಡಿಗಳಿಗಾಗಿ ಹಣವನ್ನು ಸಂಗ್ರಹಿಸಿ, ಪಾಸಗಿ ಜಮೀನುಗಳನ್ನು ಕೊಂಡು ಅವುಗಳಲ್ಲಿ ಗುಂಡಿಗಳನ್ನು ತೋಡಿಸಿ ಮಳೆಯ ನೀರು ಹೋಗದಂತೆ ಮೇಲ್ಛಾಗದಲ್ಲಿ ಸುತ್ತಲೂ ಕಟ್ಟೆಗಳನ್ನು ಕಟ್ಟುವರು. ಅಲ್ಲದೆ ಗಿಡಗಳನ್ನುಕೂಡ ಬೆಳೆಸಬೇಕೆಂಬ ಯೋಜನೆ ಇದೆ. ಇಂಥಾ ಯೋಜನೆಯು ಕರ್ನೂಲ್ ಜಿಲ್ಲೆಯಲ್ಲಿ ಯಶಶ್ವಿಯಾಗಿ ನಡೆಯಿತು. ಅಲ್ಲಿನ ಕೆಲ ಹಳ್ಳಿಗಳಲ್ಲಿ 2000 ವರೆಗೂ ಕೊಟ್ಟಿರುವರು. ಈ ಕ್ರಮದಿಂದ ಅಂಟು ಜಾಡ್ಯಗಳು ಶೇಕಡ 50ರಷ್ಟಿಗೂ ಕಡಮೆಯಾಗಬಹುದೆಂದು ಊಹಿಸಲಾಗಿದೆ.

ಅಂತರ್ಜಾತೀಯ ವಿವಾಹ ಸಂಬಂಧ

ಮುಸಲ್ಮಾನ ತರುಣಿಯು ಹಿಂದೂ ಯುವಕನನ್ನು ಮೋಹಿಸಿದಳು.

ಕಾಶೀನಗರದ ತ್ರಿಭುವನನಾಥನೆಂಬ ಯುವಕನೊಬ್ಬನು. ಬೊಂಬಾಯಿಗೆ ಬಂದು ಉದ್ಯೋಗವನ್ನು ಹುಡುಕುತ್ತಿದ್ದನು. ಬೊಂಬಾಯಿಯ ಜಿ. ಐ. ಪಿ. ರೈಲ್ವೆ ಹೆಡ್‌ಕ್ವಾರ್ಟರ್ಸಿನಲ್ಲಿ ಮಿಸ್ ಮಿರ್ಜಾ ಆಲಿಬೇಗ್ ಎಂಬಾತನ ಮಗಳು ರಜಿಯಾಬೇಗಂ ಎಂಬಾಕೆಯು ತನ್ನ ಮನೆಯಹತ್ತರವಿದ್ದ ಸಿನಿಮಾಗೃಹಕ್ಕೆ ಈ ಯುವಕನು ಬಂದು ಹೋಗುತ್ತಿರಬೇಕಾದರೆ ಅವನ ರೂಪುಲಾವಣ್ಯಗಳಿಗೆ ಮೆಚ್ಚಿ ಮೋಹಗೊಂಡಳು. ಇನ್ನೇನು? ಅವರಿಬ್ಬರೂ ಕಾಶಿಗೆ ಹೊರಟರು. ರಜಿಯಾಬೇಗಂ ತ್ರಿಭುವನನಾಥನ ಮನೆಯಲ್ಲಿ ಎರಡು ತಿಂಗಳಕಾಲವಿದ್ದಳು. ಅಲ್ಲಿಂದ ಲಕ್ನೋವಿಗೆ ಹೊರಟು ಅಲ್ಲಿ ವಾಸವಾಗಿದ್ದರು. ಇವರನ್ನು ಕಳೆದ ತಿಂಗಳು 3ನೆಯವಾರ ಲಕ್ನೋ ಪೋಲೀಸರು ಕೈದುಮಾಡಿದರು.

ತ್ರಿಭುವನನಾಥನು ಮ್ಯಾಜಿಸ್ಟ್ರೇಟರಲ್ಲಿ ಅರ್ಜಿ ಕಟ್ಟುಕೊಂಡಿದ್ದಾನೆ. ರಜಿಯಾಬೇಗಂ ಆರ್ಯ ಸಮಾಜ ಪದ್ಧತಿಯಪ್ರಕಾರ ಮತಾಂತರಹೊಂದಿ ಶಾಂತದೇವಿ ಎಂಬ ಹೆಸರು ಹೊಂದಿರುವಳು. ಅವರಾಧಿಯು ಆರ್ಯ ಸಮಾಜ ಪದ್ಧತಿಗಳ ಪ್ರಕಾರ ಲಗ್ನವಾಗಿರುವನು. ಇನ್ನಿದೆ ಆಕೆಗೆ 19 ವರ್ಷಗಳಾಗಿವೆ. ಮತಾಂತರ ಹೊಂದಿದ, ಲಗ್ನವಾದ, ಮತ್ತು 19 ವರ್ಷಗಳೆಂದು ಸೂಚಿಸುವ ಡಾಕ್ಟರ್ ಸರ್ಟಿಫಿಕೇಟ್ ಈ 3 ಪತ್ರಗಳನ್ನು ಕೋರ್ಟಿನಲ್ಲಿ ಪಾಜರುಮಾಡಲಾಯಿತು. ಈತನ ಕೇಳಿಕೆಯು ಸರಿಯಾಗಿದೆಯೆಂದೂ, ತಾನು ತ್ರಿಭುವನನಾಥನನ್ನು ಲಗ್ನವಾಗಿರುವುದಾಗಿಯೂ ತನಗೆ 19ನೇ ವರ್ಷ ನಡೆಯುತ್ತಿರುವುದಾಗಿಯೂ ರಜಿಯಾಬೇಗಂ-ಶಾಂತದೇವಿಯು ಹೇಳಿದಳು.

ನ್ಯಾಯಾಧೀಶರು ಮುಖ್ಯ ಡಾಕ್ಟರರ ಸಲಹೆ ತೆಗೆದುಕೊಂಡು 18 ವರ್ಷದವಳಿರುತ್ತಾಳೆಂದು ತೀರ್ಮಾನಿಸಿ ಆ ತರುಣಿಯು ಎಲ್ಲಿ ಬೇಕಾದರೂ ಹೋಗಬಹುದೆಂದು ತೀರ್ಪಿತ್ತರು.

ಟೀಂಧ ಸಂಸ್ಥಾನದ ರಾಜ್ಯ ಭಾರ ಕ್ರಮ

(ಕಳೆದ ವಾರದಿಂದ ಮುಂದುವರಿದುದು)

16. ಸಂಸ್ಥಾನ ಶಾಸನ ಸಭೆಯ ಪರವಾಗಿ ಸರಕಾರದ ಅಭಿಪ್ರಾಯವನ್ನು ಒಬ್ಬ ಮುಖ್ಯಮಂತ್ರಿಯಿಂದಲೂ ಲೆಜಿಸ್ಲೇಟಿವ್ ಅಸೆಂಬ್ಲಿ ಸದಸ್ಯರಿಂದ ಶ್ರೀಮಂತ ರಾಜಾಸಾಹೇಬರು ಆರಿಸಿದ ಇಬ್ಬರು ಲೋಕಪ್ರತಿನಿಧಿ ಮಂತ್ರಿಗಳಿಂದಲೂ ನಡೆಸಲ್ಪಡುವುದು. ಎಲ್ಲಾ ವಿಷಯಗಳಲ್ಲಿಯೂ. ಸರಕಾರವು (ಈ ಅಧಿಕಾರ ವರ್ಗವು) ಲೆಜಿಸ್ಲೇಟಿವ್ ಅಸೆಂಬ್ಲಿಗೆ ಜವಾಬ್ದಾರಿ ಇದ್ದು ಲೆಜಿಸ್ಲೇಟಿವ್ ಅಸೆಂಬ್ಲಿಯು ವಿಶ್ವಾಸರಾಹಿತ್ಯ ತೀರ್ಮಾನವನ್ನು ವಾಪಸುಮಾಡಿದರೆ ರಾಜೀನಾಮೆ ಕೊಡಲು ಬದ್ಧವಿರುತ್ತದೆ.

17. ಸರಕಾರವು ಲೆಜಿಸ್ಲೇಟಿವ್ ಅಸೆಂಬ್ಲಿಯ ಮುಂದೆ ವಾರ್ಷಿಕ ಆಯ-ವ್ಯಯದ ಅಂದಾಜಾಪತ್ರಿಯನ್ನು ಮಂಡಿಸಿ ಕೆಳಗಿನ ಖರ್ಚುಗಳನ್ನೊಳಗೊಂಡಿರುವುದು.

(ಎ) ಸಂಸ್ಥಾನದ ಆದಾಯದಲ್ಲಿ ಅರ್ಧಭಾಗವು ಸರಕಾರದ ಖರ್ಚಿಗಾಗಿ, ರಾಜರ ಮನೆತನದ ಖರ್ಚಿಗಾಗಿ, ರಾಜಕೀಯ ಪೆನ್ಷನ್‌ಗಳಿಗಾಗಿ ವ್ಯಯವಾಗುವಂತೆ ಏರ್ಪಾಟಾಗಿರಬೇಕು.

(ಬಿ) ಮತ್ತರ್ಧ ಭಾಗವು ತಾಲೂಕಾ ಕೌನ್ಸಿಲುಗಳ ಆದಾಯವನ್ನು ಲಕ್ಷಿಸಿ, ಅವುಗಳಿಗೆ ಸಲ್ಲಿಸಿ, ಆಯಾ ತಾಲೂಕಾಗಳ ಸರಹದ್ದಿನಲ್ಲಿರುವ ಪಂಚಾಯ್ತಿಗಳಿಗಾಗಿ ಹಣವನ್ನು ಹಂಚಲು ಉಪಯೋಗಿಸುವಂತಿರಬೇಕು.

18. 17ನೇ ಕಲಂ (ಎ) ಭಾಗದಲ್ಲಿ ಕಾಣಿಸಿದ ಖರ್ಚನ್ನು ಲೆಜಿಸ್ಲೇಟಿವ್ ಅಸೆಂಬ್ಲಿ ವೋಟಿಗೆ ಒಳಪಡಿಸಬಹುದು. ಆದರೆ (ಬಿ) ಖರ್ಚನ್ನು ಅಸೆಂಬ್ಲಿ ವೋಟಿಗೆ ಹಾಕಲು ಬರುವಂತಿಲ್ಲ.

19 (ಎ) ಲೆಜಿಸ್ಲೇಟಿವ್ ಅಸೆಂಬ್ಲಿಯಿಂದ ಮುಂಜೂರಾದ, ಎಲ್ಲಾ ಗ್ರಾಂಟು ಹಣವೂ ಶ್ರೀಮಂತ ರಾಜಾಸಾಹೇಬರ ಸಹಿಯಿಂದ ಸ್ವೀಕೃತಿಯನ್ನು ಹೊಂದುವುದು. ಶ್ರೀಮಂತ ರಾಜಾಸಾಹೇಬರ ಒಪ್ಪಿಗೆಯ ಸಹಿ ಇಲ್ಲದೆ ಸಂಸ್ಥಾನ ಆದಾಯದ ಯಾವ ಖರ್ಚೇ ಆಗಲಿ ನ್ಯಾಯಸ್ವರೂಪವನ್ನು ಹೊಂದುವುದಿಲ್ಲ.

(ಬಿ) ತಾಲೂಕಾ ಕೌನ್ಸಿಲುಗಳಿಗೆ ಕೊಟ್ಟ ಗ್ರಾಂಟು ಹಣವು ಅವರಿಂದ ಖರ್ಚುಮಾಡಲ್ಪಡಬಹುದು. ಆದರೆ ಗ್ರಾಂಟು ಹಣದ ವಿಷಯವು ಸರಕಾರದವರಿಂದ ಲೆಜಿಸ್ಲೇಟಿವ್ ಅಸೆಂಬ್ಲಿಯಿಂದ ತನಿಖೆಗೊಳಪಡಬಹುದು.

(ಸಿ) 15ನೇ ಕಲಂ, 19ನೇ ಕಲಂ (ಎ)ಗೂ ಅನ್ವಯಿಸುವುದು.

20. ಸಂಸ್ಥಾನದಲ್ಲಿ ನ್ಯಾಯವು ಸುಲಭ ಖರ್ಚಿನಿಂದ ಶೀಘ್ರದಲ್ಲಿ ದೊರೆಯುವುದು. ಹೈಕೋರ್ಟಿನಿಂದ ಕಾಲಕಾಲಕ್ಕೆ ನಿಯಮಿತವಾಗುವ ನಿಬಂಧನೆಗಳಿಗನುಸಾರವಾಗಿ ಪಂಚಾಯ್ತಿಗಳವರು ತಮ್ಮ ಹದ್ದಿನಲ್ಲಿ ಸಾಮಾನ್ಯ ಕ್ರಿಮಿನಲ್ ಮತ್ತು ಸಿವಿಲ್ ನ್ಯಾಯಗಳನ್ನು ಬಗೆಹರಿಸಬಹುದು. ಇನ್ನುಳಿದ ನೊಕದ್ದಮೆಗಳೂ, ಅಪೀಲುಗಳೂ ಹೈಕೋರ್ಟಿನಿಂದ ನಿರ್ಣಯಿಸಲ್ಪಡುತ್ತವೆ. ನ್ಯಾಯ ಸಂಬಂಧದ ಸಲಹೆ ಮತ್ತು ಡಿಫೆನ್ಸ್ ಹೈಕೋರ್ಟು ರೂಲ್ಸಿಗೊಳಪಟ್ಟು ಸರಕಾರದಿಂದ ಉಚಿತವಾಗಿ ಒದಗಿಸಲ್ಪಡುತ್ತದೆ.

21 (ಎ) ಶ್ರೀಮಂತ ರಾಜಾಸಾಹೇಬರು ಹೈಕೋರ್ಟಿನ ಸರ್ವನ್ಯಾಯಾಧೀಶರನ್ನು (ಜಡ್ಜ್) ನಿಯಮಿಸುವರು. ಈ ನ್ಯಾಯಾಧೀಶರು ಸಂಸ್ಥಾನದ ನ್ಯಾಯಖಾತೆಯ ಮುಖ್ಯ ಅಧಿಕಾರಿಗಳಾಗಿರುವರು. ವಿಲೇಜ್ ಪಂಚಾಯ್ತಿಗಳಿಂದ ಬರುವ ಡಿಕ್ರಿ ಆರ್ಡರ್, ತೀರ್ಪುಗಳ, ಪುನರ್ವಿಚಾರಣೆಯನ್ನು ನ್ಯಾಯಾಧೀಶರು ಮಾಡಬಹುದು. ಹೈಕೋರ್ಟಿನ ಕಾರ್ಯದ್ದಿಗಳಿಗೊಳಪಟ್ಟು ಪಂಚಾಯ್ತಿಗಳಿಂದ ವಿಚಾರಣೆಯಾಗದಿರುವ ಸಿವಿಲ್ ಮತ್ತು ಕ್ರಿಮಿನಲ್ ಕೇಸುಗಳೂ ನ್ಯಾಯಾಧೀಶರಿಂದ ವಿಚಾರಿಸಲ್ಪಡುತ್ತವೆ.

(ಬಿ) ಅವರನ್ನು ಕೆಲಸಕ್ಕೆ ನೇರಿಸುವಕಾಲಕ್ಕೆ ಅವಧಿಯನ್ನು ನಿಶ್ಚಯಿಸುವಕಾಲದವರೆಗೆ ನ್ಯಾಯಾಧೀಶರು ಕೆಲಸನಡಬಹುದು. ಒಳ್ಳೆಯ ನಡತೆ ಯಿಲ್ಲದಿದ್ದರೆ, ಅವರ ಕೆಲಸವನ್ನು ಮಧ್ಯದಲ್ಲಿಯೇ ಕೊನೆಗಾಣಿಸಬಹುದು.

22. ಈ ಆಕ್ಟ್ ಪ್ರಾರಂಭವಾದೊಡನೆಯೇ ಆದಷ್ಟು ಶೀಘ್ರವಾಗಿ ಸರ್ಕಾರದವರು. ಸಾರ್ವತ್ರಿಕ, ಅನಿವಾರ್ಯ ಸ್ವರೂಪದ ಉಚಿತ ವಿದ್ಯಾಭ್ಯಾಸ, ಸ್ವಾವಲಂಬನದ ವಿದ್ಯಾಭ್ಯಾಸ ಕ್ರಮ, (ಪ್ರಾಥಮಿಕ ಮತ್ತು ಮಧ್ಯಮ) ಇವುಗಳನ್ನು ಟೀಂಧ ಸಂಸ್ಥಾನದ ಪ್ರಜೆಗಳಿಗೆ ಕೆಲಸಮಾಡಲು ಸಾಕಾದಷ್ಟು ಯೋಗ್ಯತೆ ಬರುವ ಮಟ್ಟಿಗೆ ಕೊಡಲ್ಪಡಬೇಕು. ಇದಲ್ಲದೆ ಸಂಸ್ಥಾನದಲ್ಲಿ ನಿರಕ್ಷರತೆಯನ್ನು ಹೋಗಲಾಡಿಸಲು ಸರಕಾರವು ಯತ್ನಿಸಬೇಕು. ಆಕ್ಟ್ ಪ್ರಾರಂಭವಾದ ಒಂದು ವರ್ಷದೊಳಗಾಗಿ ತಾವು ಆಕ್ಷರಸ್ಥರಾಗಿ ವೋಟಿನಲ್ಲಿ ಭಾಗ ತೆಗೆದುಕೊಳ್ಳಲು ಅನುಕೂಲಿಸುವಂತೆ (Literacy Test) ಸಂಸ್ಥಾನದ ವಯಸ್ಕ ಸ್ತ್ರೀ, ಪುರುಷರಿಗೆ ವಿದ್ಯೆ ಕಲಿಸುವುದಾಗಬೇಕು.

23. ಶ್ರೀಮಂತ ರಾಜಾಸಾಹೇಬರವರಿಂದ ಸಂಸ್ಥಾನಕ್ಕೆ ಒಬ್ಬ ಚೀಫ್ ಆಡಿಟರ್‌ರವರು (ಲೆಕ್ಕತಪಾಸಿಗರು) ನಿಯಮಿಸಲ್ಪಡುವರು ಸರಕಾರದ ರೂಲ್ಸುಗಳಿಗೆ ವಿರೋಧವಾಗದವಿನಹ ಅವರನ್ನು ಕೆಲಸದಿಂದ ತೆಗೆಯಲಿಕ್ಕೆ ಬರುವದಿಲ್ಲ.

ಬಳ್ಳಾರಿ ಜಿಲ್ಲೆಯಲ್ಲಿ ಶಕಾವಿ ಸಾಲಗಳು

ಕಲೆಕ್ಟರು ಯುತ್ತು ರಿವಿನ್ಯೂ ಬೋರ್ಡಿನ ಶಿಫಾರಸ್ಸುಮೇರೆಗೆ 1348 ನೇ ಫಸಲಿಯಲ್ಲಿ ಕೊಡಬೇಕಾದ ತಕಾವಿ ಸಾಲಗಳನ್ನು ಆದವಾನಿ, ಆಲೂರು, ರಾಯದುರ್ಗ, ಹೊಸಪೇಟೆ, ಹರಪನಹಳ್ಳಿ ಹಡಗಲೀ ಸಿರುಗುಪ್ಪ (ದೇಶನೂರು ಸಿರುಗುಪ್ಪ ಹೊರತಾಗಿ) ತಾಲೂಕುಗಳಲ್ಲಿಯೂ, ಕೂಡ್ಲಿಗೆ ತಾಲೂಕಿನ 17 ಹಳ್ಳಿಗಳಲ್ಲಿಯೂ ಮುಂದಿನ ಫಸಲಿಯಲ್ಲಿ ಕೊಡಬಹುದೆಂದು ಉತ್ತರ ಮಾಡಿರುವರು.

ಸ್ಥಾಪಿಸಿಕ ಶಾಲೆಗಳಲ್ಲಿ ಕೆಲಸಮಾಡುವ ದಿನಗಳು

1932ರಲ್ಲಿ ಸರಕಾರದವರು ಡೈರೆಕ್ಟರು ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷರ್ ರವರ ಶಿಫಾರಸ್ಸುಮೇರೆಗೆ ಎಲಿಮೆಂಟರಿ ಶಾಲೆಗಳವರು ವಾರದಲ್ಲಿ 6 ದಿನಗಳು ಕೆಲಸಮಾಡಬೇಕೆಂದೂ ಲೋಕಲ್‌ಬೋರ್ಡುಗಳವರ ಅನುಮತಿಯಿಂದ ಶನಿವಾರ ಅರ್ಧದಿನ ಮಾತ್ರ ಕೆಲಸಮಾಡಬಹುದೆಂದೂ ಅಂಗೀಕರಿಸಿದ್ದರು.

ಎಲಿಮೆಂಟರಿ ಎಡುಕೇಶನ್ ಆಕ್ಟ್ ಪ್ರಕಾರ ವರ್ಷದಲ್ಲಿ ಇಷ್ಟು ದಿನಗಳು ಕೆಲಸಮಾಡಬೇಕೆಂದು ವಿಧಿಸಿರುವ ದಿನಗಳಿಗೆ ಕಡಮೆ ಬರದಂತೆ ನಾರಕ್ಕೆ 5 ದಿನಗಳು ಕೆಲಸಮಾಡುವುದರಲ್ಲಿ ತಮ್ಮ ಅಭ್ಯಂತರವಿಲ್ಲವೆಂದು ಸರಕಾರದವರು ಈಗ ಒಪ್ಪಿರುವರು. ಇದಕ್ಕೆ ತಕ್ಕ ರೂಲ್ಸಿನಲ್ಲಿ ಬದಲಾವಣೆಗಳಾಗಲಿವೆ.

ಸ್ವದೇಶ

ವಾಯುವ್ಯ ಪ್ರಾಂತದ ಮುಖ್ಯಮಂತ್ರಿಗಳ ಮಗನಾದ ಒಬ್ಬ ದುಲ್ಲಾಖಾನರನ್ನು ವೈತ ಚಳುವಳಿಯಲ್ಲಿ ಬಂಧಿಸಿದ್ದಾರೆ. ಇಲ್ಲಿಯವರೆಗೆ ಸುಮಾರು 150 ಜನ ರೈತರು ಬಂಧಿತರಾಗಿರುವರು ಪ್ರಾಂತೀಕ ಕಾಂಗ್ರೆಸ್ ಅಧ್ಯಕ್ಷರೂ, ಕಾರ್ಯದರ್ಶಿಗಳೂ ನಡೆಸಿದ ಸಂಧಾನವು ಇನ್ನೂ ಫಲಿತವಾಗಿಲ್ಲ.

ಆ ಪ್ರಾಂತದ ಜನಮಯತ್ಯುಲೆಮಾ ಸಭೆಯಲ್ಲಿ ಮುಸಲ್ಮಾನರು ಕಾಂಗ್ರೆಸ್ ಸೇರಬೇಕೆಂಬ ಭಾಷಣಗಳಾದವು.

ರಾಜಕೋಟೆ ಸುಧಾರಣಾ ಸಮಿತಿಯಲ್ಲಿ ದರ್ಬಾರ ವೀರವಾಲಾರವರು ಅಧ್ಯಕ್ಷರಾಗಿಯಾಗಲಿ, ಸದಸ್ಯರಾಗಿಯಾಗಲಿ ಕೆಲಸಮಾಡಬಾರದೆಂದು ಪಲಿಟಿಕಲ್ ಏಜಂಟರು ಗಲಹೆ ಇತ್ತಿರುವರೆಂಬುವಾಗಿ ತಿಳಿದುಬಂದಿದೆ.

ಮೈಸೂರು ದೇಶದ ಕೆಲ ಮುಖ್ಯಕಾಂಗ್ರೆಸ್ ಮುಖಂಡರಿಗೆ ರಾಜದ್ರೋಹದ ಭಾಷಣಗಳನ್ನು ಮಾಡಬಾರದೆಂದು ಸರಕಾರದವರು ಎಚ್ಚರಿಕೆ ಇತ್ತಿರುವರು. ಮೈಸೂರು-ಜಂಗಳೂರುಗಳಲ್ಲಿ 144ನೇ ಕಲಂ ಕೆಲವರನ್ನೇಲೆ ಸ್ಪಯೋಗಿಸಿ ಅವರು ಭಾಷಣಮಾಡಬಾರದೆಂದು ವಿಧಿಸಿದ್ದಾರೆ.

ಹೈದರಾಬಾದು ಆರ್ಯಸತ್ಯಾಗ್ರಹವು ಬಹಳ ಜೋರಿನಿಂದ ಸಾಗಿದೆ. ನೂರಾರು ಜನರು ಶಿಕ್ಷೆಯಾಗುತ್ತಲಿರುವರು. ಗುಲ್ಬರ್ಗಾ ಜೈಲಿನಲ್ಲಿ 22 ವರ್ಷ ವಯಸ್ಸಿನ ಪಾಂಡುರಂಗನೆಂಬ ಸತ್ಯಾಗ್ರಹಿಯು ಜ್ವರದಿಂದ ಸತ್ತನೆಂದು ಸರಕಾರದವರು ಪ್ರಕಟಿಸಿರುತ್ತಾರೆ

ವಿದೇಶ

ಬ್ರಿಟಿಶರು ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ನಿಶ್ಚಯಿಸಿದ ರಾಜ್ಯಭಾರ ಕ್ರಮಕ್ಕೆ ಪುಷ್ಪಿಕೊಟ್ಟ ಖಾಲಿಲಾಹಿ ಎಂಬ ಅರಬ್ಬಿಯವನು ಗುಂಡಿನಿಂದ ಕೊಲ್ಲಲ್ಪಟ್ಟನು.

ಚೀನಾ-ಜಪಾನ್ ಯುದ್ಧ

(ಚೀನೀಯರಿಗೆ ವಿಜಯವಾಗುತ್ತಲಿದೆ.)

ಚೀನೀಯರು ಗುಂಪುಗುಂಪುಗಳಾಗಿ ಅಲ್ಲಲ್ಲಿ ಜಪಾನ್ ಸೈನಿಕರಿಗೆ ವಿಚಿತ್ರ ಹಿಂಸೆಯನ್ನು ಕೊಡುತ್ತಲಿರುವರು. ಈ ವಾರ 20 ಸಾವಿರ ಜಪಾನೀಯರು ಹತರಾದರೆಂದೂ, ಅವರು ಹಿಂದಕ್ಕೆ ಸರಿದರೆಂದೂ ಹೇಳಲಾಗಿದೆ ಜಪಾನ ಸುದ್ದಿಯಿಂದ ತಿಳಿದುಬಂದಿರುವುದೇನೆಂದರೆ ಈ ಯುದ್ಧವು ಪ್ರಾರಂಭವಾದಮೇಲೆ ಜಪಾನೀಯರು 60,000 ಚೀನೀಯರು 9,36000 ಕೊಲ್ಲಲ್ಪಟ್ಟಿರುವರು.

ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿಣೀ ಸಮಿತಿ

(ಶನಿವಾರ 10-6-39 ಸಾಯಂಕಾಲ 6 ಘಂಟೆ)

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿಣೀ ಸಮಿತೀ (ಕರ್ನಾಟಕ) ಸಭೆಯು ಜಿಲ್ಲಾ ಬೋರ್ಡು ಕಾಂಗ್ರೆಸ್ ಪಾರ್ಟಿಯ ಭವನ (ಕೋಲಾಜಲಂ ಕಾಂಪೌಂಡಿನೊಳಗೆ)ದಲ್ಲಿ ಈ ತಿಂಗಳು 10ನೆಯ ತಾ. ಸಾಯಂಕಾಲ 6 ಘಂಟೆಗೆ ಕೂಡುವುದು ಮಹತ್ವದ ವಿಷಯಗಳು ಚರ್ಚೆಗೆ ಬರಲಿರುವುದರಿಂದ ಸಮಿತಿಯ ಸದಸ್ಯರೆಲ್ಲಾ ಬರಲು ಕೋರಿದೆ.

ವಿ. ಯಂ. ಗಿರಿ,
ಜಿ. ಕಾ. ಕ. ಕಾರ್ಯದರ್ಶಿ.

ಅಂಬಾ ಭವನ ಕಾಫೀ ಕ್ಲಬ್
(ರಿಜಿಸ್ಟರ್ಡ್)
ಮತ್ತು
ಕಾಫಿ — ಊಟದ - ಹೋಟೆಲ್
ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪದಲ್ಲಿದೆ ರುಚ್ಯತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾಳಿ ಬೆಳಕು ನೀರು ಮತ್ತು ಇತರ ಅನುಕೂಲಗಳಿರುವ ಕೊಠಡಿಗಳು, ಭೋಜನ ಸಮಾರಂಭ ಟೀಪಾರ್ಟಿಗಳಿಗೆ ವಿಶಾಲವಾದ ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆಮಾಡುವೆವು.

ಪ್ರೊಪ್ರೈಟರ್ಸು—
ಶಿ. ಕೆನ್ನಯ್ಯ, ಬಿಚ್. ಕೆರಿಬಸಪ್ಪ.

ಮ. ಗಾಂಧಿ

ಈ ವಾರ ಕಾಥಿಯವಾರ ವರಿಷತ್ತಿನ ಮುಖಂಡರು ಮಹಾತ್ಮ ಗಾಂಧಿಯವರೊಡನೆ ತಮ್ಮ ತಮ್ಮ ನ್ಯಾಂತ್ಯಗಳಿಗೆ ಸಂಬಂಧಿಸಿದ ರಾಜಕೀಯಗತಿಯನ್ನು ಚರ್ಚಿಸಿದರು. ತಮ್ಮ ಸೂತಸ ತತ್ವದ ಸ್ವಕಾರ ತಕ್ಕ ಸಲಹೆಗಳನ್ನು ಮಹಾತ್ಮರು ಕೊಟ್ಟರು. ಶುಕ್ರವಾರದ ದಿನ ಬೊಂಬಾಯಿಗೆ ಮಹಾತ್ಮರು ಬಂದಿದ್ದರು. ಮುಖಂಡರೊಡನೆ ಚರ್ಚೆಯು ಸಾಗಿದೆ. ತಿರುವಾಂಕೂರಿನ ಕಾಂಗ್ರೆಸ್ ಶಿಷ್ಟಮಂಡಲದವರು ೨ ದಿನಗಳವರೆಗೂ ಮಾತುಕತೆಗಳನ್ನು ಸಾಗಿಸಿದರು. ಅವರು ಈಗಿನ ಸಂದರ್ಭದಲ್ಲಿ ಯಾವ ಕಾರ್ಯಕ್ರಮ ಕೈಗೊಳ್ಳುವಬಗ್ಗೆ ಸೂಕ್ತ ಉಪದೇಶವನ್ನು ಮಹಾತ್ಮರು ಕೊಟ್ಟರು.

ತಿರುವಾಂಕೂರು

ನ್ಯಾಯಾಧೀಶರ ನಿವೃತ್ತನೇತನವು ನಿಲ್ಲಿಸಲ್ಪಟ್ಟಿತು.

ತಿರುವಾಂಕೂರು ಹೈಕೋರ್ಟು ನ್ಯಾಯಾಧೀಶರಾಗಿ ಈಗ ರಿಟೈರ್ಡ್ ಆಗಿರುವ ಚಂಗನಚೇರಿ ಪರಮೇಶ್ವರನ್ ಪಿಳ್ಳೈಯವರ ಪೆನ್ಶನ್ನನ್ನು ಸರಕಾರದವರು ನಿಲ್ಲಿಸಿರುವರು. ಅವರು ತಮ್ಮ ಲೇಖನಗಳಿಂದ ಸ್ವೇಚ್ಛಾ ಕಾಂಗ್ರೆಸ್‌ನ ಶಾಸನಭಂಗ ಚಳುವಳಿಗೆ ಪ್ರೋತ್ಸಾಹಕೊಟ್ಟರೆಂದೂ, ಅವರ ಈಚಿನ ಕಾರ್ಯಗಳು ಸರಕಾರಕ್ಕೆ ಭೂಷಣವನ್ನೆಲ್ಲೆಂದೂ, ಈ ಕಾರಣ ಅವರ ಪೆನ್ಶನ್ ನಿಲ್ಲಿಸಲಾಗಿದೆಯೆಂದೂ ಸರಕಾರದವರು ಪ್ರಕಟಿಸಿರುತ್ತಾರೆ. ಶ್ರೀ ಪರಮೇಶ್ವರ ಪಿಳ್ಳೆಯವರು ಕೇರಳ ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿಯೂ, ಸ್ವೇಚ್ಛಾ ಕಾಂಗ್ರೆಸ್‌ನ ಸದಸ್ಯರಾಗಿಯೂ ಇರುತ್ತಾರೆ.

National Planning Committee.

ಹಿಂದೂಸ್ಥಾನದ ಆರ್ಥಿಕೋದ್ಧಾರ ಸಮಿತಿ.

ಕಾಂಗ್ರೆಸ್‌ನಿಂದ ಸ್ಥಾಪಿಸಲ್ಪಟ್ಟ ಆರ್ಥಿಕೋದ್ಧಾರ ಸಮಿತಿಯು ಪಂಡಿತ ಜವಹರಲಾಲರ ಅಧ್ಯಕ್ಷತೆಯಲ್ಲಿ ಕೆಲಸಮಾಡುತ್ತಿರುವುದು ಸರಿಯಷ್ಟೆ. ಸಮಿತಿಯು ಪ್ರಶ್ನಮಾಲಿಕೆಗಳನ್ನು ಹೊರಡಿಸಿ ವ್ಯಾಂತೀಯ ಸರಕಾರಗಳಿಗೂ, ವ್ಯಾಪಾರೀ ಸಂಸ್ಥೆಗಳಿಗೂ ಉತ್ತರಗಳಿಗಾಗಿ ಬೇಡಿದ್ದಿತ್ತು. ಬೊಂಬಾಯಿನಲ್ಲಿ ಕೂಡಲಿರುವ ಈ ಸಮಿತಿಯು ಈ ಉತ್ತರಗಳನ್ನು ಪರಿಶೀಲಿಸಿ ಕಾರ್ಯಕ್ರಮವನ್ನೇರ್ಪಡಿಸಲಿರುವುದು. ಮಧ್ಯಾಸ್ಥ ಆರ್ಥಿಕ ಮಂತ್ರಿಗಳಾದ ಶ್ರೀ ವಿ ಯಂ. ಗಿರಿಯವರು ಇಷ್ಟರಲ್ಲೇ ಬೊಂಬಾಯಿಗೆ ಹೋಗಲಿರುವರು.

ಅವುಂಧ ಸಂಸ್ಥಾನದ ಸುಧಾರಣೆಗಳು

ಸಂಸ್ಥಾನದ ರಾಜ್ಯಾಡಳಿತದ ಹೊಸ ಕಾನೂನಿಯ ಪ್ರಕಾರ ರಾಜಾ ಸಾಹೇಬರು ತಮ್ಮ ಮಕ್ಕಳಾದ ರಾಜಕುಮಾರ ಅಪ್ಪಾಸಾಹೇಬರನ್ನು ಸಂಸ್ಥಾನದ ಮುಖ್ಯ ಮುಖ್ಯಮಂತ್ರಿಗಳಾಗಿ ನಿಯಮಿಸುವನರಿದ್ದಾರೆ. ಮೊದಲಿನ ದಿವಾನರಾಗಿದ್ದ ರಾವಸಾಹೇಬ ಎಸ್. ಜಿ. ದಾರ್ಶನೆಯವರಿಗೆ 30 ವರ್ಷಗಳು ಸರ್ವೀಸು ಮುಗಿದಿರುವ ಕಾರಣ ಇವರು ನಿವೃತ್ತರಾಗುವರು. ರಾಜಕುಮಾರ ಅಪ್ಪಾಸಾಹೇಬರು ಸಂಸ್ಥಾನ ಅಸೆಂಬ್ಲಿಯ ಆರಿಸಲ್ಪಟ್ಟ ಸದಸ್ಯರಾಗಿರುವರು. ಪ್ರಜಾಪಕ್ಷದಿಂದ ಆವರೇ ಪ್ರಥಮದಲ್ಲಿ ಮುಖ್ಯಮಂತ್ರಿಗಳಾಗಿರುವರು. ಅವರು ತಮ್ಮ ಸಹಾಯಕ ಮಂತ್ರಿಗಳನ್ನಾರಿಸಿಕೊಂಡು ರಾಜರ ಒಪ್ಪಿಗೆಗೆ ಕಳುಹಿಸಲಿರುವರು.

ಆದವಾನಿ

ಕನ್ನಡದ ಬಗ್ಗೆ ಸ್ಫೂರ್ತಿ

31-5-39 ನೆಯ ದಿನ ಆದವಾನಿ ಕರ್ನಾಟಕ ಸಂಘದವರು ಶ್ರೀ ವೆಂಕಟ ನರಸಪ್ಪನವರ ದೇವಸ್ಥಾನದಲ್ಲಿ ಶ್ರೀಮಾನ್ ನೈ. ಗೋವಿಂದರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ರಾಯದುರ್ಗದ ರಿಟೈರ್ಡ್ ತೆಲುಗು ಪಂಡಿತರಾದ ಶ್ರೀ ವಿದ್ವಾನ್ ಕೆ. ಎಂ. ಕರಿಬಸವಶಾಸ್ತ್ರಿಗಳು "ಕನ್ನಡ ಪ್ರದೇಶದಲ್ಲಿ, ತೆಲುಗು ಭಾಷೆಯ ಪರಿಸ್ಥಿತಿ"ಯನ್ನುವ ವಿಷಯದಬಗ್ಗೆ ಉಪನ್ಯಾಸಮಾಡಿದರು. ಸಭ್ಯರು ಈ ಕೆಳಗೆ ಕಂಡ ತೀರ್ಮಾನಗಳನ್ನು ಏಕವಾಕ್ಯದಿಂದ ಆನೋದಿಸಿದರು.

ಆದವಾನಿಯಲ್ಲಿ ಕನ್ನಡವೇ ಮಾತೃಭಾಷೆಯಾಗಿರುವ ಜನರೆಲ್ಲರೂ ತಮ್ಮ ಮಕ್ಕಳನ್ನು ಕನ್ನಡ ಪಾಠಶಾಲೆಗೆ ನಿರ್ಬಂಧವಾಗಿ ಕಳುಹಿಸಬೇಕೆಂತಲೂ, ಆದವಾನಿಯಲ್ಲಿ ನಡೆಯುವ ಪತ್ರವ್ಯವಹಾರಗಳನ್ನು ಸಬ್ ರಿಜಿಸ್ಟ್ರಾರು ಆಫೀಸಿನ ಪತ್ರವ್ಯವಹಾರಗಳನ್ನು ಕನ್ನಡದಲ್ಲೇ ನಡೆಯಿಸುವಂತಾಗಬೇಕೆಂತಲೂ, ಆದವಾನಿಯ ಜನಗಳಲ್ಲಿ ನಿರಕ್ಷರತೆಯು ನಿರ್ನಾಮವಾಗಬೇಕಾದರೆ ರಾತ್ರಿ ಪಾಠಶಾಲೆಯನ್ನು ಮುನಿಸಿಪಾಲಿಟಿಯವರು ಸ್ಥಾಪಿಸಬೇಕೆಂತಲೂ ತೀರ್ಮಾನಮಾಡಿರುವರು. ಈ ತೀರ್ಮಾನಗಳನ್ನು ಮುನಿಸಿಪಾಲಿಟಿಯವರಿಗೂ, ಸಬ್ ರಿಜಿಸ್ಟ್ರಾರು ಆಫೀಸಿನವರಿಗೂ, ನನಸಂದೇಶ, ಸಂಯುಕ್ತ ಕರ್ನಾಟಕ, ಸ್ವತಂತ್ರ ಕರ್ನಾಟಕ ಪಾಪ್ತಾಹಿಕ ಪತ್ರಿಕೆಗಳಿಗೂ ಕಳುಹಿಸುವಂತೆ ತೀರ್ಮಾನವಾಯಿತು.

ಕಾರ್ಯನರ್ವಹಿಗಳಾದ ಹೆಚ್. ಯಂ. ರಾಜೋಟಯ್ಯನವರು ಕರ್ನಾಟಕ ಸಂಘದ ಕಷ್ಟಪರಂಪರೆಗಳನ್ನು ಹೋಗಲಾಡಿಸುವಂತೆ ಸರ್ವರು ಏಕೀಭವಿಸಿ ಚಟುವಾಟಿಕೆಯಿಂದ ಈ ಕೆಲಸಗಳನ್ನು ಸಾಗಿಸುತ್ತ ಸರ್ವರೂ ಭಾಗಿಗಳಾಗಬೇಕೆಂದು ಹೇಳಿ ಧನ್ಯವಾದಾರ್ಪಣಮಾಡಿ ಸಭೆಯನ್ನು ಕೊನೆಗಾಣಿಸಿದರು.

ಕಾರ್ಯದರ್ಶಿ,
ಕರ್ನಾಟಕ ಸಂಘ,
1-6-39. ಆದವಾನಿ.

ಶ್ರೀಮಂತ ರಾಜಾಸಾಹೇಬರು ಪ್ರಜೆಗಳ

ಮತೋಧಾವತೆಗಳಿಗೆ ಜವಾಬ್ದಾರರಿದ್ದು, ಸಂಸ್ಥಾನದ ಪ್ರಥಮ ಸೇವಕರಾಗಿದ್ದಾರೆ. ಅವರಿಗಿರುವ ಅಧಿಕಾರಗಳ ಜೊತೆಯಲ್ಲಿ ಈ ಕೆಳಗಣ ಅಧಿಕಾರಗಳನ್ನು ಅವರು ಚಲಾಯಿಸುತ್ತಾರೆ.

24 (ಎ) ಇಂಡಿಯಾ ಸರಕಾರದೊಂದಿಗೂ, ಇತರ ಸಂಸ್ಥಾನಗಳೊಂದಿಗೂ ನಡೆಸಲ್ಪಡುವ ವ್ಯವಹಾರವು ಶ್ರೀಮಂತ ರಾಜಾಸಾಹೇಬರ ಸ್ವಂತ ವಿಚಾರಣೆಗೊಳಪಟ್ಟಿರುವುದು.

(ಬಿ) ತಮಗೆ ಅವಶ್ಯಕವೆಂದು ತೋರಿದಾಗಲೆಲ್ಲಾ ಶ್ರೀಮಂತ ರಾಜಾಸಾಹೇಬರು ಲೆಜಿಸ್ಲೇಟಿವ್ ಅಸೆಂಬ್ಲಿಯ ವಿಶೇಷಾಧಿವೇಶನವನ್ನು ಕರೆಯಬಹುದು.

(ಸಿ) ಶ್ರೀಮಂತ ರಾಜಾಸಾಹೇಬರು ಸರಕಾರದ ಅಧಿಕಾರಗಳ ಸಲಹೆ ತೆಗೆದುಕೊಂಡು ರಾಜ್ಯದ ಸುಖ ಶಾಂತಿಗಳಿಗಾಗಿ ನಿಬಂಧನೆಗಳನ್ನು ಹೊರಡಿಸಬಹುದು. ಆದರೆ ಅಸೆಂಬ್ಲಿ ಅಧಿವೇಶನವಲ್ಲದ ಕಾಲದಲ್ಲಿ ಅವು ಜಾರಿಯಲ್ಲಿರುತ್ತವೆ. ಅವುಗಳನ್ನು ಅಸೆಂಬ್ಲಿಯು ಸ್ವೀಕರಿಸಿದರೆಮಾತ್ರ ಅವು ಮುಂದು ನರಿಯುತ್ತವೆ.

(ಡಿ) ಎಲ್ಲರಿಗೂ ಕಂಪುಬರುವಂತಹ ಮರಾಡಳಿತಕ್ಕಾಗಿ ಶ್ರೀಮಂತ ರಾಜಾಸಾಹೇಬರು ಸರಕಾರದವರನ್ನು ಕಿತ್ತೊಗೆಯಬಹುದು. ಹಾಗೆ ಮಾಡಿದರೆ ಸಸ್ಪೆಂಡ್ ಮಾಡಿದ ಒಂದು ತಿಂಗಳೊಳಗಾಗಿ ಅಸೆಂಬ್ಲಿ ಅಧಿವೇಶನವನ್ನು ಕರೆಯಬೇಕು.

(ಇ) ಚುನಾವಣೆಯಾದ ಒಂದು ತಿಂಗಳೊಳಗಾಗಿ ಪಂಚಾಯ್ತಿಯ ಅಥವಾ ಲೆಜಿಸ್ಲೇಟಿವ್ ಅಸೆಂಬ್ಲಿಯ ಸದಸ್ಯರ ಚುನಾವಣೆಯನ್ನು ಸರಕಾರದ ಸಿಸ್ಸಾರ್ಸಿನಿಂದ ಶ್ರೀಮಂತ ರಾಜಾಸಾಹೇಬರು ರದ್ದುಗೊಳಿಸಬಹುದು.

25 (ಎ) ತಮಗೆ ಕೊಟ್ಟ ಅಧಿಕಾರದಿಂದ ಮಾಡಿದ ಕಾಯ್ದೆ, ಕಂಟ್ರಾಕ್ಟು ವಗೈರೇಗಳನ್ನು ಶ್ರೀಮಂತ ರಾಜಾಸಾಹೇಬರ ಹೆಸರಿನಿಂದಮಾಡಿ ಅವರ ಹೆಸರಿನಿಂದಲೇ ಚಲಾಯಿಸಬೇಕು.

(ಬಿ) ಶ್ರೀಮಂತ ರಾಜಾಸಾಹೇಬರು ತಮ್ಮ ರಾಜಾಧಿಕಾರದಿಂದ ಈ ಆಕ್ಟು ಬರುವುದರೊಳಗಾಗಿ ಮಾಡಿದ ಕಂಟ್ರಾಕ್ಟುಗಳೆಲ್ಲಾ, ಸರಕಾರದ ಪರವಾಗಿ ಮಾಡಿದವುಗಳೆಂದೇ ಭಾವಿಸಲ್ಪಡಬೇಕು.

26 (ಎ) ಈ ಆಕ್ಟಿನಲ್ಲಿ ಕಾಣಿಸದೆ ಇದ್ದ ಮತ್ತು ಈ ಆಕ್ಟಿಗೆ ಸಂಬಂಧಿಸಿದಂತೆ ವಿವರಗಳನ್ನು ಕೊಡುವ ಉಪನಿಯಮಗಳನ್ನು ಸರಕಾರದವರು ಮಾಡಬಹುದು. ಪಂಚಾಯ್ತಿ ತಾಲೂಕಾ ಕೌನ್ಸಿಲುಗಳು ಸರಕಾರದ ಕಡೆಯಿಂದಾಗಬೇಕಾದ ಕೆಲಸಗಳು ನ್ಯಾಯ, ಲೆಕ್ಕ ತನಿಖೆ, ವಿದ್ಯಾಭ್ಯಾಸ, ನಿರುದ್ಯೋಗನಿವಾರಣೆ ಮತ್ತು ಸರಕಾರೀ ಅಧಿಕಾರಿಗಳ ಹಿತರಕ್ಷಣೆ ಈಬಗ್ಗೆ ಸರಕಾರದವರು ರೂಲ್ಸುಗಳನ್ನು ಮಾಡಬಹುದು.

(ಬಿ) ಅಂಫಾ ನಿಯಮ, ಉಪನಿಯಮುಗಳು ಲೆಜಿಸ್ಲೇಟಿವ್ ಅಸೆಂಬ್ಲಿ ಒಪ್ಪಿಗೆ ಪಡೆಯಬೇಕು. ಅಸೆಂಬ್ಲಿಯು ತನ್ನ ಕಾರ್ಯವನ್ನು ಸಾಗಿಸಲೂಕೂಡ ರೂಲುಗಳನ್ನುಮಾಡಿಕೊಳ್ಳಬಹುದು.

27, ಈ ಶಾಸನವು ಸರಿಯಾಗಿ ನಡೆಯಲೆಂಬ ಉದ್ದೇಶದಿಂದ ಈ ಕೆಳಗಣ ಅಧಿಕಾರಗಳನ್ನು ಶ್ರೀಮಂತ ರಾಜಾಸಾಹೇಬರು ತಾತ್ಕಾಲಿಕವಾಗಿ ಇಟ್ಟುಕೊಂಡಿರುವರು.

(ಎ) ಶ್ರೀಮಂತ ರಾಜಾಸಾಹೇಬರು ಪ್ರಥಮದಲ್ಲಿ ಸ್ಥಾಪಿಸಲ್ಪಡುವ ಸರಕಾರವು, ಮೊದಲನೆಯ ಎರಡು ವರ್ಷಗಳು ಮುಗಿಯುವವರೆಗೂ, ಅಸೆಂಬ್ಲಿಯ ವಿಶ್ವಾಸರಾಹಿತ್ಯ ತೀರ್ಮಾನಕ್ಕೆ ಒಳಪಡುವುದಿಲ್ಲ.

(ಬಿ) ಈ ಶಾಸನವು ಪ್ರಾರಂಭವಾದಮೇಲೆ 5 ವರ್ಷಗಳವರೆಗೆ ಶ್ರೀಮಂತ ರಾಜಾಸಾಹೇಬರು ಐದು ಜನರವರೆಗೂ ಸದಸ್ಯರನ್ನು ಲೆಜಿಸ್ಲೇಟಿವ್ ಅಸೆಂಬ್ಲಿಗೆ ಕಳುಹಿಸಬಹುದು. ಈ ಸದಸ್ಯರ ಅವಧಿಯು ಒಂದು ವರ್ಷಕ್ಕಿಂತಲೂ ಹೆಚ್ಚಿಗೆ ಇರಬಾರದು.

(ಸಿ) ಶ್ರೀಮಂತ ರಾಜಾಸಾಹೇಬರ ಸ್ವಂತ ಖರ್ಚು ಮೊದಲಿನ ಐದು ವರ್ಷಗಳಲ್ಲಿ ಒಂದು ವರ್ಷಕ್ಕೆ **36000** ನಿಶ್ಚಯಿಸಲ್ಪಟ್ಟಿದೆ. ಈ ಹಣದಲ್ಲಿ ರಾಜಕೀಯ ಪೆನ್ಶನ್‌ಗಳು ಸೇರುವುದಿಲ್ಲ.

28 (ಎ) ಈ ಶಾಸನದ, ವಿವರಗಳಿಗಾಗಿ ಏರ್ಪಡಿಸಿದ ಉಪನಿಯಮುಗಳ ವಿಷಯದಲ್ಲಿ ಭಿನ್ನಾಭಿಪ್ರಾಯವಾಗುವುದಾದರೆ, ಸರಕಾರದವರೇ ಆಗಲಿ. ಸಂಬಂಧಿಸಿದ ಯಾವ ವ್ಯಕ್ತಿಯೇ ಆಗಲಿ. ಹೈಕೋರ್ಟಿಗೆ ಅರ್ಜಿಯನ್ನಿಟ್ಟುಕೊಳ್ಳಬೇಕು. ಅರ್ಜಿಕೊಟ್ಟು 3 ತಿಂಗಳುಗಳೊಳಗಾಗಿ ಹೈಕೋರ್ಟಿನವರು ತಮ್ಮ ತೀರ್ಮಾನವನ್ನು ಕೊಡತಕ್ಕದ್ದು.

(ಬಿ) ಹೈಕೋರ್ಟಿನ ತೀರ್ಪು ಕೊನೆಯದಾಗಿದೆ. ಸಂಬಂಧಿಸಿದವರೆಲ್ಲಾ ಅದರಪ್ರಕಾರ ನಡೆಯಬೇಕು. ಅದಕ್ಕೆ ಬೇರೆ ಅಪೀಲೇ ಇಲ್ಲ.

ಮಾನಾಕ್ಷಿ ಭವನ ಕಾಫಿಕ್ಲಬ್

[ರಿಜಿಸ್ಟರ್ಡ್]

ರಾಜೀಗಳು—

ಕಾಫಿ ಕ್ಲಬ್ ಬೆಂಗಳೂರು ರೋಡ್ **ಊಟ ವಸತಿಗೃಹ** ಬ್ರಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪದಲ್ಲಿ ತಯಾರಿಸಿದ ಸಿಹಿಯಾರದ ಫಲಹಾರವಸ್ತುಗಳು.

ಒಳ್ಳೆಯ ಊಟದ ವ್ಯವಸ್ಥೆ ಧಾರಾಳವಾಗಿ ಗಾಳಿ, ಬೆಳಕು, ಬಯಸಿದ ಮಹತಿಯ ಮೇಲಿನ ಕೊಠಡಿಗಳು ಆಧುನಿಕ ವ್ಯವಸ್ಥೆ

ಒಮ್ಮೆ ಬಂದು ಪರೀಕ್ಷಿಸಿರಿ.

ಪ್ರಕಟಣೆ ೯.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ಸಾಧಾರಣ ಸಭೆ

(ಧಾರವಾಡ ತಾ|| ೧೯-೫-೩೯)

ಹಾಜರಿದ್ದ ಸದಸ್ಯರು ೮೩.

ಅಧ್ಯಕ್ಷರು **ಶ್ರೀ ಶಿವಪ್ಪ ಹೊಸಮನಿ**

೧. ದುಃಖ ಪ್ರದರ್ಶನ:-

ಹೋದ ವರ್ಷದ ಪ್ರಾಂತೀಯ ಸಮಿತಿಯ ಸದಸ್ಯರೂ ಕೊಡಗಿನ ಸುಪ್ರಸಿದ್ಧ ಕಾಂಗ್ರೆಸ ಕಾರ್ಯಕರ್ತೆಯರೂ ಆದ ಶ್ರೀ. ನೀಲಮ್ಮ ಬಿ. ಟಿ. ಜಿ. ಕ್ಷತ್ರ ಇವರ ಆಕಾಲಿಕ ನಿಧನಕ್ಕಾಗಿ ಈ ಸಭೆಯು ತನ್ನ ದುಃಖವನ್ನು ವ್ಯಕ್ತಪಡಿಸುತ್ತದೆ.

೨. ಹಿಂಸೆಯ ಖಂಡನೆ:-

ಉದ್ರೇಕಗೊಳಿಸುವ ಯಾವ ಪ್ರಸಂಗ ಒದಗಿದರೂ ಯಾವ ಬಗೆಯ ಹಿಂಸೆಯನ್ನು ಆಚರಿಸುವದು ಸಮರ್ಥನೀಯವಲ್ಲ ಎಂಬುದು ಕಾಂಗ್ರೆಸ್ಸಿನ ಧ್ಯೇಯವಾದುದರಿಂದ ಸದ್ಯದ ಪರಿಸ್ಥಿತಿಯನ್ನು ಸರ್ವತೋಮುಖ ಆಲೋಚಿಸಿ ಪ್ರಾಂತೀಯ ಕಾಂಗ್ರೆಸ ಸಮಿತಿಯ ಈ ಸಭೆಯು ತಾ|| ೭-೫-೩೯ ರಂದು ರಾಮದುರ್ಗದಲ್ಲಿ ಹಿಂಸಾವೃತ್ತಿ ಜನಜಂಗುಳಿಯಿಂದ ನಡೆಸಲ್ಪಟ್ಟ ಕ್ರೂರ ಭಯಾನಕವಾದ ಹಿಂಸಾಕಾರ್ಯವನ್ನು ಅತ್ಯಂತ ತೀವ್ರವಾಗಿ ಖಂಡಿಸುತ್ತದೆ.

ಈ ದೇಶದಲ್ಲಿ ಸಾರ್ವಜನಿಕ ಚಳವಳಿಯನ್ನು ನಡೆಸುವ ವಿಷಯದಲ್ಲಿ ಸತ್ಯ ಮತ್ತು ಅಹಿಂಸಾ ಮಾರ್ಗವೇ ಉತ್ತಮ ಪರಿಣಾಮಕಾರಿಯಾದ ಮಾರ್ಗವು ಎಂಬ ತನ್ನ ನಂಬಿಗೆಯನ್ನು ಈ ಸಭೆಯು ಪುನಃ ಸಾರುತ್ತದೆ. ಹಾಗೂ ಈ ಒಗೆಯಂತೆ ಚಳವಳಿಯನ್ನು ನಡೆಸುವ ಕೆಲಸದಲ್ಲಿ ಜನಸಾಮಾನ್ಯರು ಕಾಂಗ್ರೆಸ್ಸಿಗೆ ಸಹಾಯ ಮಾಡಬೇಕೆಂದು ಅವರನ್ನು ಕೇಳಿಕೊಳ್ಳುತ್ತದೆ.

೩. ಲೂಟಾದವರಿಗೆ ಸಹಾನುಭೂತಿ-

ಏಪ್ರೆಲ್ ೭ ನೇ ತಾರೀಖಿನ ರಾತ್ರಿ ಮತ್ತು ಆನಂತರ ರಾಮದುರ್ಗದ ಸಂಸ್ಥಾನದಲ್ಲಿ ಲೂಟಾದ ಸರಕಿನ ಒಡೆಯರ ವಿಷಯದಲ್ಲಿ ಕ. ಪ್ರಾ. ಕ್ರಾ. ಸಮಿತಿಯ ಈ ಸಭೆಯು ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ. ಅದೇಕಾಲಕ್ಕೆ ರಾಮದುರ್ಗ ಸಂಸ್ಥಾನದ ಆಧೀನ ಒಳರ ವ್ಯಕ್ತಿ-ವಿತ್ತ [Person and property] ಗಳನ್ನು ರಕ್ಷಿಸುವ ವಿಷಯದಲ್ಲಿ ಕರ್ತವ್ಯಚ್ಯುತಿಯನ್ನು ತೋರಿಸಿದವರು ಎಂದು ಬಹುಜನರು ವಿಶ್ವಸನೀಯನಾಗಿ ನಂಬುತ್ತಿರುವವನನ್ನು ಜನುಲಕ್ಷಿಸಿ ಆ ಕರ್ತವ್ಯಚ್ಯುತಿಯ ಬಗ್ಗೆ ಈ ಸಭೆಯು ಅತ್ಯಂತ ವಿಷಾದವನ್ನು ವ್ಯಕ್ತಗೊಳಿಸುತ್ತದೆ.

೪. ಮಹಾತ್ಮಜಿಯವರ ಕಡೆಗೆ ನಿಷ್ಠೆ ಮಂಡಲ.-

ರಾಮದುರ್ಗ ದುರಂತದ ಸಂಬಂಧವಾಗಿ ಕರ್ನಾಟಕದ ಕಾಂಗ್ರೆಸ ಕಾರ್ಯಕರ್ತರಲ್ಲಿ ಹಲವು ಪಾತಳೀಭಗಳುಂಟಾಗುವದಂದ, ಈ ವಿಷಯದಲ್ಲಿ ಗಾಂಧಿಜಿಯವರ ಆದೇಶವನ್ನು ಪಡೆದು ಆದರಂತೆ ವರ್ತಿಸಬೇಕೆಂದು ಈ ಸಭೆಯು ನಿಶ್ಚಯಿಸುತ್ತದೆ. ಏಕೆಂದರೆ ಗಾಂಧಿಜಿಯವರ ನಿಷ್ಪಕ್ಷಪಾತ ಬುದ್ಧಿಯಲ್ಲಿ, ಸತ್ಯ ಅಹಿಂಸೆಗಳ ಅರ್ಥವನ್ನು ಹೆಚ್ಚುವದಕ್ಕೆ ಅವರೇ ಏಕಮೇವ ಅಧಿಕಾರಿಗಳಿರುವರೆಂದು ನಂಬಿರುತ್ತದೆ.

ಈ ಕೇಳಿನ ಮತ್ತು ತತ್ಸಂಬಂಧಿ ಇತರ ವಿಷಯಗಳನ್ನು ಗಾಂಧಿಜಿಯವರ ಮುಂದಿಡಲು ಈ ಕೆಳಗಿನ ಸದ್ಗೃಹಸ್ಥರನ್ನು ಈ ಸಭೆಯು ನೇಮಿಸುತ್ತದೆ.

ವಿಚಾರಿಸುವ ವಿಷಯಗಳು:-

ಮಾರ್ಚ್ ೧೯೩೯ ರಿಂದ ರಾಮದುರ್ಗದಲ್ಲಿ ನಡೆದ ಸಾರ್ವಜನಿಕ ಚಳವಳಿಯ ಸ್ವರೂಪ ಮತ್ತು ವಿಸ್ತಾರ, ಸಂಸ್ಥಾನದ ಅಧಿಕಾರಿಗಳ ಆರೋಪಿಕ ದಬ್ಬಾಳಿಕೆ, ಏಪ್ರೆಲ್ ೫ ರಿಂದ ೭ ನೇ ತಾರೀಖಿನ ವರೆಗೆ ರಾಮದುರ್ಗದಲ್ಲಿ ನಡೆದ ಘೋರಂತಗಳು, ಪೋಲೀಸರು ಗುಂಡು ಹಾರಿಸಿದ್ದು ಸಮರ್ಥನೀಯವೋ ಎಂಬ ವಿಷಯ, ಏಪ್ರೆಲ್ ೭ ನೇ ತಾರೀಖಿನ ಮಧ್ಯರಾತ್ರಿ ಮತ್ತು ಮುಂಜಾವ ರಾಮದುರ್ಗದಲ್ಲಿ ನಡೆದ ಲೂಟಗಳು ಧ್ವಜಸ್ತಂಭದ ವಿಷಯ, ಆರೋಪಿತವಾದ ಸ್ತ್ರೀಯರ ಪೀಡೆ ಮತ್ತು ಈ ಎಲ್ಲ ವಿಷಯಗಳನ್ನು ಗಾಂಧಿಜಿಯವರ ಕಡೆಗೆ ಕಳಿಸಲ್ಪಟ್ಟ ಹೇಳಿಕೆ ಕೇಳಿಕೆಗಳು. ಈ ವಿಷಯಕ ವಿಚಾರಣೆಯಾಗಿರತಿ ಮತ್ತು ವಿಚಾರಕರು ಇತ್ಯಾದಿ.

ಈ ಕೆಳಗಿನ ಸದ್ಗೃಹಸ್ಥರಿಗೆ ಅಧಿಕಾರ ಕೊಡಲ್ಪಟ್ಟಿದೆ.

೧. ಶ್ರೀ. ಎಂ. ಪಿ. ಕಾಟೇಲ
೨. ,, ಎಸ್. ಎನ್. ಅಂಗಡಿ
೩. ,, ಬಿ ಎನ್. ಗುಪ್ತ
೪. ,, ಬಿ. ಎನ್. ಮುನವಳ್ಳಿ
೫. ,, ಗೆಂಗಾಧರರಾವ ದೇಶಪಾಂಡೆ
೬. ,, ರಂಗರಾವ ದಿವಾಕರ
೭. ,, ಹೆಣಮಂತರಾವ ಕೌಜಲಗಿ ಮತ್ತು
೮. ,, ನಾ. ಸು. ಹರ್ಡೀಕರ [ಕಾರ್ಯವಾಹಕರು]

ಈ ಸದ್ಗೃಹಸ್ಥರು ತಮ್ಮ ಕಾರ್ಯವನ್ನು ಬಹಳವೆಂದರೆ ಒಂದು ತಿಂಗಳಲ್ಲಿ ಮುಗಿಸಬೇಕೆಂದು ಈ ಸಭೆಯು ನಿಶ್ಚೈಸುತ್ತದೆ.

ಮೇಲ್ಕಾಣಿಸಿದ ಗೃಹಸ್ಥರು ಗಾಂಧಿಜಿಯವರ ಕಡೆಗೆ ಹೋಗಿ ಬಂದಬಳಿಕ ಅವರು ಕೊಟ್ಟ ಆದೇಶವನ್ನು ಕ. ಪ್ರಾಂ. ಕಾಂ. ಸಮಿತಿಗೆ ಒಪ್ಪಿಸಬೇಕು.

ಶಾಂತತಾ ಸಮಿತಿ:-

ರಾಮದುರ್ಗದ ರಾಜಪ್ರಭುವಿನ ಸಡುವಿನ ಇಂದಿನ ಅವಿಶ್ವಾಸದ ಕಾರಣವನ್ನು ಪರೀಕರಿಸಿ ಸಂಸ್ಥಾನದಲ್ಲಿ ಮೊದಲಿನ ಶಾಂತಪರಿಸ್ಥಿತಿಯನ್ನುಂಟುಮಾಡಿ ಆಡಳಿತವು ಮೊದಲಿನಂತೆ ಸರಳವಾಗಿ ನಡೆಯುವಂತಹ ವಾತಾವರಣವನ್ನು ಹುಟ್ಟಿಸಲು ಎಲ್ಲರ ವಿಶ್ವಾಸಕ್ಕೆ ಪಾತ್ರರಾದ ಕೆಳಗಿನ ಮಹನೀಯರೊಂದು ಉಪಸಮಿತಿಯನ್ನು ಈ ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯು ನೇಮಿಸುತ್ತದೆ. ಈ ಕಾರ್ಯವನ್ನು ಪೂರೈಸಲು ಅವಶ್ಯವಿದ್ದ ಎಲ್ಲ ಕಾರ್ಯಕ್ರಮಗಳನ್ನು ಕೈಕೊಳ್ಳಲು ಸಮಿತಿಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿರುತ್ತದೆ.

೧. ಶ್ರೀ. ಗಂಗಾಧರರಾವ ದೇಶಪಾಂಡೆ
೨. ,, ಗುದ್ಲೆಪ್ಪ ಹಳ್ಳಿಕೇರಿ
೩. ,, ಅಂದಾನಪ್ಪ ದೊಡ್ಡಮೇಟಿ
೪. ,, ರಂಗರಾವ ದಿವಾಕರ
೫. ,, ವೆಂಕರಡ್ಡಿ ಹೂಲಿ ಮತ್ತು
೬. ,, ಶಿವಾಶಂಕರಪ್ಪ ದೇವಪೂರ [ಕಾರ್ಯವಾಹಕರು]

(ಮುಂದಿನ ಸ್ಫುಟನನ್ನು ನೋಡಿರಿ.)

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

(ಹಿಂದಿನ ಪುಟದಿಂದ)

೬. ಪತ್ರಿಕೆಗಳಲ್ಲಿ ಬಿಕ್ಷೆ

ರಾಮದುರ್ಗ ದುರಂತ ಸಂಬಂಧದಿಂದ ನಡೆಯಲಿರುವ ವಿಚಾರಣೆಯು ಪೂರ್ಣ ಮುಗಿಯುವನರಿಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಆಯಾ ಜನರು ಹಾಗು ವಿಶೇಷತಃ ವೃತ್ತಪತ್ರಿಕೆಯವರು ತಡೆಯಬೇಕೆಂದೂ ರಾಮದುರ್ಗ ಪ್ರಜೆಗಳ ಹಿತಕ್ಕೆ ಭಂಗಕಾಗುವಂತಹ ಯಾವ ತರಹದ ಲೇಖಗಳನ್ನು ಬರೆಯಬಾರದೆಂದೂ ರಾಮದುರ್ಗ ಸಂಸ್ಥಾನದಲ್ಲಿಯೂ ಹೊರಗೂ ಶಾಂತ ಹಾಗು ಸ್ವಭಾವಿಕ ವಾತಾವರಣವನ್ನುಂಟುಮಾಡುವ ಕಾರ್ಯದಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಗೆ ಸಹಾಯವಾಗಬೇಕೆಂದೂ ಈ ಸಭೆಯು ಆಯಾ ಜನರಿಗೂ ವೃತ್ತಪತ್ರಿಕೆಯವರಿಗೂ ವಿನ್ನವಿಸುತ್ತದೆ

ಸಾ. ಸು. ಹಡೀಕರ
ಗೌ|| ಕಾರ್ಯದರ್ಶಿ
ಧಾರವಾಡ
ತಾ|| ೩೭-೫-೩೯

ಬಳ್ಳಾರಿ ನಗರ

ಸಾರ್ವಜನಿಕ ಆರೋಗ್ಯ ಶಾಸನ.

29ನೇ ತಾ. ಸಾಯಂಕಾಲ ಟೌನಹಾಲ ಕಾಂಪೌಂಡಿನಲ್ಲಿ ಜ. ಅಬ್ದುಲ್ ರಾವುಫ್‌ಸಾಹೇಬರ ಅಧ್ಯಕ್ಷತೆಯಲ್ಲಿ ಶ್ರೀ ಬಿ. ವಿ. ಕೇಶವಗಿರಿರಾಯರು ಸರ್ಕಾರದವರು ಸಾಸುಮಾಡಿದ ಸಾರ್ವಜನಿಕ ಆರೋಗ್ಯ ಶಾಸನದ ಕಲಂಗಳ ವಿಷಯದಲ್ಲಿ ವಿವರಗಳನ್ನು ಹೇಳಿ ಸಾರ್ವಜನಿಕರೂ. ಆರೋಗ್ಯ ಶಾಖಾಧಿಕಾರಿಗಳೂ ಹೇಗೆ ಸಹಾಯ ಮಾಡಬೇಕೆಂಬುದನ್ನು ಹೇಳಿದರು. ಶ್ರೀ ಕೇಶವರಾಯರು ಮ್ಯುನಿಸಿಪಾಲಿಟಿಯ ಕರ್ತವ್ಯಗಳನ್ನು ನಿರೂಪಿಸಿ, ನಗರ ಸ್ವಚ್ಛತೆಯಬಗ್ಗೆ ಸಾರ್ವಜನಿಕರು ಮಾಡಬೇಕಾದ ಕೆಲಸಗಳನ್ನು ಹೇಳಿದರು. ಅಧ್ಯಕ್ಷರು ಈ ವಿಷಯದಲ್ಲಿ ತಮ್ಮ ಅಧಿಕಾರಿಗಳೊಂದಿಗೆ ಪೂರ್ಣ ಸಹಕರಿಸುವುದಾಗಿ ನಾಗ್ದಾನವಿತ್ತರು.

ರಾಯರಸೀಮೆ ಮಹಾಸಭೆಯ ಸ್ಥಾಯೀ ಸಮಿತಿ

ಶ್ರೀ ಲಿಂಗಾರೆಡ್ಡಿಹುವರ ಭವನದಲ್ಲಿ ಶ್ರೀ ವೀರಾಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕೂಡಿದ ಸ್ಥಾಯೀ ಸಮಿತಿಯಲ್ಲಿ 31ನೇ ತಾ. ಸಾಯಂಕಾಲ ಈ ಕೆಳಗಿನ ನಿರ್ಣಯಗಳು ಪಾಸಾದವು.

1) ಧಾನಾ ರಾಜಕೀಯ ಸಭೆಯಲ್ಲಿ ಶ್ರೀ ಗಂಗಾಧರರಾವ್ ದೇಶಪಾಂಡೆಯವರು ಸಂಕುಚಿತ ಪ್ರಾಂತೀಯತೆಯನ್ನು ದೂರವಿಡಬೇಕೆಂದು ಹೇಳಿದುದನ್ನು ಈ ಸಭೆಯು ಅಭಿನಂದಿಸುತ್ತಾ ಕರ್ನಾಟಕದ ಪ್ರಮುಖ ಕಾಂಗ್ರೆಸ್ ಮುಖಂಡರ ಈ ಹೇಳಿಕೆಯನ್ನು ಎಲ್ಲರೂ ಅದರಲ್ಲೂ ಮದ್ರಾಸ್ ಕಾಂಗ್ರೆಸ್ ಕಾರ್ಯಕರ್ತರು ಅನುಕರಿಸಬೇಕೆಂದು ಬೇಷುತ್ತದೆ.

2) ಮದ್ರಾಸ್ ಸರ್ಕಾರದವರು ತುಂಗಭದ್ರಾ ಯೋಜನೆಯ ವಿಷಯದಲ್ಲಿ ಅನುಸರಿಸುತ್ತಿರುವ ನಿಷ್ಪಾಯುಕ್ತ ಧೋರಣೆಗಾಗಿ ವಿಷಾದಿಸುತ್ತಾ ಸ್ಥಾನೀಕ ಶಾಸನ ಸಭಾ ಪ್ರತಿನಿಧಿಗಳು ಇದನ್ನು ಕಾರ್ಯಕ್ರಮಕ್ಕೆ ತರಲು ಸರ್ಕಾರಕ್ಕೆ ಒತ್ತಾಯಪಡಿಸಬೇಕೆಂದೂ, ಈ ವರ್ಷವೇ ಪ್ರಾರಂಭಿಸಬೇಕೆಂದೂ, ಕೋರುತ್ತದೆ.

3) ಮದ್ರಾಸ ಮುಖ್ಯ ಮಂತ್ರಿಗಳು ಕೂನೂರಿನಲ್ಲಿ ಹೇಳಿದ ಭಾಷಣದ ಪ್ರಕಾರ ಮದ್ರಾಸಿನ 10 ಜಿಲ್ಲೆಗಳಲ್ಲಿ ಮದ್ಯಪಾನ ನಿರೋಧವು ಬರುವ ವರ್ಷ ಜಾರಿಗೆ ಬರುವುದೆಂಬ ಹೇಳಿಕೆಗೆ ಸಂತೋಷವನ್ನು ವ್ಯಕ್ತಪಡಿಸುತ್ತಾ ರಾಯರಸೀಮೆಯ ಬಳ್ಳಾರಿ ಅನಂತಪುರ-ಕರ್ನೂಲುಗಳನ್ನೂ ಇದರಲ್ಲಿ ಸೇರಿಸಬೇಕೆಂದು ಕೋರುತ್ತದೆ.

4) ಸರ್ಕಾರದವರು ತಾವು ಸ್ಥಾಪಿಸಿದ ಸಮಿತಿಗಳಲ್ಲಿ ರಾಯರಸೀಮೆ ಜನರಿಗೆ ಪ್ರಾತಿನಿಧ್ಯವನ್ನು ಕೊಡದಿದ್ದುದಕ್ಕೆ ವಿಷಾದಿಸುತ್ತಾ ಮುಂದಾದರೂ ಹೀಗೆಮಾಡಬಾರದೆಂದು ಆಶಿಸುತ್ತದೆ.

ಮುನಿಸಿಪಾಲಿಟಿ:- 31 ನೇ ತಾ. ಮುನಿಸಿಪಲ್ ಸಭೆಯಲ್ಲಿ ಸಾಧಾರಣ ವಿಷಯಗಳು ಚರ್ಚಿತವಾಗಿ ನಿರ್ಣಯಗಳಾದುವು. ಹೆಲ್ತಾಫೀಸರ್‌ರವರ ಉದಾಸೀನತೆಯು ಶ್ರೀ ಹನುಮಂತರಾಯರಿಂದಲೂ, ಇತರ ಸದಸ್ಯರಿಂದಲೂ ಖಂಡಿಸಲ್ಪಟ್ಟಿತು. ಜಿ ಓ, ಪ್ರಕಾರ ಭೀರ್ಮರವರಿಗೆ ನೋಟಾರು ಅಲೋಯನ್ಸ್ ರು. 40 ಮಾಸಿಕ ಕೊಡಬೇಕೆಂದಾಯಿತು.

ನೀರು ಬೆರಸಿದ ಹಾಲು ಮಾರಿದ್ದಕ್ಕೆ ಶಿಕ್ಷೆ

30ನೇ ತಾ. ಸಬ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಈ ಕೆಳಗಿನಂತೆ ಶಿಕ್ಷೆಗಳು ವಿಧಿಸಲ್ಪಟ್ಟವು.

1) ಗಾಂಧೀನಗರ - ಮರೆಮ್ಮ - ಆಳ ಹಾಲಿನಲ್ಲಿ ಶೇ 15 ಪಾಲು ನೀರು ಬೆರಸಿದ್ದಕ್ಕೆ ರು. 15 ಜುಲ್ಮಾನೆ

2) ಮಹಾನಂದಿಕೊಟ್ಟೆ - ಬಸಮ್ಮ - ಆಕಳ ಹಾಲಿಗೆ ಶೇ 8 ಪಾಲು ನೀರು ಬೆರಸಿದ್ದಕ್ಕೆ ರು. 11 ಜುಲ್ಮಾನೆ.

ಕಾಂಗ್ರೆಸ್ಸಿನ ಪಾವಲಿ ೧ ಸದಸ್ಯರು

(ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳು [ಕರ್ನಾಟಕ] ಈ ಪ್ರಕಾರ ತಿಳಿಸುತ್ತಾರೆ.)

1939ರಲ್ಲಿ ಹೊಸದಾಗಿ ಕಾಂಗ್ರೆಸ್ ಸದಸ್ಯರನ್ನು ಮಾಡುವ ಕಾಲವು ಪ್ರಾರಂಭವಾಗಿದೆ. ಅದಕ್ಕಾಗಿ ನಮ್ಮಲ್ಲಿ ಪುಸ್ತಕಗಳು ಕೂಡ ಬಂದಿವೆ ಹೋದವರ್ಷದ ಪುಸ್ತಕಗಳು ಬಾಕಿಯಾಗಿರುವವೆಂದೂ, ಆವುಗಳಲ್ಲಿ ಸದಸ್ಯರ ವಿವರಗಳನ್ನು ತುಂಬಿ ಕಳುಹಿಸಿದರೆ ಅವನ್ನು ಅಂಗೀಕರಿಸಲಾಗುವುದಿಲ್ಲವೆಂದೂ ತಿಳಿಯಬೇಕು. ಈ ಕಾರಣ ಸಂಬಂಧಿಸಿದ ಕಾಂಗ್ರೆಸ್ ಕಮಿಟಿಗಳವರು ತಮಗೆ ಎಷ್ಟೆಷ್ಟು ಪುಸ್ತಕಗಳು ಬೇಕೆಂಬುದನ್ನು ತಿಳಿಸಿ ಪುಸ್ತಕಗಳನ್ನು ಕರಿಸಿಕೊಂಡು ಸದಸ್ಯರನ್ನು ಮಾಡುವ ಕಾರ್ಯವನ್ನು ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

3 308

ನವ ಭಾರತ

ಎಸ್.ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧನಾದ ಭಂಗಾರ ಮತ್ತು ಬೆಳ್ಳಿಯ ನಮ್ಮ ಸನ್ಮಲ್ಲಿ ದೊರಯುತ್ತವೆ ನಮ್ಮ ಹೆಸರಿನ ವೀಲು

ಸ್ತಿತಿಯೊಂದು ನಮ್ಮಿಂದ ಕೊಳ್ಳುವ ಕೊಂಡ ಇರುತ್ತದೆ ನಮ್ಮ ಹೆಸರಿನ ಪ ಯು ಪತ್ರಗಳನ್ನು ಕೊಟ್ಟು ಮಾಡಿಸಿದ ಕೂಲಿ ವೇಸ್ಟೇಜ್ ಕೊಟ್ಟರೆ ಹೊಸ ನಮ್ಮಗಳನ್ನು ಕೂಡುತ್ತೇವೆ ಪೆಪ್ಪ, ಎಂಪ ' ರಾತ್ರಿಗಳಿಗೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಮ್ಮೆಸಲ ದಯಮಿಟ್ಟು ಬಂದು ಪರೀಕ್ಷಿಸಿರಿ

Sarada Ink. [Regd]

Awarded Gold Medal and Certificate of Merit at the All India Swadeshi Exhibition Bellary.

For Fountain Pens and Steel Pens

Blue Black, Red, Blue, Green & Violet

SARADA INK WORKS, (Regd.)

K. V. & Sons, BELLARY

ಶಾರದಾಇಂಕ್ (ರಿಜಿಸ್ಟರ್ಡ್)

ಬಳ್ಳಾರಿ ಅಖಿಲ ಭಾರತ ನಮ್ಮ ಸ್ವದೇಶಾಭಿಮಾನ ಪ್ರದರ್ಶನದಲ್ಲಿ ಸ್ವರ್ಣ ಪದಕವನ್ನೂ, ಶ್ರೇಷ್ಠತಾ ಪತ್ರವನ್ನೂ ಪಡೆದಿದ ಫೌಂಟನ್‌ಪೆನ್ನುಗಳಿಗೂ, ಇತರ ಲೇಖನಿಗಳಿಗೂ, ಉಪಯೋಗಿಸಲು ಶ್ರೇಷ್ಠವಾದ ಬ್ಲೂ ಬ್ಲಾಕ್ ಕೆಂಪು, ನೀಲಿ ಹಸರು ವೈಲೆಟ್ ಬಣ್ಣಗಳಲ್ಲಿ ದೊರೆಯುತ್ತದೆ

ಕೆ. ವಿ ಅಂಡ್ ಸನ್ಸ್, ಬಳ್ಳಾರಿ

NAVA BHARAT. BELLARY.

(With which is incarporated 'Congress Bulletin')

The leading Nationalist Weekly.

'ನವ ಭಾರತ ಬಳ್ಳಾರಿ.

[ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.]

The Rates of Subscription.	ಚಂದಾ ವಿವರ
Annual	ವರ್ಷ
Local 1—8—0	ಸ್ಥಳದವರಿಗೆ 1-8 0
Moffusil 2—0—0	ಪರಸ್ಥಳದವರಿಗೆ 2-0 0
Half Yearly	6 ತಿಂಗಳು
Local 1—0—0	ಸ್ಥಳದವರಿಗೆ 1 0 0
Moffusil 1—4—0	ಪರಸ್ಥಳದವರಿಗೆ 2-0-0

Patent medicines, Tonics, injections

Ayurvedic Preparations &

Oilman stores —Moderate Rates

Trial earnestly solicited

M. S. V. Bros,

Car Street, **BELLARY.**

ಇಂಗ್ಲೀಷ್ ಔಷಧಗಳು, ಇಂಜೆಕ್ಷನ್ ಮತ್ತು ಇತರ ಆಯುರ್ವೇದಿ ಔಷಧಗಳು, ಸ್ವದೇಶಿ ವಸ್ತುಗಳು ಸುಲಭ ಬೆಲೆಯಲ್ಲಿ ದೊರೆಯುತ್ತವೆ.

ಎಂ. ಯಸ್. ವಿ. ಬ್ರದರ್ಸ್,

ತೇರು ಬೀದಿ, ಬಳ್ಳಾರಿ.

The Lakshmi Medical Stores.

Chemists & Druggists, Car Street, Bellary.

ದಿ ಲಕ್ಷ್ಮೀ ಮೆಡಿಕಲ್ ಸ್ಟೋರ್ಸ್

ಔಷಧಾಲಯ ತೇರು ಬೀದಿ, ಬಳ್ಳಾರಿ.

ನಮ್ಮಲ್ಲಿ ಇಂಗ್ಲೀಷ್ ಔಷಧಗಳು, ಇಂಜೆಕ್ಷನ್, ಆಂಪ್ಯೂಲ್ಸ್, ಟಿಂಕ್ಚರ್ಸ್, ಶಸ್ತ್ರ ಚಿಕಿತ್ಸೆಗೆ ಬೇಕಾಗುವ ಸಕಲಗಳು, ಆಸ್ಪತ್ರೆಗಳು ಬೇಡಿಕೆಗಳು ಮತ್ತು ಅಸಂಬಂಧದ ಔಷಧಗಳೆಲ್ಲಾ ದೊರೆಯುತ್ತವೆ.

ವಿವಿಧ ವರ್ಣದ 'ಲಕ್ಷ್ಮೀ-ಪಿರಿಚ್' ಕಾಸಗಳನ್ನು ನಾವು ತಯಾರಿಸುತ್ತೇವೆ ನಮ್ಮ ಔಷಧಾಲಯವು ವಿವಿಧ ರಾತ್ರಿಯಲ್ಲೂ ತೆಗೆದಿರುತ್ತದೆ. ದರಗಳು ಸುಲಭ ಪರೀಕ್ಷಿಸಿ ತೃಪ್ತಿ ಹೊಂದಿರಿ.

Nava Bharat, Bellary.

REG. NO. M. 3937

Sri _____

Printed at Vittal Press, Car Street Edited & Published by T. B. Keshava Rao BELLARY.

'ಸಂದೇ ಮಾತರಂ'



(ಇದರಲ್ಲಿ 'ಕಾಂಗ್ರೆಸ್' ಬುಲೆಟಿನ್' ಸಮಾವೇಶವಾಗಿದೆ)

ಉಜ್ವಲ - ರಾಷ್ಟ್ರೀಯ ವಾರ ಪತ್ರಿಕೆ.

ಸಂಪಾದಕ — ಟಿ. ಬಿ. ಕೇಕವರಾವ್.

ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ.

ಸಂಪುಟ ೧ | ಬಳ್ಳಾರಿ. ಜೂನ್ ೧೦ನೇ ಶನಿವಾರ ೧೯೨೪. | ಸಂಖ್ಯೆ ೪೫

ಮ. ಗಾಂಧಿಯವರ ಹೊಸಬೆಳಕು.

[4ನೇ ಪುಟವನ್ನು ನೋಡಿರಿ]

★ ಎಂಪೈರ್ ಆಫ್ ಇಂಡಿಯಾ ★

ಲೈಫ್ ಅಶೂರೆನ್ಸು ಕಂಪನಿ ಲಿಮಿಟೆಡ್.

ಸ್ಥಾಪಿತ 1897.

ಉದಾರವಾದ ಯೋಜನೆಗಳು.

ಆಸ್ತಿಯ ಸೊತ್ತ	ರೂ	5,18,00,000	ಗಿಂತಲೂ ಹೆಚ್ಚಿದೆ.
ಚಾರಿಯಲ್ಲಿರುವ ಪಾಲಿಸಿಗಳ ಸೊತ್ತ	,,	14,29,00,000	,,
ಸಾರಸುದಾರರಿಗೆ ಸಲ್ಲಿಸಿದ ಹಣ	,,	6 15,00,000	,,

ಭವಿಷ್ಯದಲ್ಲಿ ಕುಟುಂಬ ಭರಣಕ್ಕೇರ್ಪಾಟು ಮಾಡಬೇಕಾದುದು, ಪ್ರತಿಯೊಬ್ಬ ಕುಟುಂಬೀಕನ ಕರ್ತವ್ಯವಾಗಿದೆ. ವಿಶೇಷ ಪರಿಸ್ಥಿತಿಯಿಂದ ಸಂಪಾದನೆಯು ಕುಗ್ಗಿ ಹೋಗುವ ದಿನಗಳು ಬರಬಹುದು. ಅಂಥಾ ಕಾಲಕ್ಕೊಸ್ಕರ ಜೀವ ವಿಮೆಯ ಪಾಲಿಸಿಯನ್ನು ರಕ್ಷಿಸಬೇಕಾದುದು ಅತ್ಯಗತ್ಯವಾಗಿದೆ

ಮುಖ್ಯ ಕಾರ್ಯಾಲಯ
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ,
ಬೊಂಬಾಯಿ.

★

ಶಾಖೆ.
152/53 ಕಮರ್ಶಿಯಲ್ ಸ್ಟ್ರೀಟ್,
ಬೆಂಗಳೂರು.

THE NAVA BHARAT
ನವ ಭಾರತ
ಸಂಪಾದಕ-ಟಿ.ಪಿ.ಬೀಡಪರಾಜ್

ಶನಿವಾರ ಜೂನ್ 10, 1939.

ವೇಶ್ಯಾನೃತ್ತಿ ಮತ್ತು ಪುರಸಭೆಯ ಕರ್ತವ್ಯ.

7ನೇ ತಾ, ನಡೆದ ಸಾರ್ವಜನಿಕ ಸಭೆಯಲ್ಲಿ ವೇಶ್ಯಾನೃತ್ತಿಯ ಅಸ್ತಿತ್ವಗಳೂ, ಪುರಸಭೆಯವರ ಕರ್ತವ್ಯಗಳೂ ವಿವೇಚಿಸಲ್ಪಟ್ಟು ಪಟ್ಟಣಿಗರು ಈ ವಿಷಯದಲ್ಲಿ ಬಲವಾದ ಚಳುವಳಿ ನಡೆಸಬೇಕೆಂಬುದು ವೃಥಪಟ್ಟತು. ಸರಕಾರದವರ ಈ ಸಂಬಂಧದ ಅನೀತಿ ಶಾಸನವು ಬೇರೆ ಪಟ್ಟಣಗಳಲ್ಲಿ ಜಾರಿಗೆ ಬಂದೊಡನೆ, ಅಲ್ಲಿಯ ಜಾರಿಣಿಯರು ಬಳ್ಳಾರಿಗೆ ಬಂದು ತುಂಬಿದ್ದಾರೆ. ಇವರು ದಿನದ ಎಲ್ಲಾ ಕಾಲಗಳಲ್ಲೂ ಮುಖಕ್ಕೆ ಪುಡಿಯನ್ನು ಬಳಿದುಕೊಂಡು ಬೀದಿಗಳಲ್ಲೆಲ್ಲಾ ಅಲೆಯುತ್ತಿರುವುದು ಅನೇಕರ ಗೋಚರಕ್ಕೆ ಬಂದಿರಬಹುದು. ಮರ್ಯಾದೆಯುಳ್ಳ ಕುಟುಂಬೀಕರಿಂದ ಕೂಡಿದ ಬೀದಿಗಳು ಈಗ ವೇಶ್ಯೆಯರ ಬೀದಿಗಳಾಗಿ ಪರಿಣಮಿಸಿ ಹೊತ್ತಾದಮೇಲೆ ಸಂಚಾರಕ್ಕೆ ಅಯೋಗ್ಯವಾಗಿವೆ. ಇತರ ಊರುಗಳವರಿಂದ ಬರುವ ಹೊಸ ಬರಮೇಲೆ ಅನೇಕ ವೇಳೆಗಳಲ್ಲಿ ಜುಲುಂ ನಡೆದಿರುವ ಸಂದರ್ಭಗಳು ತಿಳಿದುಬಂದಿವೆ.

ಮದ್ರಾಸ್ ಪ್ರಾಂತ್ಯದಲ್ಲಿ ಅನೀತಿಶಾಸನವು ಜಾರಿಯಲ್ಲಿದೆ. ಮುನಿಸಿಪಾಲಿಟಿಗಳವರು ಇದನ್ನು ಜಾರಿಯಲ್ಲಿ ತರಬೇಕೆಂದರೆ ಆಶ್ರಯಕ್ಕೆ ತೆಗೆದುಕೊಂಡ ಸ್ತ್ರೀಯರನ್ನಿರಿಸಲು ಒಂದು ರಕ್ಷಣಾಗೃಹ (Rescue Home) ವನ್ನು ಏರ್ಪಡಿಸಬೇಕು. ಇದನ್ನು ಪುರಸಭೆಯವರಾಗಲಿ, ಸಾರ್ವಜನಿಕರಾಗಲಿ ಏರ್ಪಡಿಸಬಹುದು. ವೇಶ್ಯಾಗೃಹಗಳಿಂದ ಮೈನರು ಹುಡುಗಿಯರನ್ನು ಆಶ್ರಯಕ್ಕೆ ತೆಗೆದುಕೊಂಡು ತಾತ್ಕಾಲಿಕವಾಗಿ ಅಲ್ಲಿರಿಸಬಹುದು. ಈ ರಕ್ಷಣಾಗೃಹದ ಖರ್ಚು 1500 ರೂ. ಗಳಾಗಬಹುದೆಂದು ಅಂದಾಜು ಮಾಡಲಾಗಿದೆ. ಇಷ್ಟನ್ನು ಮುನಿಸಿಪಾಲಿಟಿಯವರು ಒದಗಿಸಿ ಸ್ತ್ರೀಯರ ಅನೀತಿ ವ್ಯಾಪಾರವನ್ನು ನಿಲ್ಲಿಸಲೇಬೇಕು.

ಪೋಲೀಸ್ ಲೆಕ್ಕಗಳ ಪ್ರಕಾರ 700 ಜನ ವೇಶ್ಯೆಯರು ಬಳ್ಳಾರಿಯಲ್ಲಿ ಈ ವ್ಯಾಪಾರದಲ್ಲಿ ತೊಡಗಿರುವರೆಂದು ಗೊತ್ತಾಗಿದೆ. ದರ್ಜಾನಾರು ವಿಗಡಿಸುತ್ತಾ ಹೋದರೆ ಕೊನೆಯ ಪಕ್ಷ 2000 ಜನರು ಇರುವರೆಂದು ಬಲ್ಲವರು ಹೇಳುತ್ತಾರೆ. ಕೂಲಿಕೆಲಸಗಳಿಗಾಗಿ ಬಂದಿರುವವರಲ್ಲಿ ಅನೀತಿಯು ಹಬ್ಬಿದೆ. ತರುಣವಿಧವೆಯರಲ್ಲಿ ಬಹು ಸಂಖ್ಯಾಕರು ಈ ವೃತ್ತಿಯನ್ನು ಅನಿವಾರ್ಯವಾಗಿ ಅವಲಂಬಿಸುವುದರಲ್ಲಿ ಹಿಂದು ಮುಂದು ನೋಡುವುದಿಲ್ಲ. ಇದು ಹೇಗೇ ಇರಲಿ ಎಲ್ಲರಿಗೂ ಗೋಚರವಾಗುತ್ತಿರುವ ಅನೀತಿ ವ್ಯಾಪಾರವು ನಿಲ್ಲಲು ಬೇಕು. ಇತರ ಅನಾವಶ್ಯಕ ಕಾರ್ಯಗಳಿಗಾಗಿ ಹಣವನ್ನೊದಗಿಸುತ್ತಿರುವ ಮುನಿಸಿಪಾಲಿಟಿಯು ಈ ಮುಖ್ಯ ಕಾರ್ಯಕ್ಕೆ ಹಣ ಒದಗಿಸದಿದ್ದರೆ ಅವರನ್ನು ಕ್ಷಮಿಸಲಾಗದು.

ನಮ್ಮ ಯುವಕರು ದಷ್ಟಪುಷ್ಟರಾಗಿ, ಭವಿಷ್ಯ ಸಂತಾನವು ಆರೋಗ್ಯದೃಢಕಾಯರಾಗಿರಬೇಕೆಂದರೆ ಈ ಅನೀತಿ ವ್ಯಾಪಾರವನ್ನು ಸರಕಾರದ ಕಾಯ್ದೆಯ ಸಹಾಯವನ್ನು ತೆಗೆದುಕೊಂಡು ಮೂಲೋತ್ಪಾಟನ ಮಾಡಬೇಕು. ಈ ಘನಕಾರ್ಯದಲ್ಲಿ ಎಲ್ಲರೂ ಸಹಾಯವನ್ನೊದಗಿಸುವರೆಂದು ನಂಬಲಾಗಿದೆ.

ಹೊಸಪೇಟೆಯ ಪುರಸಭಾಧ್ಯಕ್ಷರು

ಹೊಸಪೇಟೆಯ ಪುರಸಭಾಧ್ಯಕ್ಷರಾದ ಶ್ರೀ ಮುರಾರಿ ವೆಂಕಟಸ್ವಾಮಿಯವರು, ಮು ಚುನಾವಣೆಗಳಿಗೆ ಮುಂಚೆ ತನ್ನ ಶಿಷ್ಯವರ್ಗದ ಸಮೇತ ಕಾಂಗ್ರೆಸ್ ಸಂಸ್ಥೆಯನ್ನು ಸೇರಿದರು. ಕಾಂಗ್ರೆಸ್ ಸದಸ್ಯರೆಲ್ಲಾ ಅವಿರೋಧವಾಗಿ ಆರಿಸಿಬಂದರು. ಸದಸ್ಯರ ಚುನಾವಣೆಯಾದನಂತರ ಅಧ್ಯಕ್ಷರನ್ನಾರಿಸುವ ವಿಷಯದಲ್ಲಿ ತಿಕ್ಕಾಟ ವಾರಂಭವಾಯಿತು. ಪ್ರಾಂತೀಕ ಕಾರ್ಯದರ್ಶಿಗಳಾಗಿದ್ದ ಶ್ರೀ ಗುಜ್ಜೆಪ್ಪನವರು - ಶ್ರೀ ವೆಂಕಟಸ್ವಾಮಿಯವರು ಒಂದು ವರ್ಷದವರೆಗೆ ಅಧ್ಯಕ್ಷರಾಗಿರಬೇಕೆಂದೂ-ನಂತರ ಶ್ರೀ ವೆಂಕಟಭೀಮಾಚಾರ್ಯರು ಅಧ್ಯಕ್ಷರಾಗಬೇಕೆಂದೂ ಅವಾರ್ಡು ಕೊಟ್ಟರು. ಶ್ರೀ ಮುತ್ತಿಹಳ್ಳಿಯವರು ಮತಭೇದವಾದ್ದರಿಂದ ಹಿಂದೆಗೆದುಕೊಂಡು ಗುಜ್ಜೆಪ್ಪನವರಿಗೆ ಸರ್ವಾಧಿಕಾರ ಕೊಟ್ಟರು.

ಅಧ್ಯಕ್ಷರ ಆಯ್ಕೆಗೆ ಸಂಬಂಧಿಸಿದ ಶ್ರೀ ತಟ್ಟಿ ಕೃಷ್ಣರಾಯರು ಕೆ. ಪಿ. ಸಿ. ಸಿ ಗೆ ಅಪೀಲುಮಾಡಿದ ಫಲವಾಗಿ ಒಂದು ವರ್ಷದನಂತರ ಶ್ರೀ ಕೃಷ್ಣರಾಯರೇ ಅಧ್ಯಕ್ಷರಾಗಬೇಕೆಂದು ತೀರ್ಮಾನವಾಯಿತು.

ಆಗ ಶ್ರೀ ಮುರಾರಿಯವರೇ ಆಗಲಿ, ಅವರ ಶಿಷ್ಯಮಂಡಳಿಯೇ ಆಗಲಿ ಏನೂ ಮಾತಾಡಲಿಲ್ಲ. ಒಂದು ವರ್ಷದನಂತರ ಪದವಿಯನ್ನು ಬಿಟ್ಟುಕೊಡುವ ಸಮಯ ಬಂದೊದಗಿದಾಗ.

'ಕಾಂಗ್ರೆಸ್ ವ್ಯಾಪಾರೀಸಂಸ್ಥೆ ಅನೀತಿಯು ಹೆಚ್ಚಾಗಿದೆ. ನಾವು ಅದರ ಸದಸ್ಯತ್ವದಿಂದ ಜಾಹಿರಾಗುತ್ತೇವೆ' ಎಂದು ಅವರ ಶಿಷ್ಯರು ಹೇಳಿಕಕೊಟ್ಟರು ಬೀದಿಯಲ್ಲಿ ಓಡಾಡುವ ಪ್ರತಿಯೊಬ್ಬನಿಗೂ, ನಿರಕ್ಷರರಿಗೂ ಇದರ ಅರ್ಥವು ಚೆನ್ನಾಗಾಗುತ್ತದೆ. ಎಂಥಹ ಸದಸ್ಯರಿಂದ ಕಾಂಗ್ರೆಸ್‌ನಲ್ಲಿ ಅನೀತಿಯು ಹೆಚ್ಚಾಯಿತೆಂಬುದನ್ನು ವಾಚಕರು ಊಹಿಸಬಹುದು.

[7-ನೇ ಪುಟವನ್ನು ನೋಡಿರಿ.]

ಪಂಡಿತ ಜವಾಹರಲಾಲರ ಅಭಿಪ್ರಾಯಗಳು.

ಕಾಂಗ್ರೆಸ್.

ಕಾಂಗ್ರೆಸ್ ಸಂಸ್ಥೆಯನ್ನು ನೂತನವಾಗಿ ವ್ಯವಸ್ಥೆಗೊಳಿಸುವ ಕಾರ್ಯಕ್ಕೆ ವ್ಯರ್ಥ ಕಾಲಹರಣವಾಗುತ್ತಲಿದೆ. ಒಂದುಕಡೆ ಅಧಿಕಾರ ಸ್ಥಾನಗಳಿಗೆ ಬಡಿದಾಟವು ನಡೆದಿದೆ. ಇದರಿಂದ ಕಾಂಗ್ರೆಸ್ ಚುನಾವಣೆಗಳು ಕಸ್ಟತಮವಾಗಿ ಪರಿಣಮಿಸಿವೆ. ಎ.ಐ.ಸಿ.ಸಿ. ಕಛೇರಿಯಲ್ಲಿ ಕೆಲಸವು ಹೆಚ್ಚಾಗಿ, ನಿತ್ಯಕಾರ್ಯಗಳಿಗೆ ಅಡಚಣೆಯುಂಟಾಗಿದೆ. ನಾವು ಸಂಯುಕ್ತ ಸಂಸ್ಥಾನದಲ್ಲಿ ರಾಜೆಗಳನ್ನು ಬೇರ್ಪಡಿಸಿದಂತೆ ಕೇಂದ್ರದವರೂ ರಾಜಕೀಯಗಳನ್ನು ಮಾಡಬೇಕು ಅಧಿಕಾರಿವರ್ಗದವರು ಯಾವಸಕ್ಷದ ರಾಜಕಾರಣದಲ್ಲೂ ಸೇರಬಾರದು ಹೆಚ್ಚೆಂದರೆ ಅತ್ಯಂತ ಹೆಚ್ಚಿನ ಸಂಬಳ ೫೦ ರೂ. ನಾವು ಕೊಡುತ್ತಲಿದ್ದೇವೆ.

ಸಂಸ್ಥಾನಗಳ ಸಮಸ್ಯೆ.

ಸಂಸ್ಥಾನಗಳ ವಿಚಾರವಾಗಿ ಮಾತನಾಡುತ್ತ ಶ್ರೀ. ಜವಹರಲಾಲರು ಈರೀತಿ ತಿಳಿಸಿದರು. ಗಾಂಧಿಯವರು ರಾಜಕೋಟೆಯಲ್ಲಿ ಮಾಡಿದ್ದು ನನಗೆ ತಕ್ಷಣ ಅರ್ಥವಾಗುವಂತಿಲ್ಲ. ಅವರ ಹೇಳಿಕೆಯಂತೆ ಅವರು ತಪ್ಪು ಹೆಜ್ಜೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ನನಗೆ ತಿಳಿದುಬಂದಿರುವ ಮಟ್ಟಿಗೆ ಮಹಾತ್ಮರು ಸಂಸ್ಥಾನಗಳಮುಂದೆ ಹೊಸಕಾರ್ಯಮಾರ್ಗವನ್ನು ಇಟ್ಟಿಲ್ಲ. ಅಧಿಕಾರಿಗಳನ್ನು ತಮ್ಮಕಡೆಗೆ ಪರಿವರ್ತನಮಾಡಿಕೊಳ್ಳುವುದು ಗಾಂಧೀಜಿಯವರ ಮಾರ್ಗದಲ್ಲಿನುಖ್ಯವಾದುದು ದೊಡ್ಡ ಚಳುವಳಿಯು ಆರಂಭವಾಗುವ ಮೊದಲಂತೂ ಅವರು ಈಮಾರ್ಗ ಹಿಡಿದೇ ಹಿಡಿಯುವರು.

'ಸಂಸ್ಥಾನಗಳಲ್ಲಿ ಮುಂದೇನುನಾಡಬೇಕೆಂಬುದನ್ನು ಹೇಳುವುದುಕಷ್ಟ. ಈಗ ನಾವು ಒಂದು ಘಟ್ಟಕ್ಕೆ ಬಂದು ನಿಂತಿದ್ದೇವೆ. ಪ್ರತಿಯೊಂದು ಪ್ರಶ್ನೆಯೊಡನೆ ವಿಳಿತವಾಗಿ ನಿಂತಿದೆ. ಕಡೆಗೆ ಭಾರತದ ಇಡೀ ಸಮಸ್ಯೆಯು ಹೊರಗಿನ ಯಾವುದೋ ಸಮಸ್ಯೆಗೆ ಗಂಟು ಹಾಕಿಕೊಂಡು ಕುಳಿತಿದೆ. ಹೊರಗತೆ ಏನಾಗುವುದೆಂಬುದನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಭಾರತದ ಒಳಗೆಸಹ ಏನಾಗುವುದೆಂಬುದನ್ನು ಹೇಳಲು ಕಷ್ಟ. ಸಭೆಗಳಲ್ಲಿ ಏಂಗೀಕರಿಸತಕ್ಕಂಥ ನಿರ್ಣಯಗಳಮೇಲೆ ಸಂಸ್ಥಾನಗಳ ಹೊಡೆದಾಟವು ನಿಂತಿಲ್ಲ. ಸಂಸ್ಥಾನಗಳೊಳಗೆ ಇರುವ ಪ್ರಜೆಗಳಲ್ಲಿರುವ ಸ್ವಶಕ್ತಿಯನೇಲೆ ನಿಂತಿದೆ. ಅನೇಕವೇಳೆ ಸಂಸ್ಥಾನಗಳ ಜನರು ನಮ್ಮಲ್ಲಿಗೆ ಬಂದು ಸಲಹೆಪಡೆದಿದ್ದಾರೆ. ಹೊರಗಿನ ಸಹಾಯದೊಂದಿಗೆ ಸತ್ಯಾಗ್ರಹವಾರಂಭಿಸಬೇಕೆಂದು ಅವರು ಬಯಸಿದರು. ನಾವು ಅವರೊಡನೆ ಚರ್ಚಿಸಿದಾಗ ಅವರು ತಮ್ಮ ಸ್ವಶಕ್ತಿಯಲ್ಲಿ ನಂಬಿಕೆಯನ್ನಿಟ್ಟಿಲ್ಲವೆಂದು ಮತ್ತು ತಮ್ಮ ಹೋರೆಯನ್ನು ಹೊರಗಿನವರು ಹೊರಬೇಕೆಂದು ಬಯಸುವರೆಂದು ವ್ಯಕ್ತವಾಯಿತು. ಇದು ಬಹಳ ದೌರ್ಬಲ್ಯದ ಸೂಚನೆಯೆ ಸರಿ"

ಹೊಸಪೇಟೆ ತಾಲೂಕು ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯವರ

31-5-39ನೇ ದಿನದ ಜರುಗಿದ ಸಭೆಯಲ್ಲಿ ಪಾಸಾದ ಗೊತ್ತುವಳಿಗಳು.

1. ಹೊಸಪೇಟೆ ಮುನಿಸಿಪಲ್ ಚುನಾವಣೆಯಾಗಿ ಈಗ ವರ್ಷದಮೇಲಾದರೂ ಕಾಂಗ್ರೆಸ್ ಪರವಾಗಿ ಆರಿಸಿ ಬಂದ ಮುನಿಸಿಪಲ್ ಕೌನ್ಸಿಲರುಗಳು ಮುನಿಸಿಪಲ್ ಕಾಂಗ್ರೆಸ್ ಪಾರ್ಟಿಯನ್ನು ಇದುವರೆಗೂ ಮಾಡಿಕೊಳ್ಳದೆ ಇರುವದನ್ನು ಈ ಕಮಿಟಿಯು ನಿಷೇಧಿಸುತ್ತದೆ. ಇನ್ನು ಮೇಲಾದರೂ ಮುನಿಸಿಪಲ್ ಕಾಂಗ್ರೆಸ್ ಪಾರ್ಟಿಯನ್ನು ಏರ್ಪಾಟುಮಾಡಿಕೊಂಡು ಅದಕ್ಕೆ ನಾಯಕರನ್ನುಕೂಡ ಆರಿಸಿಕೊಂಡು ತಾ॥ ಕಾ॥ ಕಮಿಟಿಗೆ 15 ದಿನಗಳೊಳಗಾಗಿ ತಿಳಿಸುವದಾಗಿ ಎಲ್ಲ ಮುನಿಸಿಪಲ್ ಕಾಂಗ್ರೆಸ್ ಸದಸ್ಯರುಗಳಿಗೆ ಈ ಕಮಿಟಿಯು ಕೇಳಿಕೊಳ್ಳುತ್ತದೆ. ಈ ಪಾರ್ಟಿಯನ್ನು ಏರ್ಪಾಟುಮಾಡುವ ವಿಷಯದಲ್ಲಿ ಅವಶ್ಯವಿದ್ದ ಕೆಲಸಗಳನ್ನು ಜರುಗಿಸಲು ತಾ॥ ಕಾ॥ ಕಾ॥ ಅಧ್ಯಕ್ಷರಿಗೆ ಅಧಿಕಾರ ಕೊಟ್ಟಿರುತ್ತದೆ

ವಿಷಯ—

2. ಪ್ರ.ಕಾ. ಕಮಿಟಿಯ30-1-36 ಪತ್ರ ಓದಲಾಯಿತು. ಆಪತ್ರದಲ್ಲಿ ಕಾಣಿಸಿದ ಕೌನ್ಸಿಲ್ಲರುಗಳ ರಾಜೀನಾಮೆಗಳ ಪತ್ರಗಳು ನಮ್ಮೆಜೆಗೆಬಂದಿಲ್ಲವಾದ್ದರಿಂದ ಪ್ರಾ. ಕಾ. ಕಮಿಟಿಯವರು ಅವರೆಡೆಗೆ ಬಂದಿರಬೇಕಾದ ಪತ್ರ ಪ್ರತಿಗಳನ್ನು ಅಸಂಬಂಧದಲ್ಲಿ ನಡೆದ ಪತ್ರವ್ಯವಹಾರಗಳ-ಪ್ರತಿಗಳನ್ನು ಕಳಿಸಿಕೊಡುವದಾಗಿ ಕೇಳಿಕೊಳ್ಳಬೇಕು. ಈ ಕಾಗದ ಪತ್ರಗಳು ಬಂದಮೇಲೆ ಈ ರಾಜೀನಾಮೆ ವಿಷಯ ವಿಚಾರ

3. ಹೊಸಪೇಟೆ ಮುನಿಸಿಪಲ್ ಚೇರ್‌ಮನ್‌ರಾದ ಶ್ರೀ ಮುರಾರಿ ವೆಂಕಟಸ್ವಾಮಿಯವರು ಕ. ಪ್ರಾ. ಕಾ, ಕ. ಬೆಯಮದ 5—8—38ರ ತೀರ್ಮಾನದ ಪ್ರಕಾರ ತಾ॥ 14-5-39 ಕ್ಕೆ ತಮ್ಮ ಚೇರ್‌ಮನ್ ಪದವಿಗೆ ರಾಜೀನಾಮೆ ಕೊಡಬೇಕಾಗಿದ್ದು ಅರೀತಿ ಮಾಡದೆ ಇದ್ದುದನ್ನು ಈಸಮತಿಯು ತೀವ್ರವಾಗಿ ಖಂಡಿಸುತ್ತದೆ. ಕಾಂಗ್ರೆಸ್ ಸದಸ್ಯರಿದ್ದು ಈ ರೀತಿಮಾಡದೆ ಇದ್ದುದನ್ನು ಈಸಮತಿಯು ತೀವ್ರವಾಗಿ ಖಂಡಿಸುತ್ತದೆ. ಕಾಂಗ್ರೆಸ್ ಸದಸ್ಯರಿದ್ದು ಕಾಂಗ್ರೆಸ್ ಚುನಾವಣೆ ಪ್ರತಿಜ್ಞಾಪತ್ರಿಕೆಗೆ ದಸ್ಕತ್ತುಮಾಡಿ ಕಾಂಗ್ರೆಸ್ ಉತ್ತರವನ್ನು ಈ ರೀತಿ ಅವಮಾನ ಮಾಡುವದನ್ನು ನೋಡಿ ಈ ಸಭೆಗೆ ವಿಷಾದವಾಗುತ್ತದೆ. ಇನ್ನು ಮೇಲಾದರೂ ಕಾಂಗ್ರೆಸ್ ತೀರ್ಮಾನದಂತೆ ನಡೆದು ಚೇರ್ಮನ್ನರು ಸತ್ಯ ಮತ್ತು ನೀತಿಮಾರ್ಗದಿಂದ ತಪ್ಪುವದಿಲ್ಲವಾಗಿ ಈ ಸಮಿತಿಯು ಅಶಿಸುತ್ತದೆ.

4 ಹೊಸಪೇಟೆ ಮುನಿಸಿಪಾಲಿಟಿಯ ಆರ್ಥಿಕ ಮತ್ತು ಸರ್ವಸಾಮಾನ್ಯ

[6-ನೇ ಪುಟವನ್ನು ನೋಡಿರಿ]

— ಮ. ಗಾಂಧಿಯವರ ಹೊಸಬೆಳಕು. —

ಸಂಸ್ಥಾನಗಳ ಕಾಂಗ್ರೆಸ್‌ನವರಿಗೆ ಉಪದೇಶ.

ತಿರುವಾಂಕೂರಿನ ಪರಿಸ್ಥಿತಿಯ ನಿಜಯನ್ನಾಗಿ ನಾನು ಶ್ರೀ ಥಾನುಪಿಳ್ಳೈ, ಶ್ರೀ ನಗಿನ್ ಮತ್ತು ಶ್ರೀ ಫಿಲಿಪೋಸ್ ಇವರುಗಳೊಡನೆ ದೀರ್ಘಕಾಲ ಚರ್ಚೆಗಳನ್ನು ನಡೆಸಿದೆ. ರಾಜಕೋಟೆಯಲ್ಲಿ ನನಗೆ ಉಂಟಾದ ಅನುಭವದಿಂದ ತಿರುವಾಂಕೂರಿನಲ್ಲಿ ಸತ್ಯಾಗ್ರಹವನ್ನು ಸಕಾಲದಲ್ಲಿ ನಿಲ್ಲಿಸಲಾಯಿತೆಂಬುದು ಸ್ಪಷ್ಟವಾಗಿದೆ. ರಾಜಕೋಟೆಯಲ್ಲಿ ನನಗಾಗಿರುವ ಅನುಭವದಿಂದ, ತಿರುವಾಂಕೂರಿನ ದಿವಾನರೊಮೇಲೆ ಮಾಡಿದ್ದ ಆರೋಪನೆಗಳನ್ನು ಹಿಂದಕ್ಕೆ ತೆಗೆದುಕೊಂಡರೆ ಸಾಲದೆಂಬುದೂ ತಿರುವಾಂಕೂರು ಮಹಾರಾಜರನ್ನೂ, ಅವರ ದಿವಾನರನ್ನೂ ತಿರುವಾಂಕೂರಿನವರು ಗಣನೆಗೆ ತಂದುಕೊಳ್ಳಬೇಕೆಂಬುದೂ ವ್ಯಕ್ತಪಟ್ಟಿತು. ಸತ್ಯಾಗ್ರಹವನ್ನು ನಿಲ್ಲಿಸಿರುವುದರಿಂದ ತಿರುವಾಂಕೂರಿನಲ್ಲಿ ದಬ್ಬಾಳಿಕೆಯು ಮೆತ್ತಪ್ಪು, ಹೆಚ್ಚಾಯಿತೆಂಬುದು ಸಹ ಹೇಳಲಾಗದೆ. ದಬ್ಬಾಳಿಕೆಯನ್ನು ನಿಲ್ಲಿಸಲಾಗುವುದೆಂಬ ಅಭಿಪ್ರಾಯದಿಂದ ದೂರವಾಗಬೇಕೆಂಬ ಉದ್ದಿಶ್ಯದಿಂದ ಸತ್ಯಾಗ್ರಹವನ್ನು ನಿಲ್ಲಿಸಲಿಲ್ಲವೆಂಬುದನ್ನು ಈ ಟೀಕಾಕಾರರು ತಿಳಿದುಕೊಳ್ಳಬೇಕು. ಪ್ರಜೆಗಳು ಉದ್ರೇಕದಿಂದಲೋ ಮತಿನ್ಯಾವಕಾರಣದಿಂದಲೋ, ಇಲ್ಲವೇ ಕಾರಣವಿಲ್ಲದೆಯೋ ನಡೆಸುವ ಹಿಂಸಾತ್ಮಕ ಕೃತ್ಯಗಳನ್ನು ನಿಲ್ಲಿಸುವುದಕ್ಕಾಗಿ ಈ ಸತ್ಯಾಗ್ರಹವನ್ನು ನಿಲ್ಲಿಸಲಾಯಿತು. ಮಾನವ ಪ್ರಕೃತಿಯು ಪಾಶವೀ ಸ್ವಭಾವದ ಕಡೆಗೆ ಎಳೆಯಲ್ಪಡುವುದನ್ನು ತಪ್ಪಿಸಲು ಸತ್ಯಾಗ್ರಹವನ್ನು ನಿಲ್ಲಿಸಲಾಯಿತು ಈ ಎರಡು ಉದ್ದಿಶ್ಯಗಳನ್ನು ಸಾಮಾನ್ಯವಾಗಿ ಈಡೇರಿಸಿಕೊಳ್ಳಲಾಗಿದೆಯೆಂದು ಹೇಳಬಹುದು. ಅಧಿಕಾರಿಗಳೊಡನೆ ಒಂದು ಬಗೆಯ ಸೌರವಯುತವಾದ ಒಪ್ಪಂದಕ್ಕೆ ಬರುವ ಉದ್ದಿಶ್ಯದಿಂದಲೂ ಅಹಿಂಸಾ ತತ್ವದಲ್ಲಿ ಜನರಿಗೆ ಸರಿಯಾದ ತಿಳುವಳಿಕೆ ಕೊಡುವ ಉದ್ದಿಶ್ಯದಿಂದಲೂ ಸತ್ಯಾಗ್ರಹವನ್ನು ನಿಲ್ಲಿಸಲಾಯಿತು. ಈ ಉದ್ದಿಶ್ಯಗಳನ್ನು ಈಡೇರಿಸಿಕೊಳ್ಳಲು ಇನ್ನು ಪ್ರಯತ್ನಪಡಬೇಕಾಗಿದೆ. ನನ್ನ ಮನಸ್ಸಿನಲ್ಲಿ ಮೂಡಿರುವ ಹೊಸ ಬೆಳಕಿನಿಂದ ಈ ಸಂದರ್ಭದಲ್ಲಿ ಸಲಹೆ ಕೊಡಬಯಸುತ್ತೇನೆ.

ಆ ಹೊಸ ಬೆಳಕು ನೂಡದೆ ಇದ್ದಿದ್ದರೆ ಸಲಹೆ ಕೊಡುವುದಕ್ಕೆ ನನಗೆ ಆಸ್ಪದವೇ ಇರಲಿಲ್ಲ

ಅಧಿಕಾರಿಗಳೊಡನೆ ನೇರವಾಗಿ ಸಂಧಾನ ನಡೆಸಬೇಕೆಂಬುದು ನನಗೆ ಮನವರಿಕೆಯಾಗಿದೆ ಇತ್ತೀಚಿನಿಗೆ ಸ್ಟೇಟ್ ಕಾಂಗ್ರೆಸ್ ಸದಸ್ಯರು ಅಧಿಕಾರಿಗಳಕಡೆಗೂ ಮಾತನಾಡಿದ್ದಾರೆ. ನೇರವಾಗಿ ಮಾತುಕತೆಗಳನ್ನು ನಡೆಸಿಲ್ಲ. ಇಬ್ಬರ ಭಾಂಧವ್ಯವು ಬಹಳ ಮೊರವಾಗುತ್ತ ಬಂದಿರುವುದೇ ಇದರ ಫಲಿತಾಂಶ. ಇಬ್ಬರೂ ಸಂಧಾನ ನಡೆಸಲು ಮುಂದೆ ಬರಬೇಕೆಂದು ಹೇಳುವುದು ಸತ್ಯಾಗ್ರಹಿಗೆ ತರವಲ್ಲ. ಆರೀತಿ ಹೇಳುವುದರಿಂದ ಅಧಿಕಾರಿಗಳಲ್ಲಿ ಸತ್ಯಾಗ್ರಹಾಂಶವು ಇಲ್ಲವೆಂದು ಹೇಳುವ ಅಧಿಕಾರಿಗಳ ವಿಚಾರದಲ್ಲಿ ಸತ್ಯಾಗ್ರಹವನ್ನು ನಡೆಸುತ್ತಿರುವುದು. ಇದುವರೆಗೂ ಗೌರವಯುತವಾದ ಸಂಧಾನ ಪ್ರಯತ್ನಕ್ಕೆ ಸತ್ಯಾಗ್ರಹಿಯು ಯಾವಾಗಲೂ ಸಿದ್ಧವಾಗಿಯೇ ಇರಬೇಕು ಆರೀತಿ ಭಾವನೆ ಇಲ್ಲದೆ ಹೋದರೆ, ಮತ್ತೆ ಅಸಾಧ್ಯವೆಂಬ ಭಾವನೆಯು ಅಳಿಸಿ ಹೋಗುವವರೆಗೆ ಇದು ಸಫಲವಾಗುವುದಿಲ್ಲ. ಇದುವರೆವಿಗೂ ಇದು ಅಸಾಧ್ಯವೆಂಬ ಭಾವನೆಯು ನೆಲಸಿತ್ತು, ಆ ಭಾವನೆಯನ್ನಿಟ್ಟುಕೊಂಡಿದ್ದವರಲ್ಲಿ ನಾನು ಒಬ್ಬ ಈಗ ನನಗೆ ತಿಳುವಳಿಕೆಯುಂಟಾಗಿದೆ. ನಾಯಕರಲ್ಲಿ ನಿಜವಾದ ಅಹಿಂಸಾ ಭಾವನೆಯು ನೆಲೆಸಿದ್ದರೆ, 'ಸಾಧ್ಯವಾಗುವುದೆಂಬ ಭಾವನೆಯನ್ನು ಬೆಳಸಿಕೊಂಡುಬರಬೇಕು. ಮತ್ತು ಆರೀತಿ ಗೌರವಯುತವಾದ ಸಂಧಾನ ನಡೆಸಲು ಅವಕಾಶ ಕಲ್ಪಿಸಿಕೊಳ್ಳಬೇಕು. ಆ ನಂಬಿಕೆಯು ಅವರಿಗೆ ಇರುವುದಾದರೆ ಮಾರ್ಗವಿದ್ದೇ ಇರುವುದು. ನಾನು ಯಾವಾಗಲೂ ಆ ತತ್ವವನ್ನೇಲೆಯೇ ಕೆಲಸಮಾಡುತ್ತಿದ್ದೇನೆ. ಅಂತಹ ಪ್ರಯತ್ನ ನಡೆಸುವಾಗ ನಮ್ಮ ಗುರಿಯನ್ನು ಕೊಂಚ ಇಳಿಸಬೇಕಾದುದು ಅಗತ್ಯವೆನಿಸಬಹುದು"

ನಮ್ಮ ಧ್ಯೇಯವು ಈಗ ಯಾವುದು ಇರುವುದೋ ಅದೇ ಇನ್ನು ಮುಂದೆಯೂ ಇರಬೇಕು. ಆದರೆ ಅದಕ್ಕಿಂತ ಕಡಿಮೆಯಾಗಿರುವುದಕ್ಕೆ ಆ ಧ್ಯೇಯವನ್ನು ಬಿಟ್ಟು ಹೋಗದೆ ಇದ್ದು ಒಂದೇಬಗೆಯಾದಾಗಿದ್ದರೆ ಮತ್ತು ಅವು ಕ್ರಮೇಣ ಅಭಿವೃದ್ಧಿಯನ್ನು ಹೊಂದುವಂತಹದಾಗಿದ್ದರೆ ಸಂಧಾನ ನಡೆಸಬಹುದು. ಕಾಂಗ್ರೆಸ್ ಸಂಸ್ಥಾನದ ವಿನಹ ಇನ್ನಾವ ಸಂಸ್ಥಾನದಲ್ಲಿಯೂ ಸರಿಯಾದ್ದರು ಪ್ರಜೆಗಳಿಗೆ ನಿಜವಾದ ಅಧಿಕಾರವನ್ನು ಬಿಟ್ಟುಕೊಡಲು ಸಿದ್ಧರಾಗಿಲ್ಲವೆಂಬುದು ವ್ಯಕ್ತಪಟ್ಟಿದೆ. ಸಂಸ್ಥಾನಗಳ ಪ್ರಜೆಗಳಿಗೆ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನುಗಳಿಸಿಕೊಡುವುದಕ್ಕೆ ಸಾರ್ವಭೌಮ ಸರ್ಕಾರವು ಆತುರವಾಗಿಲ್ಲ. ಅವರ ಮನಸ್ಸನ್ನು ಪರಿಶೀಲಿಸುವುದಾದರೆ, ಕಾಂಗ್ರೆಸ್ ಸಂಸ್ಥಾನದ ಮೇಲ್ಪಂಕ್ತಿಯನ್ನು ಅನುಸರಿಸಿ, ಪ್ರಾಮುಖ್ಯತೆ ಪಡೆದಿರುವ ಒಂದು ಸಂಸ್ಥಾನವು ಪ್ರಜೆಗಳಿಗೆ ಅಧಿಕಾರವನ್ನು ಕೊಡುವುದಾದರೆ, ನಿಜವಾಗಿಯೂ ಅದಕ್ಕೆ ವ್ಯಸನವಾಗುವುದು. ಇವೆಲ್ಲಕ್ಕಿಂತ ಮುಖ್ಯವಾಗಿ, ಸಂಸ್ಥಾನಗಳ ಪ್ರಜೆಗಳು ಆ ಅಧಿಕಾರವನ್ನು ಪಡೆಯಲು ತಕ್ಕ ಬೆಲೆಯನ್ನು ಕೊಡಲು ಎಲ್ಲಿಯೂ ಸಿದ್ಧರಾಗಿಲ್ಲ ಸಂಸ್ಥಾನಗಳಲ್ಲಿ ಜಾಗೃತಿಯುಂಟಾಗಿರುವುದರಲ್ಲಿ ಅನುಮಾನವೇ ಇಲ್ಲ. ಆದರೆ ಆ ದೊಡ್ಡ ಧ್ಯೇಯವನ್ನು ಸಾಧಿಸಿಕೊಳ್ಳಬೇಕಾದರೆ ಈಗುಂಟಾಗಿರುವ ಜಾಗೃತಿಯು ಸಾಲದು. ಈ ಅಂಶವನ್ನು ಗ್ರಹಿಸುವುದು ಒಳ್ಳೆಯದು. ನನ್ನು ಶಕ್ತಿಗೆ ಮೀರಿದುದನ್ನು ಸಾಧಿಸಲು ಹೊರಟು ಎಲ್ಲವನ್ನು ನಾವು ಕಳೆದುಕೊಳ್ಳಬಹುದು. ಎಲ್ಲ ದೇಶೀಯ ಸಂಸ್ಥಾನಗಳಲ್ಲಿಯೂ ನಾನು ಶಾಸನ ಪ್ರಭುತ್ವವಿರಬೇಕೆಂದು ಬಯಸುತ್ತೇನೆ ಅದಕ್ಕೆ ಏನುಬೇಕಾದರೂ ಕೊಡಬಹುದು. ಎಂತಹ ಉನ್ನತ ಸ್ವಭಾವದವರೇ ಆಡಳಿತಸೂತ್ರಗಳನ್ನು ವಹಿಸಿದ್ದರೂ ಆ ಪ್ರಭುತ್ವವು ಇರಕೂಡದೆಂಬುದೂ ಅದಕ್ಕಿಂತ ಶಾಸನ ಪ್ರಭುತ್ವವೇ ನೆಲಸಬೇಕೆಂಬುದೂ ನನ್ನ ಇಷ್ಟ. ಆ ಭವ್ಯವಾದ ತಳಪದಿಯ ಮೇಲೆ, ಜವಾಬ್ದಾರಿ ಸರಕಾರವನ್ನು ಕಟ್ಟಲು ನನಗೆ ಆಗ ಮಾರ್ಗವು ತಿಳಿಯುವುದು. ಆದರೆ ಪ್ರಜೆಗಳ ದೃಢಸಂಕಲ್ಪ ಮತ್ತು ಶಕ್ತಿ ಇವುಗಳನ್ನು ಹಿಂದಿಟ್ಟುಕೊಂಡಿರದ ಜವಾಬ್ದಾರಿ ಸರಕಾರವು, ಬರೀ ಕಾಗದದ ಜವಾಬ್ದಾರಿಯಾಗಿ ಪರಿಣಮಿಸುವುದು. ಮುದ್ರಣವಾದ ಬೆಲೆಕೂಡ ಅದಕ್ಕೆ ಬರುವುದಿಲ್ಲ.

[5-ನೇ ಪುಟವನ್ನು ನೋಡಿ.]

(4-ನೇ ಪುಟದಿಂದ)

'ಸಂಸ್ಥಾನಗಳಲ್ಲಿ ಸಂಪೂರ್ಣ ಜವಾಬ್ದಾರಿ ಸರಕಾರವನ್ನು ತಕ್ಷಣ ಸ್ಥಾಪಿಸುವುದಕ್ಕೆ ಸರಿಯಾದ ವಾತಾವರಣವಿಲ್ಲದೆ ಶುಭ ಮುಹೂರ್ತವು ಸನ್ನಿಹಿತವಾಗಿಲ್ಲವೆಂಬುದೂ, ಅದನ್ನು ಗಳಿಸುವುದಕ್ಕೆ ಪ್ರಜೆಗಳು ಸರಿಯಾದ ಬೆಲೆಯನ್ನು ಕೊಡಲು ಸಿದ್ಧರಾಗಿಲ್ಲವೆಂಬುದೂ, ಸಿದ್ಧವಾದರೆ, ಪ್ರಜೆಗಳಿಗೆ ಸರಿಯಾದ ಶಿಕ್ಷಣವನ್ನು ಕೊಡಬೇಕೆಂಬುದೂ ಇದರಿಂದ ವ್ಯಕ್ತಪಟ್ಟಂತಾಯಿತು. ಇನ್ನು ಮೇಲೆ ಸತ್ಯಾಗ್ರಹವನ್ನು ಆರಂಭಿಸಬಹುದೆಂದು ನಾನು ಬಹಳ ಸುಲಭವಾಗಿ ಹೇಳುವುದಿಲ್ಲ. ಜನರಲ್ಲಿ ಸಾಕಾದಷ್ಟು ಶಿಕ್ಷಣವು ಇಲ್ಲ. ತಿಸ್ತು ಇಲ್ಲ. ಪ್ರಜೆಗಳು ಒಂದಲ್ಲ ಹಲವಾರು ಪ್ರಯೋಗಗಳಲ್ಲಿ ಸೋಲಲು ಉತ್ತೀರ್ಣರಾಗಬೇಕೆಂಬುದರಲ್ಲಿ ನನಗೆ ಲೇಶವೂ ಸಂಶಯವಿಲ್ಲ. ಕಾಯಕವಾದ ಹಿಂಸೆಯನ್ನು ಮಾತ್ರ ನಿಲ್ಲಿಸಿದರೆ ಸಾಲದು. ಈ ಪ್ರಯೋಗ ಮಧ್ಯೆ ನಾನು ಚರಕವನ್ನು ಸೂಚಿಸಬಯಸುತ್ತೇನೆ. ಈ ಪ್ರಯೋಗಕ್ಕೆ ಬೇಗನೆ ಉತ್ತರದೊರೆತರೆ ಫಲವೂ ಜಾಗ್ರತೆ ದೊರೆಯುವುದು. ಆದರೆ ಉತ್ಸಾಹಸೂಚಕವಾದ ಉತ್ತರವು ಪ್ರಜೆಗಳಿಂದ ದೊರೆಯದೆ ಹೋದರೆ ಫಲವೂ ವೀರ್ಘಕಾಲದಮೇಲೆಯೇ ಲಭ್ಯವಾಗುವುದು. ೧೯೩೦ರಲ್ಲಿ ನಾನು ವಿವರಿಸಿದ ನಾಲ್ಕು ರಚನಾತ್ಮಕ ಕಾರ್ಯಕ್ರಮಗಳಿಗಿಂತ ಹೆಚ್ಚಿನ ಕಾರ್ಯಕ್ರಮವನ್ನು ನಾನು ಈಗ ಸಲಾರೆ ಅವುಗಳನ್ನು ಪ್ರಜೆಗಳು ಉತ್ಸಾಹದಿಂದಲೂ ಮನಃಪೂರ್ವಕವಾಗಿಯೂ ಸ್ವೀಕರಿಸದೆ ಹೋದರೆ ಅವರಲ್ಲಿ ಅಹಿಂಸಾ ಭಾವನೆ ಇಲ್ಲವೆಂಬುದು ಅಂದರೆ ನನ್ನ ಭಾವನೆಯಂತೆ ಅಹಿಂಸೆಯು ಜನರಲ್ಲಿಲ್ಲವೆಂಬುದು ಸ್ಪಷ್ಟವಾಗುವುದು. ಈಗಿನ ನಾಯಕತ್ವದಲ್ಲಿ ನಂಬಿಕೆ ಇಲ್ಲವೆಂಬುದು ವ್ಯಕ್ತಪಟ್ಟಂತಾಗುವುದು.

೧೯೩೦ನೆ ವರ್ಷದಿಂದ ನಾನು ದೇಶದ ಮುಂದೆ ಇಡುತ್ತ ಬಂದಿರುವ ಪ್ರಯೋಗ (ಟೆಸ್ಟ್)ಕ್ಕಿಂತ ಬೇರೆ ಯಾವುದೂ ಮೇಲಾಮದು ಇಲ್ಲವೆಂಬುದೇ ನನ್ನ ಭಾವನೆ. ಆ ಶಿಸ್ತನ್ನು ಹಿಂದೆ ಸಡಲಿಸುವಂತೆ ನಾನು ಇನ್ನು ಮುಂದೆ ಸಡಲಿಸಕೂಡದೆಂದು ನನ್ನಲ್ಲಿ ಮೂಡಿರುವ ಹೊಸ ಬೆಳಕು ಸೂಚಿಸುವುದು. ನಾನು ಹಾಕಿರುವ ಷರತ್ತುಗಳನ್ನು ಪೂರ್ಣಗೊಳಿಸದೇ ಆದರೆ ಅಂತಹ ಸ್ಥಳಗಳಲ್ಲಿ ಶಾಸನ ಭಂಗಚಳುವಳಿಯನ್ನು ನಡೆಸುವುದಕ್ಕೆ ಅಸ್ಪದ ಕೊಡಲು ನನಗೆ ದಾರಿ ಇರುವುದು ಆ ಸತ್ಯಾಗ್ರಹವು ಸೈಯುಕ್ತಿಕವಾಗಿರುವುದು. ಆದರೆ ಅದು ಜನಸಮೂಹವು ಕೈಗೊಂಡು ಹಿಂದೆ ನಡೆಸಿರುವ ಸತ್ಯಾಗ್ರಹಕ್ಕಿಂತ ಬಹಳವಾಗಿ ಬಲಯುತವಾಗಿರುವುದು. ಹಿಂದೆ ನಡೆದ ಚಳುವಳಿಗಳು ಸ್ವಲ್ಪ ಹೆಚ್ಚು ಕಡಿಮೆ ದೋಷದಿಂದ ಕೂಡಿದ್ದವೆಂಬುದನ್ನು ಒಪ್ಪಿಕೊಳ್ಳಲೇಬೇಕು. ಅದಕ್ಕಾಗಿ ನಾನು ನ್ಯಾಸನ ಪಡುವುದಿಲ್ಲ ಏಕೆಂದರೆ ಅದಕ್ಕಿಂತ ಹೆಚ್ಚಿನದಾದ ವಿಷಯವು ನನಗೆ ಆಗ ಗೊತ್ತಿರಲಿಲ್ಲ ತಪ್ಪು ಯಾವಾಗ ಗೊತ್ತಾಯಿತೋ ಆಕ್ಷಣವೇ ಅದನ್ನು ಸರಿಪಡಿಸಿಕೊಳ್ಳಲು ಹಿಂದಕ್ಕೆ ಹೆಜ್ಜೆ ಹಾಕುವ ನಮ್ರತೆಯನ್ನು ನಾನು ಪಡೆದಿದ್ದೆ. ಅದುದರಿಂದಲೇ ನಾಸ್ತವು ಒಂದೊಂದು ಮೆಟ್ಟಿಲಾಗಿ ಮುಂದುವರಿಯುತ್ತಿದೆ. ಆದರೆ ಇಂದು ಸೂಚಿಸಿರುವ ಮಾರ್ಗದಲ್ಲಿ ಮಹತ್ತರವಾದ ಬದಲಾವಣೆಗಳನ್ನು ಮಾಡುವ ಸಮಯವು ಸನ್ನಿಹಿತವಾಗಿದೆ.

ಆದುದರಿಂದಲೇ ಇಂದು ತಿರುವಾಂಕೂರು ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ನನ್ನ ಮನಸ್ಸಿನಲ್ಲಿರುವುದನ್ನು ಸೂಚಿಸಿದ್ದೇನೆ. ಮತ್ತು ತಿರುವಾಂಕೂರಿನ ಪರಿಸ್ಥಿತಿಯ ವಿಷಯವಾಗಿ ನನ್ನ ಮನಸ್ಸಿನಲ್ಲಿ ಉಂಟಾಗಿರುವ ಭಾವನೆಗಳನ್ನು ಸೂಚಿಸ ಬಯಸುತ್ತೇನೆ.

ಒಟ್ಟಿನಲ್ಲಿ ಹೇಳುವುದಾದರೆ,

೧. ಜನಸಮೂಹವು ಸತ್ಯಾಗ್ರಹವನ್ನು ಕೈಗೊಂಡು ನಡೆಸಿಕೊಂಡು ಬರುವುದನ್ನು ಅನಿಶ್ಚಿತ ಕಾಲದವರೆವಿಗೆ ನಿಲ್ಲಿಸಬೇಕು.

೨. ಅಧಿಕಾರಿಗಳೊಡನೆ ಗೌರವಯುತವಾದ ಸಂಧಾನ ನಡೆಸುವ ಮನಸ್ಸು ಸ್ಟೇಟ್ ಕಾಂಗ್ರೆಸ್ ಸದಸ್ಯರಿಗೆ ಇರಬೇಕು.

೩. ಬಂಧನದಲ್ಲಿರುವ ಸತ್ಯಾಗ್ರಹಿಗಳ ಆಪವಾ ಹೊಸಬರ ವಿಷಯವಾಗಿ ಯಾವ ಕಾತುರತೆಯೂ ಇರಕೂಡದು. ಸತ್ಯಾಗ್ರಹದ ವಿಚಾರವು ಚೆನ್ನಾಗಿ ಗೊತ್ತಿದ್ದರೆ ಈ ಬಂಧನಗಳೂ ಆತಂಕಗಳೂ ಪ್ರಜೆಗಳನ್ನು ಉತ್ತೇಜನಗೊಳಿಸಬೇಕು.

೪. ಅಂತಿಮ ಧ್ಯೇಯವನ್ನು ಜಾಗ್ರತೆಯಾಗಿ ಸಾಧಿಸಿಕೊಳ್ಳುವುದಕ್ಕಾಗಿ, ಈಗಿನ ಬೇಡಿಕೆಗಳನ್ನು ಕೊಂಚಮಟ್ಟಿಗೆ ತಗ್ಗಿಸಬೇಕಾದ ಸಂದರ್ಭ ಬಂದರೆ ತಗ್ಗಿಸಬಹುದು.

* ಯಾವ ಸತ್ಯಾಗ್ರಹವನ್ನು ಹೂಡಬೇಕಾದರೂ ರಚನಾತ್ಮಕ ಕಾರ್ಯಕ್ರಮಗಳ ಪರೀಕ್ಷೆಯಲ್ಲಿ ಮೊದಲು ಉತ್ತೀರ್ಣರಾಗಬೇಕು. ಸ್ಟೇಟ್ ಕಾಂಗ್ರೆಸ್ಸಿನ ಆಶ್ರಯದಲ್ಲಿ ಶಿಸ್ತಿನಿಂದ ವರ್ತಿಸುವುದೆಂಬುದಕ್ಕೆ ಅದೇ ಪರೀಕ್ಷೆಯಾಗಿರಬೇಕು.

ನನ್ನ ಈ ಸಲಹೆಯನ್ನು ಕೆಲಸಗಾರರು ತಿರಸ್ಕರಿಸುವುದಕ್ಕೆ ಅವರಿಗೆ ಸ್ವಾತಂತ್ರ್ಯವಿದೆಯೆಂದು ಹೇಳುವುದು ಅಪ್ರಕೃತವೆಂದು ನಾನು ಈಗ ಸೂಚಿಸಿರುವುದು. ಅವರ ಮನಸ್ಸಿಗೂ ಹೃದಯಕ್ಕೆ ಹಿಡಿದು ಸ್ಥಳೀಯ ಸ್ಥಿತಿಗತಿಗಳಿಗೆ ಅನುಗುಣವಾಗಿ ಹೊಂದಿಕೊಳ್ಳುವುದಾದರೆ ಅವರು ಆ ಸಲಹೆಗಳನ್ನು ಸ್ವೀಕರಿಸಬಹುದು. ಸ್ಥಳೀಯ ಸ್ಥಿತಿಗತಿಗಳನ್ನು ಚೆನ್ನಾಗಿ ಅವಲೋಕಿಸಿರುವರೆಂಬುದು ಒಪ್ಪತಕ್ಕ ಮಾತು.

ಯುದ್ಧದ ವಿಷಯ.

ಯುದ್ಧದ ವಿಚಾರವೆತ್ತಿ ಪಂಡಿತ ಜವಹರಲಾಲರು ಕಾಂಗ್ರೆಸ್ ಮಾಡಿರುವ ನಿರ್ಣಯವನ್ನು ಆಚರಣೆಗೆ ತರಬೇಕಾದರೆ ಪ್ರಚಾರ ನಡೆಸಬೇಕೆಂದರು. "ನನಗೆ ಸಾಮಾನ್ಯವಾಗಿ ಯುದ್ಧವೆಂದರೆ ಆಗಮ. ಆದರೂ ಮುನ್ನೀತಿವಂತರಮೆ'ಲೆ ಪೋಲೀಸರು ಕಾರ್ಯಕ್ರಮ ಕೈಗೊಳ್ಳುವುದನ್ನು ತಪ್ಪಿಸಲು ಹೇಗೆ ಸಾಧ್ಯವಾಗುವುದಿಲ್ಲವೋ ಹಾಗೆಯೇ ಯುದ್ಧವನ್ನು ಕೂಡ ನಿವಾರಿಸಲು ಸಾಧ್ಯವಿಲ್ಲ" ಎಂದರು.

ಅಂಬಾ ಭವನ ಕಾಫೀ ಕ್ಲಬ್
(ರಿಜಿಸ್ಟರ್ಡ್)
ಮತ್ತು
ಶಾಖೆ:— **ಊಟದ - ಹೋಟೆಲ್**
ಬಿಂಗಳೊರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪದಲ್ಲಿದೆ ಶುದ್ಧತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾಳಿ ಬೆಳಕು ವಿತ್ತು ಇತರ ಅನುಕೂಲಗಳಿರುವ ಕೊಠಡಿಗಳು, ಭೋಜನ ಸಮಾರಂಭ ಟೀಪಾರ್ಟಿಗಳ ವಿರ್ವಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆ ಮಾಡುವೆವು.

ಪ್ರೊಪ್ರಯಿಟರ್ಸು—
ಶಿ. ಕೆಸ್ನಯ್ಯ, ಬೆಚ್. ಕರಿಬಸಪ್ಪ.

[3-ನೇ ಪುಟದಿಂದ]

ಸರಿಸ್ಥಿತಿಯನ್ನು ವಿಚಾರಿಸಿ ವರದಿಯನ್ನು ಒಪ್ಪಿಸುವದಕ್ಕಾಗಿ ಈ ಕೆಳಗಿನ ಉಪಸಮಿತಿಯನ್ನು ನಿರ್ಮಾನಿಸಲಾಗಿದೆ

1) ಬಿ. ಪಂಪಾಪತಿಯವರು (ಸಂಚಾಲಕರು)
2) ಡಾ॥ ಸಾವಿತ್ರಿಬಾಯಿ
3) ಕೆಲ್ಲದ ಜೆನ್ನಪ್ಪ
4) ಕ. ಪ್ರಹ್ಲಾದಾಚಾರ್ಯ

ಈ ಸಮಿತಿಯವರು ತಮಗೆ ಬೇಕಾದ ಇನ್ನೊಬ್ಬ ಸಮಿತಿಯ ಸದಸ್ಯರನ್ನು ಸೇರಿಸಿಕೊಳ್ಳಲು ಅಧಿಕಾರವಿದೆ. ಈ ಉಪಸಮಿತಿಯವರು ಜೂನ್ ತಿಂಗಳಕೊನೆಯೊಳಗಾಗಿ ತಮ್ಮ ವರದಿಯನ್ನು ಒಪ್ಪಿಸತಕ್ಕದ್ದು.

೬. ಹೊಸಪೇಟೆ ಮುನಿಸಿಪಾಲಿಟಿಯವರು ಈ ಊರಿನಲ್ಲಿ 13 ವರ್ಷಗಳವರಿಗೆ ನಡೆದುಬಂದ ಒತ್ತಾಯದ ಪ್ರಾಥಮಿಕ ಶಿಕ್ಷಣದ ಯೋಜನೆಯನ್ನು ರದ್ದುಮಾಡಬೇಕಾಗಿ ಮಾಡಿದ ಅತ್ಯಂತ ಪ್ರತಿಗಾಮಿ ತೀರ್ಮಾನವನ್ನು ಈ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ. ಈ ತೀರ್ಮಾನವನ್ನು ಮಾನ್ಯಮಾಡಬಾರದಾಗಿ ಸರ್ಕಾರವರಿಗೆ ಈ ಸಮಿತಿಯು ಅತ್ಯಂತ ಆಗ್ರಹ ಪೂರ್ವಕವಾಗಿ ಬಿನ್ನಯಿಸಿಕೊಳ್ಳುತ್ತದೆ. ಇತರ ವಿಷಯಗಳು ಮುಂದರಿಯುವದು.

ಬಿ. ಪಂಪಾಪತಿ,
ಅಧ್ಯಕ್ಷ
ತಾಲೂಕು ಕಾಂಗ್ರೆಸ್ ಕಮಿಟಿ.

ಬಾದನಹಟ್ಟಿ-ಯಲ್ಲಾಪುರಗಳಿಗೆ.

ಶ್ರೀ. ಕೆ. ರಾಮಚಂದ್ರ ಶೆಟ್ಟಿಯವರು 6ನೇ ತಾ. ಬಾದನಹಟ್ಟಿ, ಯಲ್ಲಾಪುರಗಳಿಗೆ ಗ್ರಾಮಗಳಿಗೆ ಹೋಗಿ ಅಲ್ಲಿ ಹರಿಜನರ ಸಂಕಷ್ಟಗಳನ್ನು ವಿಚಾರಿಸಿ ಬಂದರು. ಬಾದನಹಟ್ಟಿಯಲ್ಲಿ ಈತಿಂಗಳ ಆದಿಯಿಂದ ಕುಡಿಯುವುದನ್ನೂ ನತ್ತದನಗಳ ಮಾಂಸ ತಿನ್ನುವುದನ್ನೂ ಬಿಟ್ಟುಬಿಡಲು ನಂಕಲ್ಪಿಸಿದ್ದಾರೆ. ಹರಿಜನರ ಮಕ್ಕಳನ್ನು ಶೋಡರ್ಾಲೆಗೆ ಕಳುಹಿಸುತ್ತಲಿದ್ದಾರೆ ಯಲ್ಲಾಪುರಂಗಳಿಗೆ ಯಲ್ಲಿ ಲೇಬರ್ ಭಾವಿಯಲ್ಲಿ ಉಪ್ಪು ನೀರಿರುವದರಿಂದ ಕುಡಿಯುವ ನೀರಿಗೆ ಕಷ್ಟವಿದೆ. ಅಲ್ಲಿಯೂ ದುಷ್ಪದ್ಧತಿಗಳನ್ನು ಬಿಡಲು ನಂಕಲ್ಪಿಸಿರುವರು.

ಹರಿಜನ ಜಿಲ್ಲಾ ಸೇವಕ ಸಂಘದ ಕಾರ್ಯದರ್ಶಿಗಳ ಸಂಚಾರ.

ಮೋರಗೇರಿ—

ದೇವಸ್ಥಾನದ ಬಳಿ ಸಭೆಯಾಯಿತು. ಸುಮಾರು ಹರಿಜನರು ಸೇರಿದ್ದರು. ತಮಗೆ ಗ್ರಾಸು ಹುಟ್ಟಿದ ಆದಾಯದಿಂದಲೂ ಇರುವ ನೀರಿನತೊಂದರೆಯನ್ನು ಅರಿಕೆಮಾಡಿದರು. ಅವರಿಗಾಗಿ ಪ್ರತ್ಯೇಕಭಾವಿಕೆಗೆಸಲು ಆದ ಪ್ರಯತ್ನಗಳನ್ನು ಶ್ರೀ ಭಾ. ಲಿಂಗಪ್ಪನವರೂ ಪ. ಲೋಕಪ್ಪನವರೂ ತಿಳಿಸಿದರು. ಉಪದೇಶಾನಂತರ ತಮ್ಮ ಕೆಟ್ಟ ಪದ್ಧತಿಗಳನ್ನು ಬಿಡುವುದಾಗಿ ಹರಿಜನರು ವಾಗ್ದಾನ ಮಾಡಿದರು ನೀರಿನ ಕಷ್ಟ ನಿವಾರಣೆ ಮಾಡಲು ಯತ್ನಿಸುವುದಾಗಿ ಕಾರ್ಯದರ್ಶಿಗಳು ಹೇಳಿದರು.

ಮರಬ್ಬಿಹಾಳು—

ಇಲ್ಲಿ ಲಬ್ಬಿಯವರ ಜುಲುಂ ವಿಶೇಷವಾಗಿದೆ. 30—40 ವರ್ಷಗಳಿಂದಲೂ ಇವರು ಉಚಿತವಾಗಿ ಲಬ್ಬಿಯವರ ಸ್ವಾರ್ಥಲಾಭಗಳಿಗೆ ದುಡಿಯಬೇಕಾಗಿದೆ. ಇದನ್ನು ತಪ್ಪಿಸಲು ಮತ್ತು 'ಜುಲುಂ' ನಡೆಸಿರುವವರಮೇಲೆ ತಕ್ಕಚರ್ಯೆ ತೆಗೆದುಕೊಳ್ಳಲು ಸೂಕ್ತ ಸಲಹೆಗಳನ್ನು ಕೊಡಲಾಯಿತು. ಪೂರ್ವದ ದುರಾಚಾರ ಮತ್ತು ಕೆಟ್ಟಪದ್ಧತಿಗಳನ್ನೆಲ್ಲಾ ಬಿಡಲು ಇಲ್ಲಿಯ ಹರಿಜನರು ದೇವಸ್ಥಾನದಲ್ಲಿ ಪ್ರತಿಜ್ಞೆ ಮಾಡಿದರು.

ನಾರಾಯಣದೇವರಕೆರೆ.

ಇಲ್ಲಿಯ ಹರಿಜನರು ತಮ್ಮ ಬೇಡಿಕೆಗಳು ಅಂದರೆ (1) ಲಬ್ಬಿಯವರ ಜುಲುಂ (2) ಮುಟ್ಟಿಸ್ಥಿ ಕೊಟ್ಟು ಗೌಡರು ಹರಿಜನರನ್ನು ಬಿಟ್ಟು ದುಡಿಸಿಕೊಳ್ಳುವ ವಿಷಯ. (3) ಸುಮಾರು 300 ಎಕರೆ ರಿಸರ್ವ್ ಭೂಮಿಯನ್ನು ಹರಿಜನರಿಂದ ನೋಸಗೂಳಿಸಿ ಇತರ ರೈತರು ಅನುಭವಿಸುತ್ತಿರುವ ವಿಷಯ. (4) ಹರಿಜನರಿಗೆ ಅನಿವಾರ್ಯಕವಾಗಿ ಬೇಕಾದ ಸಾಯಿಬಾನೆಗಳ ವಿಷಯ ಮಹಜರ್ ಬರಿದುಕೊಟ್ಟರು. 6ನೇ ತಾ, ಪ್ರಾತಃಕಾಲ ಲಬ್ಬಿಯವರು ಹರಿಜನರ ಕೇರಿಯಲ್ಲಿ ಜುಲುಂ ನಾಡಿದರೆಂದು ತಿಳಿಬಂದಿತು. ಕಾರ್ಯದರ್ಶಿಗಳು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ರನ್ನೂ. ಇತರ ಕಾನ್ಸ್‌ಟೇಬಲ್‌ಗಳೊಂದಿಗೆ ಅಲ್ಲಿಗೆ ಕರೆದುಕೊಂಡು ಹೋಗಿ ಅನ್ಯಾಯವಾಗಿ ದುಡಿಯಬಾರದು. ದುಡಿಸುವಕ್ಕೆ ದಿನಗೂಲಿ ತೆಗೆದುಕೊಳ್ಳಬಹುದು. ಯಾಂಮೇಲೆ ಯಾರೂ ಜುಲುಂ ಮಾಡಬಾರದು. ಲಬ್ಬಿಯವರೇ ಆಗಲಿ, ಇತರರ್ಯಾರೇ ಆಗಲಿ ಕೇರಿಗೆ ಬಂದು ತೊಂದರೆಕೊಟ್ಟರೆ ಎಷ್ಟೇ ಹೊತ್ತಿರಲಿ ಪೋಲೀಸರಿಗೆ ರಿಪೋರ್ಟುಮಾಡಬೇಕು ಎಂದು ತಿಳಿಸಿದರು. 30-40 ವರ್ಷಗಳಿಂದಲೂ ಬೆದರಿಕೆಯಿಂದ ಕೆಲಸಮಾಡಿಸಿಕೊಳ್ಳುವ ಈ ದುಷ್ಪದ್ಧತಿಯನ್ನು ತಪ್ಪಿಸಲು ಹಿಂದೂ ಮುಖಂಡರು ಪ್ರಯತ್ನಿಸಬೇಕಾಗಿದೆ.

ಹೊಸಪೇಟೆ.

ಕಾರ್ಯದರ್ಶಿಗಳು ತಹತೀಲ್ದಾರ್ ಮತ್ತು ಇತರ ಅಧಿಕಾರಿಗಳನ್ನು ನೋಡಿ ನಾರಾಯಣದೇವರಕೆರೆ ಪರಿಸ್ಥಿತಿಯನ್ನು ತೀಕಿಸಿದರು. ಈ ತಿಂಗಳ ಕೊನೆಯಲ್ಲಿ ನಡೆಯುವ ಅಡ್ವಿಸರಿ ಬೋರ್ಡಿನ ಸಭೆಯಲ್ಲಿ ಕಲೆಕ್ಟರ್‌ರವರೊಡನೆ ಈ ವಿಷಯವು ಚರ್ಚೆಗೆ ತೆಗೆದುಕೊಳ್ಳಲ್ಪಡುತ್ತದೆ.

(2-ನೇ ಪುಟದಿಂದ)

ಕಾಂಗ್ರೆಸ್ ಹೆಸರಮೇಲೆ ಬಂದ ಸದಸ್ಯರೂ, ಕಾಂಗ್ರೆಸ್ ನಿರ್ಣಯದಿಂದ ಆದ ಅಧ್ಯಕ್ಷರಾದ ಮುದಾರಿಯವರೂ ಪ್ರಾಂತೀಕ ಕಾಂಗ್ರೆಸ್ ಸಮಿತಿಯ ಆಜ್ಞೆಯನ್ನು ಧಿಕ್ಕರಿಸಿ ತಮ್ಮ ಪದವಿಗಳಿಗೆ ಅಂಟಿಕೊಂಡಿರುವರು. ಕಾಂಗ್ರೆಸ್ಸಿನ ಶಿಸ್ತುಭಂಗಕ್ಕೆ ಕಾರಣನಾಗಿರುವರು.

ಇದಕ್ಕೆ ಕಾರಣಗಳನ್ನು ಕಂಡು ಹಿಡಿಯುವುದು ಕಷ್ಟವಲ್ಲ.

1) ಹೊಸಪೇಟೆಯಲ್ಲಿ ಕಾಂಗ್ರೆಸ್ ವಾತಾವರಣವು ಸಾಕಷ್ಟಿಲ್ಲ.

2) ಹೊಸಪೇಟೆಯಲ್ಲಿ ಕಾಂಗ್ರೆಸ್ ವಾತಾವರಣಕ್ಕೂ, ಸಾರ್ವಜನಿಕಾಭಿಪ್ರಾಯಕ್ಕೂ ಜನಾಬ್ದಾರಿಯುಳ್ಳ ಮುಖಂಡರು ಉದಾಸೀನರಾಗಿರುವರು.

3) ಕಾಂಗ್ರೆಸ್ ಚುನಾವಣೆ ಸಮಿತಿಯವರು ದೂರದೃಷ್ಟಿ, ದೀರ್ಘಾಲೋಚನೆ, ಕಾಂಗ್ರೆಸ್ ಸಂಸ್ಥೆಯ ಭವಿಷ್ಯ ಹಿತಗಳನ್ನು ಆದರ್ಶವಾಗಿಟ್ಟುಕೊಂಡು ಸದಸ್ಯರನ್ನು ಆರಿಸಲಿಲ್ಲ.

4) ಹೀಗೆ ಆರಿಸಲ್ಪಟ್ಟ ಸದಸ್ಯರನ್ನು ವರಿಗಲ್ಲಿಗೆ ಹಚ್ಚಿ ಕಾಂಗ್ರೆಸ್ ದೃಷ್ಟಿಯಿಂದ ಅಗಾಗ್ಗೆ ಪರೀಕ್ಷಿಸಲಿಲ್ಲ.

ಈಗ ಏನುಮಾಡಬೇಕು.

1. ವಾರ್ಡು-ವಾರ್ಡುಗಳಲ್ಲಿಯೂ ಸಭೆಗಳನ್ನು ಮಾಡಿ ಪ್ರತಿಜ್ಞಾಭಂಗದ ವಿಷಯವನ್ನು ಜನರಿಗೆ ತಿಳಿಯಹೇಳಬೇಕು

2. ಕಾಂಗ್ರೆಸ್ ತತ್ವ, ನೀತಿ, ಶಿಸ್ತಿನಕ್ರಮ ಇವಗಳಬಗ್ಗೆ ಉಪನ್ಯಾಸಗಳೇ ಆಲ್ಲದೆ - ಕರಪತ್ರಗಳನ್ನೂ ಹೊರಡಿಸಬೇಕು.

ಜನತೆಯಲ್ಲಿ ಸಾಕಷ್ಟು ಜಾಗೃತಿಯಾದರೆ ಶೀಘ್ರ ಫಲವು ದೊರೆಯುವುದು. ಈಸಲವಾಗದಿದ್ದರೂ, ಮುಂದಿನ ಚುನಾವಣೆಗಳಲ್ಲಿ ಜನರು ಕಣ್ಣು ತೆರೆಯುವರು.

ಬಳ್ಳಾರಿ ನಗರ ಸಮಾಚಾರಗಳು

ಮೂರಾಟಗಳ ಸಮರ್ಥನೆ.

ಶ್ರೀ ಜಿ. ಯಸ್. ಹನುಮಂತರಾಯರ ಅಧ್ಯಕ್ಷತೆಯಲ್ಲಿ 4ನೇ ಭಾನುವಾರ ಸಾಯಂಕಾಲ ಸೇರಿದ ಸಭೆಯಲ್ಲಿ ಕಾಂಗ್ರೆಸ್ ಶಾಸನಸಭ್ಯರಾದ ಶ್ರೀ ಭೀಮರಾಯರು ಕಾಂಗ್ರೆಸ್ ಸರಕಾರದವರು ತಂದ ಸೇಲ್ಸ್ ಟ್ಯಾಕ್ಸು ಕರವನ್ನು ಸಮರ್ಥಿಸುತ್ತಾ ಮದ್ರಾಸ್ ಪ್ರಾಂತ್ಯದಲ್ಲಿ ಶೀಘ್ರವಾಗಿ ಮದ್ಯಸಾರ ನಿರೋಧವಾಗಬೇಕೆಂದರೆ ಇದರ ಹೊರತು ಮತ್ತೊಂದು ಮಾರ್ಗವಿಲ್ಲೆಂದರು. ಬಿ. ವಿ. ಶೇಷಗಿರಿರಾಯರು ಸಾಶ್ತಿಮಾತ್ಯ ದೇಶದಲ್ಲಿನ ಕರಗಳನ್ನು ವಿವರಿಸಿ ಇದನ್ನು ದೃಢಪಡಿಸಿ ಮುಖ್ಯ ಪ್ರಧಾನರು ಕೊನೂರಿನಲ್ಲಿ ಹತ್ತು ಜಿಲ್ಲೆಗಳಲ್ಲಿ ಮದ್ಯಸಾರ ನಿಷೇಧವನ್ನು ನೂತುವರೆಂಬ ಹೇಳಿಕೆಯನ್ನು ಕೊಟ್ಟುದಕ್ಕೆ ಅವರನ್ನು ಅಭಿನಂದಿಸಿ ಬಳ್ಳಾರಿ ಜಿಲ್ಲೆಯಲ್ಲಿ ಬರುವ ಅಕ್ಟೋಬರಿನೀದಲೇ ನಿರೋಧಶಾಸನವನ್ನು ಜಾರಿಗೆ ತರಬೇಕೆಂದು ಒಂದು ನಿರ್ಣಯವನ್ನು ತಂದರು. ಅದು ಸರ್ವಾನುಮತದಿಂದ ಪಾಸಾಯಿತು. ಅಧ್ಯಕ್ಷರಾದ ಹನುಮಂತರಾಯರು ಕಾಂಗ್ರೆಸ್ಸಿನಲ್ಲಿ ಸೇರಬಾರದೆಂಬ ವರ್ತಕರ ಸಂಕಲ್ಪಕ್ಕೆ ವಿಷಾದಿಸಿ ದೇಶಹಿತ ದೃಷ್ಟಿಯಿಂದ ಅದನ್ನು ಹಿಂದೆಗೆದುಕೊಳ್ಳಲು ಸೂಚಿಸಿ ಕಾಂಗ್ರೆಸ್ ಸರಕಾರದ ಶಾಸನಗಳಿಗೆ ಬೆಂಬಲಕೊಡಬೇಕೆಂದರು.

ವ್ಯಭಿಚಾರ ಗೃಹಗಳ ನಿವಾರಣೆ.

ಈ ಊರಿನ ಸುಪ್ರಸಿದ್ಧ ವರ್ತಕರಾದ ಯಸ್. ವಿ. ಶೆಟ್ಟಿಯವರ ಅಧ್ಯಕ್ಷತೆಯಕೆಳಗೆ 7ನೇ ತಾ, ಬುಧವಾರ ಸಾಂಬಮೂರ್ತಿ ಮೈದಾನದಲ್ಲಿ ಒಂದು ಸಭೆಯು ಏರ್ಪಟ್ಟಿದ್ದಿತು. ಪಂಡಿತ ವೆಂಕಟರಾಮಶಾಸ್ತ್ರಿಗಳು, ಬಿ. ಯಂ. ಮರುಳಸಿದ್ದಯ್ಯನವರು, ಬಿ.ವಿ. ಶೇಷಗಿರಿರಾಯರುವ್ಯಭಿಚಾರ ದೋಷಗಳನ್ನು ಕುರಿತು ನೂತಾಡಿದರು

ಶ್ರೀ ಟಿ. ಪುಟ್ಟಸ್ವಾಮಿ

[ಬಳ್ಳಾರಿ ಜಿಲ್ಲೆಯಲ್ಲಿ ಸಂಚರಿಸುವರು.]

29-6-39 ರಿಂದ 26-6-39 ರ ವರೆಗೆ ಮದ್ರಾಸ್ ಶಾಸನಸಭೆ ಕಾಂಗ್ರೆಸ್ ಪಾರ್ಟಿ ಕಾರ್ಯದರ್ಶಿಗಳಾದ ಶ್ರೀ ಟೇಕೂರು ಸುಬ್ರಹ್ಮಣ್ಯಂರವರು ಬಳ್ಳಾರಿ ಜಿಲ್ಲೆಯಲ್ಲಿ ಸಂಚರಿಸುವರು. ಕಾಂಗ್ರೆಸ್ ಸರಕಾರದವರು ಮಾಡಿದ ಶಾಸನಗಳು ಮತ್ತು ಕಾಂಗ್ರೆಸ್ ಕಾರ್ಯದ ಪರವಾಗಿ ಪ್ರಚಾರ ಕಾರ್ಯವನ್ನು ಮಾಡುವರು. ಕಾರ್ಯಕ್ರಮದ ವಿವರಗಳು ಮುಂದೆ ಪ್ರಕಟಿಸಲಾಗುತ್ತದೆ.

ಕುರುಗೋಡು ಕಲ್ಲುಗುಡಿಸ್ವಾಮಿ ಜಾತ್ರೆ

35 ವರ್ಷಗಳನಂತರ ಕುರುಗೋಡಿನ ಕುರುಬ ಮಹಾಶಯರು ಕಲ್ಲುಗುಡಿಸ್ವಾಮಿಯ ಜಾತ್ರೆಯನ್ನು ಈ ತಿಂಗಳ 5 ರಿಂದ 7ನೇ ತ್ಯಾರಿ ನೆರವೇರಿಸಿದರು. ಪ್ರತಿನಿತ್ಯವು 3000 ಜನರ ಅನ್ನಸಂತರ್ಪಣೆಯಾಗುತ್ತಲಿದ್ದಿತು. ಮಾ. ಮುರಬಸವನಗೌಡರು ಮತ್ತು ಇತರರ ಪ್ರಯತ್ನಗಳಿಂದ ಈಸಲ ಪ್ರಾಣಿಬಲಿಯಾಗಲಿಲ್ಲ. ಶ್ರೀ ಬಿ. ಶ್ರೀನಿವಾಸರಾಯರು ತಮ್ಮ ಭಾವಿಗೆ ಸಂಪುಹಾಕಿಸಿ ನೀರಿನ ಕೊರತೆಯನ್ನು ನೀಗಿದರು. ಬಳ್ಳಾರಿಯ ಹೆಲ್ತ್ ಇನ್‌ಸ್ಪೆಕ್ಟರ್‌ರಾದ ಶ್ರೀ ಹರಿನಾರಾಯಣರು ಆರೋಗ್ಯರಕ್ಷಣೆಯ ಏರ್ಪಾಟುಗಳನ್ನು ಪಂಚಾಯಿತಿ ಬೋರ್ಡಿನವರ ಸಹಾಯದಿಂದ ಮಾಡಿದ್ದರು.

ಮಿನಾಕ್ಷಿ ಭವನ ಕಾಫಿಕ್ಲಬ್

[ರಿಜಿಸ್ಟರ್ಡ್]

ಶಾಖೆಗಳು—

ಕಾಫಿ ಕ್ಲಬ್ ಬೆಂಗಳೂರು ಪೋಸ್ಟ್

ಊಟ ವಸತಿಗೃಹ ಬ್ರಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪದಲ್ಲಿ ತಯಾರಿಸಿದ ಸಿಹಿಖಾರದ ಫಲಹಾರವಸ್ತುಗಳು.

ಒಳ್ಳೆಯ ಊಟದ ವ್ಯವಸ್ಥೆ ಧಾರಾಳವಾಗಿ ಗಾಳಿ, ಬೆಳಕು, ಬಯಲು ಮಹಡಿಯ ಮೇಲಿನ ಕೊಠಡಿಗಳು ಆಧುನಿಕ ವ್ಯವಸ್ಥೆ

ಒಂದು ಸಲ ಬಂದು ಪರೀಕ್ಷಿಸಿರಿ.

ನವಭಾರತ

ಎಸ್.ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್' ಸಾಚುಗಳೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಮ್ಮೆಸಲ ವಯವಿಟ್ಟು ಬಂದು ಪರೀಕ್ಷಿಸಿರಿ.

Sarada Ink. [Regd]

Awarded Gold Medal and Certificate of Merit at the All India Swadeshi Exhibition Bellary.

For Fountain Pens and Steel Pens.

Blue-Black, Red, Blue, Green & Violet

SARADA INK WORKS, (Regd.)

K. V. & Sons, BELLARY.

ಶಾರದಾ ಇಂಕ್ (ರಿಜಿಸ್ಟರ್ಡ್)

ಬಳ್ಳಾರಿ ಅಖಿಲ ಭಾರತ ಪಸ್ತು ಪ್ರದರ್ಶನದಲ್ಲಿ ಸುವರ್ಣ ಪದಕವನ್ನೂ, ಯೋಗ್ಯತಾ ಪತ್ರವನ್ನೂ ಪಡೆದಿದೆ. ಫೌಂಟನ್ ಪೆನ್ನುಗಳಿಗೂ, ಇತರ ಲೇಖನಿಗಳಿಗೂ, ಉಪಯೋಗಿಸಲು ಶ್ರೇಷ್ಠವಾದ ಬ್ಲೂ-ಬ್ಲಾಕ್ ಕೆಂಪು, ನೀಲಿ ಹಸರು, ವೈಲೆಟ್ ವರ್ಣಗಳಲ್ಲಿ ದೊರೆಯುತ್ತದೆ.

ಕೆ. ವಿ. ಅಂಡ್ ಸನ್ಸು, ಬಳ್ಳಾರಿ.

NAVA BHARAT, BELLARY.

(With which is incarporated 'Congress Bulletin')

The leading Nationalist Weekly.

'ನವ ಭಾರತ ಬಳ್ಳಾರಿ.

[ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.]

The Rates of Subscription.	ಚಂದಾ ವಿವರ
Annual	ವರ್ಷ
Local 1—8—0	ಸ್ಥಳದವರಿಗೆ 1-8-0
Moffusil 2—0—0	ಪರಸ್ಥಳದವರಿಗೆ 2-0 0
Half Yearly	6 ತಿಂಗಳು
Local 1—0—0	ಸ್ಥಳದವರಿಗೆ 1-0.0
Moffusil 1—4—0	ಪರಸ್ಥಳದವರಿಗೆ 2-0-0

Patent medicines, Tonics, injections

Ayurvedic Preparations &

Oilman-stores —Moderate Rates

Trial earnestly solicited.

M. S. V. Bros,

Car Street, **BELLARY.**

ಇಂಗ್ಲೀಷ್ ಔಷಧಗಳು, ಇಂಜೆಕ್ಷನ್ ಮತ್ತು ಇತರ ಆಯುರ್ವೇದೀ ಔಷಧಗಳು, ಸ್ಟೇಷನರಿ ವಗೈರೆ ಸುಲಭ ಬೆಲೆಯಲ್ಲಿ ದೊರೆಯುತ್ತವೆ.

ಎಂ. ಯಸ್. ವಿ. ಬ್ರದರ್ಸ್,

ತೇರು ಬೀದಿ, ಬಳ್ಳಾರಿ.

The Lakshmi Medical Stores.

Chemists & Druggists, Car Street, Bellary.

ದಿ ಲಕ್ಷ್ಮೀ ಮೆಡಿಕಲ್ ಸ್ಟೋರ್ಸ್

ಔಷಧಾಲಯ ತೇರು ಬೀದಿ, ಬಳ್ಳಾರಿ.

ನಮ್ಮಲ್ಲಿ ಇಂಗ್ಲೀಷ್ ಔಷಧಗಳು, ಇಂಜೆಕ್ಷನ್, ಆಂಪೂಲ್ಸ್, ಟಿಂಕ್ಚರ್ಸ್, ಪಸ್ತ್ರ ಚಿಕಿತ್ಸೆಗೆ ಬೇಕಾಗುವ ಪಸ್ತ್ರಗಳು, ಅಸ್ಪತ್ರೆಯ ಬೇಡಿಕೆಗಳು ಮತ್ತು ಅಸಂಬಂಧದ ಔಷಧಗಳೆಲ್ಲಾ ದೊರೆಯುತ್ತವೆ.

ವಿಶೇಷ ವರ್ಗದ **'ಲಕ್ಷ್ಮೀ-ಸಿರಪ್'** ಪಾನಗಳನ್ನು ನಾವು ತಯಾರಿಸುತ್ತೇವೆ ನಮ್ಮ ಔಷಧಾಲಯವು ದಿನ ರಾತ್ರಿಯೆಲ್ಲಾ ತೆಗೆದಿರುತ್ತದೆ. ದರಗಳು ಸುಲಭ ಪರೀಕ್ಷಿಸಿ ತೃಪ್ತಿ ಹೊಂದಿರಿ.

Nava Bharat, Bellary.

REG. NO. M. 3937.

Sri _____

Printed at Vittal Press, Car Street Edited & Published by T. B. Keshava Rao BELLARY.

'ವಂದೇ ಮಾತರಂ'

(ಇದರಲ್ಲಿ 'ಕಾಂಗ್ರೆಸ್' ಬುಲೆಟಿನ್' ಸಮಾವೇತವಾಗಿದೆ)

ಉಜ್ವಲ · ರಾಷ್ಟ್ರೀಯ ವಾರ ಪತ್ರಿಕೆ.

ಸಂಪಾದಕ— ಟಿ. ಬಿ. ಕೇಶವರಾವ್.

ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ.

ಸಂಚಿಕೆ ೧ | ಬಳ್ಳಾರಿ. ಜೂನ್ ೧೭ನೇ ಶನಿವಾರ ೧೯೩೯. | ಸಂಪುಟ ೧೬

ತಾಲೂಕು ವಿದ್ಯಾಸಮಿತಿಗಳು.

[4ನೇ ಪುಟವನ್ನು ನೋಡಿರಿ]

★ ಎಂಪೈರ್ ಆಫ್ ಇಂಡಿಯಾ ★

ಲೈಫ್ ಅಶೂರೆನ್ಸ್ ಕಂಪನಿ ಲಿಮಿಟೆಡ್.

ಸ್ಥಾಪಿತ 1897.

ಉದಾತ್ತವಾದ ಯೋಜನೆಗಳು.

ಆಸ್ತಿಯ ಮೊತ್ತ	ರೂ.	5,18,00,000	ಇಂತಹೂ ಹೆಚ್ಚಿವೆ.
ಚಾರಿಯಲ್ಲಿರುವ ಪಾಲಿಸಿಗಳ ಮೊತ್ತ	,,	14,29,00,000	,,
ವಾರಸುದಾರರಿಗೆ ಸಲ್ಲಿಸಿದ ಹಣ	,,	6,15,00,000	,,

ಭವಿಷ್ಯದಲ್ಲಿ ಕುಟುಂಬ ಭರಣಕ್ಕೇರ್ಪಾಟು ಮಾಡಬೇಕಾದುದು, ಪ್ರತಿಯೊಬ್ಬ ಕುಟುಂಬಿಕನ ಕರ್ತವ್ಯವಾಗಿದೆ ವಿಶೇಷ ಪರಿಸ್ಥಿತಿಯಿಂದ ಸಂಪಾದನೆಯು ಕುಗ್ಗಿ ಹೋಗುವ ದಿನಗಳು ಬರಬಹುದು, ಆಂಥಾ ಕಾಲಕ್ಕೋಸ್ಕರ ಜೀವ ವಿಮೆಯ ಪಾಲಿಸಿಯನ್ನು ರಕ್ಷಿಸಬೇಕಾದುದು ಅತ್ಯಗತ್ಯವಾಗಿದೆ

ಮುಖ್ಯ ಕಾರ್ಯಾಲಯ.
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

★

ಶಾಖೆ.
152/53 ಕಮರ್ಶಿಯಲ್ ಸ್ಟ್ರೀಟ್,
ಬೆಂಗಳೂರು.

THE NAVA BHARAT
ನವ ಭಾರತ
ಸಂಪಾದಕ-ಟಿ.ಪಿ.ಕೇಶವರಾವ್

ಶನಿವಾರ ಜೂನ್ 17, 1939.

ತಾಲೂಕು ವಿದ್ಯಾಸಮಿತಿಗಳು

ಈ ತಿಂಗಳ ಒಂದನೆಯ ತಾರೀಖಿನಿಂದ ಜಿಲ್ಲಾ ಎಫುಕೇಶನಲ್ ಕೌನ್ಸಿಲು ಎಂಬ ಸಂಸ್ಥೆಯನ್ನು ರದ್ದುಪಡಿಸಿ ಪ್ರಾಥಮಿಕ ವಿದ್ಯಾಭ್ಯಾಸದ ಮೇಲ್ವಿಚಾರಣೆಗೋಸ್ಕರ ತಾಲೂಕು ವಿದ್ಯಾಸಮಿತಿಗಳನ್ನು ನಿರ್ಮಿಸಿರುವರು.

"ಶಾಲೆಗಳು ಸರಿಯಾಗಿ ನಡೆಯುವವೋ? ಇಲ್ಲವೋ? ಎಂಬುದನ್ನು ಅಧಿಕಾರಿಗಳ ಗಮನಕ್ಕೆ ತಂದು ಹೊಸ ಶಾಲೆಗಳನ್ನು-ಪೆಚ್ಚಿನ ತರಗತಿಗಳನ್ನು ಪ್ರಾರಂಭಿಸುವುದು, ಶಾಲೆಯ ಮುಂಜೂರಾತಿಯನ್ನು ಮಾನ್ಯಮಾಡುವುದು, ಗ್ರಾಂಟು ಕೊಡುವುದರ ಏರ್ಪಾಟು. ಶಾಲೆಯ ಆಯುಷ್ಯನ್ನು ಹೆಚ್ಚಿಸುವುದು, ಬಿಡುವುದು. ಉಪಾಧ್ಯಾಯರನ್ನು ಹೆಚ್ಚಿಸುವುದು, ತಗ್ಗಿಸುವುದು, ಬಾಲಕಿಯರ ಮತ್ತು ಹಿಂದುಳಿದವರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸುವುದು. ಹಳ್ಳಿಗಳಲ್ಲಿ ವಿದ್ಯಾಭ್ಯಾಸದ ಬಗ್ಗೆ ಜಾಗೃತಿಯನ್ನುಂಟುಮಾಡುವುದು. ಬಡಮಕ್ಕಳಿಗೆ ಉಚಿತವಾಗಿ ಊಟ-ಪುಸ್ತಕ-ಹಲಗೆ ವಗೈರೆಗಾಗಿ ಚಂದಾಗಳನ್ನೆತ್ತಿ ಸಾಧ್ಯವಾದಮಟ್ಟಿಗೆ ಹಳ್ಳಿಗಳಲ್ಲಿ ಶಾಲೆಗಳಿಗಾಗಿ ಬಾಡಿಗೆ ಇಲ್ಲದಿರುವ ಮನೆಗಳನ್ನು ಒದಗಿಸುವುದು' ವಗೈರೆ ಸಮಿತಿಯವರ ಕರ್ತವ್ಯಗಳಾಗಿವೆ.

ವಿದ್ಯಾಮಂತ್ರಿಗಳಾದ ಶಾರ್ಕಿಯವರು ಈ ವಿಷಯದಲ್ಲಿ ದೊಡ್ಡ ಉಪದೇಶವನ್ನು ಕೊಟ್ಟಿರುತ್ತಾರೆ. ಆದರೆ ಈ ಸಮಿತಿಗಳಿಂದ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಏನೂ ಸಹಾಯವಾಗುವದಿಲ್ಲವೆಂದು ನಮ್ಮ ಅಭಿಪ್ರಾಯ. ಅಧಿಕಾರೀ ಮತ್ತು ಅನಧಿಕಾರೀ ಸದಸ್ಯರಲ್ಲಿರುವ ದೃಷ್ಟಿಕೋನವು ಬದಲಾಗುವ ಸೂರ್ಚನೆ ನಮಗೆ ತೋಚುವಂತಿಲ್ಲ. ವಿದ್ಯಾಭ್ಯಾಸದ ವಿಷಯಕ್ಕೆ ಅಭಿಪ್ರಾಯ ಭೇದವಿರದಾದರೂ, ಸದಸ್ಯರು ನಿಸ್ವಾರ್ಥದೃಷ್ಟಿಯಿಂದ ಪ್ರಯಾಣ ಭತ್ತಾ ಇಲ್ಲದೆ ಪ್ರಾಥಮಿಕ ವಿದ್ಯಾಭ್ಯಾಸ ಹಿತದ ಒಂದೇ ಲಕ್ಷವನ್ನಿಟ್ಟುಕೊಂಡು ನಿರ್ಣಯಗಳನ್ನು ಮಾಡುಸರೆಂದು ನಮಗನಿಸುವುದಿಲ್ಲ.

ನವ ಸ್ಮರ ನಾಮಕರಣವಾದರೂ ಬಹಳ ಜತ್ಪಿತ್ತಿಕರವಾಗಿದೆ. ಕಾಂಗ್ರೆಸ್ ಸರಕಾರವು ಅಸ್ತಿತ್ವದಲ್ಲಿದ್ದಾಗ ಕೂಡ ಈ ನಾಮಕರಣವಬಗ್ಗೆ ಕಾಂಗ್ರೆಸ್ ಸಂಸ್ಥೆಯವರನ್ನೇ ಅನೇಕಕಡೆ ತುಚ್ಛೀಕರಿಸಿರುವರು.

ಹಿಂದಿನ ಸರಕಾರಗಳೊಡನೆ ಸಮ್ಮತಿ ಅಸಹಕಾರವಿದ್ದಿತು. ಯಾವ ಪಾರ್ಟಿಗಳವರು ಅಧಿಕಾರಕ್ಕೆ ಬಂದರೂ, ಆಯಾ ಪಾರ್ಟಿ ಜನರನ್ನು ಪ್ರತಿಯೊಂದು ಸಮಿತಿ ನವಕರಿಗಳಲ್ಲಿ ತುಂಬಿದರು. ಕಾಂಗ್ರೆಸ್ ಸರಕಾರವು ಬಂದಮೇಲೆ "ನಮ್ಮವರಿಗೆ ಕೆಲಸಗಳು ಕೊಟ್ಟರೆ ನಮ್ಮನ್ನು ಬೇರೆಯವರು ಏನೆನ್ನುತ್ತಾರೆ. ನಮ್ಮವರನ್ನು ಯಾವಾಗಲೂ ದೂರವಿಡೋಣ. ಎಂಬ ಪ್ರವೃತ್ತಿಯು ಅನುಸರಿಸಲ್ಪಡುತ್ತಾ ಬಂದೆ. ಈ ಕಾರಣ ಕಾಂಗ್ರೆಸ್ ಜನರಲ್ಲಿ ಶಕ್ತರೂ, ಯೋಗ್ಯರೂ ಇದ್ದರೂ, ಅವರು ಕೊನೆಯವರೆಗೂ ಸ್ವಾರ್ಥತ್ಯಾಗಮಾಡುತ್ತಾ ಜೈಲುಗಳಿಗೆ ಹೋಗುತ್ತಾ ಬಡಿಸಿಕೊಳ್ಳುತ್ತಾ ಸಾಯಬೇಕು. ಯಾವ ಸರಕಾರ ಬಂದರೂ ಅವುಗೆ ಸ್ವಂತ ಹಿತವಿಲ್ಲ. ಕಷ್ಟ ಪಟ್ಟು ಫಲವನ್ನು ಇತರರಿಗೆ ದೊರಕಿಸಿಕೊಡಬೇಕು. ಕಾಂಗ್ರೆಸ್ ಸರಕಾರವು ಎದುರು ಪಾರ್ಟಿಯವರ [opposition] ಸಲಹೆಗಳನ್ನು ಘನಸೌರವಗಳಿಂದ ನೋಡುತ್ತಲಿದೆ. ಇದಕ್ಕೆ ನಾವು ಬೇಡೆನ್ನುವುದಿಲ್ಲ. ಇದರಿಂದ ಕಾಂಗ್ರೆಸ್ ಸಂಸ್ಥೆಯ ಧ್ಯೇಯಗಳು, ವಾರ್ಧಾ ವಿದ್ಯಾಭ್ಯಾಸ ಕ್ರಮ ಹೇಗೆ ಸಾಗಬೇಕು.?

ಒಂದು ಧರ್ಮದ ಅನುಭವದಿಂದ ತಾಲೂಕು ವಿದ್ಯಾಸಮಿತಿಗಳ ಪ್ರಯೋಜನವು ಎಲ್ಲರಿಗೂ ತಿಳಿಯುವದು.

ಸಂಯುಕ್ತ ರಾಜ್ಯಘಟನೆ.
FEDERATION.

1935ರ ಗವರ್ನಮೆಂಟು ಆಫ್ ಇಂಡಿಯಾ ಕಾಯ್ದೆಯನ್ನು ಪಾರ್ಲಿಮೆಂಟಿನಲ್ಲಿ ಪಾಸು ಮಾಡಿ 1937ರಲ್ಲಿ ಬ್ರಿಟಿಶ-ಹಿಂದೂಸ್ಥಾನದ 11 ಪ್ರಾಂತ್ಯಗಳಲ್ಲಿ ಪ್ರಾಂತೀಯ ಸ್ವಾಯತ್ತತೆಯುಳ್ಳ ಅಧಿಕಾರವನ್ನು ಪ್ರಜಾಜನಿಕರಿಗೆ ಕೊಟ್ಟರು. ಗವರ್ನರರ ವಿಶೇಷಾಧಿಕಾರಿಗಳ ವಿಷಯದಲ್ಲಿ ಕಾಂಗ್ರೆಸ್‌ನ ಮತಭೇದವಾದಕಾರಣ ಬಹು ಸಂಖ್ಯಾಕರಾಗಿ ಪ್ರಾಸನ ಸಭೆಗಳಿಗೆ ಆರಿಸಿಹೋದ ಕಾಂಗ್ರೆಸ್‌ಜನರು ಪ್ರಭುತ್ವದಲ್ಲಿ ಅಧಿಕಾರ ಸ್ವೀಕಾರಮಾಡಲಿಲ್ಲ. ಭಾರತ ಮಂತ್ರಿಗಳಾದ ಲಾರ್ಡ್‌ಜೆಟ್ಲ್ಯಾಂಡರೂ, ಇತರ ಮುಖ್ಯ ಅಧಿಕಾರಿಗಳೂ ಈ ವಿಷಯದಲ್ಲಿ ತಕ್ಕ ಆಶ್ವಾಸನವನ್ನು ಕೊಟ್ಟಮೇಲೆ, ಇದು ಮಂತ್ರಿಗಳಲ್ಲೇ ಜನತೆಯ ಹಿತವನ್ನು ಮಾಡಬಯಸಿ ಮಹಾತ್ಮ ಗಾಂಧಿಯವರ ಸಲಹೆ ತೆಗೆದುಕೊಂಡು 8 ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಅಧಿಕಾರವನ್ನು ಸ್ವೀಕರಿಸಿತು.

ಪ್ರಾಂತ್ಯಗಳಲ್ಲಿ ಸುಧಾರಣೆಗಳು ಬಂದಮೇಲೆ ಕೇಂದ್ರದಲ್ಲಿ ಯಾವ ವಿಧವಾದ ಸುಧಾರಣೆಯೂ ಆಗಲಿಲ್ಲ. 1935ರ ಅಕ್ಟ್ ಪ್ರಕಾರ ಸಂಯುಕ್ತ ರಾಜ್ಯಘಟನೆಯು ಜಾರಿಯಲ್ಲಿ ಬರಬೇಕಿದ್ದಿತು. ಈ ಘಟನೆಯನ್ನು ಎಲ್ಲಾ ಅಭಿವಿಶ್ವಾಯದವರೂ ಖಂಡಿಸಿದ್ದಾರೆ. ಕಾಂಗ್ರೆಸ್ - ಮುಸ್ಲಿಂಲೀಗ್ ಅಲ್ಲದೆ ಸಂಸ್ಥಾನಾಧೀಶರೂ ಕೂಡ ಇದನ್ನು ಬೇಡವೆಂದಿದ್ದಾರೆ. ಸಂಸ್ಥಾನಾಧೀಶರು ಬ್ರಿಟಿಶ ಆಳರಸರ ಕೈಗೊಂಬೆಗಳಂತಿದ್ದು ಆಯಾ ಸಂಸ್ಥಾನಗಳಲ್ಲಿ ನಿಯಮಿಸಲ್ಪಟ್ಟ ಜರೋಪ್ಯ - ಏಜಂಟರ ಮತ್ತು ಅವರ ಜವಾನರಿಗೂ ಕೂಡ ಇವರುಹೆದರುವರೆಂದು ಮಹಾತ್ಮ ಗಾಂಧಿಯವರೇ ಹೇಳಿದ್ದಾರೆ.

(9-ನೇ ಪುಟವನ್ನು ನೋಡಿರಿ.)

ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯಕಾರಿ ಮಂಡಲದ ಗೊತ್ತುವಳಿಗಳು.

ಈ ಸಭೆಯು ಜಿಲ್ಲಾ ಬೋರ್ಡು ಕಾಂಗ್ರೆಸ್ ಕಛೇರಿಯಲ್ಲಿ ಶ್ರೀ ವಸು ಪಾಲಪ್ಪನವರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಪರಿಶೋಧಿಸಲ್ಪಟ್ಟ ಕಳೆದ ವರ್ಷದ ಲೆಕ್ಕಪತ್ರಗಳು ಸ್ವೀಕೃತವಾದುವು.

(1) ಬಳ್ಳಾರಿ ಜಿಲ್ಲೆಯಲ್ಲಿ ಹೊರಗಿನವರನ್ನಾರಿಸುವ ಪ್ರವೃತ್ತಿಯು ಜೋರ್ಜಾಗುತ್ತಿರುವುದಕ್ಕೆ ಈ ಸಭೆಯು ತನ್ನ ವಿವಂಚನೆಯನ್ನು ವ್ಯಕ್ತಗೊಳಿಸಿ ಬಳ್ಳಾರಿ ಜಿಲ್ಲೆಯಲ್ಲಿ ಯೋಗ್ಯತೆ ಮತ್ತು ಶಕ್ತರಿರಬೇಕಾದರೆ ಹೊರಗಿನವರನ್ನಾರಿಸದೆ, ಜಿಲ್ಲೆಯವರಿಗೆ ಕೆಲಸಗಳನ್ನು ಕೊಟ್ಟು ಸರಕಾರದ ಜಾತೀಯ ಆರ್ಡರನ್ನು ಕೂಡ ಲೆಕ್ಕಿಸಬಾರದೆಂದು ಕೋರುತ್ತದೆ.

(2) ಅಧಿಕಾರೇತರ ಸಮಿತಿಗಳಿಗೆ ಸದಸ್ಯರನ್ನಾರಿಸಬೇಕಾದರೆ ಕಾಂಗ್ರೆಸ್ ಕಮಿಟಿಗಳ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕು.

(3) ಫ್ಯಾಮಿ ಕೋಡ ರಿವ್ಹಿಜನ ಕಮಿಟಿಯವರು ಒಪ್ಪಿಸಿದ ವರದಿಯನ್ನು ಸರಕಾರದವರು ಪ್ರಸಿದ್ಧ ಮಾಡಬೇಕೆಂದೂ ದತ್ತಮಂಡಿಳ ಜಿಲ್ಲೆಗಳಿಗಾಗಿ ಆರ್ಥಿಕ ಪ್ರಸಾರಕ ಸಂಘವನ್ನು ನೇಮಿಸಿ ಕಮಿಟಿಯವರ ಸಲಹೆಯನ್ನು ಕಾರ್ಯ ರೂಪದಲ್ಲಿ ತರಲು ಈ ಸಮಿತಿಯು ಸರಕಾರಕ್ಕೆ ಬಿನ್ನವಿಸುತ್ತದೆ.

(4) ತುಂಗಭದ್ರಾ ಯೋಜನೆಯನ್ನು ಬೇಗನೆ ಕೈಕೊಳ್ಳದಿದ್ದುದಕ್ಕೆ ಸಮಿತಿಯು ಅತ್ಯಂತ ವಿಷಾದವನ್ನು ವ್ಯಕ್ತಪಡಿಸುತ್ತಾ, ಅದನ್ನು ಶೀಘ್ರವಾಗಿ ಕಾರ್ಯರೂಪದಲ್ಲಿ ತರಲು ಬೇಡುತ್ತದೆ.

(5) ಹೊಸಪೇಟೆ ಮುನಿಸಿಪಲ್ ಛೇರ್ಮನ್‌ರವರು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಹುಕುಮನ್ನು ಅಮಾನ್ಯಮಾಡಿ ಇನ್ನು ತಮ್ಮ ಸ್ಥಳಕ್ಕೇ ಅಂಟಿಕೊಂಡಿದ್ದು ಅವರ ಘೋರಣೆಯನ್ನು ಮತ್ತು ಇದೇ ರೀತಿಯಾಗಿ ತಮ್ಮ ಕೌನ್ಸಿಲ ಸ್ಥಳಕ್ಕೆ ರಾಜಿನಾಮೆ ಕೊಡದೆ ಕಾಂಗ್ರೆಸ ಪಕ್ಷಕ್ಕೆ ರಾಜಿನಾಮೆ ಕೊಟ್ಟ ಮುನಿಸಿಪಲು ಸದಸ್ಯರ ಘೋರಣೆಯನ್ನು ಸಮಿತಿಯು ಖಂಡಿಸುತ್ತದೆ. ಈ ಸದಸ್ಯರು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ರಾಜಿನಾಮೆ ಪತ್ರದೊಂದಿಗೆ ಕಳಿಸಿದ ಪತ್ರದಲ್ಲಿ ಜಿಲ್ಲಾ ಕಾಂಗ್ರೆಸ ಕಮಿಟಿಯಬಗ್ಗೆ ಬೇಜವಾಬದಾರ ಮತ್ತು ಕೃತ್ರಿಮತನದ ಸಂಗತಿಗಳನ್ನು ಬರೆದುದನ್ನು ಈ ಸಮಿತಿಯು ನಿಷೇಧಿಸುತ್ತದೆ.

(6) ತಾಲೂಕ ವಿದ್ಯಾಸಮಿತಿಗೆ ನೊನ್ನೆ ಮೊನ್ನೆ ಮಾಡಲ್ಪಟ್ಟ ನಾಮನಿರ್ದೇಶನಗಳು ಶಿಕ್ಷಣ ಮಂತ್ರಿಗಳು ಮೇ 31ಕ್ಕೆ ಮಾಡಿದ ಘೋಷಣೆಗೆ ವಿರುದ್ಧವಾಗಿದ್ದರಿಂದ ಸಮಿತಿಯು ಆ ಬಗ್ಗೆ ತನ್ನ ತೀವ್ರ ಅಸಮ್ಮತಿಯನ್ನು ವ್ಯಕ್ತ ಮಾಡುತ್ತದೆ. ಈ ಸಂದರ್ಭದಲ್ಲಿ ಕಾಂಗ್ರೆಸ ಕಮಿಟಿಯವರನ್ನು ಕೇಳಿದ್ದು ದುರ್ಬೀನದ ಸಂಗತಿಯು ಎಂಬ ರರಾಪು ಸರ್ವಾನುಮತದಿಂದ ಸ್ವೀಕೃತವಾಯಿತು

(7) ಮುಂದಿನ ವರ್ಷದಿಂದ ಒಬ್ಬಾರಿ ಜಿಲ್ಲೆಯಲ್ಲಿ ಮದ್ಯಸಾರ ನಿರೋಧಮಾಡಲು ಸಮಿತಿಯು ಸರಕಾರಕ್ಕೆ ಬಿನ್ನವಿಸಿಕೊಳ್ಳುವದಲ್ಲದೆ ಸಾರ್ವಜನಿಕರು ಇದಕ್ಕಾಗಿ ಸರ್ವಸಿದ್ಧತೆಯನ್ನು ಮಾಡಬೇಕಲ್ಲದೆ ಅದಕ್ಕೆ ಸಂಪೂರ್ಣ ಬೆಂಬಲ ಕೊಡಬೇಕೆಂದು ಬೇಡಿಕೊಳ್ಳಲಾಯಿತು.

(8) ಮದ್ರಾಸು ವೈದ್ಯಕೀಯ ಕಾಲೇಜಿನಲ್ಲಿ ಬಳ್ಳಾರಿ ಜಿಲ್ಲೆಯ ವಿದ್ಯಾರ್ಥಿಗಳಿಗೆ ಪ್ರವೇಶ ಸಿಕ್ಕುವಂತೆ ಮಾಡಬೇಕೆಂದು ಆರೋಗ್ಯ ಮಂತ್ರಿಗಳಿಗೆ ಬಿನ್ನವಿಸುತ್ತದೆ.

(9) ಅನಂತಪುರ ಕಾಲೇಜಿನಲ್ಲಿ ಬಿ. ಯಸ್. ಸಿ ಕೋರ್ಸನ್ನು ಸ್ಥಾಪಿಸಬೇಕೆಂದು ಈ ಸಮಿತಿಯು ಸರಕಾರವನ್ನು ಬೇಡುತ್ತದೆ.

ಶ್ರೀ ಟಿ. ಸುಬ್ರಹ್ಮಣ್ಯಂರವರು ಜಿಲ್ಲೆಯಲ್ಲಿ ಸಂಚರಿಸುವ ಖರ್ಚುಗಳಿಗಾಗಿ ರೂ. 25 ಮುಂಜೂರ್ಮಾಡಲಾಯಿತು.

ತುಂಗಭದ್ರಾದಲ್ಲಿ ನೀರು ಕಡಮೆ

ಕಂಪಲಿ-ರಾಮಸಾಗರ ರೈತರಿಗೆ ತೊಂದರೆ

ತುಂಗಭದ್ರಾದಲ್ಲಿ ನೀರುಕಡಮೆಯಾಗಿ ಕಂಪಲಿ - ರಾಮಸಾಗರ ಪ್ರಾಂತದ ಕಬ್ಬಿನ ಬೆಳೆಯೆಲ್ಲಾ ಒಣಗುತ್ತಲಿದ್ದಿತು ತುಂಗಭದ್ರಾ ನದಿಯ ಒಡ್ಡು ನೈಜಾಂ ಪ್ರಾಂತ್ಯದವರಿಗೆ ಅನುಕೂಲವಾಗಿ ವರ್ಷದ ಎಲ್ಲಾಕಾಲವೂ ಅವರಿಗೆ ನೀರುದೊರೆಯುತ್ತಲಿದೆ. ಈವರ್ಷ ಮಳೆಯ ಅಭಾವದಿಂದ ಪೈರುಗಳೆಲ್ಲಾ ಒಣಗುತ್ತಲಿವೆ. ಬ್ರಿಟಿಶ್ ಭಾಗದ ರೈತರು ಈಕಡೆ ನೀರು ಬಿಟ್ಟುಕೊಳ್ಳಲು ಪ್ರಯತ್ನಿಸಿದಾಗ ನೈಜಾಂ ರೈತರು ಅವಕಾಶಕೊಡಲಿಲ್ಲ. ಸರಕಾರದವರಾದರೂ, ಅವರನ್ನೇ ಸಮರ್ಥಿಸುತ್ತಿದ್ದರು. ಈಗ ರಾಯಚೂರು ಜಿಲ್ಲಾ ಕಲೆಕ್ಟರವರ ಯತ್ನಗಳಿಂದ ಒಂದು ವಪ್ಪಂದಕ್ಕೆ ಬಂದು ಅವರು ಕೆಲ ದಿನಗಳು, ಇವರು ಕೆಲ ದಿನಗಳು ನೀರು ಬಿಟ್ಟುಕೊಳ್ಳುವ ಏರ್ಪಾಟಾಗಿದೆ. ಮಳೆಯು ಬಂದರೆ ನೀರನ್ನು ಹಂಚಿಕೊಳ್ಳುವ ಸಮಸ್ಯೆಯೇ ಹುಟ್ಟುವುದಿಲ್ಲ. ವಪ್ಪಂದವನ್ನು ಜಾರಿಗೆ ಶೀಘ್ರದಲ್ಲಿಯೇ ತರುವರೆಂದು ಊಹಿಸಲಾಗಿದೆ.

ಅಂಬಾ ಭವನ ಕಾಫೀ ಕ್ಲಬ್

(ರಿಜಿಸ್ಟರ್ಡು)

ಮತ್ತು

ಕಾಫಿ — **ಊಟದ - ಹೋಟೆಲ್**

ಬೆಂಗಳೂರು ರೋಡ್, ಬಳ್ಳಾರಿ.

ಕೈಪ್ಲೆ ಸ್ಟೈಲ್‌ನಲ್ಲಿಗೆ ಒಳಗೆ ಸಮೀಪನಲ್ಲಿಯೆ ರುದ್ರತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಶುದ್ಧಾಹಾರ - ಗಾಳಿ ಬೆಳಕು ಮತ್ತು ಇತರ ಅನುಕೂಲಗಳುಳ್ಳ ಕೊಠಡಿಗಳು, ಭೋಜನ ಸಮಾರಂಭ ಪಾರ್ಟಿಗಳ ಏರ್ಪಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆ ಮಾಡುವೆವು.

ಪ್ರೊಪ್ರೈಟರ್ಸು —

ಶಿ. ಕೆನ್ನಯ್ಯ, ಬಿಜ್. ಕರಿಬಸಪ್ಪ.

ತಾಲೂಕು ವಿದ್ಯಾಸಮಿತಿಗಳು

ಬಳ್ಳಾರಿ

ಅಧ್ಯಕ್ಷರು:- **ಯಸ್. ನಾರಾಯಣ ರಾವ್.**

(1) ಶ್ರೀ ಬಿ. ಭೀಮರಾವು
[2] ,, ಅಬ್ದುಲ್ ರಾವುಫ್
[3] ,, ಹೆಚ್. ಸೀತಾರಾಮರೆಡ್ಡಿ
[4] ,, ಡಾಕ್ಟರು ಲಕ್ಷ್ಮೀದೇವಿ
[5] ,, ಡೆಪ್ಯುಟಿ ಇನ್ಸ್ಪೆಕ್ಟರು ಸೀನಿಯರ್ಸ್ಕೇಲು (ಕಾರ್ಯದರ್ಶಿ)
[6] ,, ತಹಶೀಲ್ದಾರು-ಬಳ್ಳಾರಿ.
[7] ,, ಸಬ್ ಡೆಪ್ಯುಟಿ ರಿಜಿಸ್ಟ್ರಾರು ಕೋ ಆಪರೇಟಿವು ಸೊಸೈಟೀಸು-ಬಳ್ಳಾರಿ.
[8] ಸಬ್ ಅಸಿಸ್ಟೆಂಟು ಇನ್ಸ್ಪೆಕ್ಟೆಸ್ ಆರ್ಡಿನರೀಸ್
[9] ಅಸಿಸ್ಟೆಂಟು ಡೈರೆಕ್ಟರು ಆಫ್ ಅಗ್ರಿಕಲ್ಚರು
[10] ಶ್ರೀ ಯಸ್. ಮರಿಬಸವನಗೌಡ
[11] ಶ್ರೀಮತಿ ಟಿ. ಬಿ. ಜಯಲಕ್ಷ್ಮಿ ಬಾಯಿ
[12] ಇ. ಡಿ. ಮಾರ್ಟಿ
(13) ಜನಾಬ್ ಅಬ್ದುಲ್ ಬಾಸಿತ್ ಸಾಹೇಬು
(14) ಶ್ರೀ ಷಣ್ಮುಗಂ

ರಾಯದುರ್ಗ

ಅಧ್ಯಕ್ಷರು:- **ಯಸ್. ಸುಂದರಂ ಅಯ್ಯರು.**

1 ಡೆಪ್ಯೂಟಿ ಇನ್ಸ್ಪೆಕ್ಟರು ಆಫ್ ಸ್ಕೂಲ್ಸ್ (ಕಾರ್ಯದರ್ಶಿ) ಸೀನಿಯರ್ ಸ್ಕೇಲು
2 ಸಬ್ ಅಸಿಸ್ಟೆಂಟು ಇನ್ಸ್ಪೆಕ್ಟೆಸ್ ಆಫ್ ಸ್ಕೂಲ್ಸು
3 ತಹಶೀಲ್ದಾರು ರಾಯದುರ್ಗ
4 ಕೋ ಆಪರೇಟಿವು ಇನ್ಸ್ಪೆಕ್ಟರು
5 ಅಗ್ರಿಕಲ್ಚರಲ್ ಡಿಮಾನ್ಸ್ಟ್ರೇಟರು
6 ಶ್ರೀ ಪಿ ಕೇಶನ್ನ
7 ಮೌಲ್ವಿ ಇಸ್ಮಾಯೆಲುಸಾಹೇಬು
8 ಕರಬಸವನಗೌಡ ಹೊಸ್ನೂರು
9 ಚೆನ್ನಪ್ಪರೆಡ್ಡಿ ಕಣೇಕಲ್
10 ಶ್ರೀ ಯಸ್. ಭೀಮಪ್ಪ ಹಿರೇಹಾಳು

ತಿರುಗುಪ್ಪ

ಅಧ್ಯಕ್ಷರು:- **ಶ್ರೀ ಡಿ ರಾಮರೆಡ್ಡಿ.**

1 ಡೆಪ್ಯುಟಿ ಇನ್ಸ್ಪೆಕ್ಟರು ಆಫ್ ಸ್ಕೂಲ್ಸು [ಕಾರ್ಯದರ್ಶಿ] ಸೀನಿಯರ್
2 ಸಬ್ ಅಸಿಸ್ಟೆಂಟು ಇನ್ಸ್ಪೆಕ್ಟೆಸ್ ಆಫ್ ಸ್ಕೂಲ್ಸು
3 ತಹಶೀಲ್ದಾರು ತಿರುಗುಪ್ಪ
4 ಅಗ್ರಿಕಲ್ಚರಲ್ ಡಿಮಾನ್ಸ್ಟ್ರೇಟರ್
5 ಶ್ರೀ ಪಿ. ನಂಜುಂಡಪ್ಪ ಬಾಗುವಾಡಿ
6 ,, ಮ ಕೊಟ್ರಬಸಪ್ಪ
7 ,, ಸಿರಿಗೆರೆ ರಾಮಚಂದ್ರರಾವು
8 ,, ಯಸ್. ಸರಶಿಂಹುಲು
9 ,, ಜನಾಬ್ ಶರ್ತಿ ಮೂಹಮ್ಮದು ಸಾಹೇಬು

ಆಲೂರು

ಅಧ್ಯಕ್ಷರು:-ಶ್ರೀ ಜೆ. ಶ್ರೀನಿವಾಸಶಾಸ್ತ್ರಿ.

1 ಡೆಪ್ಯುಟಿ ಇನ್ಸ್ಪೆಕ್ಟರು ಆಫ್ ಸ್ಕೂಲ್ಸು [ಕಾರ್ಯದರ್ಶಿ]
2 ಸಬ್ ಅಸಿಸ್ಟೆಂಟು ಇನ್ಸ್ಪೆಕ್ಟರು ಆಫ್ ಸ್ಕೂಲ್ಸು
3 ತಹಶೀಲ್ದಾರು ಆಲೂರು
4 ಕೋ ಆಪರೇಟಿವು ಇನ್ಸ್ಪೆಕ್ಟರು [ಆಪ್ರದೇಶದಮೇಲೆ ಅಧಿಕಾರವಿರುವ]
5 ಶ್ರೀ ಡಿ. ಗೋವಿಂದಪ್ಪಾಸು
6 ,, ಪಿ. ಲೋಕಿರೆಡ್ಡಿ
7 ,, ಜಯರಾಮರೆಡ್ಡಿ ಹೆರ್ದಗೇರಿ
8 ,, ಶಾಂತಯ್ಯ ತೆಲುಗುಮಿಷ ಆಲೂರು
9 ,, ಬಿ. ಕೃಷ್ಣಮೂರ್ತಿ
10 ಜನಾಬ್ ಸೈಯದ್ ವಸ್ತಗಿರಿಸಾಹೇಬು ಚಿಪ್ಪಿಗೆರೆ.

ಆದವಾನಿ

ಅಧ್ಯಕ್ಷರು:- **ರಿವರೆಂಡ್ ಜಿ. ಹೆಚ್. ಜೋಸೆಫ್ ಹೆಡ್ಮಾಸ್ಟರು ಮ್ಯು. ಹೈಸ್ಕೂಲು.**

1 ಡೆಪ್ಯುಟಿ ಇನ್ಸ್ಪೆಕ್ಟರು ಸೀನಿಯರು [ಕಾರ್ಯದರ್ಶಿ]
2 ಸಬ್ ಅಸಿಸ್ಟೆಂಟು ಇನ್ಸ್ಪೆಕ್ಟೆಸ್
3 ತಹಶೀಲ್ದಾರು ಆದವಾನಿ
4 ಕೋ ಆಪರೇಟಿವು ಸೊಸೈಟಿ ಇನ್ಸ್ಪೆಕ್ಟರು
5 ಅಗ್ರಿಕಲ್ಚರಲ್ ಡಿಮಾನ್ಸ್ಟ್ರೇಟರು
6 ಶ್ರೀಮತಿ ರಾಮಲಿಂಗಮ್ಮ
7 ಎ. ವಿ. ರಾಮಯ್ಯ ತೆಲುಗುಮಿಷ
8 ಶ್ರೀ ಹೆಚ್. ಯಸ್. ದುರ್ವಾಸರಾವು
9 ,, ಸಿ. ಕೃಷ್ಣರಾವು
10 ಜನಾಬ್ ಖಾಜಿ ಖಾದರುಮೋಹಿದೀನ್

ಹೊಸಪೇಟೆ

ಅಧ್ಯಕ್ಷರು:-
ಟಿ. ಹೆಚ್. ಯುಂ. ಶಿದ್ದಯ್ಯನವರು.

1 ಡೆಪ್ಯುಟಿ ಇನ್ಸ್ಪೆಕ್ಟರು [ಕಾರ್ಯದರ್ಶಿ]
2 ಸಬ್ ಅಸಿಸ್ಟೆಂಟು ಇನ್ಸ್ಪೆಕ್ಟ್ರೆಸ್
3 ತಹಶೀಲ್ದಾರು ಹೊಸಪೇಟೆ
4 ಇನ್ಸ್ಪೆಕ್ಟರು-ಕೋ ಆಪರೇಟಿವು ಸೊಸೈಟೀಸು
5 ಅಗ್ರಿಕಲ್ಚರಲ್ ಡಿಮಾನ್ಸ್ಟ್ರೇಟರ್
6 ಶ್ರೀ ನಾಗನಗೌಡರು
7 ಶ್ರೀಮತಿ-ಸಾವಿತ್ರಿಬಾಯಿ-ನಾಗನಗೌಡರು
8 ಶ್ರೀ ಬಿ. ಜನಕಾಚಾರು
9 ,, ಯಂ. ಯಂ ಭಟ್
10 ,, ಕೆ ಗೋವಿಂದರಾವು
11 ,, ಮುತ್ತಿಹಳ್ಳಿ ರಾಘವೇಂದ್ರರಾವು

ಹಡಗಲಿ

ಅಧ್ಯಕ್ಷರು:-
ಶ್ರೀ. ಯಂ. ಸೀತಾರಾಮರಾವು.

1 ಡೆಪ್ಯುಟಿ ಇನ್ಸ್ಪೆಕ್ಟರು ಸೀನಿಯರು [ಕಾರ್ಯದರ್ಶಿ]
2 ಸಬ್ ಅಸಿಸ್ಟೆಂಟು ಇನ್ಸ್ಪೆಕ್ಟ್ರೆಸ್
3 ಡೆಪ್ಯುಟಿ ತಹಶೀಲ್ದಾರು ಹಡಗಲಿ
4 ಕೋ ಆಪರೇಟಿವು ಸೊಸೈಟಿ ಇನ್ಸ್ಪೆಕ್ಟರು
5 ಕೆ. ಕೆ. ಬಿ. ಪಾಟೀಲ ಮಲ್ಲಯ್ಯ ಕತ್ತೆವುರಡಿ
6 ಶ್ರೀ ಭಾವಿ ಲಿಂಗಪ್ಪ
7 ,, ಕಿನ್ನಾಳ ಗುರುಸಿದ್ದಪ್ಪ

[ಮುಂದಿನ ಪುಟವನ್ನು ನೋಡಿರಿ]

ಸಂಯುಕ್ತ ರಾಜ್ಯಘಟನೆ

[2-ನೇ ಪುಟದಿಂದ]

'Those who know anything of these Residents and States know in what dread the Princes stand of even their secretaries and peons. I write from personal knowledge'

MAHATMA GANDHI.

ಹೀಗಿದ್ದು ಇಂಥಹವರೂ ನಮಗೆ ಸಂಯುಕ್ತ ಘಟನೆಯು ಬೇಡವೆಂದು ಹೇಳುವುದರಿಂದ ಸಂಶಯವೂ ಆಶ್ಚರ್ಯವೂ ಉತ್ಪನ್ನವಾಗುತ್ತದೆ. ಇಂಗ್ಲೆಂಡಿನ ಪ್ರಸಿದ್ಧ ವೃತ್ತಪತ್ರವಾದ "ಮ್ಯಾಂಚೆಸ್ಟರ್ - ಗಾರ್ಡಿಯನ್" ದಲ್ಲಿ ನರೇಂದ್ರರ ನಿಶ್ಚಯದಿಂದ ಸಂಯುಕ್ತ ರಾಜ್ಯಘಟನೆಗೆ ಬಲವಾದ ಪೆಟ್ಟು ತಗಲಿರುವುದೆಂದು ಸಂಪಾದಕೀಯ ಲೇಖನವಿದೆ. ಪಾರ್ಲಿಮೆಂಟ್ ಸದಸ್ಯರು ಇದರಲ್ಲಿ ಬದಲಾವಣೆಗಳನ್ನು ಮಾಡಬಹುದು.

ಭಾರತ ಜನತೆಯ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸಾಸನರ ಸಲಹೆ ಸೂಚನೆಗಳಿಲ್ಲದೆ, ಅವರನ್ನು ತ್ಯಸ್ತಿಪಡಿಸದೆ ಯಾವಘಟನೆಯೂ ಜಾರಿಯಲ್ಲಿ ಬರಲಾರದು. ಅದನ್ನು ಬಲವಂತವಾಗಿ ಜಾರಿಯಲ್ಲಿ ತಂದರೆ ಅಸಹಕಾರದಿಂದ ಪ್ರತಿಘಟಿಸಲ್ಪಡುವುದು.

ಕಾಂಗ್ರೆಸ್ ಸಮಾಚಾರಗಳು.

ಬೊಂಬಾಯಿ ನಗರದಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟೀ ಸಭೆಯು ಈ ತಿಂಗಳ 24 ಮತ್ತು 25ನೇ ತಾ,ಗಳಲ್ಲಿ ನಡೆಯುತ್ತದೆ. ಅದೇಕಾಲಕ್ಕೆ ಪ್ರಾಂತೀಕ ಕಾರ್ಯದರ್ಶಿಗಳ ಸಭೆಯೂ ನಡೆಯಲಿದೆ. ಬಾಬುರಾಜೇಂದ್ರರು ಅಧ್ಯಕ್ಷತೆಯನ್ನು ವಹಿಸಲಿರುವರು.

1930 ರಿಂದ 1933ರವರೆಗೆ ನಡೆದ ಕಾಯ್ದೀಭಂಗದ ಚಳುವಳಿಯಲ್ಲಿ ಸರಕಾರಕ್ಕೆ ನಶಪಡಿಸಿಕೊಂಡ ಕಾಂಗ್ರೆಸ್ ಸಂಸ್ಥೆಗಳ ಹಣವನ್ನು ಹಿಂದಕ್ಕೆ ಕೊಡಬೇಕೆಂದು ಈಗಿನ ಕಾಂಗ್ರೆಸ್ ಸರಕಾರದವರು ಉತ್ತರದಯಸಾಲಿಸಿರುತ್ತಾರೆ.

ಮೈಸೂರು ಕಾಂಗ್ರೆಸ್ ಶಿಷ್ಟ ಮಂಡಲದವರು ಸಂಸ್ಥಾನ ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಹೆಚ್. ಶಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ 13 ನೆಯ ತಾ ಮಹಾತ್ಮ ಗಾಂಧಿಯವರನ್ನು ಕಂಡು ಮೈಸೂರಿನ ಪರಿಸ್ಥಿತಿಯನ್ನೆಲ್ಲಾ ತಿಳಿಸಿದರು. ಮಹಾತ್ಮರು ಅವರಿಗೆ ಈಗಿನ ಸಂದರ್ಭದಲ್ಲಿ ಹೇಗೆ ವರ್ತಿಸಬೇಕೆಂಬುದರ ಬಗ್ಗೆ ಸೂಕ್ತ ಸಲಹೆಗಳನ್ನಿತ್ತರು.

ಮದರಾಸು ವೀರಶೈವ ವಿದ್ಯಾವರ್ಧಕ ಸಂಘ

ಈ ವರ್ಷದ ಅಧಿಕಾರ ವರ್ಗದವರು

ಅಧ್ಯಕ್ಷ—ಶ್ರೀ ಬೆಲ್ಲದ ಚನ್ನಪ್ಪನವರು

ಉಪಾಧ್ಯಕ್ಷ—ಶ್ರೀ ಯಸ್. ಯುಂ. ಶಿಂದಿಗಿ.

ಕಾರ್ಯದರ್ಶಿಗಳು—

(1) ಶ್ರೀ ತೊಗರಿ ವೀರಮಲ್ಲಪ್ಪ

(2) ಶ್ರೀ ಬಿ. ರೇವಣಶಿದ್ಧಯ್ಯ

ಖಜಾನ್ಜಿ—ಯಸ್. ಶಿದ್ಧಲಿಂಗಪ್ಪ ಬಿ.ಎ, ಬಿ ಎಲ್.

ವಿದ್ಯಾರಣ್ಯರ ಪುಣ್ಯ ದಿನ

ಬಳ್ಳಾರಿ ಮುಲ್ಲಸಜ್ಜನ ವ್ಯಾಯಾಮ ಶಾಲೆಯವರು ವಿದ್ಯಾರಣ್ಯರ ಪುಣ್ಯದಿನವನ್ನು ಜಿಲ್ಲಾ ಕಲೆಕ್ಟರು ಶ್ರೀ ಅರುಣಾಚಲಂರವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಶ್ರೀ ಯಂ. ಜಿ. ವೆಂಕಟೇಶಯ್ಯನವರು ವಿದ್ಯಾರಣ್ಯರ ತಪಶ್ಚರ್ಯೆ ಮತ್ತು ದೇಹಧಾರಣ್ಯ ವಿಷಯದಲ್ಲಿ ವಿವರವಾಗಿ ಉಪನ್ಯಸಿಸಿದರು ಅಧ್ಯಕ್ಷರು, ಪಾಶ್ಚಿಮಾತ್ಯ ದೇಶಗಳಲ್ಲಿನ 'ದೇಹವಿಜ್ಞಾನ' ಶಾಸ್ತ್ರದ ಪ್ರಾಮುಖ್ಯತೆಯನ್ನರುಹಿ - ಮುಲ್ಲಸಜ್ಜನ ವ್ಯಾಯಾಮ ಶಾಲೆಯವರ ಸ್ತುತ್ಯಕಾರ್ಯವನ್ನಭಿನಂದಿಸಿದರು

ವೇಣೇ ವೀರಾಪುರ-ಕುಡಿತಿನಿ

ಬೆಲ್ಲಿಂಣ ಭೀಮರಾವು, ಕೇಶವರಾವು, ವೀರಾಸ್ವಾಮಿ, ಬಾ. ವೆಂಕೋಬರಾವು ಈ ಎರಡು ಹಳ್ಳಿಗಳನ್ನು ಸಂದರ್ಶಿಸಿದರು. ವೀರಾಪುರದಲ್ಲಿ ನೀರಿನ ಕೊರತೆಯು ವಿಚಾರಿಸಲ್ಪಟ್ಟು ತಕ್ಕ ಕ್ರಮವು ತೆಗೆದುಕೊಳ್ಳಲ್ಪಡುವುದಾಗಿ ಧರವಸೆ ಇತ್ತರು ಕುಡಿತಿನಿಯಲ್ಲಿ ಹರಿಜನರಿಗೆ ರಸ್ತೆಯಲ್ಲಿ ಹೋಗುವ ಸ್ವಾತಂತ್ರ್ಯವನ್ನು ದೊರಕಿಸಬೇಕೆಂಬುದು ನಿಶ್ಚಯಿಸಲ್ಪಟ್ಟಿತು.

ತೆಕ್ಕಲಕೋಟೆ.

ಗ್ರಾಮಾಧಿಕಾರಿಗಳಮೇಲೆಆರೋಪ

ತೆಕ್ಕಲಕೋಟೆಯ ರೆಡ್ಡಿಯನರು ರೈತರಿಂದ ಭೂಕಂದಾಯ ವಸೂಲಿ ಮಾಡುವ ಕಾರ್ಯದಲ್ಲಿ ಹೆಚ್ಚಿನ ಹಣವನ್ನು ವಸೂಲಿ ಮಾಡಿದರೆಂಬ ಆರೋಪಗಳ ಬಗ್ಗೆ ಅರ್ಜಿಗಳು ಬಂದಿದ್ದರಿಂದ ಜಿ. ಕಾಂಗ್ರೆಸ್ ಕಾರ್ಯದರ್ಶಿ ವಿ. ಎಂ. ಗಿರಿಯವರೂ, ಶಾಸನ ಸಭ್ಯರಾದ ಶ್ರೀ ಶೀತಾರಾಮು ರೆಡ್ಡಿಯವರೂ 14ನೇ ತಾ. ತೆಕ್ಕಲಕೋಟೆಗೆಹೋಗಿ ರೈತರನ್ನು ವಿಚಾರಿಸಿ ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಅಧಿಕಾರಸ್ಥರಿಗೆ ತಮ್ಮ ವರದಿಯನ್ನು ಕಳುಹಿಸಿರುವರು. ಈ ವಳಗಾಗಿ ಶಿರುಗುಪ್ಪೆ ತಪಶೀಲ್ದಾರರು ಸಹ ಇದರ ಸಂಬಂಧವಿಚಾರಿಸಿ ತಮ್ಮ ರಿಪೋರ್ಟನ್ನು ಮೇಲಧಿಕಾರಿಗಳಿಗೆ ಕಳುಹಿಸಿರುವರೆಂದು ತಿಳಿದು ಬಂದಿದೆ. ಗ್ರಾಮಾಧಿಕಾರಿಗಳು ಬಡರೈತರಿಗೆ ತೊಂದರೆಕೊಡದೆ ಕ್ರಮಬದ್ಧವಾಗಿ ಕಂದಾಯವನ್ನು ವಸೂಲಿಮಾಡಬೇಕಾದುದು ಪ್ರತ್ಯಕ್ಷವೆಂದು ಹೇಳುವುದನಾವಶ್ಯಕ

V. M. Giri & Sons.,
BELLARY.
Prop: M S ACHARYA
Dealers in Patent medicines, Best Coffee seeds.
Pure Samalkot.
GINGELLY OIL.

ಜಪಾನಿನಲ್ಲಿ ಬ್ರಿಟಿಶ ಮತ್ತು ಜಪಾನೀಯರ ಘರ್ಷಣೆ

ಬ್ರಿಟಿಶ ಜನರು ನೆಲೆಸಿರುವ ಟಿಯಾಂಟ್ಸಿನ್ ಪ್ರದೇಶವನ್ನು ಈದಿನ 50,000 ಜಪಾನೀಯರು ಮುತ್ತಿರುವರೆಂದು-ಟೋಕಿಯೋದ ಒಂದು ಸುದ್ದಿಯಿಂದ ತಿಳಿದುಬಂದಿದೆ. ಬಾಕ್ಸರ್‌ದಂಗೆಯಲ್ಲಿ ಸತ್ತ ಜಪಾನಿ ಸೈನಿಕರ ಸಮಾಧಿಗಳಿಗೆ ಭೇಟಿಕೊಡಬೇಕೆಂದು ಅವರು ನಿಶ್ಚಯಿಸಿರುವುದಾಗಿ ಗೊತ್ತಾಗಿದೆ. ಟಿಯಾಂಟ್ಸಿನ್ ಬಂದರವನ್ನು ಜಪಾನರು ಆಕ್ರಮಿಸಿರುವದರಿಂದ ಸಾಮಾನಿನ ಹಡಗುಗಳು ಆ ಮಾರ್ಗವಾಗಿ ಸಂಚರಿಸಲು ಪ್ರತಿಬಂಧನೇರ್ಪಟ್ಟಿದೆ. ವಿದೇಶ ವ್ಯಾಪಾರವು ಬಹಳಮಟ್ಟಿಗೆ ತಗ್ಗಿದೆ.

ಹೈದರಾಬಾದು ಕೈದಿಗಳಿಗೆ ಲಾಠೀ ಸ್ಮಹಾರ

'ಕಾಯಿದೆಯ ಪರಿಣಾಮಗಳನ್ನು ಸತ್ಯಾಗ್ರಹಿಯು ಆನಂದದಿಂದ ಸ್ವೀಕರಿಸುವನು. ಆದರೆ ಅವರನ್ನು ಯೋಗ್ಯರೀತಿಯಲ್ಲಿ ವಿಚಾರಿಸಿ ಸೆರೆಮನೆಯಲ್ಲಿ ಅವರಿಗೆ ಯೋಗ್ಯ ವ್ಯವಸ್ಥೆ ಮಾಡಿಕೊಡಬೇಕೆಂದು ನಾನು ಮನುಷ್ಯತ್ವದ ದೃಷ್ಟಿಯಿಂದ ನಿಮಗೆ ಜ್ಞಾಪಿಸಿಕೊಳ್ಳುತ್ತೇನೆ.' ಎಂದು ನ. ಚಿ. ಕೇಳಕರರು ವ್ಹಾಯಿಸರಾಯರಿಗೆ, ಔರಂಗಾಬಾದ ಕಮಿಷನರರಿಗೆ, ಸೆರೆಮನೆಗಳ ಜಾತೆಯ ಮುಖ್ಯಾಧಿಕಾರಿಗೆ ಮತ್ತು ಸರ್ ಅಕ್ಬರಿ ಹೈದರಿಯವರಿಗೆ ತಾರು ಮಾಡಿದ್ದಾರೆ.

ಔರಂಗಾಬಾದ ಸೆರೆಮನೆಯಲ್ಲಿ ಸೆರೆಯಾಳುಗಳನ್ನು ಲಾಠಿಯಿಂದ ಹೊಡೆಯಲಾಯಿತೆಂದು ಹಬ್ಬಿದ್ದ ಸುದ್ದಿಯ ಸಂಬಂಧವಾಗಿ ಈ ತಾರನ್ನು ಕಳುಹಿಸಲಾಗಿದೆಯಂತೆ. ಅಧಿಕಾರಿಗಳು ಈ ವಿಷಯದಲ್ಲಿ ಕೂಡಲೇ ಕೈಹಾಕಿ ಕೈದಿಗಳ ತೊಂದರೆಯನ್ನು ದೂರಮಾಡಬೇಕೆಂದೂ ಬೇಡಿಕೊಳ್ಳಲಾಗಿದೆ.

ಶ್ರೀ ಕೇಳಕರರು ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳಾದ ಮಾನ್ಯ ಬಿ. ಜಿ. ಖೇರರಿಗೆ, ಗೃಹ ಮಂತ್ರಿ ಕೆ. ಯಂ. ಮುನಸಿಯವರಿಗೆ, ಗವರ್ನರರಿಗೆ ಮತ್ತೊಂದು ತಾರು ಕಳುಹಿಸಿದ್ದಾರೆ.

'ಲಾಠಿ ಪ್ರಹಾರಗಳಿಂದ ಗಾಯಗೊಂಡ ನೂರಾರು ಜನರು ಆಸ್ಪತ್ರೆಯಲ್ಲಿ ಬಿದ್ದಿರುವರು. ಕೈದಿಗಳ ಈ ಕರುಣಾಜನಕ ಸ್ಥಿತಿಯನ್ನು ಕೇಳಿ, ಬ್ರಿಟಿಶ ಹಿಂದುಸ್ತಾನದ ಜನರ ಮನಸ್ಸು ತಲ್ಲಣಗೊಂಡಿದೆ. ಕಾಯಿದೆಯ ನ್ಯಾಯ ಸವಲತ್ತುಗಳನ್ನು ಪಡೆಯಲು ಕೈದಿಗಳಿಗೂ ಅಧಿಕಾರವಿದೆ; ಅಲ್ಲದೆ ಈ ಕೈದಿಗಳು ಬ್ರಿಟಿಶ ಹಿಂದುಸ್ತಾನದ ಪ್ರಜೆಗಳು. ಆದ್ದರಿಂದ ಮುಂಬಯಿ ಸರಕಾರವು ಈ ವಿಷಯದಲ್ಲಿ ಕೂಡಲೇ ನಡುವೆ ಬಂದು, ಹೈದರಾಬಾದ ಸರಕಾರದಿಂದ ಸಮಾಧಾನಕರ ಸ್ಪಷ್ಟೀಕರಣ ಕೇಳಬೇಕಲ್ಲದೆ, ಕೈದಿಗಳಿಗೆ ಯೋಗ್ಯ ವ್ಯವಸ್ಥೆಯಾಗುವಂತೆ ನೋಡಿಕೊಳ್ಳಬೇಕು' ಎಂದು ಅಂದಿರುವರು.

ಸಂಯುಕ್ತ ರಾಜ್ಯಘಟನೆ ಸಂಸ್ಥಾನಾಧೀಶರು ಬೇಡವೆಂದರು

ಬೊಂಬಾಯಿಯಲ್ಲಿ ಈ ವಾರ ಕೂಡಿದ ಸಂಸ್ಥಾನಾಧೀಶರ ಮಂತ್ರಿಮಂಡಲ ಸಭೆಯಲ್ಲಿ ಸಂಯುಕ್ತ ರಾಜ್ಯಘಟನೆಯನ್ನು ಸೇರಬೇಕೇ ಬೇಡವೇ ಎಂಬ ಮುಖ್ಯವಿಷಯವು 3 ದಿನ ಚರ್ಚಿಸಲ್ಪಟ್ಟು ಸಂಯುಕ್ತ ರಾಜ್ಯಘಟನೆಯಲ್ಲಿ ತಾವು ಸೇರಬಾರದೆಂದು ತೀರ್ಮಾನಿಸಲ್ಪಟ್ಟಿತು ಆದರೆ ಸಂಸ್ಥಾನಾಧೀಶರು ಪ್ರತ್ಯೇಕವಾಗಿ ತಮ್ಮ ಅಭಿಪ್ರಾಯಗಳನ್ನು ಜುಲೈ 1ನೇ ತಾರೀಖಿನಳಗಾಗಿ ತಿಳಿಸಬೇಕಾಗಿದೆ. ಇದರ ಪರಿಣಾಮವೇನಾಗುವುದೋ ನೋಡಬೇಕಾಗಿದೆ.

ಅಧಿಕಾರದ ವರ್ಗಾವರ್ಗಿಗಳು

ಈಗ ಕಲೆಕ್ಟರ್‌ರಾಗಿರುವ ಶ್ರೀ ಅರುಣಾಚಲಂರವರು ಹೊಸಪೇಟೆಯ ಸಬ್‌ಕಲೆಕ್ಟರ್ ಆಗಿ ವರ್ಗಾಯಿಸಲ್ಪಟ್ಟಿರುವರು. ಮಿ|| ಎ.ಡಿ.ಕ್ರಾಂಬಿ ಐ. ಸಿ ಯಸ್. ಇವರು ಈ ತಿಂಗಳ 28ನೆಯ ತಾ. ಛಾರ್ಜ್ ತೆಗೆದು ಕೊಳ್ಳುವರು.

ಜಿಲ್ಲಾ ಬೋರ್ಡು ಎಜ್ಯುಕೇಶನಲ್ ಆಫೀಸರು ಶ್ರೀ ಪೂರ್ಣಯ್ಯನವರು 4 ತಿಂಗಳು ರಜಾ ತೆಗೆದುಕೊಂಡಿರುವರು. ಶ್ರೀ ಎ. ಕೆ. ಬಾಲಸುಂದರಂ ಬಿ.ಎ. ಎಲ್.ಟಿ. ಯವರು ಅವರ ಸ್ಥಾನದ ಛಾರ್ಜ್‌ನ್ನು 11 ನೆಯ ತಾ. ವಹಿಸಿಕೊಂಡರು.

ಬಳ್ಳಾರಿ ಡಿವಿಜ್ ಡೆಪ್ಯುಟಿ ಕಲೆಕ್ಟರು ಆಗಿದ್ದ ಜನಾಬ್ ಮಹಮ್ಮದು ಇಸ್ಮಾಯಿಲ್‌ರವರು ವಿಶಾಖಪಟ್ಟಣಕ್ಕೆ ವರ್ಗಾಯಿಸಲ್ಪಟ್ಟಿರು. ಅವರ ಸ್ಥಾನಕ್ಕೆ ಮಿ|| ಟ್ರೆಮನೆರ್‌ರವರು ನಿಯುಕ್ತರಾಗಿರುವರು. ಇವರು ಟ್ರೈಜರಿ ಡೆಪ್ಯುಟಿ ಕಲೆಕ್ಟರ್ ಆಗಿದ್ದರು.

ಬಳ್ಳಾರಿ ಬೀದಿಗಳಲ್ಲಿ ಹರಿಜನರ ಮೆರವಣಿಗೆ

ಹಿರಾಳುಕ್ಕಡ ಹರಿಜನ ಕೇರಿಯ ವೀರಣ್ಣ ಮತ್ತು ಹುಲಿಗೆಮ್ಮ ಇವರ ವಿವಾಹಮಹೋತ್ಸವದ ಪೆರವಣಿಗೆಯು ಕೇರಿಯ ಸುಮಾರು 500 ಜನ ಸ್ತ್ರೀ-ಪುರುಷರೊಡನೆ ವೈಭವವಾಗಿ ಬೆಂಗಳೂರು ರೋಡ್, ಬ್ರಾಹ್ಮಣ ಬೀದಿ-ತೇರು ಬೀದಿಗಳಲ್ಲಿ ಹೋಗಿ ಕೋಟೆ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಫಲಪೂಜಾದಿಗಳನ್ನು ಸಮರ್ಪಿಸಿ ಹಿಂದಿರುಗಿತು. ಬಳ್ಳಾರಿ ಚರಿತ್ರೆಯಲ್ಲಿ ಇಂಥಾ ಮೆರವಣಿಗೆ ನಡೆದುದು ಇದೇ ಪ್ರಥಮವೆಂದು ಹೇಳುತ್ತಾರೆ. ಪೋಲೀಸ್ ಬಂದೋಬಸ್ತು ಕೊಡಲಾಗಿತ್ತು.

(ಹಿಂದಿನ ಪುಟದಿಂದ)

8 ,, ವಿ. ಈಶ್ವರಪ್ಪ ಬನ್ನಿಕಲ್
9 ಮಾರ್ವಾಡಿ ಹೀರಾಚಂದ್

ಹರಪನಹಳ್ಳಿ

ಅಧ್ಯಕ್ಷರು:-
ಶ್ರೀ ಟಿ. ಶ್ರೀನಿವಾಸಾಚಾರು
ರಿಟೈರ್ಡ ತಹಶೀಲ್ದಾರು

1 ಡೆಪ್ಯುಟಿ ಇನ್ಸ್‌ಪೆಕ್ಟರು ಆಫ್ ಸ್ಕೂಲ್ಸು [ಕಾರ್ಯದರ್ಶಿ]
2 ಸಬ್ ಅಸಿಸ್ಟೆಂಟು ಇನ್ಸ್‌ಪೆಕ್ಟರು ಆಫ್ ಸ್ಕೂಲ್ಸು
3 ತಹಶೀಲ್ದಾರು ಹರಪನಹಳ್ಳಿ
4 ಇನ್ಸ್‌ಪೆಕ್ಟರು ಕೋ ಆಪರೇಟಿವು ಸೊಸೈಟೀಸು
5 ಶ್ರೀಮತಿ ಬಿ. ಶಾರದಮ್ಮ
6 ಜನಾಬ್ ಹಯಾತುಸಾಹೇಬು
7 ಶ್ರೀ ಇಜಾರಿ ವಸುನಾಲಪ್ಪ
8 ,, ಬಿದರಹಳ್ಳಿ ತಿರುಮಲರಾವು
9 ,, ಚಲವಾದಿ ಭೀಮಪ್ಪ

ಕೂಡ್ಲಿಗಿ

ಅಧ್ಯಕ್ಷರು:-
ಶ್ರೀ ಎ. ಹನುಮಂತರಾವ್,
ಬಿ.ಎ ಎಲ್.ಟಿ.

1 ಡೆಪ್ಯುಟಿ ಇನ್ಸ್‌ಪೆಕ್ಟರ್. ಸೀನಿಯರು [ಕಾರ್ಯದರ್ಶಿ]
2 ಸಬ್ ಅಸಿಸ್ಟೆಂಟು ಇನ್ಸ್‌ಪೆಕ್ಟರ್ಸ್
3 ತಹಶೀಲ್ದಾರು-ಕೂಡ್ಲಿಗಿ
4 ಅಗ್ರಿಕಲ್ಚರಲ್ ಡಿಮಾನ್ಸ್ಟ್ರೇಟರು.
5 ಶ್ರೀ ಕೆ. ಗುರಣ್ಣ
6 ,, ಯಂ. ಚನ್ನಬಸಪ್ಪಯ್ಯ
7 ,, ಕೆ. ಶೇಷಾಚಾರಾವು
8 ,, ಕರೇಸೌಡ ರಿಟೈರ್ಡ ರೆವಿನ್ಯೂ ಇನ್ಸ್‌ಪೆಕ್ಟರು
9 ,, ಜನಾಬ್ ದಾದೆಸಾಹೇಬು

ವಿದೇಶ

ಪ್ಯಾಲಿಸ್ತಾಯಿನ್-

ಪ್ಯಾಲಿಸ್ತಾಯಿನ ದೇಶದಲ್ಲಿ ಯಹೂದಿ ಮತ್ತು ಅರಬರ ವೈಷಮ್ಯ ರೂಪದ ಖೂನುಗಳು ಸಾಮಾನ್ಯ ಕಳೆ ನವಾರ ಹೈಫಾ ನಗರದ ಬಳಿಯ ಹಳ್ಳಿಯಲ್ಲಿ 5 ಅರಬರ ಕೊಲೆಯಾಯಿತು. ಕೊಲೆಗಡುಕರು ಜ್ಯೂಜನರಿರಬೇಕೆಂದು ಅರಬರು ಹೇಳುತ್ತಾರೆ. ಬಾಂಬುಗಳ ಸ್ಫೋಟವು ಆಗುತ್ತಲೇ ಇದೆ. ಬ್ರಿಟಿಶ ಸೈನಿಕರು ಇದಕ್ಕಾಗಿ ಟೆಲಿಅವಿ ನಗರವನ್ನೆಲ್ಲಾ ಶೋಧಿಸುತ್ತಿದ್ದಾರೆ.

ಸ್ಪೇನ ಯುದ್ಧ. ಇಟಲಿ ಸಹಾಯ

ಸ್ಪೇನ್ ಯುದ್ಧದಲ್ಲಿ ಇಟಲಿಯ 175 ವೈಮಾನಿಕರು ಸತ್ತರು. ಸುತ್ತು 192 ಮಂದಿ ಗಾಯಗೊಂಡರು. ಅವರು 3818 ಸಾರಿ ಫಿರಂಗಿಗಳನ್ನು ಹಾರಿಸಿದರು. 27 000 ಬಾಂಬುಗಳನ್ನು ಹಾಕಿದರು. 86 ವಿಮಾನಗಳನ್ನು ಕಳೆದುಕೊಂಡರು. ಶತ್ರುಗಳ 903 ವಿಮಾನಗಳನ್ನು ನಾಶಮಾಡಲಾಯಿತು. 266 ವಾಯು ಮುತ್ತಿಗೆಗಳಲ್ಲಿ ಇಟಲಿ ವೈಮಾನಿಕರು ಭಾಗವಹಿಸಿದ್ದರು

ಜೆಕ್-ಜರ್ಮನರ ಬಡಿದಾಟ

ಉತ್ತರಜೆಕೊಸ್ಲೊವಿಯದ ಜೋಡ್ ಎಂಬಲ್ಲಿ ಜೆಕ್ ಮತ್ತು ಜರ್ಮನ್ ಪೋಲೀಸಿನವನೊಬ್ಬನು ಪ್ರಾಣಬಿಟ್ಟನು. ಅನೇಕ ದುರದೃಷ್ಟಕರವಾದ ಘಟನೆಗಳು ಈ ಹೊಡೆದಾಟಕ್ಕೆ ಕಾರಣವಾದವೆಂದು ತಿಳಿದುಬಂದಿದೆ. ಈ ವಿಚಾರದಲ್ಲಿ ಬೇಗ ವಿಚಾರಣೆ ನಡೆಯಬೇಕೆಂದು ಜರ್ಮನ್ ರಿಪ್ ‘ಪ್ರೊಟಿಕ್ಟರ್’ರವರು ಅಜ್ಞೆ ಮಾಡಿದ್ದಾರೆ. ಸಂಬಂದಪಟ್ಟವರೆಲ್ಲ ಬಂಧನದಲ್ಲಿದ್ದಾರೆ.

ಅಸ್ಸಾಂ ಎಣ್ಣೆ ಕಂಪನಿಯಲ್ಲಿ ಮುಷ್ಕರ

ದಿಗ್ಬಾಯಿ ಎಣ್ಣೆ ಕಂಪನಿಯಲ್ಲಿ ನಡೆಯುತ್ತಿರುವ ಮುಷ್ಕರವನ್ನು ತಪ್ಪಿಸಲು ಕಾಂಗ್ರೆಸ್ ಅಧ್ಯಕ್ಷರಾದ ಬಾಬೂ ರಾಜೇಂದ್ರ ಪ್ರಸಾದರು ಎಣ್ಣೆ ಕಂಪನಿ ಪ್ರತಿನಿಧಿಗಳೊಡನೆಯೂ, ಅಸ್ಸಾಂ ಮುಖ್ಯ ಮಂತ್ರಿಗಳಾದ ಬಾರ್ಡೊಲಾಯ್‌ರವರೊಡನೆಯೂ, ಚರ್ಚಿಸಿದರು. ಕೂಲಿಕಾರ ಮುಖಂಡರು ರಾಷ್ಟ್ರಾಧ್ಯಕ್ಷರ ನಿರ್ಣಯಕ್ಕೆ ಒಪ್ಪಲು ಸಮ್ಮತಿಸಿರುವರು. ಗಿರಣಿಯವರು ತಮ್ಮ ಅಭಿಪ್ರಾಯಗಳನ್ನು ತಿಳಿಸಿಲ್ಲವಾದ್ದರಿಂದ ಈ ತಂಟೆ ಬಗೆಹರಿದಿಲ್ಲ.

ತಿರುಪತಿ ದೇವಸ್ಥಾನದ ಕಮಿಶನರು

ಶ್ರೀ ಎ. ರಂಗನಾಥಮೊದಲಿಯಾರರ ಅವಧಿಯು ಮುಗಿದಕಾರಣ ಅವರ ಸ್ಥಾನಕ್ಕೆ ಡೆಪ್ಯುಟಿ ಕಲೆಕ್ಟರು ಆಗಿದ್ದ ಸಾಂಬಯ್ಯಪಂತಲು ಎಂಬುವರನ್ನು ತಿರುಮಲೆ - ತಿರುಪತಿ ದೇವಸ್ಥಾನದ ಕಮಿಶನರು ಆಗಿ ಸರಕಾರದವರು ನಿರ್ಮಿಸಿರುವರು.

ಸ್ವದೇಶ

ಕಾಂಗ್ರೆಸ್ ಸಮಿತಿಸಾದಿಗಳಾದ ರಾಮಮನೋಹರಲೋಹಿಯಾ, ಮತ್ತು S S. ಬಾಟ್ಲಿವಾಲಾ ಇವರನ್ನು **ಇಂಡಿಯಾ ಮತ್ತು ಬರುವ ಯುದ್ಧ** ಎಂಬ ಭಾಷಣಮಾಡಿದ್ದಕ್ಕಾಗಿ ರಾಜದ್ರೋಹದ ಆಪಾದನೆ ಹೊರಿಸಿ ಕಲ್ಕತ್ತೆಯಲ್ಲಿ ವಿಚಾರಣೆ ನಡೆದಿದೆ.

ರಾಜಕೋಟ ಸುಧಾರಣಾ ಸಮಿತಿಯುವೀರವಾಲರ ಬಂಗಲೆಯಲ್ಲಿ ಕೂಡಿ ಒಂದು ಪ್ರಶ್ನಾವಳಿಯನ್ನು ನಿರ್ಮಿಸಿರುವುದಾಗಿ ಸುದ್ದಿಯು ಬಂದಿದೆ.

ಬಂಗಾಳದಲ್ಲಿ ಮುಸ್ಲಿಮರಿಗೂ ಮತ್ತು ಮುಸ್ಲಿಮೇತರಿಗೂ ಸಮವಾಗಿ ಸರ್ಕಾರಿ ನೌಕರಿಗಳು ದೊರಕುವಂತೆ ಮಾಡಲು ಇನ್ನುಮುಂದೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು. ನೇರವಾಗಿ ನೇಮಕ ಮಾಡಲ್ಪಡುವ ನೌಕರಿಗಳಲ್ಲಿ ಶೇಕಡ 50ನ್ನು ಮುಸ್ಲಿಮರಿಗೆ ಮೀಸಲಾಗಿಡಬೇಕು. ಎಂಬುದಾಗಿ ಸರ್ಕಾರದವರು ಪ್ರಕಟಿಸಿದ್ದಾರೆ.

324

ಮಾರ್ವಾಡಿ ಯುವಕನ ಅದ್ಭುತ ಸಾಹಸ

ಕಳ್ಳನೊಡನೆ ಹೋರಾಟ; ನೇಮಿರಾಜನನ್ನು ಶಿರಿಹಿಡಿದರು.

ಬಳ್ಳಾರಿಬ್ರಾಸುಟೇಟೆ ಪೋಲೀಸುಸ್ಟೇಷನ್ನಿಗೆ ಸುಮಾರು 50 ಗಜ ದೂರದಲ್ಲಿರುವ ಮಾರ್ವಾಡಿ ಅಂಗಡಿಯ ಹತ್ತರ 12ನೆಯ ತಾ. ಪ್ರಾತಃಕಾಲ 500 ಜನರ ಜನಸಂದಣಿಯ ಗಲಭೆಯಲ್ಲಿ ನೇಮಿರಾಜನೆಂಬವನು ದಸ್ತಗಿರಿ ಮಾಡಲ್ಪಟ್ಟನು. ಅದರ ಕಥೆಯು ಈ ಕೆಳಗಿನಂತೆ ಆರೋಪಿಸಲ್ಪಟ್ಟಿದೆ.

ಮಾರ್ವಾಡಿ ಮೇಘರಾಜ ಮತ್ತು ಸೋಗಾಲಾಲ ಇವರ ಮನೆಗೆ ಸುಧ್ಯರಾತ್ರಿಯ ಸುಮಾರಿನಲ್ಲಿ ಕಳ್ಳನು ಮನೆಯೊಳಸೆಯುವ ಸಕಲ ಸಾಮಗ್ರಿಗಳೊಂದಿಗೆ ಒಳಗೆ ಪ್ರವೇಶಿಸಿದರು. ಮಾರ್ವಾಡಿ ತಂದೆ - ಮಕ್ಕಳಿಬ್ಬರು ಮಹಡಿಯಮೇಲೆ ಲೈಟುಹಾಕಿಕೊಂಡು ಮಾರನೆಯ ಪ್ರಾತಃಕಾಲ ಆಪನಾನಿಗೆ ಹೋಗಲು ಸನ್ನಾಹ ನಡೆಸುತ್ತಿದ್ದರು. ಕೆಳಗೆ ಸಪ್ಪಳವಾಗುತ್ತಿರುವುದು ಕೇಳಿಬಂದು ಅದನ್ನು ನೋಡಲು ಸುಗನಾದ ಸೋಗಾಲಾಲನು ಬಂದನು. ಟಾರ್ಚ್‌ಲೈಟು ಹಾಕಿಕೊಂಡು ಮುಖವನ್ನಷ್ಟು ಬಟ್ಟೆಯಿಂದ ಮುಚ್ಚಿ, ಕಬ್ಬಿಣ ಪೆಟ್ಟಿಗೆಯನ್ನೊತೆಯುತ್ತಿದ್ದ ದೈರ್ಯವು ಅವನ ಕಣ್ಣಿಗೆ ಬಿತ್ತು. ಸೋಗಾಲಾಲನು ಕಳ್ಳನನ್ನು ಹಿಡಿಯಲು ಹೋದಾಗ ಕಳ್ಳನು ಚಾಕುವಿನಿಂದ ಅವನನ್ನು ಎಡಭುಜಕ್ಕೆ ತಿವಿದನು. ತಕ್ಷಣ ಮಹಡಿಯಮೇಲೆ ಕಳ್ಳನು ಓಡಿದನು. ಸೋಗಾಲಾಲನ ತಂದೆಯಾದ ಮೇಘರಾಜಿಯು ಕೆಳಗಿನ ಶಬ್ದ ಹಾಹಾಕಾರ ಮೊದಲೇ ಕೇಳಿದ್ದು ಕಳ್ಳನನ್ನು ತಡೆದನು. ಮೇಘರಾಜಿಗೂ ಪೆಟ್ಟುಬಿದ್ದಿತು. ಆದರೂ ಇಬ್ಬರಲ್ಲಿ ಯುದ್ಧವು ಪ್ರಾರಂಭವಾಯಿತು. ತಂದೆಯು ಆರ್ತನಾದವನ್ನು ಕೇಳಿ ಕೆಳಗೆ ಬಿದ್ದಿದ್ದ ಮಗನು ಓಡಿಬಂದು, ಕಳ್ಳನ ಕೈಯಿಂದ ಕತ್ತಿಯನ್ನು ಕಸಿದುಕೊಳ್ಳಲು ಹೋರಾಟಹೂಡಿದನು. ಸೋಗಾಲಾಲನಿಗೆ ಕತ್ತಿಯಿಂದ ಎಡಗೈ ಮೇಲ್ಭಾಗವೆಲ್ಲಾ ಕೆತ್ತಿಹೋಯಿತು. ಆದರೂ ಸೋಗಾಲಾಲನು ಎದೆಗುಂದದೆ ಕತ್ತಿಯನ್ನು ಕಸಿದುಕೊಂಡು, ಕಳ್ಳನ ಬೆನ್ನನ್ನು ಎರಡು-ಮೂರು ಸಲ ತಿವಿದನು. ಕಳ್ಳನು ತಪ್ಪಿಸಿಕೊಂಡು ಹೋದೆತೆಯಲ್ಲೆಲ್ಲಾ ರಕ್ತವನ್ನು ಗುರಿಸುತ್ತಾ ಮಾಳಿಗೆಯಮೇಲೆ ಓಡಿದನು.

ಇಷ್ಟಾಗುವದರೊಳಗಾಗಿ ಗಲಭೆಯೂ, ಮಾರ್ವಾಡಿ ತಂದೆ ಮಕ್ಕಳ ಹಾಹಾಕಾರವೂ, ಸುತ್ತಮುತ್ತಲ 500 ಜನರನ್ನು ಎಚ್ಚರಿಸಿತು. ಪೋಲೀಸಿನವರು, ಸಬ್ ಇನ್‌ಸ್ಪೆಕ್ಟರ್ ನಾರಾಯಣಸ್ವಾಮಿಯವರೊಂದಿಗೆ ಬಂದರು. ಸಾಲ್ಮಾ ಬೀದಿಗಳನ್ನು ಸುತ್ತುಗಟ್ಟಿ ನಿಂತರು. ಕಳ್ಳನು ಒಂದು ಮಾಳಿಗೆಯಿಂದ ಮತ್ತೊಂದು ಮಾಳಿಗೆಗೆ ಹಾರುತ್ತಾ ಗೋಗಿ ಗುಣಪಾಲಪ್ಪನವರ ಮನೆಯಹಿಂದೆ ಧುಮುಕಿ ಅವರು ಹಿತ್ತಲು ಬಾಗಿಲು ತೆಗೆದು ಪಾಯಖಾನೆ ಹೋದಾಗ ಅವರ ಮನೆಯನ್ನು ಹೊಕ್ಕನಿಂತಲೂ ಅಲ್ಲಿಂದ ಪೋಲೀಸು ಕಾನ್ಸ್ಟೇಬಲು ದೇವದಾಸನು ಕಳ್ಳನನ್ನು ಹಿಡಿದನೆಂತಲೂ ತಿಳಿದು ಬಂದಿದೆ.

12ನೆಯ ಪ್ರಾತಃಕಾಲ ನೇಮಿರಾಜನನ್ನೂ. ಸೋಗಾಲಾಲನನ್ನೂ ಛಾಯಗಳ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ದಾಖಲುಮಾಡಲಾಯಿತು. ಆವರು ಗುಣಹೊಂದುತ್ತಿರುವರು. ಮಾರ್ವಾಡಿ ಮನೆಯಲ್ಲಿ ಹೋರಾಟ ನಡೆದ ಸ್ಥಳದಲ್ಲಿ ಬೀಗದ ಕೈಗಳ ಗೊಂಡಲು ಬೀಗಮುರಿಯುವ ಸಾಮಗ್ರಿಗಳು ದೊರೆತವು. ಹಿತ್ತಲು ಬಾಗಿಲಿನ ಕದದ ಮೇಲ್ಭಾಗವು ಒಳದೂರುವಷ್ಟು ಕಿತ್ತುಹಾಕಲ್ಪಟ್ಟಿತ್ತು. ನೇಮಿರಾಜನ ಮನೆಯನ್ನು ಶೋಧಿಸಿದಾಗ ಬಹಳ ಸಾಮಗ್ರಿಗಳು ದೊರೆತನೆಂದು ಹೇಳಲಾಗಿದೆ.

ನೇಮಿರಾಜನು ಜೈನಬಸ್ತಿಯ ಪೂಜಾರರ ಮಗನೆಂತಲೂ, ಇವರು ಕೆಲ ವರ್ಷಗಳ ಹಿಂದೆ ಹರಪನಹಳ್ಳಿಯಲ್ಲಿದ್ದರೆಂತಲೂ. ಈಗ ಬಳ್ಳಾರಿಯ ವಾಸಸ್ಥರಾಗಿರುವುದಾಗಿಯೂ ತಿಳಿದು ಬಂದಿದೆ.

ಹರಪನಹಳ್ಳಿ ತಾಲೂಕು ಸತ್ಕಾರ

ಈ ಗ್ರಾಮದವರು ತಮ್ಮ ಕಷ್ಟಗಳನ್ನು ಕುರಿತು ಕಲೆಕ್ಟರ್‌ರವರಿಗೆ ಅರ್ಜಿಯನ್ನಿಟ್ಟುಕೊಂಡಿರುವರು. ಇಲ್ಲಿ 1000ಜನ ಸಂಖ್ಯೆಯುದ್ದು 7000 ದನಗಳಿವೆ. ಊರಿನಲ್ಲಿರುವ ಒಂದೇ ಭಾವಿಯಲ್ಲಿ ನೀರು ಸಾಕಷ್ಟಿರುವುದಿಲ್ಲ ಅದಾವರೂ ಉಪ್ಪುನೀರು. ಕುಡಿಯುವ ನೀರನ್ನು ½ ಮೈಲಿಯಿಂದ ತರಬೇಕಾಗಿದೆ. ದನಗಳನ್ನು ಮಾರುತ್ತಿದ್ದಾರೆ. -ಯಾ- ಬೇರೆ ಗ್ರಾಮಗಳಿಗೆ ರವಾನಿಸುತ್ತಿದ್ದಾರೆ. ಇಲ್ಲಿಯವರಿಗೂ ನುಳಿ ಇಲ್ಲದ ಕಾರಣ ಕೆರೆ ಅಂಗಳದಲ್ಲಿರುವ ಭಾವಿಯಲ್ಲೂ ನೀರಿಲ್ಲ. ಈ ಕಷ್ಟವನ್ನು ಪರಿಹರಿಸಲು ಸ್ಥಳೀಯರಾಗಿದೆ.

(ಈ ವಿಷಯವು ಜಿಲ್ಲಾ ಏಕನಾಮಿಕ್ ಅಡ್ವಿಸರಿಬೋರ್ಡಿನಲ್ಲಿ 29ನೇ ತಾ. ಚರ್ಚಿಸಲ್ಪಡುವುದು. ಬೆಲ್ಲೋಣ ಭೀಮರಾಯರು ರೈತರ ಪರವಾಗಿ ಹೇಳಲು ಒಪ್ಪಿರುತ್ತಾರೆ. ಸಂಪಾದಕ)

ಮಿನಾಕ್ಷಿ ಭವನ ಕಾಫಿಕ್ಲಬ್

[ರಿಜಿಸ್ಟರ್ಡ್]

ಶಾಖೆಗಳು—

ಕಾಫಿ ಕ್ಲಬ್ ಬೆಂಗಳೂರು ರೋಡ್ **ಊಟ ವಸತಿಗೃಹ** ಬ್ರಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪದಲ್ಲಿ ತಯಾರಿಸಿದ ಸಿಹಿಖಾರದ ಫಲಹಾರವಸ್ತುಗಳು.

ಒಳ್ಳೆಯ ಊಟದ ವ್ಯವಸ್ಥೆ. ಧಾರಾಳವಾಗಿ ಗಾಳಿ, ಬೆಳಕು, ಬರುವ ಮಹಡಿಯ ಮೇಲಿನ ಕೊಠಡಿಗಳು ಆಧುನಿಕ ವ್ಯವಸ್ಥೆ

ಒಂದು ಸಲ ಬಂದು ಪರೀಕ್ಷಿಸಿರಿ.

ಬಳ್ಳಾರಿ ನಗರ

ಮುನಿಸಿಪಾಲಿಟಿ-

ನವಕರರ ಅಲೋಯನ್ಸದಲ್ಲಿ ಶೇ. 50 ಕಡಮೆ ಮಾಡಿರಿ.

ಬಳ್ಳಾರಿ ಪುರಸಭೆಯವರು ತನ್ನ ನವಕರರಾದ ಉಪಾಧ್ಯಾಯರು ಮತ್ತು ಕೆಲ ಗುಮಾಸ್ತರಿಗೆ ಸಂಬಳದಮೇಲೆ ಕೊಡುತ್ತಿದ್ದ ಅಲೋಯನ್ಸ (Personal Allowance)ನ ಎಲ್ಲಾ ಭಾಗವನ್ನೂ ಏಪ್ರಿಲ 1ರಿಂದ ತೆಗೆದುಹಾಕಿದ್ದರು. ಇದರಿಂದ ಉಪಾಧ್ಯಾಯರಿಗೆ ಬಹಳ ಕಷ್ಟವಾಗಿದ್ದಿತು. ಸರಕಾರದವರು ಇದನ್ನು ಪರಿಶೀಲಿಸಿ ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಶೇಕಡ 50ರಷ್ಟು ಅಲೋಯನ್ಸನ್ನು ತಾತ್ಕಾಲಿಕವಾಗಿ ಅಂದರೆ ಒಂದು ವರ್ಷದವರೆಗೆ ಕಡಮೆಮಾಡತಕ್ಕದ್ದೆಂದೂ, ಇದರಿಂದ ಒಬ್ಬ ಉಪಾಧ್ಯಾಯನ ಸಂಬಳವು ಮಾಸಿಕ 50 ಗಳಿಗೆ ಕಡಮೆಯಾಗಬಾರದೆಂತಲೂ, ಅಲೋಯನ್ಸಿನ್ನು ತೆಗೆದುಕೊಳ್ಳುವ ಉಪಾಧ್ಯಾಯರ ಸಂಬಳ 50ಮುಟ್ಟಿ ಬಾರದೆಂತಲೂ, ಆಜ್ಞೆ ಮಾಡಿರುವರು.

ರಾಯರಸೀಮೆ ಮಹಾಸಭೆಯ ಗೊತ್ತುವಳಿಗಳು.

ಅಧ್ಯಕ್ಷತೆ:- ಶ್ಯಾಮಜಿ ಕೃಷ್ಣಮೂರ್ತಿರಾವು

1) ರಾಯರಸೀಮೆಯ ವಿದ್ಯಾರ್ಥಿಗಳಿಗೆ ಮದ್ರಾಸು ಮೆಡಿಕಲ್ ಕಾಲೇಜುಗಳಲ್ಲಿ ಪ್ರವೇಶಕ್ಕವಕಾಶ ಕೊಡದೆ, ಅವರಿಗೆ ಅತಿಶಯ ಕಷ್ಟ, ಅನಾನುಕೂಲ, ಖರ್ಚುಗಳನ್ನುಮಾಡಿ ವಿಶಾಖ ಪಟ್ಟಣದ ಕಾಲೇಜಿಗೆ ಹೋಗಿಸುವ ಸರಕಾರದ ಧೋರಣೆಗಾಗಿ ಈ ಸಭೆಯು ವಿಷಾದಿಸುತ್ತಾ ರಾಯರಸೀಮೆ ವಿದ್ಯಾರ್ಥಿಗಳಿಗೆ ಮದ್ರಾಸು ಕಾಲೇಜಿನಲ್ಲೇ ಪ್ರವೇಶಕೊಡಬೇಕೆಂದು ಆರೋಗ್ಯ ಶಾಖೆಯ ಮಂತ್ರಿಗಳನ್ನು ಈ ಸಭೆಯು ಪ್ರಾರ್ಥಿಸುತ್ತದೆ.

2) ಜಿಲ್ಲಾವಾರು ಪ್ರಾತಿನಿಧ್ಯಕ್ಕನುಗುಣವಾಗಿ ರಾಯರಸೀಮೆ ವಿದ್ಯಾರ್ಥಿಗಳಿಗೆ ವೈದ್ಯಕೀಯ ಮತ್ತು ಇತರ ಕಾಲೇಜುಗಳಲ್ಲಿ ಪ್ರವೇಶವನ್ನು ಕೊಡಲು ಈ ಸಭೆಯು ಕೋರುತ್ತದೆ.

3) ರಾಯರಸೀಮೆಯ ಸರಕಾರ ಮತ್ತು ಸ್ಥಾನೀಕ ಸಂಸ್ಥೆಗಳ ನವಕರಿಗೇಗೆ ಹೊರಗಿನವರನ್ನು ತಂದು ತುಂಬುತ್ತಿರುವುದನ್ನು ಈ ಸಭೆಯು ಅತಿಶಯ ವಿವಂಚನೆ, ಭಾಬರಿಯಿಂದ ದೃಷ್ಟಿಸುತ್ತಾ ಅಂಥಾ ನವಕರಿಗಳೆಲ್ಲಾ ನಮ್ಮಲ್ಲೇ ಯೋಗ್ಯತೆ ಉಳ್ಳವರನ್ನಾರಿಸಬೇಕೆಂದು ಸರಕಾರವನ್ನು ಎಚ್ಚರಿಸುತ್ತದೆ.



[ಶ್ರೀ ಟಿ ಸುಬ್ರಹ್ಮಣ್ಯಂ]

ಮದ್ರಾಸ್ ಶಾಸನ ಸಭೆಗಳ ಕಾಂಗ್ರೆಸ್ ಪಾರ್ಟಿ ಕಾರ್ಯದರ್ಶಿ

ಶ್ರೀ ಟಿ. ಸುಬ್ರಹ್ಮಣ್ಯಂರವರ

(ಬಳ್ಳಾರಿ ಜಿಲ್ಲೆಯಲ್ಲಿನ ಸಂಚಾರ ಕಾರ್ಯಕ್ರಮ.)

20-6-39 ಪ್ರಾ. 10 ಆಗಮನ.

ಸಾಯಂಕಾಲ 4 ಅಕ್ಕಸಾಲಿ ಬೀದಿಯಲ್ಲಿನ ಕಾಂಗ್ರೆಸ್ ಭವನದಲ್ಲಿ ಕಾರ್ಯ ಕರ್ತರ ಸಭೆ.

ಸಾಯಂಕಾಲ 6.30 ಸಾಂಬಮೂರ್ತಿ ಮೈದಾನದಲ್ಲಿ ಸಾರ್ವಜನಿಕ ಸಭೆ.

21ನೇ ತಾ. ಪ್ರಾ. 8ಕ್ಕೆ ಕಂಪ್ಲಿಯಲ್ಲಿ ಸಭೆ. ಹೊಸಪೇಟೆಗೆ ಪ್ರಯಾಣ.

ಸಾ. 6-30 ಹೊಸಪೇಟೆಯ ಸಭೆ.

22ನೇ ತಾ. ಪ್ರಾ. 8 ನಾರಾಯಣದೇವರಕೆರೆಯಲ್ಲಿ ಸಭೆ. ಪ್ರ. ಸಾ. 6-30 ಹರಪನಹಳ್ಳಿಯಲ್ಲಿ ಸಭೆ.

23ನೇ ತಾ ಪ್ರಾ. 8 ಕೊಟ್ಟೂರಿನಲ್ಲಿ ಸಭೆ.

ಮಧ್ಯಾಹ್ನ ಅದವಾನಿಗೆ ಪ್ರಯಾಣ.

ಶ್ರೀ ಟಿ. ಸುಬ್ರಹ್ಮಣ್ಯಂರವರು ಕಾಂಗ್ರೆಸ್ ಸರಕಾರವವರು ಮಾಡಿದ ಮದ್ಯನಿಷೇಧ, ಋಣವಿಮೋಚನೆ ಕಾಯ್ದೆ ವಗೈರೆ ಶಾಸನಗಳ ವಿವರವನ್ನೂ ಉದ್ದೇಶಗಳನ್ನೂ ತಿಳಿಸುತ್ತಾ ಕೆ. ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳು ಮೇಲಿನ ಕಾರ್ಯಕ್ರಮವನ್ನನುಸರಿಸಿ ಸರಿಯಾದ ಏರ್ಪಾಟುಗಳನ್ನು ಮಾಡಲು ಕೋರಿದೆ. ಬರುವ ತಿಂಗಳು ಸಾಧ್ಯವಾಗುವಲ್ಲಿ, ಇನ್ನೂ ಹೆಚ್ಚಿನ ದಿನಗಳನ್ನು ಜಿಲ್ಲಾ ಸಂಚಾರಕ್ಕೆ ಕೊಡಲು ಕೇಳಲಾಗಿದೆ.

ವಿ. ಯಂ. ಗಿರಿ,
ಜಿ. ಕಾ. ಕ. ಕಾರ್ಯದರ್ಶಿ

ನವ ಭಾರತ

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ನೇಪ್ಪೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್ ವಾಚುಗಳೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಮ್ಮೆಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

Sarada Ink. [Regd]

Awarded Gold Medal and Certificate of Merit at the All India Swadeshi Exhibition Bellary.

For Fountain Pens and Steel Pens.

Blue Black, Red, Blue, Green & Violet

SARADA INK WORKS, (Regd.)

K. V. & Sons, BELLARY.

ಶಾರದಾ ಇಂಕ್ (ರಿಜಿಸ್ಟರ್ಡ್)

ಬಳ್ಳಾರಿ ಆಖಿಲ ಭಾರತ ವಸ್ತು ಪ್ರದರ್ಶನದಲ್ಲಿ ಸುವರ್ಣ ಪದಕವನ್ನೂ, ಯೋಗ್ಯತಾ ಪತ್ರವನ್ನೂ ಪಡೆದಿದೆ. ಫೌಂಟನ್‌ಪೆನ್ನುಗಳಿಗೂ, ಇತರ ಲೇಖನಿಗಳಿಗೂ, ಉಪಯೋಗಿಸಲು ಶ್ರೇಷ್ಠವಾದ ಬ್ಲೂ-ಬ್ಲಾಕ್ ಕೆಂಪು, ನೀಲಿ ಪಸರು, ವೈಲೆಟ್ ನಗೈರೆ ಬಣ್ಣಗಳಲ್ಲಿ ದೊರೆಯುತ್ತದೆ

ಕೆ. ವಿ. ಅಂಡ್ ಸನ್ಸು, ಬಳ್ಳಾರಿ.

NAVA BHARAT. BELLARY.

(With which is incarporated 'Congress Bulletin')

The leading Nationalist Weekly.

'ನವ ಭಾರತ ಬಳ್ಳಾರಿ.

[ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.]

The Rates of Subscription.	ಚಂದಾ ವಿವರ
Annual	ವರ್ಷ
Local 1—8—0	ಸ್ಥಳದವರಿಗೆ 1-8-0
Moffusil 2—0—0	ಪರಸ್ಥಳದವರಿಗೆ 2-0-0
Half Yearly	6 ತಿಂಗಳು
Local 1—0—0	ಸ್ಥಳದವರಿಗೆ 1-0-0
Moffusil 1—4—0	ಪರಸ್ಥಳದವರಿಗೆ 2-0-0

Patent medicines, Tonics, injections

Ayurvedic Preparations & Oilman-stores —Moderate Rates

Trial earnestly solicited

M. S. V. Bros,

Car Street, **BELLARY.**

ಇಂಗ್ಲೀಷ್ ಔಷಧಗಳು, ಇಂಜೆಕ್ಷನ್ ಮತ್ತು ಇತರ ಆಯುರ್ವೇದೀ ಔಷಧಗಳು, ಸ್ವೀಷನು ನಗೈರೆ ಸುಲಭ ಬೆಲೆಯಲ್ಲಿ ದೊರೆಯುತ್ತವೆ.

ಎಂ. ಯಸ್. ವಿ. ಬ್ರದರ್ಸ್,

ತೇರು ಬೀದಿ, ಬಳ್ಳಾರಿ.

The Lakshmi Medical Stores.

Chemists & Druggists, Car Street, Bellary.

ದಿ ಲಕ್ಷ್ಮೀ ಮೆಡಿಕಲ್ ಸ್ಟೋರ್ಸ್

ಔಷಧಾಲಯ ತೇರು ಬೀದಿ, ಬಳ್ಳಾರಿ.

ನಮ್ಮಲ್ಲಿ ಇಂಗ್ಲೀಷ್ ಔಷಧಗಳು, ಇಂಜೆಕ್ಷನ್, ಆಂಪೂಲ್ಸ್, ಟಿಂಕ್ಚರ್ಸ್, ಶಸ್ತ್ರ ಚಿಕಿತ್ಸೆಗೆ ಬೇಕಾಗುವ ಶಸ್ತ್ರಗಳು, ಆಸ್ಪತ್ರೆಯ ಬೀಡಿಕೆಗಳು ಮತ್ತು ಅಸಂಬಂಧದ ಔಷಧಗಳೆಲ್ಲಾ ದೊರೆಯುತ್ತವೆ.

ವಿವಿಧ ವರ್ಗದ **'ಲಕ್ಷ್ಮೀ-ಸಿರಪ್'** ಪಾನಗಳನ್ನು ನಾವು ತಯಾರಿಸುತ್ತೇವೆ ನಮ್ಮ ಔಷಧಾಲಯವು ದಿನ ರಾತ್ರಿಯೆಲ್ಲಾ ತೆರೆದಿರುತ್ತದೆ. ದರಗಳು ಸುಲಭ ಪರೀಕ್ಷಿಸಿ ತೃಪ್ತಿ ಹೊಂದಿರಿ.

Nava Bharat, Bellary.

REG. NO. M. 3937.

Sri _____

_____

_____

Printed at Vittal Press, Car Street Edited & Published by T. B. Keshava Rao BELLARY.

'ನಂದೇ ಮಾತರಂ'



(ಇದರಲ್ಲಿ 'ಕಾಂಗ್ರೆಸ್' ಬುಲೆಟಿನ್' ಸಮಾವೇಶವಾಗಿದೆ)

ಉಜ್ವಲ · ರಾಷ್ಟ್ರೀಯ ವಾರ ಪತ್ರಿಕೆ.

ಸಂಪಾದಕ — ಟಿ. ಬಿ. ಕೇಶವರಾವ್.

ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ.

ಸಂಚಿಕೆ ೧ | ಬಳ್ಳಾರಿ. ಜೂನ್ ೨೪ನೇ ಶನಿವಾರ ೧೯೨೪. | ಸಂಪುಟ ೪೭

ಅನೈತಿಕ ವ್ಯಾಪಾರ ನಿಲ್ಲಲು ಶಾಸನಗಳಾಗಬೇಕು.

[4ನೇ ಪುಟವನ್ನು ನೋಡಿರಿ]

★ ಎಂಪೈರ್ ಆಫ್ ಇಂಡಿಯಾ ★

ಲೈಫ್' ಅಶೂರೆನ್ಸು ಕಂಪನಿ ಲಿಮಿಟೆಡ್'.

ಸ್ಥಾಪಿತ 1897.

ಉದಾರವಾದ ಯೋಜನೆಗಳು.

ಆಸ್ತಿಯ ಮೊತ್ತ	ರೂ.	5,18,00,000	ಗಿಂತಲೂ ಹೆಚ್ಚಿದೆ.
ಜಾರಿಯಲ್ಲಿರುವ ವಾಲಿಸಿಗಳ ಮೊತ್ತ	,,	14,29,00,000	,,
ವಾರಸುದಾರರಿಗೆ ಸಲ್ಲಿಸಿದ ಹಣ	,,	6,15,00,000	,,

ಭವಿಷ್ಯದಲ್ಲಿ ಕುಟುಂಬ ಭರಣಕ್ಕೇರ್ಪಾಟು ಮಾಡಬೇಕಾದುದು. ಪ್ರತಿಯೊಬ್ಬ ಕುಟುಂಬೀಕನ ಕರ್ತವ್ಯವಾಗಿದೆ ವಿಶೇಷ ಪರಿಸ್ಥಿತಿಯಿಂದ ಸಂಪಾದನೆಯು ಕುಗ್ಗಿ ಹೋಗುವ ದಿನಗಳು ಒರಬಹುದು. ಅಂಧಾ ಕಾಲಕೋಸ್ಕರ ಜೀವ ವಿಮೆಯ ಪಾಲಿಸಿಯನ್ನು ರಕ್ಷಿಸಬೇಕಾದುದು ಅತ್ಯಗತ್ಯವಾಗಿದೆ

ಮುಖ್ಯ ಕಾರ್ಯಾಲಯ.
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

★

ಶಾಖೆ.
152/53 ಕಮರ್ಶಿಯಲ್ ಸ್ಟ್ರೀಟ್,
ಬೆಂಗಳೂರು.

ಬಳ್ಳಾರಿ ಜಿಲ್ಲೆಯಲ್ಲಿ ಶ್ರೀ ಟಿ. ಸುಬ್ರಹ್ಮಣ್ಯಂರವರ ಸಂಚಾರ

ಮೂರಾಟಕರ—ವರ್ತಕರಿಗೆ ವಿಶಾಲ ಹೃದಯಬೇಕು

ಮದ್ರಾಸು ಶಾಸನಸಭೆಗಳ ಕಾಂಗ್ರೆಸ್ ಪಾರ್ಟಿ ಕಾರ್ಯದರ್ಶಿ ಶ್ರೀ ಟಿ. ಸುಬ್ರಹ್ಮಣ್ಯಂರವರು ಬಳ್ಳಾರಿಗೆ 20 ನೇ ತಾ. ಪ್ರಾ. 10 ಕ್ಕೆ ದಯಮಾಡಿಸಿದರು. ಸಾಯಂಕಾಲ 4 ಘಂಟೆಗೆ ಕಾಂಗ್ರೆಸ್ ಭವನದಲ್ಲಿ ಕಾರ್ಯಕರ್ತರ ಸಭೆಯು ಸೇರಿದ್ದಿತು. ತಮ್ಮ ಕಷ್ಟಗಳು ಮತ್ತು ಕಾಂಗ್ರೆಸ್ ಸರಕಾರಗಳಲೋಪಗಳ ಬಗ್ಗೆ ಪರಸ್ಪರ ವಿಚಾರ ವಿನಿಮಯವಾಯಿತು. ಸಾಯಂಕಾಲ ಡಾ. ಸಾಗನಗೌಡರ ಅಧ್ಯಕ್ಷತೆಯಲ್ಲಿ ಸಾಂಬಮೂರ್ತಿ ನೈಡಾನವಲ್ಲಿ ದೊಡ್ಡ ಸಭೆಯಾಯಿತು. ಜಿ. ಕಾ. ಕ. ಕಾರ್ಯದರ್ಶಿಗಳಾದ ಶ್ರೀ ವಿ. ಯಂ. ಗಿರಿ ಮತ್ತು ಅಧ್ಯಕ್ಷ ವಸುಪಾಲಪ್ಪನವರೊಡನೆ ಕಂಪ್ಲಿ, ಹೊಸಪೇಟೆ, ನಾರಾಯಣದೇವರಕೆರೆ ಹರಪನಹಳ್ಳಿಗಳಲ್ಲಿ ಸಂಚರಿಸಿ ಅಲ್ಲಿಯೂ ಸಭೆಗಳಲ್ಲಿ ಮಾತಾಡಿದರು. ರಾಯದುರ್ಗ, ಆಲೂರು, ಆದವಾನಿ, ಕೋಸಿಗಿ ಸಭೆಗಳಲ್ಲಿ ಕಾಂಗ್ರೆಸ್ ಕಾರ್ಯಕ್ರಮದ ಬಗ್ಗೆ ಉಪನ್ಯಾಸಗಳನ್ನು ಕೊಟ್ಟು ಮದ್ರಾಸಿಗೆ ಹೋಗುವರು.

ಅವರ ಭಾಷಣಗಳ ಸಾರಾಂಶ

ಕಾಂಗ್ರೆಸ್ ತ್ಯಾಗ:—

52 ವರ್ಷಗಳ ಕೆಳಗೆ ಕಾಂಗ್ರೆಸ್ಸಿನ ಜನ್ಮವಾಯಿತು. ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನುಗಳಿಸುವುದೇ ಕಾಂಗ್ರೆಸ್ಸಿನ ಮುಖ್ಯ ಧ್ಯೇಯ. ಮಹಾತ್ಮ ಗಾಂಧಿಯವರು ರಾಜಕೀಯ ಗಳಲ್ಲಿ ಪ್ರವೇಶಿಸಿದಮೇಲೆ ಕಾಂಗ್ರೆಸ್ ಸಂಸ್ಥೆಯಲ್ಲಿ ಕ್ರಾಂತಿಯಾಯಿತು. 1921-1930-1932ರಲ್ಲಿ ಅದ್ಭುತವಾದ ಅಹಿಂಸಾತ್ಮಕ ಚಳುವಳಿಯಾಯಿತು. ಲಕ್ಷಗಟ್ಟಲೆ ಜನರು ಸೆರೆಮನೆಯನ್ನು ಕಂಡರು. ಸಾವಿರಾರು ಜನರು ಲಾಠಿಪೆಟ್ಟುಗಳಿಂದ ಜರ್ಜರಿತರಾದರು. ಕೆಲಸರು ಸತ್ತರು. ಅನೇಕರು ತಮ್ಮ ಮನೆ - ಮಠಗಳನ್ನು ಕಳೆದುಕೊಂಡರು. ಗುಜರಾತ-ಉತ್ತರಕನಡ ಬಾರ್ಡೋಲಿ ಜಿಲ್ಲೆಗಳಲ್ಲಿ ರೈತರು ತಮ್ಮ ಭೂ - ಆಸ್ತಿಗಳನ್ನು ಕಳೆದುಕೊಂಡರು. ಈ ಅದ್ಭುತ ಸ್ವಾರ್ಥ ತ್ಯಾಗದ ಫಲವಾಗಿ ಕಾಂಗ್ರೆಸ್ ಸಂಸ್ಥೆಯು ಜನಗೌರವ ಸಂಸ್ಥೆಯಾಯಿತು. ಪ್ರಜೆಗಳ ಹಿತವನ್ನು ಸಂರಕ್ಷಿಸುವುದು ಜಾತಿ ಭೇದಗಳ ಪರಿವೆಯಿಲ್ಲದೆ ಎಲ್ಲರ ಹಿತವನ್ನು ಬಯಸಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದುದರಿಂದ ಪರದೇಶೀಯರ ದೃಷ್ಟಿಯಲ್ಲಿಯೂ ಇದು ಗೌರವವನ್ನು ಪಡೆದಿತು.

ಕಾಂಗ್ರೆಸ್ ಮಂತ್ರಿವರ್ಗ—ನಿರ್ವಾಣ ಕಾರ್ಯಕ್ರಮ.

ಈ ತ್ಯಾಗದ ಫಲವಾಗಿ ಕಾಂಗ್ರೆಸ್ ಬ್ರಿಟಿಶ ಇಂಡಿಯಾದ 11 ಪ್ರಾಂತ್ಯಗಳಲ್ಲಿ 8 ಪ್ರಾಂತ್ಯಗಳೊಳಗೆ ಮಂತ್ರಿವರ್ಗವನ್ನು ಸಂಪಾದಿಸುವಷ್ಟು ಶಕ್ತಿಯುತವಾಯಿತು. ಗವರ್ನ್‌ಮೆಂಟು ಆಫ್ ಇಂಡಿಯಾ ಆಕ್ಟದಕೆಳಗೆ ನಮಗೆ ಪ್ರಾಂತ್ಯಗಳೊಳಗೆ ಅತಿ ಸ್ವಲ್ಪ ಸ್ವಾತಂತ್ರ್ಯವು ದೊರಕಿದೆ. ಈಗ ದೊರೆತಿರುವ ಅಲ್ಪ-ಸ್ವಲ್ಪ ಅವಕಾಶದಲ್ಲೇ ಕಾಂಗ್ರೆಸ್ಸಿನವರು ಜನಹಿತ ಕಾರ್ಯಗಳನ್ನು ನಾಡತೊಡಗಿರುವರು. ಕಾಂಗ್ರೆಸ್‌ನ ನಿರ್ವಾಣ ಕಾರ್ಯಕ್ರಮಗಳಾದ ಖಾದಿ, ಮದ್ಯನಿಷೇಧ, ಅಸ್ಪೃಶ್ಯತಾ ನಿವಾರಣೆ ಹಿಂದೂ-ಮುಸಲ್ಮಾನ ಐಕಮತ್ಯಕ್ಕೆ ಬಹಳ ಪ್ರೋತ್ಸಾಹವು ದೊರೆತಿದೆ. ಮದ್ರಾಸು ಸರಕಾರದವರು ಖಾದಿಗಾಗಿ ವರ್ಷ 1ಕ್ಕೆ 2 ಲಕ್ಷ ರೂ, ಖರ್ಚು ಮಾಡುತ್ತಿರುವರು. ಮದ್ರಾಸಿನ 3 ಜಿಲ್ಲೆಗಳಲ್ಲಿ ಮದ್ಯನಿಷೇಧ ಕಾರ್ಯವನ್ನು ಜಾರಿಗೆ ತಂದಿರುವರು. ಬರುವ ಅಕ್ಟೋಬರದಿಂದ ಉತ್ತರ ಆರ್ಕಾಟ ನಲ್ಲಿ ಜಾರಿಗೆ ಬರಲಿದೆ. ಇನ್ನೀ ಪ್ರಾಂತ್ಯದಲ್ಲೇ ಈ ಕಾರ್ಯಕ್ರಮವನ್ನು ಜಾರಿಗೆ ತಂದು ಬಡವರನ್ನೂ, ಕೂಲಿಕಾರರನ್ನೂ, ಮತ್ತು ಪದಾರ್ಥಗಳ ಸೇವನೆಯಿಂದ ರಕ್ಷಿಸಿ, ದೇಶದ ಸಂಪತ್ತಿಗೆ ಕಾರಣರನ್ನಾಗಿ ಮಾಡುವ ಯೋಜನೆ ಇದೆ. ಹರಿಜನೋದ್ಧಾರಕ್ಕಾಗಿ ಸರ್ಕಾರದವರು ವರ್ಷಕ್ಕೆ 11 ಲಕ್ಷ ರೂ, ಖರ್ಚುಮಾಡಿರುತ್ತಿರುವರು. ಹಿಂದೂ ಮುಸಲ್ಮಾನ ಐಕಮತ್ಯಕ್ಕಾಗಿ ಸತತ ಪ್ರಯತ್ನಗಳು ಸಾಗಿವೆ.

ಕಾಂಗ್ರೆಸ್ ಸರವರು ವಿಧಿಸಿದ ತೆರಿಗೆಗಳು.

ಮದ್ರಾಸು ಪ್ರಾಂತ್ಯದಲ್ಲಿ, ಸದ್ಯಕ್ಕೆ ಕಾಂಗ್ರೆಸ್ಸಿನವರು, ನಿಷ್ಣಾತರು, ವಿನೋದಗಳಿಗಾಗಿಕರ, ತಂಬಾಕಿನಕರ ಮತ್ತು ಮಾರಾಟಕರ ಹೀಗೆ ತೆರಿಗೆಗಳನ್ನು ವಿಧಿಸಿರುವರು. ಪ್ರಾಂತ್ಯದ ಆದಾಯವು 16 ಕೋಟಿ ಇದೆ. ಅದರಲ್ಲಿ 7 ಕೋಟಿ ಭೂಕಂದಾಯದಿಂದ ಬರುತ್ತಲಿದೆ. 4 ಕೋಟಿ ಪೆಂಡಾರಾಯಗಳಿಂದ ಬರುತ್ತಲಿದೆ. ಇತರೆ ಚಿಲ್ಲರೆಯಿಂದ 2 ಕೋಟಿ ಹೀಗೆ ಒಟ್ಟಿಗೆ 14 ಕೋಟಿ ರೂಪಾಯಿಗಳು ಹಳ್ಳಿಗಳಿಂದ ಬರುತ್ತಲಿದೆ. ತೆರಿಗೆಗಳನ್ನು ಕೊಡಲಾರದವರ ಮೇಲೆಯೇ

(7-ನೇ ಪುಟವನ್ನು ನೋಡಿರಿ.)

ಅಂಬಾ ಭವನ ಕಾಫೀ ಕ್ಲಬ್
(ರಿಜಿಸ್ಟರ್ಡ್)
ಮತ್ತು
ಶಾಖೆ:— **ಊಟದ - ಹೋಟೆಲ್**
ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪದಲ್ಲಿದೆ ರುದ್ಧತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾಳಿ -ಬೆಳಕು ಮತ್ತು ಇತರ ಅನುಕೂಲಗಳಿರುವ ಕೊಠಡಿಗಳು, ಭೋಜನ ಸಮಾರಂಭ ಟೀಪಾರ್ಟಿಗಳ ಏರ್ಪಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆ ಮಾಡುವೆವು.

ಪ್ರೊಪ್ರಯಿಟರ್ಸು—
ಶಿ. ಕನ್ನಯ್ಯ, ಹೆಚ್. ಕರಿಬಸಪ್ಪ.

ಶ್ರೀ ಬಾಬುರಾಜೇಂದ್ರ ಪ್ರಸಾದರ ಹೇಳಿಕೆ

[illegible]) ಪಾಟ್ನಾ ಜೂ16

'ಫೆಡರೇಷನ್' ವ್ಯವಸ್ಥೆಯ ವಿಷಯವಾಗಿ ಬಹಳ ಉತ್ಸಾಹದಿಂದ ಇದ್ದವರಿಗೆಲ್ಲ, ನರೇಂದ್ರರು ಮುಂಬೈ ನಗರದಲ್ಲಿ ಮಾಡಿದ ನಿರ್ಧಾರವನ್ನು ಕೇಳಿ ಸಿಡಿಲು ಬಡಿದಂತಾಗಿರಬೇಕು. ವಿಷಯಗಳನ್ನು ಎಲ್ಲಿಗೆ ನಿಲ್ಲಿಸಲಾಗಿದೆಯೋ ಅಲ್ಲಿಗೆ ನಿಲ್ಲಿಸಿದರೆ, ಫೆಡರೇಷನ್ ಸತ್ತಂತೆಯೇ ಸರಿ'

ಎಂಬುದಾಗಿ ಶ್ರೀ ಬಾಬುರಾಜೇಂದ್ರ ಪ್ರಸಾದರು ಅಸೋಸಿಯೆಟೆಡ್ ಪ್ರಾತಾರ್ತಾ ಸಂಸ್ಥೆಯ ಪ್ರತಿನಿಧಿಗಳಿಗೆ ಹೇಳಿಕೆ ಕೊಡುತ್ತ ತಿಳಿಸಿದರು.

ಶ್ರೀ ಬಾಬು ರಾಜೇಂದ್ರ ಪ್ರಸಾದರು ತಮ್ಮ ಹೇಳಿಕೆಯನ್ನು ಮುಂದುವರಿಸುತ್ತಾ, ನರೇಂದ್ರರ ಮುಂದಿಟ್ಟಿರುವ ಬೇಡಿಕೆಗಳನ್ನು ಪೂರೈಸಲಾಗುವುದೇ ಎಂಬ ವಿಚಾರದಲ್ಲಿ ಸಂದೇಹವನ್ನು ವ್ಯಕ್ತಪಡಿಸಿದರು. ಆದರೆ ನರೇಂದ್ರರ ನಿರ್ಧಾರವು ಕಾಂಗ್ರೆಸ್ಸಿಗೆ ಬೆಲೆಯುಳ್ಳದ್ದೆಂದು ಅಭಿಪ್ರಾಯಪಟ್ಟರು. ನರೇಂದ್ರರ ಪ್ರವೇಶಕರಾರು ಪತ್ರಕ್ಕೆ ನರೇಂದ್ರರು ಒಪ್ಪಿಗೆಯನ್ನಿತ್ತು, ಫೆಡರೇರ್ಷ ವ್ಯವಸ್ಥೆಗೆ ಸೇರಲು ಒಂದುವೇಳೆ ಒಪ್ಪಿಕೊಂಡಿದ್ದರೂ ಆ ವ್ಯವಸ್ಥೆಯು ಆಚರಣೆಗೆ ತರಲ್ಪಡುವುದನ್ನು ಕಾಂಗ್ರೆಸ್ ತೀವ್ರವಾಗಿ ಪ್ರತಿಭಟಿಸಬೇಕಾಗುತ್ತಿತ್ತು. ಆದರೆ ನರೇಂದ್ರರ ಈಗಿನ ನಿರ್ಧಾರದಿಂದ ಆಹೋರಾಟವು ಸದ್ಯಕ್ಕೆ ತಪ್ಪಿತು. ಆದರೆ ಶಾಶ್ವತವಾಗಿ ಹೋರಾಟವು ತಪ್ಪಿತೆಂದು ಭಾವಿಸಲಾಗದು. ಬ್ರಿಟಿಷ್ ಸರ್ಕಾರದವರು ಯಾವ ಬಗೆಯ ಕಾರ್ಯಕ್ರಮವನ್ನು ಕೈಗೊಳ್ಳುವರೆಂಬುದನ್ನು ನಾವು ನಿರೀಕ್ಷಿಸಬೇಕಾಗಿದೆ' ಎಂಬುದಾಗಿ ನುಡಿದರು.

ತಮ್ಮ ಹೇಳಿಕೆಯನ್ನು ಮುಂದುವರಿಸುತ್ತ ಶ್ರೀ ಬಾಬು ರಾಜೇಂದ್ರ ಪ್ರಸಾದರು ನರೇಂದ್ರರ ವರ್ತನೆಯನ್ನು ಆದರ ಬೇಡಿಕೆಗಳನ್ನು ವಿಮರ್ಶಿಸಿದರು. 'ಮಾಡಿಕೊಂಡಿರುವ ಕೌಲುಕರಾರುಗಳ ವಿಚಾರದಲ್ಲಿ ನರೇಂದ್ರರು ವ್ಯಕ್ತಪಡಿಸಿರುವ ಸಂಬಿಕೆಯು ನಿಜವಾಗಿಯೂ ಖೇದಕರವಾದುದು. ತಮ್ಮ ಪ್ರಜೆಗಳು ತೃಪ್ತಿಪಟ್ಟುಕೊಂಡಿರುವುದೇ ತಮ್ಮ ರಕ್ಷಾ ಕವಚವೆಂಬುದನ್ನು ನರೇಂದ್ರರು ಅರಿತುಕೊಳ್ಳಬೇಕು" ಎಂಬುದಾಗಿ ಸೂಚಿಸಿದರು.

ಫೆಡರೇಷನ್ನಿನ ಗತಿ ಏನಾದರೂ ಆಗಲಿ, ನರೇಂದ್ರರು ತಮ್ಮ ಸಂಸ್ಥಾನದಲ್ಲಿ ಸುಧಾರಣೆಗಳನ್ನು ಆಚರಣೆಗೆ ತರುವುದನ್ನು ತಡಮಾಡಕೂಡದೆಂದು ಶ್ರೀ ಬಾಬುರಾಜೇಂದ್ರ ಪ್ರಸಾದರು ಅಭಿಪ್ರಾಯಪಟ್ಟರು. ತಮ್ಮ ಭವಿಷ್ಯವು ಯಾವರೀತಿ ಇರಬೇಕೆಂಬುದನ್ನು ನರೇಂದ್ರರು ತಕ್ಷಣವೇ ಇತ್ಯರ್ಥಪಡಿಸಬೇಕೆಂದೂ ಸೂಚಿಸಿದರು. ಏಕೆಂದರೆ ಈರೀತಿ ನಿರ್ಧಾರವನ್ನು ತೆಗೆದುಕೊಳ್ಳುವುದರ ಮೇಲೆ ನರೇಂದ್ರರ ವಿಚಾರದಲ್ಲಿ ಪ್ರಜೆಗಳು ಯಾವರೀತಿ ನಡೆದುಕೊಳ್ಳಬೇಕೆಂಬುದು ನಿಂತಿದೆಯೆಂದು ಶ್ರೀ ಬಾಬುರಾಜೇಂದ್ರ ಪ್ರಸಾದರು ಅಭಿಪ್ರಾಯಪಟ್ಟರು.

ಮದರಾಸು ಸರಕಾರದ ಹೊಸ ಸಾಲ

ಈ ಸಾರಿ ಮದರಾಸು ಸರ್ಕಾರದವರು ಎತ್ತಲಿರುವ ಸಾಲದ ಷರತ್ತುಗಳನ್ನು ವಿವರಿಸುವ ಪ್ರಕಟನೆಯೊಂದು ಹೊರಬಿದ್ದಿದೆ. ಸಾಲದ ಹಣ 150 ಲಕ್ಷ ರೂಗಳು. 21-6-1959 ನೆ ದಿನ ಸಾಲವನ್ನು ಹಿಂದಕ್ಕೆ ಕೊಡಲಾಗುತ್ತದೆ. 21-6-1939 ರಿಂದ ಸಾಲಕ್ಕೆ ಶೇಕಡ 3 ರಂತೆ ಬಡ್ಡಿ ಕೊಡಲಾಗುತ್ತದೆ.

ಪ್ರತಿ 100 ರೂಗೆ 98-8-0 ಯಂತೆ ಸಾಲವನ್ನು ಪಡೆಯಲಾಗುತ್ತದೆ. ಸಾಲದ ಹಣವನ್ನು ಕೆಳಗೆ ಕಂಡ ಲಾಭಕರ ಉದ್ಯಮಗಳಿಗೆ ಮಾತ್ರ ಬಳಸಲಾಗುತ್ತದೆ.

1. ವಿದ್ಯುತ್ ಯೋಜನೆಗಳು
2. ನಾಲಾ ಕೆಲಸಗಳು.
3. ಸ್ಥಳೀಯ ಸಂಸ್ಥೆಗಳಿಗೂ ನುತ್ತು ರೈತರಿಗೂ ಸಾಲ.

ಜೂ 21ನೇ ತಾ॥ (ಬುಧವಾರ) ಬೆಳಿಗ್ಗೆ 10 ಘಂಟೆಯಿಂದ ಚಂದಾ ಹಣವನ್ನು ಈ ಪ್ರಾಂತ್ಯದಲ್ಲಿರುವ ನುತ್ತು ಬೆಂಗಳೂರು ನುತ್ತು ತಿರುವೇಂದ್ರಂಗಳಲ್ಲಿರುವ ಇಂಪೀರಿಯಲ್ ಬ್ಯಾಂಕಿನ ಶಾಖೆಗಳಲ್ಲೂ ನುತ್ತು ಮದರಾಸು, ಮುಂಬಯಿ, ಕಲಕತ್ತ ನುತ್ತು ದೆಹಲಿ - ಈ ನಗರಗಳಲ್ಲಿರತಕ್ಕಂತಹ ರಿಜರ್ವ್ ಬ್ಯಾಂಕು ಕಚೇರಿಗಳಲ್ಲೂ ಪಡೆಯಲಾಗುತ್ತದೆ.

ಈ ಸಾಲಕ್ಕೆ ಮದರಾಸು ಸರ್ಕಾರದ ಶೇಕಡ 3 ರೂ ಬಡ್ಡಿಯ 1959 ನೇ ವರ್ಷದ ಸಾಲವೆಂದು ಪ್ರಸರಿಡಲಾಗುತ್ತದೆ.

ಸರ್ದಾರ ವಲ್ಲಭಭಾಯಿಯವರ ಸಲಹೆ

ಈಗಿನ ಪರಿಸ್ಥಿತಿಯಲ್ಲಿ ರಾಜರು ಯಾವ ಸುಧಾರಣೆಗಳನ್ನು ಕೊಡಲೂ ಸಿದ್ಧರಿಲ್ಲ. ಇದಕ್ಕೆ ಭಯಂಕರವಾದ ಚಳವಳಿಯೂ, ಅನುಪಮ ತ್ಯಾಗವೂ ಆವಶ್ಯಕವಾಗಿದೆ. ಮೈಸೂರು ಪ್ರಜೆಗಳು ಇಂಥದಕ್ಕೆ ತಯಾರಿದ್ದರೆ, ಅವರಮೇಲೆ ಪ್ರತಿಗಾಮೀ ಸರಕಾರವು ಹೇರಲ್ಪಟ್ಟರೆ ಅವರು ತಮ್ಮ ಶಕ್ತಿಮೀರಿ ಅದನ್ನು ಪ್ರತಿಭಟಿಸಲಹುದು. ಇದು ಏನೇ ಇರಲಿ ಸರಕಾರದ ಧೋರಣವು ಹೇಗೆ ಇರಲಿ.

ತಮ್ಮ ಬೇಡಿಕೆಯನ್ನು ಇನ್ನೊಂದು ಸಲ ಸರಕಾರದಲ್ಲಿ ಮಂಡಿಸಿ ನಂತರ ಯಾವುದನ್ನಾದರೂ ಏಕ್ಷನ್ ಮಾಡಬೇಕು.

ತಮ್ಮ ಚಳುವಳಿ ಪ್ರಾರಂಭವಾಗುವುದಾದರೆ ದಿವಾನರನ್ನಾಗಲಿ, ಮಹರಾಜರನ್ನಾಗಲಿ ನಿಂದಿಸುವ ಅವಹೇಳನಮಾಡುವ ಕಾರ್ಯಕ್ಕೆ ಸ್ವೋತ್ಸಾಹ ಕೊಡಬಾರದು.

ಅನೈತಿಕ ವ್ಯಾಪಾರ ನಿಲ್ಲಲು ಶಾಸನಗಳಾಗಬೇಕು.

ನಿರಾಶ್ರಿತ ಮಂದಿರಗಳ ಸ್ಥಾಪನೆಯ ಆವಶ್ಯಕತೆ

ಅಖಿಲ ಭಾರತ ಮಹಿಳಾ ಪರಿಷತ್ತಿನ 13 ನೆಯ ಅಧಿವೇಶನದಲ್ಲಿ ಪಾಸಾದ ಮಹತ್ವದ ಗೊತ್ತುವಳಿಗಳು.

೧) ಬಾಲಿಕೆಯರ ಶಿಕ್ಷಣದ ಸಂಬಂಧ ವಾಗಿ ಇನ್ನೂ ಕಾಯದೆಗಳು ಆಗದಿರುವುದ ರಿಂದ ಮತ್ತು ಬಾಲಿಕಾ ಮತ್ತು ಶಿಶು ಮರಣ, ದೇವದಾಸಿ ಪದ್ಧತಿ ಇವುಗಳ ನಿರ್ಮೂಲನಕ್ಕೆ ತಕ್ಕ ಶಾಸನಗಳಾಗದಿರುವುದರಿಂದ ಕೇಂದ್ರ ಶಾಸನ ಸಭೆಗೆ ಸರಕಾರದವರು ಕೂಡಲೆ ಇಬ್ಬರು ಸ್ತ್ರೀ ಸದಸ್ಯರನ್ನು ನೇಮಕ ಮಾಡಬೇಕೆಂದು.

೨) ಈ ಪರಿಷತ್ತು ಹೆಂಗಸರ ಮತ್ತು ಅನೈತಿಕ ವ್ಯವಹಾರವನ್ನು ನಿರ್ಲಿಸುವ ಎಲ್ಲ ಕಾನೂನುಗಳಿಗೆ ಬೆಂಬಲ ಕೊಡುತ್ತದೆ ಮತ್ತು ಮದರಾಸಿನ ಬ್ರಾಥಲ್ ಬಿಲ್, ದೇವದಾಸಿ ಬಿಡುವ ಸದ್ಯತಿಯ ಕಾಯದೆ ಮತ್ತು ಇದೇ ಸಂಬಂಧವಾಗಿರುವ ಇತರ ಸೂಚನೆಗಳಿಗೆ ಈ ಪರಿಷತ್ತು ಬೆಂಬಲ ಕೊಡುತ್ತದೆ.

೩) ತ್ರಾವಣಕೋರ ಸಂಸ್ಥಾನದಲ್ಲಿರುವ ಮೂರು ದೇವಾಲಯಗಳಲ್ಲಿ ದೇವದಾಸಿಯರ ಕೆಲಸವನ್ನು ತೆಗೆದು ಹಾಕಿದ್ದಕ್ಕಾಗಿ ಮತ್ತು ಆ ಸಂಸ್ಥಾನದಲ್ಲಿ ದೇವದಾಸಿ ಪದ್ಧತಿಯನ್ನು ನಿರ್ಮೂಲ ಮಾಡಲು ಕಾಯದೆ ಮಾಡಿದ್ದಕ್ಕಾಗಿ ಆ ಸಂಸ್ಥಾನಿಕರಿಗೆ ಪರಿಷತ್ತು ವೈಯಕ್ತಿಕವಾಗಿ ವಂದಿಸುತ್ತದೆ.

೪) ಪೋರ್ತಗೀಸ ಸರಕಾರದವರು "ಶೀಷವಿಧಿ" [ಹುಡಗಿಯರು ಅನೈತಿಕವ್ಯಾಪಾರ ಮಾಡಲು ಒಂದು ಲಗ್ನ ಮಾಡುವುದು] ಪದ್ಧತಿಯನ್ನು ನಿರ್ಲಿಸಿದಂತೆ ಉಳಿದ ಪ್ರಾಂತೀಯ ಸರಕಾರದವರು ಅವರನ್ನು ಅನುಕರಣ ಮಾಡಬೇಕೆಂದು ಪರಿಷತ್ತು ಕೇಳಿಕೊಳ್ಳುತ್ತದೆ.

೫] ಪರಿಷತ್ತು ಸಾರ್ವಜನಿಕರನ್ನು ಮತ್ತು ಪರಿಷತ್ತಿನ ಸದಸ್ಯರನ್ನು ಈ ಕಾರ್ಯಕ್ರಮಗಳಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತದೆ.

೧] ಪ್ರತಿ ಒಂದು ಪ್ರಾಂತದಲ್ಲಿ ನಿರಾಶ್ರಿತರಿಗೆ ಸಹಾಯಕ್ಕೆ ಒಂದು ಮಂದಿರವನ್ನು ಸ್ಥಾಪಿಸುವುದು.

೨] ಸ್ತ್ರೀಯರ ಮೆತ್ತು ಮಕ್ಕಳವ್ಯಾಪಾರವು ಹಾನಿಕಾರಕವೆಂದು ಸಾರ್ವಜನಿಕರಿಗೆ ತಿಳಿಸಿಕೊಡುವುದು.

೩] ನೇಶ್ಯಾಗೃಹಗಳನ್ನು ಮುಚ್ಚಲು ಜನತೆ ಕಂಡಲ್ಲಿ ಸರಕಾರದವರನ್ನು ಕೇಳಿಕೊಳ್ಳುವುದು. ಈ ಕಾಯದೆಗಳು ಸರಿಯಾಗಿ ಅಮಲಿನಲ್ಲಿ ಬರುವಂತೆ ಮಾಡಲು ಸ್ತ್ರೀ ಅಧಿಕಾರಿಗಳನ್ನು ನಿಯಮಿಸುವದು

೪] [ಅ] ಅಧಿಕಾರಿಗಳು ಹೆಂಗಸರ ಮತ್ತು ಮಕ್ಕಳ ವ್ಯಾಪಾರದ ಬಗ್ಗೆ ಉಗ್ರ ಉಪಾಯಗಳನ್ನು ಕೈಕೊಳ್ಳಬೇಕು. ಮತ್ತು ಪ್ರಾಂತಗಳಲ್ಲಿ ನಿರಾಶ್ರಿತರ ಮಂದಿರಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪನೆಯಾಗಬೇಕು.

[ಬ] ಹೆಂಗಸರನ್ನು ಕದ್ದುಕೊಂಡು ಹೋಗುವುದು ಬಹುಳವಾಗಿರುವವರಿಂದ ರೈಲ್ವೆಯವರು ಸ್ತ್ರೀ ಅಧಿಕಾರಿಗಳನ್ನು ರೈಲ್ವೆ ಸ್ಟೇಶನದಲ್ಲಿ ನಿಯಮಿಸಿ ಸ್ತ್ರೀ ಪ್ರಯಾಣಿಕರಿಗೆ ಎಲ್ಲ ಅನುಕೂಲತೆಗಳನ್ನು ಕಲ್ಪಿಸಿ ಕೊಡುವಂತೆ ವಿನಂತಿಸಬೇಕು

೫] ಅನೈತಿಕ ವ್ಯಾಪಾರ. ಈ ಪರಿಷತ್ತು ಈಗ ಹಿಂದುಸ್ಥಾನದಲ್ಲಿ ಹೆಂಗಸರ ಮತ್ತು ಮಕ್ಕಳ ಅನೈತಿಕ ವ್ಯಾಪಾರದಬಗ್ಗೆ ಜಾರಿಯಲ್ಲಿರುವ ಕಾಯದೆಗಳಿಗೆ ಸಂತೋಷವನ್ನು ವ್ಯಕ್ತಪಡಿಸುವದಲ್ಲದೆ ಮತದಾರ ಸಂಘವನ್ನು ಈ ಕೆಳಗಿನ ವಿಷಯಗಳನ್ನು ಅಭ್ಯಸಿಸಬೇಕೆಂದು ಕೇಳಿಕೊಳ್ಳುತ್ತದೆ.

೧. ನಿರಾಶ್ರಿತ ಹೆಂಗಸರ ನೈತಿಕ ಶಿಕ್ಷಣಿಕ ಮತ್ತು ಕಾಯದೆಗೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳನ್ನು ಅಭ್ಯಸಿಸಬೇಕು.

೨. ವೇಶ್ಯಾಗೃಹಗಳನ್ನಿಟ್ಟುಕೊಂಡವರಿಗೆ ಪರಿಣಾಮಕಾರಿಯಾಗುವಂತೆ ಶಿಕ್ಷೆ ವಿಧಿಸುವದು. ಮತ್ತು ಅದಕ್ಕೆ ಸಂಬಂಧಪಟ್ಟ ಹೆಂಗಸರು ಮಕ್ಕಳನ್ನು ರಕ್ಷಣೆಮಾಡುವುದು. ಮತ್ತು ಈ ಬಗ್ಗೆ ಹೆಚ್ಚಿನ ತಿದ್ದುಪಡಿಗಳಾಗಬೇಕಿದ್ದರೆ ಅಮಲಿನಲ್ಲಿ ಬರುವಂತೆ ಪ್ರಯತ್ನಿಸಬೇಕು.

೩. ಎಲ್ಲಿ ನಿರಾಶ್ರಿತರ ಮಂದಿರವು ಸ್ಥಾಪಿತವಾಗಿಲ್ಲವೊ ಆ ಪ್ರದೇಶದಲ್ಲಿ ಕಾರ್ಯಕರ್ತರನ್ನು ತಯಾರಿಸಬೇಕು. ಈ ಬಗ್ಗೆ ಅನುಭವ ಪಡೆದು ಮತ್ತು ಕೆಲಸ ಮಾಡುತ್ತಿರುವ ಸ್ತ್ರೀಯರ ಸಹಾಯ ಪಡೆಯಬೇಕು.

೪. ಹೆಂಗಸರನ್ನು ಕಮ್ಮಿಯ್ಯದು. ಹೆಂಗಸರ ಮತ್ತು ಮಕ್ಕಳ ಕಳ್ಳತನವು ರಾತ್ರಿಯಲ್ಲಿ ಭಯಾನಕವಾದ ಪ್ರಮಾಣದಲ್ಲಿ ಆಗುತ್ತಿರುವುದರಿಂದ ಸರಕಾರವೂ ಮತ್ತು ಸಾರ್ವಜನಿಕರು ಈ ಅನೈತಿಕ ವ್ಯವಹಾರವನ್ನು ಬಂದುಮಾಡಬೇಕು.

[ಸಂಯುಕ್ತ-ಕರ್ನಾಟಕ]

ಮಿನಾಕ್ಷಿ ಭವನ ಕಾಫಿ ಕ್ಲಬ್

[ರಿಜಿಸ್ಟರ್ಡ್]

ಶಾಖೆಗಳು—

ಕಾಫಿ ಕ್ಲಬ್ ಬೆಂಗಳೂರು ರೋಡ್
ಊಟ ವಸತಿಗೃಹ ಬ್ರಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪದಲ್ಲಿ ತಯಾರಿಸಿದ ಸಿಹಿಖಾರದ ಫಲಹಾರವಸ್ತುಗಳು.

ಒಳ್ಳೆಯ ಊಟದ ವ್ಯವಸ್ಥೆ. ಧಾರಾಳವಾಗಿ ಗಾಳಿ, ಬೆಳಕು, ಬಿಸಿನ ಮಹಡಿಯ ಮೇಲಿನ ಕೊಠಡಿಗಳು ಅಧುನಿಕ ವ್ಯವಸ್ಥೆ

ಒಂದು ಸಲ ಬಂದು ಪರೀಕ್ಷಿಸಿರಿ.

V. M. Giri & Sons.,
BELLARY.
Prop: M. S. ACHARYA.
Dealers in Patent medicines, Best Coffee seeds
Pure Samalkot.
GINGELLY OIL.

ಕೈಮಗ್ಗದ ಉದ್ಯೋಗಗಳಿಗೆ ಸಹಾಯ ಮಾಡಬೇಕು.

ಮದ್ರಾಸು ಸರಕಾರದ ಸೂಚನೆಗಳು

ಇೀಗ ದೇಶದಲ್ಲಿ ಕೈಮಗ್ಗದ ನೇಕಾರರ ಸ್ಥಿತಿಯು ಅತ್ಯಂತ ನಿಕೃಷ್ಟವಾದ್ದರಿಂದ ಅಖಿಲಭಾರತ ದೃಷ್ಟಿಯಿಂದ ಈ ಸಮಸ್ಯೆಯನ್ನು ಬಿಡಿಸುವದು ಅತ್ಯವಶ್ಯವಾಗಿದೆಂಬದಾಗಿ ಮದ್ರಾಸು ಸರ್ಕಾರದವರು ಎಲ್ಲ ಪ್ರಾಂತಿಕ ಸರ್ಕಾರಗಳಿಗೆ ಮತ್ತು ಹಿಂದುಸ್ಥಾನ ಸರ್ಕಾರಕ್ಕೆ ಬರೆದುಕೊಂಡಿದ್ದಾರೆಂದು ತಿಳಿಯುತ್ತದೆ. ಕೈಮಗ್ಗದ ನೇಕಾರರಿಗೆ ಕೊಡುತ್ತಿದ್ದ ನಿಧಿಯನ್ನು ಹಿಂದುಸ್ಥಾನ ಸರ್ಕಾರದವರು ಹಾಗೆಯೇ ಕೊಡುತ್ತ ಹೋಗಬೇಕೆಂದೂ ಮದ್ರಾಸು ಸರ್ಕಾರದವರು ಬಿನ್ನವಿಸಿದ್ದಾರೆಂದು ತಿಳಿಯುತ್ತದೆ.

ಅವರು ತಮ್ಮ ಈ ಮನವಿಯಲ್ಲಿ ಈ ರೀತಿ ಬರೆದಿರುತ್ತಾರೆಂದು ತಿಳಿಯುತ್ತದೆ. 'ಕೈಮಗ್ಗದ ನೇಕಾರಿಕೆಯು ಉದ್ಯೋಗದಿಂದ ಒಂದು ಕೋಟಿ ಜನರ ಉದರ ನಿರ್ವಾಹವು ಸಾಗುತ್ತಿದೆ. ಒಕ್ಕಲತನದನ್ನನ್ನು ಬಿಟ್ಟರೆ ನೇಕಾರಿಕೆಯೇ ಅತ್ಯಂತ ಮಹತ್ವದ ಕೆಲಸವಾಗಿದೆ. ದೇಶದ ಆರ್ಥಿಕ ಸುಧಾರಣೆಗೆ ಇದೊಳ್ಳೆ ಸಾಧನವಾಗಿದೆ. ಹಿಂದುಸ್ಥಾನದ ಜವಳಿ ಉದ್ಯೋಗ ಧಂದೆಯಲ್ಲಿ ಇದೊಳ್ಳೆ ಮಹತ್ವದ ಭಾಗವು ಹಿಂದುಸ್ಥಾನದಲ್ಲಿ ಪ್ರತಿವರ್ಷ ಬೇಕಾಗುತ್ತಿರುವ ಬಟ್ಟೆಗಳಲ್ಲಿ ಗಂಜಿಕ್ಕೆ ಅರವಟ್ಟು ಬಟ್ಟೆಗಳು ಕೈಮಗ್ಗಗಳಿಂದ ಒದಗಿಸಲ್ಪಡುವನೆಂದು ಕಂಡುಬಂದಿದೆ. ಈ ಮಗ್ಗಗಳಿಂದ ಪ್ರತಿವರ್ಷ ಸರಾಸರಿ ಗುಂಡಾಂ ಲಕ್ಷ ಗಜ ಬಟ್ಟೆ ತಯಾರಾಗುತ್ತಿದೆ ಹಿಂದೀ ಗಿರಣಿಗಳಲ್ಲಿ ೩೬೬೦ ಲಕ್ಷ ಗಜ ಮತ್ತು ೯೪೦೦ ಗಜ ಬಟ್ಟೆ ಪರದೇಶೀ ಗಿರಣಿಗಳಲ್ಲಿ ತಯಾರಾದವು ಇಲ್ಲಿಗೆ ಬರುತ್ತದೆ. ಜವಳಿ ಉದ್ಯೋಗದಲ್ಲಿ ನೇಕಾರಿಕೆಯ ಧಂದೆಯು ಇಂದು ಅತ್ಯಂತ ವಿಪತ್ಸನ್ನಿವೇಶದಲ್ಲಿದ್ದರೂ ಅದಕ್ಕೆ ತಕ್ಕ ಪ್ರೋತ್ಸಾಹನೆ ಈ ವರೆಗೆ ಕೊಡಲ್ಪಟ್ಟಿಲ್ಲ. ತಮ್ಮ ಜಕಾತಿ ಧೋರಣೆಯನ್ನು ನಿರ್ಧರಿಸುವಾಗ ಹಿಂದುಸ್ಥಾನ ಸರ್ಕಾರದವರು ನೇಕಾರಿಕೆಯ ಉದ್ಯೋಗಕ್ಕೆ ಪ್ರೋತ್ಸಾಹನೆ ಕೊಟ್ಟರೆ ಹಿಂದೀ ಗಿರಣಿ ಉದ್ಯೋಗಕ್ಕೆ ಅಘಾತವೂ ಬಾರಬಹುದೆಂದು ಹುಳ್ಳು ಸುಳ್ಳೇ ಭಾವಿಸಿದರು. ಹಿಂದೀ ಗಿರಣಿಗಳಲ್ಲಿ ತಯಾರಾದ ಅರಿವೆಗಳಿಂದ ಕೈಮಗ್ಗಗಳಲ್ಲಿ ಅರಿವೆಗಳನ್ನು ತಯಾರಿಸುವ ವೆಚ್ಚವು ಹೆಚ್ಚಾಗಿರುವದಲ್ಲದೆ, ಈ ಬಟ್ಟೆಗಳೊಡನೆ ಸ್ಪರ್ಧೆ ಮಾಡಬೇಕಾದುದು ಅಪರಿಹಾರ್ಯವಾದ್ದರಿಂದ ಕೈಮಗ್ಗಗಳಲ್ಲಿ ತಯಾರಾದ ಬಟ್ಟೆಗಳ ಧರಗಳನ್ನು ಇಳಿಸಬೇಕಾಯಿತಾದ್ದರಿಂದ ನೇಕಾರರ ಗಳಿಕೆಯೂ ಕಡಿಮೆಯಾಯಿತು.

ಕೈಮಗ್ಗಗಳಿಗಿಂತ ಪಾವರಲೂಮುಗಳಲ್ಲಿ ಆಪ್ಪೊಂದು ಹೆಚ್ಚು ಲಾಭಗಳಿಲ್ಲೆಂದು ಸರಕಾರಕ್ಕೆನಿಸಹತ್ತಿದೆ. ಪಾವರಲೂಮುಗಳಿಂದ ಕೆಲಸ ಬೇಗನೆ ಮುಗಿವುದೆಂದು ಹೇಳಬಹುದು. ಆದರೆ ಆಪ್ಪೀ ವೇಳೆಯಲ್ಲಿ ಪಾವರಲೂಮಿನಲ್ಲಿ ತಯಾರಾದ ಅರಿವೆಗಿಂತ ಹೆಚ್ಚು ಅರಿವೆ ಕೈಮಗ್ಗಗಳಲ್ಲಿ ತಯಾರಾಗುವದು ಕಂಡುಬಂದಿದೆ ಜನಸಾಮಾನ್ಯರಿಗೆ ಅಗ್ಗ ಅರಿವೆ ಸಿಕ್ಕುವದು ಅವಶ್ಯವೆಂಬುದು ನಿರ್ವಿವಾದವಾದುದು

ಆದರೆ ಪಾವರಲೂಮುಗಳಲ್ಲಿ ತಯಾರಾದ ಬಟ್ಟೆಗಳು ಜನಸಾಮಾನ್ಯರಿಗೆ ಅಗ್ಗದರದಿಂದ ಸಿಗುವಂತೆ ಮಾಡುವಾಗ ಬಡಲಕ್ಷ್ಮವಲ್ಲಿ ನೇಕಾರರ ಆರ್ಥಿಕ ಪರಿಸ್ಥಿತಿಯನ್ನು ಲಕ್ಷಿಸುವದೂ ಅತ್ಯಂತವಶ್ಯವಾಗಿದೆ. ಬಡಜನರಿಗೆ ಬಹಳ ಅಗ್ಗವಾಗಿ ಬಟ್ಟೆಗಳಮೇಲೆ ಏನೂ ಜಕಾತಿಯನ್ನು ಕೂಡಿಸದೆ ಇರುವದು ಸುಲಭವಾರ್ಗವು. ಆದರೆ ಹಿಂದೀ ಜವಳಿ ಗಿರಣಿದಾರರು ಈ ಬಗೆಯ ಸುಧಾರಣೆಯನ್ನು ಮಾಡಲು ಒಪ್ಪರು.

ಆದರೆ ಒಬ್ಬ ನೇಕಾರನು ಕೇವಲ ೩೦ ರೂಪಾಯಿಗಳ ಬಂಡವಲು ಪಾಕೆ ತಿಂಗಳಿಗೆ ೧೫—೨೦ ರೂಪಾಯಿಗಳನ್ನು ಗಳಿಸಲು ಶಕ್ತನಿರುವನೆಂಬದನ್ನು ಗಮನಿಸುವದಗತ್ಯವಾಗಿದೆಂದು ಮದ್ರಾಸ ಸರಕಾರಕ್ಕೆ ನಿಸುತ್ತದೆ. ಹಿಂದೀ ಗಿರಣಿಗಳಿಗೆ ಜಕಾತಿಯಿಂದ ರಕ್ಷಣೆ ಸಿಕ್ಕಿದ್ದು, ಕಡಿಮೆ ಕೂಲಿಯಿದ ಬೇಕಾದಷ್ಟು ಕೂಲಿಕಾರರು ಅವರಿಗೆ ಸಿಕ್ಕುವರು. ಅಲ್ಲದೆ ಕಚ್ಚಾಮಾಲು ಬಹಳ ಅಗ್ಗವಾಗಿ ಬೇಕಾದಷ್ಟು ಸಿಗುತ್ತದೆ ಇದೆಲ್ಲ ಕಾರಣದಿಂದ ಹಿಂದೀ ಗಿರಣಿಗಳು ಕೈಮಗ್ಗದ ಉದ್ಯೋಗ ಧಂದೆಯನ್ನು ಹತ್ತಿಕ್ಕಲು ಬಹಳ ಬಟ್ಟೆಗೆ ಕಾರಣವಾಗಿವೆ.

ಗಿರಣಿ ಬಟ್ಟೆಗಳ ಮೇಲೆ ಕರಕೂಡಿಸಿ ಕೈಮಗ್ಗಗಳು ಮತ್ತು ಪಾವರಲೂಮುಗಳಉದ್ಯೋಗ ಧಂದೆಗಳಲ್ಲಿ ಒಂದು ಬಗೆ ವ್ಯವಸ್ಥೆ ಮಾಡಬೇಕೆಂದು ಸರಕಾರದ ಸೂಚನೆ. ಕೈಮಗ್ಗದ ನೇಕಾರರ ಸಮಸ್ಯೆಯು ಅಖಿಲ ಭಾರತದ ಸಮಸ್ಯೆಯಾಗಿದ್ದು ಅದೇದೃಷ್ಟಿಯಿಂದಲೇ ಅದನ್ನು ಬಿಡಿಸತಕ್ಕದ್ದು. ಪ್ರಾಂತಿಕ ಸರಕಾರ ಮತ್ತು ಮಧ್ಯವರ್ತಿಸರಕಾರಗಳ ಸಹಾಯವಿಲ್ಲದೆ ಲಕ್ಷಾವಧಿನೇಕಾರರ ಆರ್ಥಿಕ ದುಸ್ಥಿತಿಯನ್ನು ದೂರಗೊಳಿಸುವದು ಶಕ್ಯವಿಲ್ಲೆಂದು ನಮಗನಿಸುತ್ತದೆಂದು ಸರಕಾರದವರು ಕೊನೆಯಲ್ಲಿ ಅಭಿಪ್ರಾಯ ಪಟ್ಟರು.

ಮುಂಬಯಿಯಲ್ಲಿ ಮೈಸೂರು ನಿಯೋಗ ಗೋಷ್ಠಿ

ಮುಂಬಯಿ ಜೂನ್ 16.

ಶ್ರೀ ಹೆಚ್. ಸಿ. ದಾಸಪ್ಪ ಮತ್ತು ಶ್ರೀ ಕೆ. ಚಂಗಲರಾಯರೆಡ್ಡಿ-ಇವರು ನಿನ್ನೆ ಸಾರ್ವಾವನ್ನು ಬಿಟ್ಟರು ಕಾಂಗ್ರೆಸ್ 'ವರ್ಕಿಂಗ್ ಕಮಿಟಿ. ಸದಸ್ಯರಾದ ಶ್ರೀ ಶಂಕರರಾವ್ ದೇವ್ ಮತ್ತು ಶ್ರೀಶಕ್ತರ್-ಇವರುಗಳನ್ನು ಕಂಡು ಅಭಿಪ್ರಾಯ ನಿನಿಮಯ ಮಾಡಿಕೊಂಡರು ಈದಿನ ಅವರುಮುಂಬಯಿಗೆ ಆಗಮಿಸಿದರು. 'ಆಡಿಟರ್, ಆದ ಶ್ರೀ ಎಸ್. ಎಸ್. ಗುಬ್ಬಿಯವರ ಅತಿಥಿಗಳಾಗಿದ್ದಾರೆ.

ನಾಳೆಯ ದಿನ ಪಂಡಿತ ಜವಹರಲಾಲರನ್ನು ಭೇಟಿ ಮಾಡುವರು. ಸರದಾರ್ ಪಟೇಲರನ್ನು ಸಹ ನಾಳೆ ನೋಡುವ ನಿರೀಕ್ಷೆಯಿದೆ.

ಮೈಸೂರು ಕಾಂಗ್ರೆಸ್ ತಪ್ಪು ಮಂಡಲಕ್ಕೆ
ಪಂ|| ಜವಹರಲಾಲರ ಸಲಹೆ

'ಸಂಪೂರ್ಣ ಜವಾಬ್ದಾರೀ ಸರಕಾರವು ಬೇಕೆಂಬ ನಿಮ್ಮ ಬೇಡಿಕೆಯನ್ನು ಸ್ವಲ್ಪಾದರೂ ಕಡಮೆಮಾಡ ಬೇಡಿರಿ. ರಾಜಕೀಯ ಸುಧಾರಣೆಗಳು ಅತ್ಯಪ್ತಕರವಿದ್ದರೆ ಅವುಗಳನ್ನು ನಿರಾಕರಿಸಬಹುದು. ಆದರೆ ಸಾಮ್ಯ ಗ್ರಹಜಳವಳಿಯನ್ನು ಹೂಡಬೇಕಾದ ಅಗತ್ಯವಿಲ್ಲ. ಸುಧಾರಣೆಗಳನ್ನು ನಿರಾಕರಿಸಿದಮೇಲೂ ಸಂಸ್ಥಾನ ಪ್ರಜೆಗಳು ನಿರ್ಮಾಣ ಕಾರ್ಯಕ್ರಮವನ್ನು ಸಾಗಿಸಬಹುದು. ಸಾಂತರೀತಿಯ ಕಾರ್ಯಕ್ರಮದಲ್ಲಿ ಕಾರ್ಯಕರ್ತರು ತೆರೆಮರೆಯಲ್ಲಿರಬೇಕು. ಪ್ರಜೆಗಳು ಅದನ್ನು ನಿರ್ವಾಗತಿಸಬೇಕು. ಆಗ ಪ್ರಜಾ ಜಳವಳಿಗೆ ಶಕ್ತಿಯು ಹೊರಯುತ್ತದೆ. ಈ ಪ್ರಜಾ ಜಳವಳಿಯ ಪ್ರಶ್ನೆಯು ಸಂಸ್ಥಾನ ಪ್ರಜೆಗಳನ್ನೇ ಅವಲಂಬಿಸಿರುತ್ತದೆ.'

'ಸಂಸ್ಥಾನದ ಪ್ರಜೆಗಳು ಹಿಂದೂಸ್ಥಾನ ಮತ್ತು ಪರದೇಶಗಳಲ್ಲಿ ನಿತ್ಯವೂ ಏನು ನಡೆಯುತ್ತದೆಯೆಂಬುದನ್ನು ಲಕ್ಷ್ಯದಲ್ಲಿಟ್ಟು ತಮ್ಮ ಧೋರಣೆಯನ್ನು ನಿಶ್ಚಯಿಸಿಕೊಳ್ಳಬೇಕು. ನ್ಯೆಸೂರಿನಲ್ಲಿ ಸದ್ಯಕ್ಕೆ ಏನುಮಾಡಬೇಕಂಶವನ್ನು, ಅಲ್ಲಿಯ ಮುಖಂಡರೇ ನಿಶ್ಚಯಿಸಿಕೊಳ್ಳಬೇಕೆಂದು' ಪಂಡಿತ ಜವಹರಲಾಲರು ಹೇಳಿದರು.

ಫ್ರೆಂಚು ನೌಕೆಯು ಮುಳುಗಿಹೋಯಿತು

(4 ಅಧಿಕಾರಿಗಳು, 67 ಮಂದಿ ಇತರರು ಇದ್ದರು.)

'ಫೀನಿಕ್ಸ್' ಎಂಬ ಹೆಸರಿನ ಫ್ರೆಂಚು ಜಲಾಂತರ್ಗಾಮಿಯು (ಸಬ್ ಮೆರೀನ್) ಜಲದೊಳಗೆ ಸಂಚರಿಸುತ್ತಿದ್ದು ಏಕಾಏಕಿ ಮುಳುಗಿಹೋದದ್ದು ಬಹಳ ಕಳವಳಕ್ಕೆ ಕಾರಣವಾಗಿದೆ. ಬ್ರಿಟಿಶ ನಬ್‌ಮೆರೀನು ಮುಳುಗಿದ ಒಂದು ವಾರದೊಳಗಾಗಿಯೇ ಇದು ಸಂಭವಿಸಿತು. ಈ ನೌಕೆಯಲ್ಲಿ 4 ಅಧಿಕಾರಿಗಳು, 67 ಮಂದಿ ಇತರರೂ ಇದ್ದರೆಂದು ತಿಳಿದುಬಂದಿದೆ. ಇದು ತನ್ನ ಸಮತೂಕವನ್ನು ಕಳೆದುಕೊಂಡು ಸಮುದ್ರದ ತಳವನ್ನು ಮುಚ್ಚಿರಬೇಕೆಂದು ಊಹಿಸಲಾಗಿದೆ.

ಇಂಗ್ಲೆಂಡು-ರಷ್ಯಾ ಒಪ್ಪಂದ

ಯುದ್ಧಕಾಲದಲ್ಲಿ ಪರಸ್ಪರ ಸಹಾಯಮಾಡುವ ವಪ್ಪಂದವನ್ನು ಮಾಡಿಕೊಳ್ಳಲು ಬ್ರಿಟಿಶರ ಪರವಾಗಿ ಸ್ಟ್ಯಾಂಗ್ಟನರು ರಷ್ಯಾಕ್ಕೆ ಹೋಗಿರುವರು. ರಷ್ಯಾದವರು ನಾಲ್ಕು ಶರತ್ತುಗಳನ್ನು ಹಾಕಿರುವರೆಂದು ಊಹಿಸಲಾಗಿದೆ.

1) ಬಾಲ್ಟಿಕ್ ರಾಷ್ಟ್ರಗಳ ಸಂರಕ್ಷಣೆ.

2) ರಷ್ಯಾ, ಫ್ರಾನ್ಸು, ಬ್ರಿಟನ್ನುಗಳು ಬೇರೆಯವರೊಡನೆ ಯುದ್ಧದಲ್ಲಿ ತೊಡಗಿರಬೇಕಾದರೆ-ಮತ್ತಿತ್ತಿಂದು ರಾಷ್ಟ್ರದೊಡನೆ-ರಾಜೀಸಂಧಾನಮಾಡಿಕೊಳ್ಳಬಾರದು.

3) ಮಿಲಿಟರಿ ಏರ್ಪಾಟುಗಳು ವಿವಿಧ ಶಾಖೆಗಳವರೊಡನೆ ಮಾತುಕತೆಗಳು ಇವುಗಳು ಮುಗಿಯುವವರೆಗೂ ವಪ್ಪಂದವು ಜಾರಿಯಲ್ಲಿ ಬರಬಾರದು.

4) ಅಂತರ್ರಾಷ್ಟ್ರೀಯ ಸಭೆಯಲ್ಲಿ ಚರ್ಚಿಸಲ್ಪಡುವ ಅಂಶಗಳ ಮುಖ್ಯ ನಿರ್ಣಯ.

ಇಂಗ್ಲೆಂಡು-ರಷ್ಯಾದ ವ್ಯಾಪಾರದಬಗ್ಗೆ ವಪ್ಪಂದದ ಮಾತುಕತೆಗಳು ಇನ್ನುಮೇಲೆ ಸಾಗಬಹುದು.

ಅರಬ-ಜರ್ಮನೀ ಸಖ್ಯ

ಅರೇಬಿಯಾವ ಅರಸರಾದ ಇಬನೆಸಾಯ್ದ ಪ್ರತಿನಿಧಿ ಖಲೀದಲ್ ಹೂದರು ಜರ್ಮನಿಯ ಸರ್ವಾಧಿಕಾರಿ ಹಿಟ್ಲರನೊಡನೆ ದೀರ್ಘಕಾಲ ಸಂಭಾಷಿಸಿದರೆಂದೂ, ಜೊತೆಯಲ್ಲಿ ಟೀ ತೆಗೆದುಕೊಂಡರೆಂದೂ ತಿಳಿದುಬಂದಿದೆ

ಶ್ರೀ ಸುಭಾಷ ಚಂದ್ರ ಬೋಸರ ಬಾಷಣ

[illegible] ಲಾಹೋರು ಜೂ16

ಅಖಿಲ ಭಾರತ ಉಗ್ರಪಂಥದ ತರುಣರ ಸಮ್ಮೇಳನವು ಈದಿನ ರಾತ್ರಿ ಶ್ರೀ ವಿಶ್ವಂಭರದಯಾಳ್ ತ್ರಿಪಾಠಿಯವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಅನೇಕ ಮಂದಿ ಸ್ತ್ರೀಯರೂಸೇರಿ, ೨೦,೦೦೦ಕ್ಕೆ ಮಿರಿ ಜನರು ಸೇರಿದ್ದರು. ಭಾಷಣಕಾರರಲ್ಲಿ ಮುಖ್ಯರಾದವರೆಂದರೆ ಶ್ರೀ ಸುಭಾಷ್ ಚಂದ್ರ ಬೋಸರು.

ಹಲವು ಮಂದಿಗಳು ಟಿಕೆಟ್ ಕೊಂಡುಕೊಳ್ಳದೆ ಸಮ್ಮೇಳನ ಮಂಟಪಕ್ಕೆ ನುಗ್ಗಿದಾಗ ಕೊಂಚ ಕೋಲಾಹಲವಾಯಿತು. ನುಗ್ಗಾಟದಲ್ಲಿ ಇಬ್ಬರಿಗೆ ಚ್ಚಾಸ ತಪ್ಪಿತ್ತು.

ಡಾ|| ಸತ್ಯಪಾಲರು ಸಮ್ಮೇಳನದ ಆರಂಭೋತ್ಸವ ನಡೆಸಿದ ಮೇಲೆ ಶ್ರೀ ತ್ರಿಪಾಠಿಯವರು ಅಧ್ಯಕ್ಷ ಭಾಷಣವನ್ನು ಮಾಡಿದರು. ಇವರ ಭಾಷಣ ಕಾಲದಲ್ಲಿ ಸಭಿಕರು ಕರತಾಡನ ಮಾಡಿದರು.

ಶ್ರೀ ಸುಭಾಷ್ ಚಂದ್ರಬೋಸರು ಒಂದು ಘಂಟೆಗೆ ಮಿರಿ ಭಾಷಣ ಮಾಡಿದರು. 'ಫಾರ್ವರ್ಡ್' ಬ್ಲಾಕ್ ಸ್ಥಾಪನೆಮಾಡಬೇಕಾಗಿ ಬಂದ ಸಂದರ್ಭಗಳನ್ನು ವಿವರಿಸಿ 'ಯಾವ ರಾಜಕೀಯ ಚಳುವಳಿಯ ಇತಿಹಾಸವನ್ನೇ ತೆಗೆದುನೋಡಿದರೂ, ಒಡಕುಗಳಿಂದಲೇ ಕಾರ್ಯಸಾಧನೆಯಾಗಿರುವುದು. ತೋರಿಬರುತ್ತದೆ. ಕಾಂಗ್ರೆಸ್ಸಿಗೆ ವಿರುದ್ಧವಾಗಿ 'ಫಾರ್ವರ್ಡ್ ಬ್ಲಾಕ್' ರಚಿಸಲಾಗಿದೆ. ಇವೆರಡರಕ್ಕೂ ಇರುವ ಒಡಕಿನಿಂದಲೇ ನಿಜವಾದ ಐಕ್ಯಮತ್ಯವು ಸಾಧಿಸಲ್ಪಡುವುದೆಂದು ನಾನು ನಂಬಿದ್ದೇನೆ.

ಶ್ರೀ ಟಿ. ಸುಬ್ರಹ್ಮಣ್ಯಂರವರ ಸಂಚಾರ

(2-ನೇ ಪುಟದಿಂದ)

ಇಷ್ಟು ದಿನ ತೆರಿಗೆಯು ವಿಧಿಸುವ ದುರ್ದೈವ ವದಗಿದ್ದಿತು. ತೆರಿಗೆ ಕೊಡಲಿಕ್ಕೆ ಶಕ್ತರಾದ ಪಟ್ಟಣಿಗರಿಗೆ ತೆರಿಗೆಯ ಭಾರವೇ ಇದ್ದಿಲ್ಲ. ಕಾಂಗ್ರೆಸ್ ಸರಕಾರದವರು ಹಳ್ಳಿಯವರ ಭಾರವನ್ನು ತಗ್ಗಿಸಿ ಪಟ್ಟಣಿಗರಮೇಲೆ ಹಾಕುತ್ತಿರುವರು. ಎಲೆಕ್ಟ್ರಿಸಿಟಿ. ವಿನೋದಗಳು, ತಂಬಾಕಿನ ಉಪಯೋಗ ಪಟ್ಟಣಗಳಲ್ಲೇ ಹೆಚ್ಚು. ಆದರೆ ಇವುಗಳ ಮೇಲೆ ಅಷ್ಟೊಂದು ಪ್ರತಿಭಟನೆ ಇಲ್ಲ.

ಮೂರಾಟಕರ-

ಆದರೆ ಮೂರಾಟಕರವು ವಿಷಯಕ್ಕೆ ಅನೇಕ ವರ್ತಕರು ಪ್ರತಿಭಟಿಸಿರುವರು. ಈ ಕರವು ಸರಿಯಾಗಿ ತಿಳಿದುಕೊಳ್ಳಲ್ಪಟ್ಟಿಲ್ಲ. ತಾನು ಸ್ವತಃ ಹೊಲದಲ್ಲಿ ಉತ್ಪನ್ನಮಾಡಿ ಎಷ್ಟೇ ಮೂರಲಿ ವ್ಯಿತನಿಗೆ ಈ ಕರ ಕೊಡಬೇಕಾದುದಿಲ್ಲ. ಆದರೆ ವ್ಯಾಪಾರಮಾಡುವ ವರ್ತಕನು ಅಂದರೆ 10 ಸಾವಿರದಿಂದ 20 ಸಾವಿರದವರೆಗೆ ವರ್ಷಕ್ಕೆ 60 ತೆರಿಗೆ ಕೊಡಬೇಕು. ಹತ್ತು ಸಾವಿರದವರೆಗೂ ತೆರಿಗೆ ಇಲ್ಲ. ಇಂಥವರು ಹಳ್ಳಿಯಲ್ಲಿ ಎಷ್ಟುಜನರಿರುತ್ತಾರೆ? ಪಟ್ಟಣದ ವ್ಯಾಪಾರಸ್ಥನು - ಒಂದು ವರ್ಷಕ್ಕೆ 20 ಸಾವಿರ ರೂಪಾಯಿ ವ್ಯಾಪಾರಮಾಡಿದರೆ 60 ತೆರಿಗೆಯನ್ನು ಸರಕಾರಕ್ಕೆ ಯೇಕೆ ಕೊಡಬಾರದು? ಈ ಕರವನ್ನು ವರ್ತಕನೊಬ್ಬನೇ ಭರಿಸುವುದಿಲ್ಲ. ವರ್ತಕನೂ ಕೊಳ್ಳುವವರಮೇಲೆಲ್ಲಾ ಹಾಕುವನು. ದಾನ, ಧರ್ಮ, ದಲಾಲಿ-ಗೆ ಪಟ್ಟಿಹಾಕಿದಂತೆ ಈ ಮೂರಾಟಕರವಾದರೂ, ಈಗಾಗಲೇ ಪಟ್ಟಿಗಳಲ್ಲಿ ದಾಖಲಾಗುತ್ತಿದೆ.

ವರ್ತಕರಿಗೆ ವಿಶಾಲ ಹೃದಯ ಬೇಕು.

ಮದ್ರಾಸು ಪ್ರಾಂತ್ಯದಲ್ಲಿ ಮತ್ತು ಪದಾರ್ಥಗಳ ಆದಾಯವು 4 ಕೋಟಿ ಇವೆ. ಅಂದರೆ 16 ಕೋಟಿ ರೂ.ಗಳಷ್ಟು ಮತ್ತುಪದಾರ್ಥಗಳು ಜನರಿಂದ ಸೇವಿಸಲ್ಪಡುತ್ತಿವೆ. ಈ 16 ಕೋಟಿ ರೂಪಾಯಿಗಳು ಉಳಿತಾಯವಾದರೆ ವರ್ತಕನ ಸಾಂಪತ್ತಿಕ ಸ್ಥಿತಿಯೂ, ವ್ಯಾಪಾರವೂ ವೃದ್ಧಿಯಾಗುವುದಿಲ್ಲವೇ? ಅಲ್ಲದೆ ತನ್ನ ಬಡ ಸೋದರನು - ದಾರಿದ್ರ್ಯಕ್ಕೊಳಗಾಗಿ ಕುಡಿತದ ಸಂಕಟದಿಂದ ಪಾರಾಗಿ ದೇಶಕ್ಷೇಮಕ್ಕೆ ಸಾಧಕನಾಗಬೇಕೆಂದು ವರ್ತಕನು ಅಪೇಕ್ಷಿಸಬಾರದೇ? ವರ್ತಕರಿಗೆ ವಿಶಾಲ ಹೃದಯಬೇಕು. ಇಡೀ ಹಳ್ಳಿಗರ ಹಿತಕ್ಕಾಗಿ ತಮ್ಮ ಅಲ್ಪ ಕಷ್ಟಗಳನ್ನು ಸಹಿಸಿಕೊಳ್ಳಬೇಕು. ಸ್ವಲ್ಪಮಟ್ಟಿಗಾದರೂ ತ್ಯಾಗಮಾಡಬೇಕು. ಕೆಲವರ್ಷಗಳಲ್ಲಿಯೇ ಇಂಥಾ ಸದ್ಬುದ್ಧಿಯು ತನಗೆ ತಾನೇ ಹುಟ್ಟುವುದೆಂದು ನನ್ನ ನಂಬಿಕೆ.

ಎಲ್ಲರೂ ಕಾಂಗ್ರೆಸ್ ಸೇರಿರಿ. ತತ್ವಗಳನ್ನನುಸರಿಸಿರಿ. ಶಿಸ್ತನ್ನು ಪಾಲಿಸಿರಿ.

ಇಡೀ ಹಿಂದೂಸ್ಥಾನದ ಹಿತದ ದೃಷ್ಟಿಯಿಂದ ಅದೃಷ್ಟದಿಂದ ಸ್ವಾತಂತ್ರ್ಯದ ಸದುದ್ದೇಶದಿಂದ ದುಡಿಯುತ್ತಲಿರುವ ಪ್ರಜಾ ಪ್ರತಿನಿಧಿ ಕಾಂಗ್ರೆಸ್ ಸಂಸ್ಥೆಯನ್ನು - ಎಷ್ಟರೊ ಸೇರಬೇಕಾದುದು ಕರ್ತವ್ಯವಾಗಿದೆ. ಅದರೆ ತಮ್ಮ ಸ್ವಾರ್ಥಲಾಭಗಳ ಉದ್ದೇಶದಿಂದ ಸೇರಿ ಸಿಸ್ತನ್ನು ಕೆಡಿಸುವುದಕ್ಕಿಂತ ದೂರವಿರುವದು ಲೇಸು ಜಿಲ್ಲಾ ಬೋರ್ಡು-ಮುನಿಸಿಪಾಲಿಟಿಗಳ ಕಥೆಯನ್ನು ಕೇಳಿ ನನಗೆ ಅತಿಶಯ ದುಃಖವಾಗಿದೆ. ಕಾಂಗ್ರೆಸ್ಸಿಗೆ ಸೇರಿದ ಮೇಲೆ ಅದರ ತತ್ವಗಳನ್ನು ಅಕ್ಷರಶಃ ಅನುಸರಿಸಬೇಕು. ಶಿಸ್ತನ್ನು ಪಾಲಿಸಬೇಕು. ನಮ್ಮ ನಾಯಕನಾದ ಗಾಂಧಿ ಮಹಾತ್ಮನ ಉಚ್ಚ ಆದರ್ಶವನ್ನು ಲಕ್ಷ್ಯದಲ್ಲಿಟ್ಟು - ಮಾತೃಭೂಮಿಯ ಸೇವೆಯನ್ನು ಯಥಾಶಕ್ತಿ ಸಲ್ಲಿಸಬೇಕು.

Tobacco Tax Act.

ತಂಬಾಕಿನ—ಆಯ್ತೆ.

ವ್ಯಾಪಾರಿಗಳಿಗೆ—ಸೂಚನೆಗಳು.

ಈ ಕಾಯ್ದೆಯು 1ನೇ ಆಗಸ್ಟು 1939 ರಿಂದ ಜಾರಿಯಲ್ಲಿ ಬರುವುದು. ಆದಿನದಿಂದ ಯಾರೇ ಆಗಲಿ ತಂಬಾಕಿನ ಸಟ್ಟು ವ್ಯಾಪಾರವನ್ನು ಲೈಸನ್ಸು ಪಡೆಯದೆ ಮಾಡಬಾರದು. ದಲ್ಲಾಳಿಯಿಂದಾಗಲಿ ಉತ್ಪನ್ನ ಮೂಲಕವಾಗಲಿ ಇದರಲ್ಲಿ ತೊಡಗಬಾರದು. ಶಿಗಾರ, ಚಿರೂಟ, ಶಿಗರೇಟು-ಶಿಗರೇಟಿನ ತಂಬಾಕು, ಪೈಪ್-ತಂಬಾಕು, ಬೀಡಿ ನಶ್ಯ ಇವುಗಳನ್ನು ಮಾರುವ ಚಿಲ್ಲರೆ ವ್ಯಾಪಾರಿಯಾಗಲಿ, ಬೀಡಿಯಲ್ಲಿ ಮಾರುವ ಹಾಕರ್ ಆಗಲಿ ಲೈಸನ್ಸು ಪಡೆಯಬೇಕು. ಬಾಯಲ್ಲಿ ಜಗಿಯುವ ತಂಬಾಕಿನ ಚಿಲ್ಲರೆ ವ್ಯಾಪಾರಕ್ಕೆ ಲೈಸನ್ಸು ಬೇಕಿಲ್ಲ ಇದರಲ್ಲಿ ಕಾಣಿಸಿರುವ ನಿಯಮಗಳನ್ನು ಭಂಗಿಸಿದವರನ್ನು ಆಗಸ್ಟು 1 ರಿಂದ ಪ್ರಾಸಿಕ್ಯೂಷನ್ ಮಾಡಲಾಗುವುದು.

ಲೈಸನ್ಸು ಪಡೆಯಲಿಚ್ಛೈಯುಳ್ಳವರು ಆಯಾ ತಾಲೂಕಿನಲ್ಲಿ ಈ ಕೆಳಗೆ ಕಂಡವರಿಗೆ ಅರ್ಜಿಯನ್ನು ಇಟ್ಟುಕೊಳ್ಳಬೇಕು

ಅಸಿಸ್ಟೆಂಟು ಕಮರ್ಶಿಯಲ್ ಟ್ಯಾಕ್ಸು ಆಫೀಸರು c/o ತಹಶಿಲ್ದಾರು

..... ತಾಲೂಕು

ಕಮರ್ಶಿಯಲ್ ಟ್ಯಾಕ್ಸು ಆಫೀಸರವರು ಅಚ್ಚು ಹಾಕಿದ ಫಾರಂಗಳನ್ನು ಅರ್ಜಿದಾರರಿಗೆ ಕಳುಹಿಸುವರು. ಸಂಬಂಧಿಸಿದ ಸಟ್ಟು ವ್ಯಾಪಾರಿಗಳಿಗಾಗಲಿ, ಚಿಲ್ಲರೆ ವ್ಯಾಪಾರಗಳಿಗಾಗಲಿ ಅಚ್ಚು ಫಾರಂಗಳು ತಲಪಿದ 15 ದಿನಗಳೊಳಗಾಗಿ ಫೀ-ಸಮೇತವಾಗಿ ಸದರಿಯವರಿಗೆ ಕಳುಹಿಸಬೇಕು. ಅರ್ಜಿ ಇಟ್ಟುಕೊಳ್ಳಲಿಕ್ಕೂ ಸ್ಟಾಂಪು ಅನಾವಶ್ಯಕ - ಅಚ್ಚು ಫಾರಂ ಬಂದಮೇಲೂ ಸ್ಟಾಂಪು ಹಚ್ಚುವುದನಾವಶ್ಯಕ. ಆಗಸ್ಟು 1ನೆಯ ತಾ. ನೊಳಗಾಗಿ ಅರ್ಜಿ ಇಟ್ಟುಕೊಳ್ಳುವುದು ಒಳ್ಳೆಯದು. ಉತ್ತರ ಬರದಿದ್ದು ಅಧಿಕಾರಿಗಳು ತಗಾದೆಗೆ ಬಂದರೆ ಲೈಸನ್ಸಿನಾಗಿ ಅರ್ಜಿ ಇಟ್ಟುಕೊಳ್ಳಲಾಗಿದೆಯೆಂದು ತಿಳಿಸಬೇಕು.

ಜ. ಯಾಕೂಬ್ ಹಸ್ರತರವರು.

ಮದ್ರಾಸ್ ಡೆವಲಪ್‌ಮೆಂಟು ಪಾರ್ಟಿಯ ಮಂತ್ರಿಗಳಾದ ಜ. ಯಾಕೂಬ್ ಹಸ್ರತರವರು ಹೊಸಪೇಟೆಯ ಸಮೀಪದಲ್ಲಿ ಕಟ್ಟಬೇಕೆಂದಿರುವ ತುಂಗಭದ್ರಾ ಜಲಾಶಯದ ಸ್ಥಳವನ್ನು ನೋಡಿ ತೆರಳಿದರು. ಬಳ್ಳಾರಿಯ ಉಪಾಹಾರ ಸಮಾವೇಶವಲ್ಲಿ ಯೋಜನೆಯು ಶೀಘ್ರವಾಗಿ ಬದುವೆಂದು ಭರವಸೆ ಕೊಟ್ಟರು.

ನವ ಭಾರತ

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸು, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಕೀಲು ಪ್ರತಿಯೊಂದು ವಸ್ತುನಿನ ಮೇಲೆ ಇರುತ್ತದೆ ನಮ್ಮ ಹೆಸರಿರುವ ಹೊರತು ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ನೇಪ್ಪೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ ವೆನ್ಸ ಎಂಡ್ ವಾಚುಗಳೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಮ್ಮೆಸಲ ದಯವಿಟ್ಟು ಬಂದು ಪರೀಕ್ಷಿಸಿರಿ

Patent medicines, Tonics, injections
Ayurvedic Preparations &
Oilman stores —Moderate Rates
Trial earnestly solicited

M. S. V. Bros,

Car Street, BELLARY.

ಇಂಗ್ಲೀಷ್ ಔಷಧಗಳು, ಇಂಜೆಕ್ಷನ್ ಮತ್ತು ಇತರ ಆಯುರ್ವೇದೀ ಔಷಧಗಳು, ಸ್ವೀಷನು ವಗೈರೆ ಸುಲಭ ಬೆಲೆಯಲ್ಲಿ ದೊರೆಯುತ್ತವೆ.

ಎಂ. ಯಸ್. ವಿ. ಬ್ರದರ್ಸ್,
ತೇರು ಬೀದಿ, ಬಳ್ಳಾರಿ.

Sarada Ink. [Regd]

Awarded Gold Medal and Certificate of Merit at the All India Swadeshi Exhibition Bellary.

For Fountain Pens and Steel Pens
Blue Black, Red, Blue, Green & Violet

SARADA INK WORKS, (Regd.)
K V & Sons, BELLARY

ಶಾರದಾಇಂಕ್ (ರಿಜಿಸ್ಟರ್ಡ್)

ಬಳ್ಳಾರಿ ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ ಸುವರ್ಣ ಪದಕವನ್ನೂ, ಯೋಗ್ಯತಾ ಪತ್ರವನ್ನೂ ಪಡೆದಿದೆ ಫೌಂಟನ್‌ಪೆನ್ನುಗಳಿಗೂ, ಇತರ ಲೇಖನಿಗಳಿಗೂ, ಉಪಯೋಗಿಸಲು ಶ್ರೇಷ್ಠವಾದ ಬ್ಲೂ ಬ್ಲಾಕ್ ಕೆಂಪು. ನೀಲಿ ಹಸರು ಸ್ಟೈಲೆಟ್ ವಗೈರೆ ಇಂಕ್ಗಳಲ್ಲಿ ದೊರೆಯುತ್ತವೆ

ಕೆ. ವಿ ಅಂಡ್ ಸನ್ಸು, ಬಳ್ಳಾರಿ

The Lakshmi Medical Stores.

Chemists & Druggists, Car Street, Bellary.

ದಿ ಲಕ್ಷ್ಮೀ ಮೆಡಿಕಲ್ ಸ್ಟೋರ್ಸ್

ಔಷಧಾಲಯ ತೇರು ಬೀದಿ, ಬಳ್ಳಾರಿ.

ನಮ್ಮಲ್ಲಿ ಇಂಗ್ಲೀಷ್ ಔಷಧಗಳು, ಇಂಜೆಕ್ಷನ್, ಅಂಪೂಲ್ಸ್, ಟಿಂಕ್ಚರ್ಸ್, ಶಸ್ತ್ರ ಚಿಕಿತ್ಸೆಗೆ ಬೇಕಾಗುವ ಶಸ್ತ್ರಗಳು. ಅಸ್ಪತ್ರೆಯ ಜೀಡಿಕೆಗಳು ಮತ್ತು ಅಸಂಬಂಧ ಔಷಧಗಳೆಲ್ಲವೂ ದೊರೆಯುತ್ತವೆ.

ವಿವಿಧ ವರ್ಗದ 'ಲಕ್ಷ್ಮೀ-ಸಿರಪ್' ಸಾಸಗಳನ್ನು ನಾವೇ ತಯಾರಿಸುತ್ತೇವೆ ನಮ್ಮ ಔಷಧಾಲಯವು ಎಲ್ಲ ರಾತ್ರಿಯೆಲ್ಲಾ ತೆಗೆದಿರುತ್ತದೆ. ದರಗಳು ಸುಲಭ ಪರೀಕ್ಷಿಸಿ ತೃಪ್ತಿ ಹೊಂದಿರಿ.

NAVA BHARAT, BELLARY.

(With which is incarporated 'Congress Bulletin')

The leading Nationalist Weekly

'ನವ ಭಾರತ ಬಳ್ಳಾರಿ.

[ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.]

The Rates of Subscription.	ಚಂದಾ ವಿವರ
Annual	ವರ್ಷ
Local 1—8—0	ಸ್ಥಳದವರಿಗೆ 1-8-0
Moffusil 2—0—0	ಪರಸ್ಥಳದವರಿಗೆ 2-0-0
Half Yearly	6 ತಿಂಗಳು
Local 1—0—0	ಸ್ಥಳದವರಿಗೆ 1-0-0
Moffusil 1—4—0	ಪರಸ್ಥಳದವರಿಗೆ 2-0-0

Nava Bharat, Bellary.

REG. NO. M. 3937.

Sri _____

Printed at Vittal Press, Car Street Edited & Published by T. B. Keshava Rao
BELLARY.

'ವಂದೇ ಮಾತರಂ'

THE ನವ ಭಾರತ

(ಇದರಲ್ಲಿ 'ಕಾಂಗ್ರೆಸ್' ಬುಲೆಟಿನ್ ಸಮಾವೇಶವಾಗಿದೆ)

ಉಜ್ವಲ - ರಾಷ್ಟ್ರೀಯ ವಾರ ಪತ್ರಿಕೆ.

ಸಂಪಾದಕ:— ಟಿ. ಪಿ. ಕೇಶವರಾವ್.

ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ.

ಸಂಪುಟ ೧ | ಬಳ್ಳಾರಿ. ಜೂಲೈ ೧೧ನೇ ಶನಿವಾರ ೧೯೨೯. | ಸಂಚಿಕೆ ೧೮

ಸಂಸ್ಥಾನ ಸತ್ಯಾಗ್ರಹ [ಮ. ಗಾಂಧಿ.]

[7ನೇ ಪುಟವನ್ನು ನೋಡಿರಿ]

★ ಎಂಪೈರ್ ಆಫ್ ಇಂಡಿಯಾ ★

ಲೈಫ್ ಅಶೂರೆನ್ಸು ಕಂಪನಿ ಲಿಮಿಟೆಡ್.

ಸ್ಥಾಪಿತ 1897.

ಉದಾಹರವಾದ ಯೋಜನೆಗಳು.

ಆಸ್ತಿಯ ಮೊತ್ತ	ರೂ.	5,18,00,000	ಗಿಂತಲೂ ಹೆಚ್ಚಿದೆ.
ಚಾರಿಯಲ್ಲಿರುವ ಪಾಲಿಸಿಗಳ ಮೊತ್ತ	,,	14,29,00,000	,,
ವಾರಸುದಾರರಿಗೆ ಸಲ್ಲಿಸಿದ ಹಣ	,,	6,15,00,000	,,

ಭವಿಷ್ಯವಲ್ಲಿ ಕುಟುಂಬ ಭರಣಕ್ಕೇರ್ಪಾಟು ಮಾಡಬೇಕಾದುದು. ಪ್ರತಿಯೊಬ್ಬ ಕುಟುಂಬೀಕನ ಕರ್ತವ್ಯವಾಗಿದೆ ವಿಶೇಷ ಪರಿಸ್ಥಿತಿಯಿಂದ ಸಂಪಾದನೆಯು ಕುಗ್ಗಿ ಹೋಗುವ ದಿನಗಳು ಒರಬಹುದು. ಅಂಥಾ ಕಾಲಕ್ಕೋಸ್ಕರ ಜೀವ ವಿಮೆಯ ಪಾಲಿಸಿಯನ್ನು ರಕ್ಷಿಸಬೇಕಾದುದು ಅತ್ಯಗತ್ಯವಾಗಿದೆ

ಮುಖ್ಯ ಕಾರ್ಯಾಲಯ.
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

★

ಶಾಖೆ.
152/53 ಕಮರ್ಶಿಯಲ್ ಸ್ಟ್ರೀಟ್
ಬೆಂಗಳೂರು.

ಶನಿವಾರ ಜುಲೈ 1, 1939.

ಜಿಲ್ಲಾ ಬೋರ್ಡು ಕಾಂಗ್ರೆಸ್ ಸದಸ್ಯರ ಕರ್ತವ್ಯ

ಬಳ್ಳಾರಿ ಜಿಲ್ಲಾ ಬೋರ್ಡಿನ ಕಳೆದ ಚುನಾವಣೆಗಳಲ್ಲಿ ಬಹು ಸಂಖ್ಯಾಕ ಸದಸ್ಯರು ಅಂದರೆ 39 ಜನರು ಕಾಂಗ್ರೆಸ್ ಟಿಕೇಟಿನಮೇಲೆ ಆರಿಸಿಬಂದರು. ಕಾಂಗ್ರೆಸ್ ಆಶ್ರಯದಿಂದ ಚುನಾವಣೆಯ ದುಂದು ಖರ್ಚು ನಿಗುವುದೆಂದು ಅನೇಕರು ಅಭಿಪ್ರಾಯಪಟ್ಟರು. ಅನೇಕ ವರ್ಷಗಳಿಂದ ಕಾಂಗ್ರೆಸ್ ಸಂಸ್ಥೆಯಲ್ಲಿ ಮಾಡಿದ ಸ್ವಾರ್ಥತ್ಯಾಗವಾಡಿ ಯಾವ ಪದವಿಗಳಿಗೂ ಆಶೆ ಪಡದೆ-ಕಾಂಗ್ರೆಸ್ ಕೀರ್ತಿಯೇ ದೇಶ ಹಿತಕ್ಕೆ ಸಾಧಕವೆಂದು ಬಯಸಿದ ಕಾರ್ಯಕರ್ತರಿಗೆ ಒಂದು ವಿಧದಲ್ಲಿ ಸಂತೋಷ, ಸಮಾಧಾನ, ಆದರೆ ಕಳವಳದ್ವನಿಯಾದುದೂ ಆ ಧ್ಯಕ್ಷ ಚುನಾವಣೆಯ ಕಾಲದಲ್ಲಿ ಈ ಅಶಿಯು ಬಯಲಾಯಿತು. ಸುಮಾರು 11 ಜನ ಸದಸ್ಯರು ಕಾಂಗ್ರೆಸ್ ವಿರೋಧಿಗಳಿಗೆ ತಮ್ಮ ಮತವನ್ನು ಕೊಟ್ಟರು. ಕಾಂಗ್ರೆಸ್ ನ ಪರವಾಗಿ ಅಧ್ಯಕ್ಷರು ಚುನಾವಣೆಯಾದ ಮೇಲಾದರೂ, ಪರಿಸ್ಥಿತಿಯು ಸುಧಾರಿಸುವುದೆಂಬ ಆಶೆಯಾಗಿತ್ತು.

ಕಾಂಗ್ರೆಸ್ ಸಂಸ್ಥೆಯು ತತ್ವ, ನಿಷ್ಠೆ, ಮತ್ತು ತನ್ನ ಕಾರ್ಯಕ್ರಮದಿಂದ ಇಡೀ ದೇಶದಲ್ಲಿ ಪ್ರಬಲವಾದ ಸಂಸ್ಥೆಯಾಗಿ ಬಲಿಷ್ಠವಾದ ಬ್ರಿಟಿಶ ಸಾಮ್ರಾಜ್ಯವನ್ನು ಬಗ್ಗಿಸಿದೆ. ಇಂಥಾ ಸಂಸ್ಥೆಯ ಆಶ್ರಯವನ್ನು ಹೊಂದಿ ತಮ್ಮ ಸ್ವಾರ್ಥಗಳನ್ನು ಸಾಧಿಸಿಕೊಳ್ಳಲು ಯಾವಾಗಲೂ ಜನರು ಕಾದಿರುತ್ತಾರೆ. ಕಾಂಗ್ರೆಸ್ 8 ಪ್ರಾಂತ್ಯಗಳಲ್ಲಿ ಅಧಿಕಾರವನ್ನು ಸ್ವೀಕರಿಸಿದಮೇಲೆ ಈ ಸ್ವಾರ್ಥಿಗಳ ಪ್ರಾಬಲ್ಯವು ಅಧಿಕವಾಗಿ ಕಾಂಗ್ರೆಸ್‌ನಲ್ಲಿ ಕೊಳೆಯು ಅಧಿಕವಾಗುತ್ತಾ ನಡೆದಿದೆ. ಕಳೆದ ಎ. ಐ. ಸಿ. ಸಿ ಸಭೆಯಲ್ಲಿ ಸೂಚಿತವಾದ ಘಟನಾವಳಿಗಳು ತೀರ್ಥದಲ್ಲಿಯೇ ಬಾರಿಗೆ ಬರುವುದೆಂದು ನಾವು ನಂಬುತ್ತೇವೆ.

ಜಿಲ್ಲಾ ಬೋರ್ಡು ಕಾಂಗ್ರೆಸ್ ಸದಸ್ಯರು ಕಾಂಗ್ರೆಸ್ಸಿನ ಪ್ರತಿಭೆಯನ್ನು ಬೆಳೆಸಿ ತನ್ಮೂಲಕ ಗ್ರಾಮ-ಹಿತ ಉದ್ಯೋಗಗಳನ್ನು ಮಾಡಲು ಅಧ್ಯಕ್ಷರಿಗೆ ಯಾವ ವಿಧವಾದ ಸಹಾಯ-ಸಹಕಾರಗಳನ್ನು ನೀಡಲಿಲ್ಲ. ಪ್ರತಿಯೊಬ್ಬ ಸದಸ್ಯನೂ ತನಗೆ ಸೇರಿದ ಕ್ಷೇತ್ರದಲ್ಲಿ ಇಂಥಾ ಕೆಲಸಗಳಾಗಬೇಕೆಂದು, ಅಪೇಕ್ಷಿಸಿದರೆ ಅದು ಹೇಗಾಗಬೇಕು? ಸಾಧ್ಯಾಸಾಧ್ಯಗಳನ್ನೂ, ಇಲಾಖೆಯ ಹಿತವನ್ನೂ, ನ್ಯಾಯವನ್ನೂ ವಿಮರ್ಶಿಸಬೇಕಲ್ಲವೇ? ಇಪ್ಪತ್ತೈದು ದೂರದೂರವಿರುವ ಕೇಳಿಕೆಗಳನ್ನು ಮಾಡುವುದೇ ಕಾರಣವೆನ್ನಬಹುದು. ಅಧ್ಯಕ್ಷರ ಕಷ್ಟಗಳನ್ನೂ, ಅವರಿಗಿರುವ ಅಧಿಕಾರಗಳನ್ನೂ ಗಮನಿಸಬೇಕಲ್ಲವೇ?

ಅಧ್ಯಕ್ಷರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿರುವರೇ ಎಂಬ ಸೊಲ್ಲು ಅಲ್ಲಲ್ಲಿ ಕೇಳಿಬರುತ್ತಲಿದೆ. ಸದಸ್ಯರೆಲ್ಲಾ ಸಹಕಾರ ನೀಡಿ-ಇಡೀ ಜಿಲ್ಲಾ ಹಿತವ ದೃಷ್ಟಿಯಿಂದಸಲಹೆಗಳನ್ನು ಕೊಟ್ಟರೆ ಅಧ್ಯಕ್ಷರು ತಮ್ಮ ಕರ್ತವ್ಯಗಳನ್ನು ನಿಷ್ಪಕ್ಷಪಾತವಾಗಿ ನಿರ್ವಹಿಸುವುದರಲ್ಲಿ ಕಷ್ಟವಾಗುವುದಿಲ್ಲ.

ಅಧ್ಯಕ್ಷರು ದೋಷರಹಿತರೆಂದು ನಾವು ಹೇಳುವುದಿಲ್ಲ. ಅವರು ಕಾಂಗ್ರೆಸ್ಸಿಗೆ ಸೇರಿದವರೆಂಬ ಕಾರಣದಿಂದ, ಅವರು ಮಾಡಿದ ಕಾರ್ಯಗಳನ್ನೆಲ್ಲಾ ನಾವು ಸಮರ್ಥಿಸುವುದಿಲ್ಲ. ಆದರೆ ಕಾಂಗ್ರೆಸ್ ಗೌರವವನ್ನು ಕಾಪಾಡುವ ದೃಷ್ಟಿಯಿಂದ ಐಕಮತ್ಯವು ಅವಶ್ಯಕವೆಂದು ಒತ್ತಿ ಹೇಳುತ್ತೇವೆ.

ಕಾಂಗ್ರೆಸ್ ಸದಸ್ಯರಲ್ಲಿ ಭಿನ್ನಾಭಿಪ್ರಾಯಗಳಿಗೆ ಕಾರಣವಾಗಬಾರದು. ಒಡಕು ಹುಟ್ಟಬಾರದು. ತಮಗೆ ಅಸಮಾಧಾನದ ಯಾವ ಸಂಗತಿಗಳಿದ್ದರೂ, ಪಾರ್ಟಿ ಮೀಟಿಂಗಿನಲ್ಲಿಟ್ಟು ಬಗೆಹರಿಸಿಕೊಳ್ಳಬೇಕು ಕಾಂಗ್ರೆಸ್ ಪಾರ್ಟಿ ಸದಸ್ಯರು ಈ ಅನಿತ್ಯ ತ ಮತ್ತು ಕಲುಷಿತ ವಾತಾವರಣದಿಂದ ಪಾರಾಗಬೇಕೆಂದು ನಮ್ಮ ಪ್ರಾರ್ಥನೆ.

ಶ್ರೀ ಬಾಸಿನೀಡುರವರು.

ಮದ್ರಾಸು ಸರ್ಕಾರದ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಬಾಸಿನೀಡುರವರು 29ನೆಯ ತಾ. ಸ್ವಾತಃಕಾಲ ಬಂದರು. ಕಮೀಶನರ್ ಹೆಲ್ತ್ಆಫೀಸರವರೊಡನೆ - ಮ್ಯುನಿಸಿಪಲ್ ತೋಟ ಮತ್ತು ಕಸಗುಡಿಸುವವರಿಗೆ

ಶ್ರೀನಿವಾಸ ಕುಮಾರ

ಶ್ರೀ. ಟಿ ರಾಘವ ಇವರ ಆಶ್ರಯಕ್ಕೆ ಈ ಅನಾಥಬಾಲಕನು 5 ವರ್ಷಗಳಕೆಳಗೆ ಬಂದನು. ಅವರ ಸಾಕುಮಗನಾದನು. ಮಧುರವಾದ ಕಂಠ, ಆಕರ್ಷಣೀಯವಾದ ನಟನೆಯಿಂದ ನಾಟ್ಯಪ್ರಪಂಚದಲ್ಲಿ ಹೆಸರು ಪಡೆದನು, ಇಂಗ್ಲೀಷ್, ಕನ್ನಡ, ತೆಲುಗು, ಹಿಂದೀ ಭಾಷೆಗಳ ಜ್ಞಾನವಿದ್ದಿತು. ಇಂಥಾ ತೇಜಸ್ವೀ ಬಾಲಕನನ್ನು ಕಳೆದುಕೊಂಡ ಶ್ರೀ ರಾಘವ ಇವರ ಕುಟುಂಬಕ್ಕೆ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾ ಮೃತನ ಆತ್ಮಕ್ಕೆ ಶಾಂತಿಯು ಲಭಿಸಲೆಂದು ಕೋರುತ್ತೇವೆ.

ಎರ್ಪಡಿಸಿದ ಸೌಲಭ್ಯಗಳನ್ನು ವಿಚಾರಿಸಿಕೊಂಡು ಸಲಹೆ ಸೂಚನೆಗಳನ್ನು ಕೊಟ್ಟು ಕಂಪ್ಲಿ ಡಿಪೋ - ಕೈಮಗ್ಗದ ಬಟ್ಟೆ ಡಿಪೋ ನೋಡಿ - ಸಾಯಂಕಾಲ ಶ್ರೀ ಬಿ. ಭೀಮರಾಯರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್‌ನ ಚರಿತ್ರೆ - ಕಾಂಗ್ರೆಸ್ ಸರಕಾರವವರು ಇಲ್ಲಿಯವರೆಗೆ ಮಾಡಿದ ಕಾರ್ಯಗಳಬಗ್ಗೆ ವಿಸ್ತಾರವಾಗಿ ಪ್ರಸಂಗಿಸಿದರು.

ಶ್ರೀ ವಿ ಯಂ. ಗಿರಿಯವರು ಎ. ಐ ಸಿ. ಸಿ. ನಿರ್ಣಯಗಳಮೇಲೆಯೂ - ಡಾಕ್ಟರ್ ಲಕ್ಷ್ಮಿದೇವಿಯವರು ತಕಾವಿ ಸಾಲಗಳ ವಸೂಲಿಯನ್ನು ಮುಂದಕ್ಕೆ ಹಾಕುವುದರವಶ್ಯಕತೆಯಮೇಲೂ ಉಪನ್ಯಾಸಕೊಟ್ಟರು.

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಕಮಿಟಿ

1—2—1938 ರಿಂದ 13—4—1939ರ ವರೆಗೆ ಆಯ—ವ್ಯಯ ಪಟ್ಟಿ.

ಆಯ	
ಬಳ್ಳಾರಿಯಲ್ಲಿ ಚಂದಾ	105-0-0
ಬಳ್ಳಾರಿ ನಗರ ಚುನಾವಣೆ ಸಮಿತಿಯಲ್ಲಿ ಉಳಿದ ಹಣ	18-2-9
,, ಜಿಲ್ಲಾ ಚುನಾವಣೆ ಸಮಿತಿಯಲ್ಲಿ ಉಳಿದ ಹಣ	233-12-6
ಹೊಸಪೇಟೆ ನಗರ ಚುನಾವಣೆ ಸಮಿತಿಯಲ್ಲಿ ಉಳಿದ ಹಣ	185-10-9
ಬ್ಯಾಂಕಿನ ಬಡ್ಡಿ	0-8-0
ಹೊಸಪೇಟೆಯಲ್ಲಿ ಚಂದಾರೂಪವಾಗಿ	431-5-0
ಬಳ್ಳಾರಿ ಪರ್‌ಕಾಂಟ್ರ	40-0-0
	1014-7-0

ವ್ಯಯ	
ಬ್ಯಾಂಕ್ ಕಮೀರ್ಶ	0-8-0
ಟಪಾಲು ಖರ್ಚು	17-2-9
ಚಿಲ್ಲರೆ ಖರ್ಚುಗಳು	3-13-0
ಆಫೀಸಿನ ಬಾಡಿಗೆ	18-0-0
ಸ್ವದೇಶೀ ಪ್ರದರ್ಶನದಲ್ಲಿ ತೆಗೆದ ಫೋಟೋಗಳು	6-0-0
ಅಚ್ಚಿನ ಕೆಲಸ, ಸ್ಟೇಷನರಿ ಸಾಮಾನುಗಳು	13-13-0
ಪ್ರವಾಸ ಖರ್ಚು	11-10-0
ಕೆ ಪಿ. ಸಿ. ಸಿ. ಸಂಬಂಧದ ರುಸುಂ	10-0-0
ಕೆ ಪಿ ಸಿ. ಸಿಗೆ ಕೊಡಬೇಕಾದ ಹಣ [ಪ್ರಾಥಮಿಕ ಸದಸ್ಯರೊಬ್ಬರಿಗೆ 0-1-0]	315-3-0
ಶ್ರೀ ವೀರಾಸ್ವಾಮಿಯವರಿಗೆ ಖರ್ಚುಗಳಿಗಾಗಿ	5-0-0
ಶೆಟ್ಟಿ ಖಾಸಿಂಸಾಹೇಬರಿಗೆ ಡಿಪಾಜಿಟು ವಾಪಸುಕೊಟ್ಟಿ	50-0-0
ಹೊಸಪೇಟೆಯ ಪರ್‌ಕಾಂಟ್ರ	40-0-0

ನಗದು ಹಣದ ವಿವರ.

ಖಜಾನ್ಚಿ ಸಿ|| ಭದ್ರಪ್ಪನವರ ಹತ್ತಿರ	401-0-3
ಜಿ. ಕಾ. ಕ ಕಾರ್ಯದರ್ಶಿಗಳ ಹತ್ತರ	21-2-0
	422-2-3

ವ್ಯತ್ಯಾಸವ 1-3 6 [ತೀರಿಜಿನಲ್ಲಿ] ಹೆಚ್ಚಿಗೆ ಕಳುಹಿಸಿರಬಹುದು.

ಬಳ್ಳಾರಿ 8-6-39. } ಸಿ. ಸಿ. ರೆಡ್ಡಿ ಅಂಡ್ ಕೋ, ರಿಜಿಸ್ಟರು ಅಕೌಂಟೆಂಟ್ಸ್.

ಹೊಸಪೇಟೆಯಲ್ಲಿ ಖರ್ಚು

[ಜಿ. ಕಾ. ಕ. ಅಧ್ಯಕ್ಷರ ಕಡೆಯಿಂದ]

ಮುದ್ರಣ	5-12-3
ಟಪಾಲು, ಸ್ಟೇಷನರಿ	12-8-3
ಚಿಲ್ಲರೆ	21-8-0
ಪ್ರಯಾಣಕ್ಕಾಗಿ	62-10-0
	593-8-3
	420-14-9
ವಿ. ಎಂ. ಗಿರಿ, ಜಿ. ಕಾ. ಕ. ಕಾರ್ಯದರ್ಶಿ.	1014-7-0

ಈಜಿಪ್ಟ್‌ನಲ್ಲಿ ಶ್ರೀ. ಕಮಲಾದೇವಿಯವರು

ಶ್ರೀಮತಿ ಕಮಲಾದೇವಿಯವರು ಕೈರೋನಗರದಲ್ಲೀದಗ್ಗು ಅವರು ನಘದ್ ಪಕ್ಷದ ಅತಿಥಿಗಳಾಗಿ ತಮ್ಮ ಮಗನೊಡನೆ ಇಲ್ಲಿ ಕೆಲ ದಿನಗಳಿರುವರು. ಕೈರೋ ಮಹಿಳಾ ವಫದ ಸಂಸ್ಥೆಯವರು ಅವರಿಗೆ ಅದ್ಭುತ ಸ್ವಾಗತವನ್ನು ಅವರ ಗೌರವಾರ್ಥವಾಗಿ ಟೀ ಪಾರ್ಟಿಯನ್ನು ಕೊಟ್ಟರು. ಮಾ. ಅಬುಲ್ ಘಾತಹರೊಡನೆ ಅವರು ಪಾರ್ಲಿಮೆಂಟಿಗೆ ಹೋಗಿ ಅಧ್ಯಕ್ಷರನ್ನೂ, ಕೆಲ ಮಂತ್ರಿಗಳನ್ನೂ ಪರಿಚಯಮಾಡಿಕೊಂಡು ಬಂದರು.

ಹಿಂದೂಸ್ತಾನ

ಪೂನಾದ ಸುಪ್ರಸಿದ್ಧ ಹಿಂದೂ ಮುಖಂಡರಾದ ಭೋಪಟ್ಕರ್‌ರವರಿಗೆ ಹೈದರಾಬಾದು ಸತ್ಯಾಗ್ರಹದಲ್ಲಿ 28 ತಿಂಗಳ ಕಠಿಣ ಶಿಕ್ಷೆಯಾಗಿದೆ.

ಮಹಾತ್ಮ ಗಾಂಧಿಯವರು ಜೂಲೈ 2ನೇ ತಾ. ಗಡಿನಾಡಿನ ಸಂಚಾರಕ್ಕೆ ಹೊರಡಲಿರುವರು.

ಕಾಂಗ್ರೆಸ್ ಮುಖ್ಯ ಮಂತ್ರಿಗಳ ಪರಿಷತ್ತಿನಲ್ಲಿ ಜಾತೀಯ ದ್ವೇಷವನ್ನು ಹಬ್ಬಿಸುವ ವೃತ್ತಪತ್ರಿಕೆಗಳನ್ನು ಹದ್ದಿನಲ್ಲಿಡಬೇಕೆಂದು ನಿರ್ಣಯವಾಯಿತು.

ಹಿಂದೂಸ್ತಾನದ ಕೂಲಿಕಾರರನ್ನು ಹೊರಗೆ ಹಾಕುವ ಯೋಜನೆಯನ್ನು ಮುಂದೆಹಾಕಲು ಸಾಧ್ಯವಿಲ್ಲೆಂದು ಸಿಲೋನ ಸರಕಾರದವರು ಭಾರತ ಸರಕಾರದವರಿಗೆ ತಿಳಿಸಿರುತ್ತಾರೆ.

ದಿಲ್ಲಿ-ಪೆಶಾವರಗಳ ನಡುವೆ ಎಕ್ಸ್‌ಪ್ರೆಸ್ ಗಾಡಿಯು ಒಂದು ಸಣ್ಣ ಸೇತುವೆಯ ಮೇಲೆ ಹೋಗಬೇಕಾದರೆ ಅದು ಕುಸಿದುಬಿದ್ದು 10 ಜನರು ಮರಣ ಹೊಂದಿದರು. 21 ಜನರಿಗೆ ಘಾಯಗಳಾಗಿವೆಯೆಂದು ತಿಳಿದುಬಂದಿದೆ.

V. M. Giri & Sons.,
BELLARY.
Prop: M. S. ACHARYA.
Dealers in Patent medicines, Best Coffee seeds. Pure Samalkot.
GINGELLY OIL.

ಬಳ್ಳಾರಿ ನಗರ ವಾರ್ತೆಗಳು

ಶ್ರೀ ಸುಬ್ರಹ್ಮಣ್ಯಂಗಾರಿಗೆ ಸತ್ಕಾರ

ನವಸೀತ ಸಿಲಿಂಸು ಲಿಮಿಟೆಡ್ ರವರು ಗಾಂಧಿನಗರದ ನರಸಿಂಹಶಾಸ್ತ್ರಿಯವರ ಗೃಹದಲ್ಲಿ 25ನೇ ಜಾನುವಾರ ಶ್ರೀ ಸುಬ್ರಹ್ಮಣ್ಯಂಗಾರವರಿಂದ ಉದ್ಘಾಟನಾ ಸಮಾರಂಭವನ್ನು ನಡೆಪಿ ಸ್ನೇಹಿತರೂಡನೆ ಅವರನ್ನು ಉಪಾಹಾರದಿಂದ ಸತ್ಕರಿಸಿದರು. ಶಾಸ್ತ್ರಿಯವರು ಸುಬ್ರಹ್ಮಣ್ಯಂಗಾರ ದೇಶಸೇವೆಯನ್ನು ಹೊಗಳಿ ವಾಕ್ಪಟದ ಉದ್ಯೋಗಾವಶ್ಯಕತೆಯನ್ನು ಹೇಳಿದರು ಸುಬ್ರಹ್ಮಣ್ಯಂಗಾರವರು ದತ್ತಮಂಡಲದ ಜಿಲ್ಲೆಗಳಲ್ಲಿ ಇದರ ಪ್ರಚಾರವಾಗ ಬೇಕಾವಶ್ಯವೆಂದೂ, ರಾಷ್ಟ್ರೀಯ ವಿಷಯಗಳಿಗೆ ಹೆಚ್ಚು ಗಮನವೀಯಬೇಕೆಂದೂ, ಹೇಳಿ ಜಾಲಕರನ್ನು ಅಭಿನಂದಿಸಿದರು. ಅದೇ ದಿನ ರಾಯರಸೀಮೆ ಕಾರ್ಯಕಾರಿಣೀ ಸಮಿತಿಯವರು ಲಿಂಗಾರೆಡ್ಡಿಯವರ ಗೃಹದಲ್ಲಿ ಶ್ರೀ ಸುಬ್ರಹ್ಮಣ್ಯಂಗಾರವರನ್ನು ಸತ್ಕರಿಸಿ ತಮ್ಮ ಬೇಡಿಕೆಗಳನ್ನು ಮುಂದಿಟ್ಟರು. ಮಾನ್ಯ ಅತಿಥಿಗಳು ಸೂಕ್ತ ಉತ್ತರವನ್ನು ಹೇಳಿದರು.

ಕರ್ನಾಟಕ ಏಕೀಕರಣ.

ಶ್ರೀ ಆರ್. ವೆಂಕಟರೆಡ್ಡಿಯವರ ಅಧ್ಯಕ್ಷತೆಯಲ್ಲಿ ಗೆಳೆಯರಗುಂಪಿನ ಸಭೆಯೊಂದು ಪಾಂಬನೂರ್ತಿ ನೈದಾನದಲ್ಲಿ ಕಲೆತಿದ್ದಿತ್ತು. ಕರ್ನಾಟಕ ಏಕೀಕರಣ ಮಹತ್ವದಮೇಲೆ ಬಾಗಲಕೋಟೆಯ ವಕೀಲರಾದ ಶ್ರೀ ಎಸ್ ಆರ್. ಕಂಠಿಯವರು ಮಾತಾಡಿದರು. ಆರ್ಥಿಕ ವಿಷಯಗಳಿನ್ನು ಮಾತಾಡುವುದೂ, ಅವುಗಳಿಗೆ ಪ್ರಾಶಸ್ತ್ಯ ಕೊಡುವುದೂ ಈಗ ಅನವಸರ. ಕನ್ನಡಿಗರಾದ ನಾವೆಲ್ಲರೂ ಕಲೆಯಬೇಕೆಂಬ ಉದಾತ್ತ ಧ್ಯೇಯವನ್ನಿಟ್ಟುಕೊಂಡು ಸಂಸ್ಕೃತಿ ಭಾಷೆಗಳ ಅಭಿವೃದ್ಧಿಗೆ ಏಕಮುಖರಾಗಿ ಯತ್ನಿಸೋಣ ಎಂಬುದೇ ಸಾರಾಂಶ. ಶ್ರೀ ಬಿ ವಿ. ಶೇಷಗಿರಿರಾಯರು ರಾಯರಸೀಮೆ ಚಳವಳಿಬಗ್ಗೆ ಇದ್ದ ತಪ್ಪು ತಿಳುವಳಿಕೆಯನ್ನು ದೂರವಾಡಿ ಆದರ ಉದ್ದೇಶವು 5 ಜಿಲ್ಲೆಗಳ ಆರ್ಥಿಕ ಸುಧಾರಣೆಯೆಂದು ಮನವರಿಕೆಮಾಡಿದರು. ಶ್ರೀ ಷಡಕ್ಷರಶಾಸ್ತ್ರಿಗಳು ಕರ್ನಾಟಕ ಏಕೀಕರಣವು ಅತಿ ಆವಶ್ಯಕವೆಂದೂ, ರಾಯರಸೀಮೆ ಚಳವಳಿಯಲ್ಲಿ ಅರ್ಥವಿಲ್ಲೆಂದೂ. ಕೃಷ್ಣದೇವರಾಜರ ಸಾಮ್ರಾಜ್ಯವು ಅತಿದೊಡ್ಡದಿತ್ತೆಂತಲೂ ಹೇಳಿದರು. ಯಜಮಾನ ವಾಂತರು ದ್ರಪ್ಪನವರು ರಾಯರಸೀಮೆಯ ಚಳವಳಿ ಪುರಸ್ಕರ್ತರು ಆಂಧ್ರದಲ್ಲೂ ಇಲ್ಲ. ಕನ್ನಡದಲ್ಲೂ ಇಲ್ಲ. ತ್ರಿಶಂಕು ಸ್ವರ್ಗದಲ್ಲಿದ್ದಾರೆಂದು ಹೇಳಿ ಏಕೀಕರಣಕ್ಕೂ, ಪ್ರತ್ಯೇಕಾಂಧ್ರ ಪ್ರಾಂತ್ಯಕ್ಕೂ ಬೆಂಬಲಕೊಡಬೇಕೆಂದರು.

ಬಳ್ಳಾರಿ ತಾಲೂಕು ವಿದ್ಯಾ ಸಮಿತಿ

ಈ ಸಭೆಯು ಟ್ರೇನಿಂಗ್ ಶಾಲೆಯಲ್ಲಿ 27ನೇ ತಾ ಸಾಯಂಕಾಲ 5 ಘಂಟೆಗೆ ಶ್ರೀ ಎಸ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಸೊಮ್ಮನಹಾಳು ಹರಿಜನ ಶಾಲೆಯ ಯಜಮಾನಿಕೆಯು ಯಂ. ಅಂಜನಪ್ಪನವರಿಗೆ ಹೋಯಿತು. ಯರ್ರಗುಡಿ, ಹೊನ್ನಪಳ್ಳಿ ಸಾಂಡಗಳ ಶಾಲೆಗಳು ಮುಚ್ಚಲ್ಪಟ್ಟಿದ್ದರಿಂದ ಮುಂಜೂರಾತಿಯು ಹಿಂತೆಗೆದುಕೊಳ್ಳಲಾಯಿತು. ಬಳ್ಳಾರಿ ಕಂಬ್ಲಿ ಬಜಾರದ ರಾಮಾಂಜನೇಯ ಶಾಲೆಯಲ್ಲಿ 5 ನೇ ತರಗತಿ ಮುಂಜೂರಾಯಿತು.

(1939 ನೆಯ ಡಿಶಂಬರ್‌ದಲ್ಲಿ ಕೂಡುವ)

ಕಾಂಗ್ರೆಸ್ ಮಹಾಧಿವೇಶನ

ಇದೇ ಡಿಶಂಬರ್ ಕೊನೆಯಲ್ಲಿ ಕೂಡುವ ಕಾಂಗ್ರೆಸ್ ಅಧಿವೇಶನದ ವೇಳಾಪತ್ರಿಕೆಯನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಈಕೆಳಗಿನಂತೆ ನಿರ್ಧರಿಸಿದ್ದಾರೆ.

(1) ಪ್ರಾಥಮಿಕ ಸದಸ್ಯರನ್ನು ಮಾಡುವ ಕೊನೆಯ ತಾರೀಖು 15 ನೆಯ ಸೆಪ್ಟಂಬರು 1939.

(2) ಮಹಾಧಿವೇಶನಕ್ಕೆ ಪ್ರತಿನಿಧಿಗಳ ಚುನಾವಣೆ 8ನೆಯ ನವಂಬರು 1939.

(3) ಮಹಾಧಿವೇಶನಕ್ಕೆ ಅಧ್ಯಕ್ಷರ ನಾಮನಿರ್ದೇಶ 15ನೆಯ ನವಂಬರು 1939 ವರೆಗೆ.

(4) ಅಧ್ಯಕ್ಷರನ್ನು ಮತ್ತು ಎ. ಐ. ಸಿ. ಸಿ. ಸದಸ್ಯರನ್ನಾರಿಸಲು ಪ್ರತಿನಿಧಿಗಳ ಸಭೆಕೂಡುವ ದಿನ 29ನೆಯ ನವಂಬರು 1939.

(5) ಅಧ್ಯಕ್ಷರ ಆಯ್ಕೆಯನ್ನು ಪ್ರಕಟಿಸುವ ದಿನ 3ನೆಯ ಡಿಶಂಬರು 1939.

ಖಾದಿ ಧಾರಣದ ನಿಯಮವನ್ನು ಉಲ್ಲಂಘಿಸಿದವರ ವಿಷಯಕ್ಕೆ ವರ್ಕಿಂಗ್ ಕಮಿಟಿಗೆ ಅನೇಕ ತಕರಾರುಗಳು ಬಂದಿವೆ. ನಿಯಮವನ್ನು ಪಾಲಿಸದಿದ್ದವರು ಯಾವ ಚುನಾವಣೆಗಳಿಗೂ ನಿಲ್ಲಲಿಕ್ಕೆ ಬರುವುದಿಲ್ಲ. ಇದನ್ನು ಖಂಡಿತ ತಿಳಿಯಬೇಕು.

ರೈತ ಋಣವಿಮೋಚನೆಯ ಕಾಯ್ದೆ

ಸಾಲಗಳು ಶೇಕಡ 46-9ರಷ್ಟು ಕಡಮೆಯಾದವು.

ರೈತ ಋಣವಿಮೋಚನೆಯ ಕಾಯ್ದೆಯು ಜಾರಿಯಲ್ಲಿ ಬಂದನಂತರ 13 ತಿಂಗಳುಗಳಲ್ಲಿ ಅಂದರೆ ಮಾರ್ಚ್ 1939ರ ಅಖೈರುವಳಿಗಾಗಿ 286 ಲಕ್ಷ ರೂ ಗಳಷ್ಟು ಸಾಲವು. 152 ಲಕ್ಷ ರೂ. ಗಳಾಯಿತು. ಕಾಯ್ದೆಯ ಅನೇಕ ನಿಬಂಧನೆಗಳನ್ನನುಸರಿಸಿ ಹೀಗೆ ಕಡಮೆಯಾಯಿತು.

ಈ ವರ್ಷದ ವಳಗಾಗಿ ಹಣ ಕೊಟ್ಟ ಸಾಹುಕಾರರು ಸಾಲವಂದಿಗ ರೊಡನೆ ರಾಜಿಮಾಡಿಕೊಂಡು ತಮ್ಮ ಅಸಲು ಬಡ್ಡಿಯನ್ನು ಕಡಮೆಮಾಡಿಕೊಂಡ ಅನೇಕ ಅಂಶಗಳು ಸರಕಾರದ ಗಮನಕ್ಕೆ ಬಂದಿಲ್ಲ.

ಬಳ್ಳಾರಿ ಆರ್ಥಿಕ ಸಭೆ.

ಕುಡಿಯುವ ನೀರಿನ ದೊಡ್ಡ ಸಮಸ್ಯೆ

ಹೊಸದಾಗಿ ಅಧಿಕಾರ ಸೂತ್ರಗಳನ್ನು ವಹಿಸಿದ ಕಲೆಕ್ಟರವರಾದ ಮಿ॥ ಕ್ರಾಂಬಿಯವರ ಅಧ್ಯಕ್ಷತೆಯಲ್ಲಿ 29 ನೇ ತಾ. ಜಿಲ್ಲಾ ಆರ್ಥಿಕಸಭೆಯು ಕೂಡಿದ್ದಿತು. ಜಿಲ್ಲಾಬೋರ್ಡು ಎಂಜಿನಿಯರ್‌ರವರಾದ ದುರಾನಿಯವರು ಕುಡಿಯುವ ನೀರಿನ ಸಮಸ್ಯೆಬಗ್ಗೆ ಒಂದು ರೇಖನವನ್ನು ಬರೆದುತಂದಿದ್ದರು. ಮದ್ರಾಸ್ ಸಾನ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಬಾಪಿನೀಡುರವರು ಔದ್ಯೋಗಿಗಳ ಅಭಿವೃದ್ಧಿಗೆ ಸಾಧಕವಾಗುವ ಉಪಾಯಗಳನ್ನು ಹೇಳಿದರು. ಕಲೆಕ್ಟರವರು ಅವರನ್ನು ವಂದಿಸಿ ಜಿಲ್ಲೆಯಲ್ಲಿ ಸ್ಥಾಪಿಸಬಹುದಾದ ಪ್ರದರ್ಶನದ ವಿಚಾರಕ್ಕೆ ಬರುವ ಮೀಟಿಂಗಿನಲ್ಲಿ ಇದು ನಿರ್ಧರಿಸಲ್ಪಡಬಹುದೆಂಬಂಶವನ್ನು ಹೇಳಿದರು. ಈ ಜಿಲ್ಲೆಯಲ್ಲಿ ಕಂಬಳಿ-ಬಳೆ ಉದ್ಯೋಗಗಳ ಅಭಿವೃದ್ಧಿಗೆ ಸಹಾಯಮಾಡುತ್ತಿರುವಂಶವು ಸಭಿಕರ ಗಮನಕ್ಕೆ ತರಲಾಯಿತು. ಇದಾದನಂತರ ಶ್ರೀ ಬಾಪಿನೀಡುರವರು ಹೊರಟರು.

ಕುಡಿಯುವ ನೀರು

ದುರಾನಿಯವರು — ಬಳ್ಳಾರಿ ಜಿಲ್ಲಾ ಹಳ್ಳಿಗಳಲ್ಲಿನ ನೀರಿನ ಕಷ್ಟವನ್ನು, ಅದರಲ್ಲಿಯೂ ಎರೆ ಭೂಮಿ ಪ್ರದೇಶಗಳಲ್ಲಿನ ಕಷ್ಟವನ್ನೂ ವಿವೇಚಿಸಿ ಸದ್ಯಕ್ಕೆ ನೀರು ಸಿಗುವ ಪ್ರದೇಶಗಳನ್ನು ಋಣಕ್ಕೆಗ ತೆಗೆದುಕೊಂಡು ಹಣ ಒದಗಿದಂತೆಲ್ಲಾ ನೀರಿನ ಸೌಕರ್ಯವನ್ನು ಅಭಿವೃದ್ಧಿ ಪಡಿಸಬೇಕೆಂದರು ಎಂಜಿ-, ಮತ್ತು ಪಂಪುಗಳ ಸಹಾಯದಿಂದೊದಗುವ ನೀರಿನ ಸೌಲಭ್ಯವಿಲ್ಲದಿರುವ ಸ್ಥಳಗಳಲ್ಲಿ ಸೇದುವ ಭಾವಿಯೇ ಶ್ರೇಷ್ಠವೆಂದರು. ತುಂಬುವ ಭಾವಿಗಳೆಲ್ಲಾ ಸೇದುವ ಭಾವಿಗಳಾಗಬೇಕು. ಜಿಲ್ಲಾ ಜೋಡ್ರು, ಲೇಬರ್ ಆಫೀಸರವರು. ಆಲ್ ಇಂಡಿಯಾ ಗ್ರಾಮ ಇಂಡಸ್ಟ್ರೀಸ್ ಅಸೋಸಿಯೇಷನ್ ಕಲೆಕ್ಟರವರು ಇದಲ್ಲದೆ ಹಳ್ಳಿಗಳಲ್ಲಿರುವ ದಾನಶೂರರ ಭಾವಿಗಳನ್ನು ತೆಗೆಯುವ ಕಾರ್ಯವನ್ನು ಕೈಗೊಂಡಿರುತ್ತಾರೆ. ಇದರಿಂದ ಅತಿ ಖರ್ಚು ವ್ಯಯವಾಗದ್ದಲಿಪೆ ಈ ಕಾಮಗಾರಿಗಳನ್ನೆಲ್ಲಾ ಒಂದು ಮಾಡಿದರೆ ಕೂಲಿ ಆಳುದೊರೆ, ಮತ್ತು ಜೀವನವಿರದ ಪ್ರದೇಶಗಳಲ್ಲಿಯೂ, ಹಸರು ಹುಲ್ಲಿನ ಪ್ರದೇಶಗಳಲ್ಲಿಯೂ ಒಳ್ಳೆಯ ನೀರು ಬೀಳುವುದು ಹಳ್ಳಿಗಳು, ಜನಸಂಖ್ಯೆ, ನೀರಿನ ನಗೈರಿ ವಿವರಗಳನ್ನೆಲ್ಲಾ ಮೊದಲೇ ಒದಗಿಸಬೇಕು.

ಶ್ರೀ ಬಿ. ಭೀಮರಾಯರು—

10 ವರ್ಷದ ನೀರಿನ ಪೂರೈಕೆಯ ಯೋಜನೆಯ ಸಂಬಂಧ ಮೊದಲನೆಯ ಕಂತಾಗಿ 18000 ಈ ಜಿಲ್ಲೆಗೆ ಬಂದಿದೆ, ಯಾವ ಯಾವಕೆಲಸಗಳಲ್ಲಿ ವಿನಿಯೋಗವಾಗಿರುವುದು ನಮಗೆ ತಿಳಿದಿಲ್ಲ. ಇದು ತಿಳಿಯಬೇಕು. ಯಾವ ಯಾವ ಹಳ್ಳಿಗಳಲ್ಲಿ ಅತಿ ಆವಶ್ಯಕವಿದೆಯೋ, ಅಲ್ಲಿ ಭಾವಿಗಳನ್ನು ಮೊದಲು ತೆಗೆಸಬೇಕು.

ಕಲೆಕ್ಟರ್‌ರವರು-ಇವಕ್ಕೊಪ್ಪಿದರು ಮತ್ತು ಭಾವಿಗಳನ್ನು ತೆಗೆಸಬಹುದಾದ ಹಳ್ಳಿಗಳ ಪಟ್ಟಿಯನ್ನು ಬರುವ ಮೀಟಿಂಗಿನಲ್ಲಿಡುವೆಂದರು

ಹಗರಿಯಿಂದ—ಬಳ್ಳಾರಿಗೆ ಬರುವ ನೀರಿನ ಪಂಪಿನಿಂದ [illegible]

ನೀರು ಒದಗಿಸುವುದರ ಕೊರತು ಜಾಸ್ತಿಯಾಯಿತು. ಬಳ್ಳಾರಿ ನಗರಕ್ಕೇ ನೀರುಸಾಲದೆ ಯಿರುವ ಕಾರಣ ಈ ಪ್ರಶ್ನೆಯು ಈಗ ಸಾಧ್ಯನಲ್ಲಿಂದು. ಜರವೂಫ್ ಸಾಹೇಬರು ಹೇಳಿದರು. ಹಳ್ಳಿಗಳಲ್ಲಿ ಸುಲಭವಾಗಿ ಸಹಾನೆಪ್ಪದ ಸಹಾಯವನ್ನು ಪೊರಕಿಸಲ್ಪ ಜರ್ಜಿಯಾಗಿ ಹಳ್ಳಿಗರಿಗೆ ಪ್ರಾಥಮಿಕ ಚಿಕಿತ್ಸೆಯಲ್ಲಿ ಶಿಕ್ಷಣ ಕೊಡಬೇಕೆಂದು ಸೂಚಿತವಾಯಿತು

ಜಿಲ್ಲಾ ಹರಿಜನ ಸಲಹಾ ಸಮಿತಿ.

29-6-39

ಅಧ್ಯಕ್ಷರು—ಮಿ॥ ಕ್ಯಾಂಬಿ ಕಲೆಕ್ಟರ್

ಹಾಜರಿದ್ದ ಸದಸ್ಯರು—

೧) ಶ್ರೀ, ಟಿ. ಬಿ. ಕೇಶವರಾವ್, (೨) ಡಿ ಗೋವಿಂದದಾಸ್ [೩] ಹೆಚ್. ಸೀತಾರಾಮರೆಡ್ಡಿ.

೧) ಹತ್ತು ಭಾವಗಳನ್ನು ತೆಗೆಸುವ ವಿಷಯ

ಜಿ. ಕಾರ್ಯದರ್ಶಿಗಳು ಹತ್ತು ಭಾವಿಗಳನ್ನು ನಿರ್ಭಾರ್ಯಮಾಡಿದ್ದರು. ೫ ಭಾವಿಗಳನ್ನು ಕಲೆಕ್ಟರವರು ಅಂಗೀಕರಿಸಿ ಎಸ್ಟಿಮೇಟುಗಳನ್ನು ತಯಾರಿಸಲು ಆಜ್ಞಾಪಿಸಿದರು.

೨) **ಮೋರಗೆರೆ ಹರಿಜನರಿಗೆ ಭಾವಿ** ಇದನ್ನು ೧೦ ವರ್ಷದ ಸ್ಕೀಮಿನಲ್ಲಿ ಸೇರಿಸಿವೆನೆ. ಆದಷ್ಟು ಶೀಘ್ರವಾಗಿ ಈ ಕೆಲಸನಮಾಡುತ್ತೇವೆ. ನೀವು ಹೇಳಿದಂತೆ ಅಲ್ಲಿಯನರಿಗೆ ಹಿಂದೂಭಾವಿಯಹತ್ತರ ನೀರು ಹಾಕಲು ಇಬ್ಬರನ್ನೇರ್ಪಡಿಸಬೇಕೆಂದ ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೆ ಬರೆಯುತ್ತೇವೆ.

೩) **ಹೊಳಗುಂದಿ** ಪಬ್ಲಿಕ್ ಲ್ಯಾಟ್ರಿನ್ ಇದನ್ನು ತೆಗೆಸಬೇಕೆಂಬುದನ್ನು ಒಪ್ಪುತ್ತೇನೆ.

೪) **ಬಳ್ಳಾರಿ ಕೆಸಗುಡಿಸುವವರಿಗೆ - ಕೋಟೆಗಳಿಗೆ** ಮನೆ ಕಟ್ಟಿಕೊಳ್ಳಲು ಜಾಗಾ ಮಂಜೂರಿಸುವಂತೆ ಮುನಿಸಿಪಾಲಿಟಿಯವರು ಒದಗಿಸಬೇಕು. ಅವರಿಗೆ ಬರೆಯಲಾಗುತ್ತದೆ.

೫) **ನಾರಾಯಣದೇವರಕೆರೆ ಹರಿಜನರ ಗೋಳು**- ರಿಸರ್ವ್ ಲ್ಯಾಂಡು, ಲಬ್ಬಿಯನರ ಹಿಂಸೆ, ರೆಡ್ಡಿಯವರು ತೆಗೆಮಕೊಳ್ಳುವ ಉಚಿತ ಕೆಲಸ [Forced Labour] ಹರಿಜನರಿಗೆ ಬೇಕಾದ ಎರಡು ಸಾಯುಪಾನಿಗಳು ಈ ವಿಷಯ ವಿಚಾರಿಸಿ ತಕ್ಕ ಚರ್ಯೆ ತೆಗೆದುಕೊಳ್ಳಲಾಗುತ್ತದೆ.

೬) **ಕುಡುತಿನಿ ಹರಿಜನರು ನಿರವಣಿಗೆ**

ಜಿಲ್ಲಾ ಸೂಪರಿಂಟೆಂಡೆಂಟರು ತಕ್ಕ ಚರ್ಯೆ ತೆಗೆದು ಕೊಳ್ಳುವರು.

ರಾಗಿ ಮಸಲವಾಡದ ತಾಂಡ ಭಾವಿ

ಈ ವಿಷಯವನ್ನು ಜಿಲ್ಲಾ ಆರ್ಥಿಕ ಸಭೆಯವರು ಪೂರ್ಣವಾಗಿ ಆಲೋಚಿಸಿ ಕೆಲಸಮಾಡುವರು.

ವಿಜಾಪುರ ಭವನ ಕಾಫಿ ಕ್ಲಬ್

[ರಿಜಿಸ್ಟರ್ಡ್]

ಶಾಖೆಗಳು—

ಕಾಫಿ ಕ್ಲಬ್ ಬೆಂಗಳೂರು ರೋಡ್

ಊಟ ವಸತಿಗೃಹ ಬ್ರಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪದಲ್ಲಿ ತಯಾರಿಸಿದ ಸಿಹಿಫಾರದ ಫಲಹಾರವಸ್ತುಗಳು.

ಒಳ್ಳೆಯ ಊಟದ ವ್ಯವಸ್ಥೆ. ಧಾರಾಳವಾಗಿ ಗಾಳಿ, ಬೆಳಕು, ಬದುವ ಮಹಡಿಯ ಮೇಲಿನ ಕೊಠಡಿಗಳು ಆಧುನಿಕ ವ್ಯವಸ್ಥೆ

ಒಂದು ಸಲ ಬಂದು ಪರೀಕ್ಷಿಸಿರಿ.

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ

4 ದಿನಗಳ ಸಭೆ

ಬೊಂಬಾಯಿ

ಸುಮಾರು 300 ಸದಸ್ಯರು ಬಂದಿದ್ದರು. ಸುಂದರವಾಗಿ ಅಲಂಕೃತವಾದ ಮಂಟಪವಲ್ಲಿ 'ವಂದೇ ಮಾತರಂ' ಹಾಡಿದನೆಲೆ ಅಧ್ಯಕ್ಷರಾದ ಬಾಬೂರಾಜೇಂದ್ರರು ದೀರ್ಘವಾದ ಭಾಷಣವನ್ನು ಮಾಡಿ ಈಗ ದೇಶದಲ್ಲಿ ಉಂಟಾಗಿರುವ ಉಗ್ರಪರಿಸ್ಥಿತಿಯನ್ನೆದುರಿಸಲು ಕಾಂಗ್ರೆಸ್ಸಿನಲ್ಲಿ ಏಕಮತ್ಯವೂ, ಶಿಸ್ತು ಇರಬೇಕೆಂದು ಒತ್ತಿ ಹೇಳಿದರು.

ಅಧ್ಯಕ್ಷರ ಹೇಳಿಕೆಯ ಸಾರಾಂಶ.

ಅಂತರಾಷ್ಟ್ರೀಯ ಪರಿಸ್ಥಿತಿ ಮತ್ತು ಒಳಜಗಳ

ಪರಿಸ್ಥಿತಿಯು ಕ್ರೂರವಾಗಿದೆ ಮುಂದೆ ಮಹಾ ಯುದ್ಧವಾಗಬಹುದು. ಆಗಿನ ಪರಿಸ್ಥಿತಿಗೆ ಜನತೆಯನ್ನು ಸಿದ್ಧಪಡಿಸಬೇಕಾಗಿದೆ. ಕಾಂಗ್ರೆಸ್ಸಿನಲ್ಲಿ ಒಳ ಜಗಳವು ತಲೆಹಾಕಿದೆ. ಇದಕ್ಕೆ ನಾವು ಹೆಚ್ಚು ಗಮನಕೊಡಬೇಕಾದುದರಿಂದ ನಮ್ಮ ಚಳವಳಿಯು ದುರ್ಬಲವಾಗುತ್ತಲಿದೆ. ನಮ್ಮನ್ನು ಸುಂಗಲು ಬರುತ್ತಿರುವ ಈ ವಿಪತ್ಕಾರಕ ಪರಿಸ್ಥಿತಿಯಿಂದ ಪಾರಾಗಬೇಕಾದರೆ ನಮ್ಮ ಭಿನ್ನಾಭಿಪ್ರಾಯಗಳನ್ನು ಮೂಲೆಗಿಟ್ಟು ಒಂದಾಗಬೇಕು. ಇದರ ಜವಾಬ್ದಾರಿಯನ್ನು ಹೊತ್ತಿರುವ ವರ್ಕಿಂಗ್ ಕಮಿಟಿಗೆ ಸಹಕಾರ ಒದಗಿಸಬೇಕು. ಭರತಖಂಡವು ಯುದ್ಧಕ್ಕೆಳೆಯಲ್ಪಡದಂತೆ ನೋಡಿಕೊಳ್ಳಬೇಕಾ. ಬ್ರಿಟಿಶ ಸರ್ಕಾರದವರು ಇಂತಿಯಾವಲ್ಲಿ ತಮ್ಮ ಕೈಬಲಪಡಿಸಿಕೊಂಡಿರುವರು. ಯುದ್ಧ ಪ್ರೊದಗಿದರೆ, ನಮ್ಮನ್ನು ದುರುಪಯೋಗಮಾಡಿಕೊಳ್ಳಬಹುದು. ಅದನ್ನು ತಡೆಯಲನುವಾಗಬೇಕು

ದೇಶೀ ಸಂಸ್ಥಾನಗಳು.

ಸಂಸ್ಥಾನಗಳಲ್ಲಿ ಪರಿಸ್ಥಿತಿಯು ಹದಗೆಟ್ಟಿದೆ. ರಾಜರೂ, ಅವರ ಸಲಹೆಗಾರರೂ, ಕ್ರೂರ ದಬ್ಬಾಳಿಕೆಗೆ ಕೈ ಹಚ್ಚಿರುವರು. ದೇಶೀ ಸಂಸ್ಥಾನಗಳ ಚಳುವಳಿಯು ಭಾರತದ ಅಖಂಡ ಸ್ವಾತಂತ್ರ್ಯ ಚಳುವಳಿಯ ಅಂಗವೆಂಬುದು ವರ್ಕಿಂಗ್ ಕಮಿಟಿಗೆ ಗೊತ್ತು. ಅದು ತ್ರಿಪುರಿ ನಿರ್ಣಯದಂತೆ ಅನುಸರಿಸಿಕೊಂಡುಬರುತ್ತಿದೆ. ಸಾಮ್ರಾಜ್ಯ ಸರ್ಕಾರದ ನೀತಿಯು ಈ ವಿಷಯದಲ್ಲಿ ಖಂಡನೀಯವಾಗಿದೆ.

ಸಂಯುಕ್ತ ರಾಜ್ಯಘಟನೆ.

ಬ್ರಿಟಿಶರು ಫೆಡರೇಷನ್-ಯಾ ಸಂಯುಕ್ತರಾಜ್ಯಘಟನೆ ,ಆಚರಣೆಗೆ ತರಲಿ, ತರದಿರಲಿ ಅದು ಬಂದರೆ ಧ್ವಂಸಮಾಡಿ ಗುರಿಮುಟ್ಟೋಣ ಎಂದು ಕಾದು ಕುಳಿತುಕೊಳ್ಳುವುದು ಬೇಡ. ಬ್ರಿಟಿಶ ಸರ್ಕಾರದವರು ಏನೇ ನಾಡಲಿ, ಮಾಡದಿರಲಿ - ನಮ್ಮವರ ಇಡೀ ವಿಶ್ವಶಾಂತಿಯ ಮತ್ತು ಸ್ವಾತಂತ್ರ್ಯದ ದೃಷ್ಟಿಯಿಂದ ನಾವು ಕೆಲಸ ಮಾಡಬೇಕು.

ಜಾತೀಯ ಭಾವನೆ, ಕಾಂಗ್ರೆಸ್ ಶುದ್ಧಗೊಳಿಸುವಿಕೆ, ಶಿಸ್ತುವಗೈರೆ

ವಿಷಯಗಳಲ್ಲಿ ಕಾಂಗ್ರೆಸ್‌ನ ಅಭಿಪ್ರಾಯಗಳನ್ನು ತಿಳಿಯುಹೇಳಿದರು.

ನಿರ್ಣಯಗಳು.

(1) ಸಿಲೋನಿನೂ. ಭಾರತಕ್ಕೂ ಪೂರ್ವಸಂಬಂಧವಿದೆ. ಅದು ಇಂಡಿಯಾವ ಒಂದು ಭಾಗವೆಂದು ಪರಿಗಣಿಸಲ್ಪಟ್ಟಿದೆ. ಈಗ ಅದು ಭಾರತೀಯ ಕೆಲಸಗಾರರನ್ನು ಹೊರಗೆ ಕಳುಹಿಸುವ ನಿಶ್ಚಯವನ್ನಾಡಿರುವುದು ವಿಷಾದಕರವಾಗಿದೆ. ಇದರಬಗ್ಗೆ ಒಪ್ಪಂದಮಾಡಲು ಪಂಡಿತ ಜವಾಹರಲಾಲನೆಹರುಯವರನ್ನು ಕಾಂಗ್ರೆಸ್ ರಾಯಭಾರಿಗಳಾಗಿ ಕಳುಹಿಸುವದಾಗಿ ನಿಶ್ಚಯವಾಗಿದೆ.

(2) ದಕ್ಷಿಣ ಆಫ್ರಿಕದಲ್ಲಿ ಭಾರತೀಯರನ್ನು ಪ್ರತ್ಯೇಕಗೊಳಿಸುವ ಶಾಸನವನ್ನುಮಾಡಲು ಕೈಹಾಕಿರುವುದಕ್ಕೆ ಈ ಸಮಿತಿಯು ವಿಷಾದವನ್ನು ವ್ಯಕ್ತಪಡಿಸಿ ಆ ಘೋರಣೆಯನ್ನು ಖಂಡಿಸುತ್ತದೆ.

(3) ಕಾಂಗ್ರೆಸ್ ಪ್ರಾಥಮಿಕ ಸದಸ್ಯರಿಗೆ ವೋಟಿನ ಹಕ್ಕಿರಬೇಕಾದರೆ ಕನಿಷ್ಟಕ್ಕೆ ಅವರು ಹಿಂದೆ 12 ತಿಂಗಳಕಾಲ ಕಾಂಗ್ರೆಸ್ ಸದಸ್ಯರಾಗಿದ್ದುದು ದೃಢಪಡಬೇಕು.

(4) ಎ. ಐ. ಸಿ. ಸಿ. ಸದಸ್ಯರನ್ನಾಗಿ ಆರಿಸುವ ವಿಧಾನವು ಪೂರ್ವದಲ್ಲಿದ್ದಂತೆಯೇ ಇರಬೇಕು.

(5) ಪರದೇಶಿ ವಸ್ತ್ರಗಳನ್ನು, ಬ್ರಿಟಿಶ ವಸ್ತುಗಳನ್ನು ಅಥವಾ ಮಾದಕ ಪದಾರ್ಥಗಳನ್ನು ಮಾರುವವರೂ, ಮದ್ಯವನ್ನು ಸೇವಿಸುವವರೂ, ಯಾವ ಕಾಂಗ್ರೆಸ್ ಸಮಿತಿಗೂ ಆರಿಸಲ್ಪಡಕೂಡದು.

ಕಾಂಗ್ರೆಸ್ ಘಟನೆಗೆ ಸೂಚಿಸಲ್ಪಟ್ಟ ತಿದ್ದುಪಡಿ ಳೆಲ್ಲಾ ಬಿದ್ದುಹೋಗಿ ವರ್ಕಿಂಗ್ ಕಮಿಟಿಯ ಮೂಲ ನಿರ್ಣಯಗಳು ಅಂಗೀಕೃತವಾದುವು.

[6] ಯಾವ ಕಾಂಗ್ರೆಸ್ ಸದಸ್ಯನಾಗಲಿ ಪ್ರಾಂತೀಕ ಕಾಂಗ್ರೆಸ್ ಸಮಿತಿಯ ಅಪ್ಪಣೆ ಇಲ್ಲದೆ ಬ್ರಿಟಿಶ ಪ್ರಾಂತಗಳಲ್ಲಿ ಯಾವ ಸತ್ಯಾಗ್ರಹದಲ್ಲೂ ಭಾಗವಹಿಸಬಾರದು ಸತ್ಯಾಗ್ರಹವನ್ನು ಏರ್ಪಡಿಸಬಾರದು.

ಈ ನಿರ್ಣಯವನ್ನು ಸರ್ದಾರ ವಲ್ಲಭಭಾಯಿ ಪಟೇಲರು ಸೂಚಿಸಿ ಬಾಷಣದಿಂದ ಪುಷ್ಟಿಗೊಳಿಸಿದರು. ಶ್ರೀ ಸುಭಾಸಚಂದ್ರಬೋಸ್, ರಾಮ ಮನೋಹರ ಲೋಹಿಯಾ, ಸ್ವಾಮಿ ಸಹಜಾನಂದ ಪ್ರೊ. ರಂಗ ಇವರು ವಿರೋಧಿಸಿದರು. ಪರವಾಗಿ ಡಾ. ಗಿಜ್ವಾನಿ, ತಿರುಮಲರಾವ್, ಶ್ರೀರಾಮ ಚರಿತ್ರಸಿಂಗ್‌ರವರು ಮಾತಾಡಿದರು.

(ಮುಂದಿನ ಪುಟವನ್ನು ನೋಡಿರಿ.)

(ಹಿಂದಿನ ಪುಟದಿಂದ)

ಭೂಲಾಭಾಯಿ ದೇಸಾಯಿಯವರೂ, ಸರ್ವಾರ್ ಪಟೇಲರೂ ಮಾತಾಡಿದ ನೇಲೆ, ನಿರ್ಣಯವು 130 ವಿರುದ್ಧ 60 ಮತಗಳಿಂದ ಪಾಸಾಯಿತು.

(7) ಪ್ರಾಂತೀಕ ಕಾಂಗ್ರೆಸ್ ಸಮಿತಿ. ಕಾಂಗ್ರೆಸ್ ಪಾರ್ಟಿ ಮತ್ತು ಕಾಂಗ್ರೆಸ್ ಮಂತ್ರಿವರ್ಗಗಳಲ್ಲಿ ಸಹಕಾರವಿರಬೇಕು. ಭಿನ್ನಾಭಿಪ್ರಾಯಗಳಿಂದ ಕಾಂಗ್ರೆಸ್ ಪ್ರತಿಭೆಯು ಕುಂದುವುದು. ಆಡಳಿತ ವಿಚಾರಗಳಲ್ಲಿ ಪ್ರಾಂತೀಕ ಸಮಿತಿಗಳು ಮಂತ್ರಿವರ್ಗದವರಿಗೆ ತೊಂದರೆ ಕೊಡಬಾರದು. ಆದರೆ ಯಾವ ವಿಷಯಕ್ಕಾದರೂ ಪ್ರಾಂತೀಕ ಸಮಿತಿಯವರು ಗುಸ್ತಾವಾಗಿ ಬರೆದು ತಿಳಿದುಕೊಳ್ಳಬಹುದು. ಮಂತ್ರಿವರ್ಗದಲ್ಲೂ, ಪ್ರಾಂತೀಕ ಸಮಿತಿಗಳಲ್ಲೂ ಭಿನ್ನಾಭಿಪ್ರಾಯವಾಗುವುದಾದರೆ ಅದು ಪಾರ್ಲಿಮೆಂಟರಿ ಸಬ್ ಕಮಿಟಿಗೆ ಒಪ್ಪಿಸಲ್ಪಡಬೇಕು. ಇಂಥಾ ವಿಷಯಗಳನ್ನು ಸಾರ್ವಜನಿಕವಾಗಿ ಚರ್ಚಿಸಬಾರದು.

ಬಳ್ಳಾರಿ
ವೀರಶೈವ ಶಾಲೆಯಲ್ಲಿ

ಪ್ರಾಥಮಿಕ ವರ್ಗಗಳಿಗೂ ಸುಂಕ

ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘದ ಸಭೆಯಲ್ಲಿ ವೀರಶೈವ ಶಾಲೆಯ ಪ್ರಾಥಮಿಕ ೫ನೇ ವರ್ಗದಿಂದಲೂ 'ಫೀ'ಯನ್ನು ವಿಧಿಸಬೇಕೆಂಬ ನಿರ್ಣಯವು ದುಃಖದಾಯಕವಾಗಿದೆ. ವೀರಶೈವ ಶಾಲೆಯು ಮೊದಲನೇ ತರಗತಿಯು ಎಲಿಮೆಂಟರೀ ಶಾಲೆ. ಇದಕ್ಕೆ ಸರಕಾರದವರು ಗ್ರಾಂಟುಕೊಡುತ್ತಾರೆ ಕನ್ನಡವನ್ನು ಮಾತೃಭಾಷೆಯಾಗುಳ್ಳ, ಕನ್ನಡಾಭಿಮಾನಿಗಳೆಲ್ಲಾ ಜಾತಿ ಪಂಥದ ಪರಿವೆಯಿಲ್ಲದೆ ಅಭ್ಯಸಿಸುತ್ತಿರುವರು ಇದು ಹೆಸರಿಗೆ ವೀರಶೈವ ಶಾಲೆಯಾದರೂ ಹಲವು ಜನ ಬಾಲ ಬಾಲಕಿಯರಿಗೂಕೂಡ ಇದರಲ್ಲಿ ಪ್ರವೇಶವುಂಟು. ಜಿಲ್ಲೆಯ ಗ್ರಾಂಟು ಶಾಲೆಗಳಲ್ಲಿ ಇದಕ್ಕೆ ಪ್ರಥಮ ಶ್ರೇಣಿಯ ಸ್ಥಾನವಿದ್ದು ಅಭಿವೃದ್ಧಿಯ ಸ್ಥಿತಿಯಲ್ಲಿದೆ.

ಹೀಗಿದ್ದು ಜಿಲ್ಲೆಯ ಯಾವ ಎಲಿಮೆಂಟರೀ ಶಾಲೆಗಳಲ್ಲೂ ಪ್ರಾಥಮಿಕ ವರ್ಗಗಳಿಗೆ ಸುಂಕವಿಲ್ಲದಿರುವಾಗ ಇವರು ಹೀಗೆ ವಿಧಿಸಿರುವುದು ಕನ್ನಡ ಭಾಷಾಭಿವೃದ್ಧಿಗೆ ಕುಠಾರ ಪ್ರಾಯವಾಗಿದೆ. ಬಳ್ಳಾರಿ ನಗರದಲ್ಲಿ ರಂಗನಾಥಂ ಶಾಲೆಯ ವಿನಹ ಕನ್ನಡವನ್ನು ಎಲ್ಲಿಯೂ ಕಲಿಸುವುದಿಲ್ಲ. ಬಳ್ಳಾರಿಯಲ್ಲಿ ಕನ್ನಡ ಅಭ್ಯಾಸಕ್ಕೆ ಇರುವ ತೊಂದರೆಗಳನ್ನು ಇಡೀ ಕರ್ನಾಟಕವೇ ಮನಗಂಡಿದೆ. ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘದವರು ಕನ್ನಡಾಭಿಮಾನಿಗಳಾಗಿ ಭಾಷಾಸೇವೆಯ ದೃಷ್ಟಿಯಿಂದ ಈ ಶಾಲೆಯನ್ನು ನಡೆಸುತ್ತಿರುವುದು ಎಲ್ಲರಿಗೂ ತಿಳಿದ ಅಂಶವಾಗಿದೆ. ಖರ್ಚುಗಳು ವಿಶೇಷವಿದ್ದು ಆದಾಯ ಕಡಮೆ ಇರಬಹುದು. ಆದರೆ ಅವರು ಇತರ ಅನಾವಶ್ಯಕ ಖರ್ಚುಗಳನ್ನು ಕಡಮೆಮಾಡಿ ಪ್ರಾಥಮಿಕ ವರ್ಗಗಳಿಗೆ ವಿಧಿಸಿರುವ 'ಫೀ'ಯನ್ನು ರದ್ದುಮಾಡಿ ಕನ್ನಡ ಕಲಿಯಲು ಪ್ರೋತ್ಸಾಹಿಸಬೇಕೆಂದು ಕೋರುತ್ತೇನೆ. ಸಂಬಂಧಿಸಿದ ಅಧಿಕಾರಿಗಳು ಈಕೆಳಗಿನ ಅಂಶಗಳನ್ನು ಗಮನಿಸಬೇಕು.

(1) ಮದ್ರಾಸು ಪ್ರಾಂತ್ಯದಲ್ಲಿ ಅನಿವಾರ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಉಚಿತರೂಪವಾಗಿ ಕೊಡಲು ಸರಕಾರದ ಯೋಜನೆ ಇದೆ.

(2) ಪ್ರಾಥಮಿಕ ಶಾಲೆಗಳಲ್ಲಿ (rlementary Schools.) ಪ್ರಾಥಮಿಕ ವರ್ಗಗಳಿಗೆ ಎಲ್ಲಿಯೂ ಸುಂಕವು ವಿಧಿಸಲ್ಪಟ್ಟಿಲ್ಲ.

(3) ಬಳ್ಳಾರಿ ನಗರದಲ್ಲಿಯ ತೆಲುಗು ಪ್ರಾಥಮಿಕ ಶಾಲೆಗಳಲ್ಲಿ, ಹಿಂದೂಮಾಡಲ ಸ್ಕೂಲ, ಟ್ರೈನಿಂಗ್ ಸ್ಕೂಲು, ಮತ್ತು ಇತರ ಗ್ರಾಂಟು ಶಾಲೆಗಳಲ್ಲೆಲ್ಲಾ ಪ್ರಾಥಮಿಕ 1ನೆಯ ತರಗತಿಯಿಂದ ೫ನೆಯ ತರಗತಿಗೆ ಅಂದರೆ ಫಸ್ಟ್‌ಫಾರಂಗೆ ಬರುವವರೆಗೆ ಶಾಲೆಯ ಸಂಬಳವಿಲ್ಲ

ಭಾಷಾಭಿಮಾನಿ.

ಪಂ|| ನೆಹರೂರವರ ತಿರೋ೯ ಯಾತ್ರೆ

ತಿರೋಡ ಮುಖ್ಯ ಮಂತ್ರಿಗಳಾದ ಬ್ಯಾರ್ಜಯತಿಲಕರವರಿಗೆ ಕಾಂಗ್ರೆಸ್ ಅಧ್ಯಕ್ಷರಾದ ಬಾಬೂರಾಜೇಂದ್ರರು ಕಾರುಮಾಡಿ ಒಪ್ಪಂದಕ್ಕಾಗಿ ನೆಹರೂರವರು ಜುಲೈ 15 ನೆಯ ತಾ. ವಿಮಾನದಿಂದ ಬರುವರೆಂದು ತಿಳಿಸಿದ್ದರು. ಅದಕ್ಕೆ ಜಯತಿಲಕರವರು ಸಂತೋಷವನ್ನು ವ್ಯಕ್ತಮಾಡಿ ಸ್ವಾಗತ ಕೊಡಲಾಗುವುದೆಂದು ತಿಳಿಸಿರುವರು. ನೆಹರೂರವರು 15 ನೆಯ ಜುಲೈ ವಿಮಾನದಲ್ಲಿ ಹೊರಟು ಅಲ್ಲಿಗೆ 16 ನೆಯ ತಾ. ತಲಪುವರು.

ಅಂಬಾ ಭವನ ಕಾಫೀ ಕ್ಲಬ್

(ರಿಜಿಸ್ಟರ್ಡ್)
ಮತ್ತು
ಶಾಖೆ:— **ಊಟದ - ಹೋಟೆಲ್**
ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪದಲ್ಲಿದೆ. ಶುದ್ಧತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾಳಿ ಬೆಳಕು ಮತ್ತು ಇತರ ಅನುಕೂಲಗಳಿರುವ ಕೊಠಡಿಗಳು; ಭೋಜನ ಸಮಾರಂಭ ಟೀಪಾರ್ಟಿಗಳ ಏರ್ಪಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆ ಮಾಡುವೆವು.

ಪ್ರೊಪ್ರಯಿಟರ್ಸು—
ಕೆ. ಕೆಟ್ಟಯ್ಯ, ಬೆಟ್. ಕರಿಬಸಪ್ಪ.

ಸಂಸ್ಥಾನ ಸತ್ಯಾಗ್ರಹ.

ಲೇ:- ಮಹಾತ್ಮ ಗಾಂಧಿ.

"ಅವಶ್ಯ ಕವಿದ್ದರೆ ಸಂಸ್ಥಾನ ಪ್ರಜೆಗಳು ತಮ್ಮ ಬೇಡಿಕೆಗಳನ್ನು ತಗ್ಗಿಸಬೇಕೆಂಬ ನಾನಿತ್ತ ಬುದ್ಧಿವಾದದ ವಿಚಾರದಲ್ಲಿ ನನಗೆ ಒಬ್ಬರು ಈರೀತಿ ಬರೆದಿದ್ದಾರೆ:— ಜನರು ಎಲ್ಲಿಯವರೆಗೆ ಹೋಗಬೇಕು? ಜಯಪುರದ ಪ್ರಜೆಗಳ ಬೇಡಿಕೆಯನ್ನು ನೀವೇ ನಿರ್ಧರಿಸಿದರಲ್ಲವೇ? ಅದರಲ್ಲಿ ನೀವೇನು ಕಡಿಮೆ ಮಾಡಲ್ಯುಪಲೋಚಿಸಿದ್ದೀರಿ?" ನನ್ನ ಭಾಷೆಯ ಅರ್ಥವನ್ನು! ಸರಿಯಾಗಿ ಗ್ರಹಿಸಿದ್ದರೆ ಈ ಪ್ರಶ್ನೆಯೇ ಏಳುತ್ತಿರಲಿಲ್ಲ. ಒಂದನೆಯದಾಗಿ ನಾನು ಅವಶ್ಯ ಕವಿದ್ದರೆ ಎಂಬ ವಿಧಿಯನ್ನು ಹಾಕಿದ್ದೇನೆ. ಎರಡನೆಯದಾಗಿ, ಯಾವ ಯಾವ ಸಂಸ್ಥಾನಗಳಲ್ಲಿ ಜನರು ತಾವು ಕೇಳುವ ಅಧಿಕಾರಗಳನ್ನು ಚಲಾಯಿಸಲು ಸಿದ್ಧರಾಗಿದ್ದಾರೆ. ಮತ್ತು ಅದನ್ನು ಆರ್ಜಿಸಲು ಮಾಡಬೇಕಾದ ತ್ಯಾಗಕ್ಕೆ ಸಿದ್ಧರಾಗಿದ್ದಾರೋ ಅಲ್ಲೆಲ್ಲ ಬೇಡಿಕೆಯನ್ನು ತಗ್ಗಿಸುವ ವಿಚಾರವೇ ಇಲ್ಲ ಎಂದು ಗಾಂಧೀಜಿಯವರು ತಿಳಿಸಿದ್ದಾರೆ.

ಗಾಂಧೀಜಿಯವರು ಮುಂದುವರಿಯುತ್ತ ಈರೀತಿ ಬರೆದಿದ್ದಾರೆ"ನಾನು ತಪ್ಪು ಮಾಡಬೇಡಿದ್ದಿದ್ದರೆ ರಾಜಕೋಟೆಯ ಜನರು ಬಯಸಿದ್ದು ಲಭಿಸುತ್ತಿತ್ತೆಂದು ತಿಳಿಯುವುದು ತಪ್ಪು. ನನ್ನ ತಪ್ಪು ಒಪ್ಪಿಕೂಳ್ಳಲ್ಪಟ್ಟಿದೆ. ಆದರೆ ರಾಜಕೋಟೆ ಠಾಕೂರರು ಹೊರಡಿಸಿದ ಸುಪ್ರಸಿದ್ಧ ಪ್ರಕಟಣೆಯು ಫಲಿಸದೆಹೋದುದಕ್ಕೆ ನನ್ನ ತಪ್ಪು ಕಾರಣವೆಂದು ತಿಳಿಯಬಾರದು. ನಾನು "ಕೆಟ್ಟ ರೀತಿಯಲ್ಲಿ" ವರ್ತಿಸಿದುದರಿಂದ ನೀತಿ-ಪತನವಾಗಿದೆಯೆಂದು ಹೇಳುವುದರಲ್ಲಿ ಅರ್ಥವಿಲ್ಲ ಸತ್ಯಾಗ್ರಹದಲ್ಲಿ ನೀತಿ ಪತನವೇ ಬುದ್ಧಿಇಲ್ಲ. ರಾಜಕೋಟೆಯಿಂದ ಸಂಸ್ಥಾನಗಳ ಕೆಲಸಗಾರರು ಲಾಭಪಡೆಯಬೇಕಾಗಿದ್ದರೆ ಅದರ ವಿಚಾರವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು. ನಾನು ರಾಜಕೋಟೆಗೆ ಹೋಗುವುದಕ್ಕೆಮುಂಚೆ ನರೇಂದ್ರರುಏನುಮಾಡುತ್ತಿದ್ದರುಅವರು ಸಂಸ್ಥಾನದ ಪ್ರಜೆಗಳ ಚಳುವಳಿಕ್ಕಾರವಾಗುತ್ತಿದೆಯೆಂದಾ ಅವನ್ನು ಮಟ್ಟಹಾಕುವುದು ತಮ್ಮ ಕರ್ತವ್ಯವೆಂದಾ ಎಣಿಸಿ ಆ ಕಾರ್ಯಕ್ಕಾಗಿ ಏನು ಮಾಡಬೇಕೆಂಬ ವಿಚಾರದಲ್ಲಿ ತಮ್ಮ ತಮ್ಮೊಳಗೇ ಸಮಾಲೋಚನೆ ನಡೆಸುತ್ತಿದ್ದರು. ಲಿಂಬಿಡಿಯ ಸಂಸ್ಥಾನವು ಏನು ಮಾಡಿತೆಂಬುದನ್ನು ನಾವು ಬಲ್ಲೆವು. ಮುಸ್ಲೀಮರ್ದು,ಗಿರಾಸಿಯನರು ಮತ್ತು ಹಿಂದುಳಿದ ಪಹಾಡದವರನ್ನು ಸಹ ಕಾಂಗ್ರೆಸ್ಸಿನಮೇಲೆ ಏತ್ತಿ ಕಟ್ಟಬೇಕೆಂಬ ಮಾತು ಆಗಿತ್ತು. ನನ್ನ ಕಾರ್ಯಕ್ರಮದಿಂದ ಈ ಆಪತ್ಕಾಲಸಂಬಂಧವುಬಯಲಿಗೆ ಬಂತು. ರೋಗವನ್ನು ನಿಜವಾಗಿ ಭೇದಿಸಿದರೆ ಅದಕ್ಕೆ ಮುಖ್ಯಾಲುಭಾಗ ಚಿಕಿತ್ಸೆಯಾದಂತೆಯೇ. ಬೇರೆ ಬೇರೆ ಜನರು ಒಂದಾಗದಂತೆ ಮಾಡಲು ಸಂಸ್ಥಾನಗಳ ಜನರು ಮಾರ್ಗಗಳನ್ನು ಕಂಡುಹಿಡಿಯಲು ಇಂದು ಶಕ್ತರಾಗಿದ್ದಾರೆ. ಇದರ ಅರ್ಥವಿಷ್ಟೆ. ಕಾಂಗ್ರೆಸ್ಸಿನವರಾಗಲಿ, ಸತ್ಯಾಗ್ರಹಿಗಳಾಗಲಿ ತಮಗೆ ವಿರುದ್ಧವಾಗಿ ನಿಂತಿರುವವರನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಲು ಶಕ್ತರಾಗಬೇಕೆಂಬುದು ಬೇರೆಮಾತಿನಲ್ಲಿ ಹೇಳುವುದಾದರೆ, ನಾನು ರಾಜಕೋಟೆಯಲ್ಲಿ ನನ್ನ ತಪ್ಪನ್ನು ಒಪ್ಪಿಕೊಂಡು, ಸತ್ಯಾಗ್ರಹಿಗಳಿಗೆ ನಿಜವಾದ ಮಾರ್ಗ ತೋರಿಸಿಕೊಟ್ಟಿದ್ದೇನೆ.ಅದನ್ನು ಅನುಸರಿಸುವಾಗ ಅವರು ತಮ್ಮ ತತ್ಕಾಲದ ಬೇಡಿಕೆಗಳನ್ನು ಕಡಿಮೆಮಾಡುವುದು ಅಗತ್ಯವಾಗಿ ತೋರಿಬರಬಹುದು. ಆದರೆ ಹಾಗೆ ಮಾಡುವುದರಿಂದ ಅವರು ಬೇಗನೆ ತಮ್ಮ ಗುರಿಯಕಡೆಗೆ ಹೋಗುವರು. ಜಯಪುರದಂತಹ ವಿಚಾರಗಳೆಲ್ಲಂತೂ ಬೇಡಿಕೆಯನ್ನು ತಗ್ಗಿಸುವಪ್ರಶ್ನೆಯೇ ಇಲ್ಲ. ಅಲ್ಲಿನ ಜನರಬೇಡಿಕೆಯು ತೀರ ಕನಿಷ್ಠ ಪ್ರಮಾಣದ್ದಾಗಿದೆ.

ಇನ್ನೊಬ್ಬರು ಮಹಾತ್ಮರಿಗೆ ಬರೆಯುತ್ತ "ಸಂಧಾನದ ಮೂಲಕ ನಾವು ಕೆಲಸಮಾಡಬೇಕೆಂದು ನೀವು ನಿರೀಕ್ಷಿಸುವಿರಿ. ಆದರೆ, ಎಮರುಗಡೆಯವರಲ್ಲಿ ಸಂಧಾನಕ್ಕೆ ಅಪೇಕ್ಷಣೀಯಬರದಿದ್ದರೆ, ಮತ್ತು ಸ್ವಾತಂತ್ರ್ಯಾಪೇಕ್ಷಿಗಳನ್ನು ಅವಮಾನಕ್ಕೆ ಗುರಿಮಾಡುವುದೇ ಅವರ ಅಪೇಕ್ಷೆಯಾಗಿದ್ದರೆ ಏನು ಮಾಡಬೇಕು? ಎಂದು ಕೇಳಿದ್ದಾರೆ. ಅದಕ್ಕೆ ಗಾಂಧೀಜಿಯವರು ಉತ್ತರವೀಯುತ್ತ "ಅಧಿಕಾರಿಗಳು ಸಂಧಾನಕ್ಕೆ ಇಷ್ಟಪಡದೆ ಇರುವುದಕ್ಕೆ ಅವರ ಅಲಕ್ಷ್ಯವೇ ಕಾರಣವಿರಬಹುದು. ಆಥವಾ ಸ್ವಾತಂತ್ರ್ಯಾಪೇಕ್ಷಿಗಳಲ್ಲಿ ಅವರಿಗೆ ನಂಬಿಕೆ ಯಿಲ್ಲದಿರಬಹುದು. ಈ ಎರಡು ಸಂದರ್ಭಗಳಲ್ಲೂ ಸದ್ಭಿಲ್ಲದೆ ದುಡಿಯುವುದೇ ಪರಮೌಷಧ" ಎಂದು ತಿಳಿಸಿದ್ದಾರೆ.

ಆಂಧ್ರ ಪ್ರಾಂತ ನಿರ್ಮಾಣವು ಶೀಘ್ರದಲ್ಲಾಗಬೇಕು

ಅಖಿಲ ಭಾರತ ಕಾಂಗ್ರೆಸ್ ಕಮಿಟೀ ಸಭೆಯಲ್ಲಿ ಆಂಧ್ರಪ್ರಾಂತ್ಯವನ್ನು ನಿರ್ಮಿಸಲು ಶೀಘ್ರ ಉಪಾಯಗಳನ್ನು ಕೈಗೊಳ್ಳಬೇಕೆಂಬ ನಿರ್ಣಯವನ್ನು ಶ್ರೀರಾಮುಲುಯವರು ತಂದಿದ್ದರು. ಅದು ಸರ್ವಾನುಮತದಿಂದ ಪಾಸಾಯಿತು.

ಕರ್ನಾಟಕ ಪ್ರಾಂತ

ಕಾಮ್ರೇಡ ಕುರ್ತಕೋಟಿಯವರು ಒಂದು ಉಪಸೂಚನೆಯನ್ನು ತಂದು ಮೂಲ ತರಾವಿನಲ್ಲಿ ಕರ್ನಾಟಕ ಪ್ರಾಂತವನ್ನೂ ಜೋಡಿಸಬೇಕೆಂದರು. ಅದನ್ನು ನಿಯಮ ಬಾಹ್ಯಮಾಡಲು ಶ್ರೀ ಕಾಳೇಶ್ವರರಾಯರು ಕೇಳಿದರು. ಅಧ್ಯಕ್ಷರಾದ ರಾಜೇಂದ್ರಪ್ರಸಾದರು ನಿಯಮ ಬಾಹ್ಯಮಾಡಿದರು. ಶ್ರೀ. ಕುರ್ತಕೋಟಿಯವರು ಕಾಂಗ್ರೆಸ್ ಭಾಷಾವಾರು ಸ್ಥಾಂತೀಕರಣಕ್ಕೆ ಮಾನ್ಯಕೊಟ್ಟದ್ದು, ಒಂದೇ ಪ್ರಾಂತ್ಯಕ್ಕೆ ಪ್ರಾಶಸ್ತ್ಯಕೊಡುವುದು. ಸರಿಯಾದುದಲ್ಲವೆಂದೂ, ಆ ತರಾವನ್ನು ಹಿಂದೆ ಗೆದುಕೊಳ್ಳಬೇಕೆಂದೂ ಬೇಡಿಕೊಂಡರು. ಆದರೆ ಅದು ಸಾರ್ಥಕವಾಗಲಿಲ್ಲ. ಆಂಧ್ರಪ್ರಾಂತದ ತರಾವು ಪಾಸಾಯಿತು.

ಆಂಗ್ಲೊ-ಜರ್ಮನ್ ನೌಕಾ ಒಪ್ಪಂದ

ಇದು ಮುಕ್ತಾಯವಾಗಿದೆ. ಇದು ತತ್ವತ್ವದ ಸೂಚನೆಯಲ್ಲವೆಂದೂ, ತಾವುಹೊಸ ಒಪ್ಪಂದನಮಾಡಿಕೊಳ್ಳಲು ಸಿದ್ಧರಿರುವುದಾಗಿಯೂ ಬ್ರಿಟಿಶರು ಜರ್ಮನಿಗೆ ಬರೆದಿರುತ್ತಾರೆ.

ನವಭಾರತ

ಎಸ್.ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ನೇಷ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ ವೆಸ್ಟ್ ಎಂಡ್ ಸಾಚಿಗಳೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಮ್ಮೆಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

Sarada Ink. [Regd]

Awarded Gold edal and Certificate of er" at the All India Swadeshi Exhibition Bellary.

For Fountain Pens and Steel Pens.

Blue Black, Red, Blue, Green & Violet

SARADA INK WORKS, (Regd.)

K. V. & Sons, BELLARY.

ಶಾರದಾ ಇಂಕ್ (ರಿಜಿಸ್ಟರ್ಡ್)

ಬಳ್ಳಾರಿ ಅಖಿಲ ಭಾರತ ಸ್ವದೇಶಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನೂ, ಯೋಗ್ಯತಾ ಪತ್ರವನ್ನೂ ಪಡೆದಿದೆ ಫೌಂಟನ್‌ಪೆನ್ನುಗಳಿಗೂ, ಇತರ ಲೇಖನಿಗಳಿಗೂ, ಉಪಯೋಗಿಸಲು ಶ್ರೇಷ್ಠವಾದ ಬ್ಲೂ-ಬ್ಲಾಕ್ ಕೆಂಪು, ನೀಲಿ ಹಸರು, ವೈಲೆಟ್ ವಗೈರೆ ಬಣ್ಣಗಳಲ್ಲಿ ದೊರೆಯುತ್ತದೆ

ಕೆ. ವಿ. ಅಂಡ್ ಸನ್ಸು, ಬಳ್ಳಾರಿ

Patent medicines, Tonics, injections
Ayurvedic Preparations &
Oilman stores —Moderate Rates
Trial earnestly solicited.

M. S. V. Bros,

Car Street, **BELLARY.**

ಇಂಗ್ಲೀಷ್ ಔಷಧಗಳು, ಇಂಜೆಕ್ಷನ್ ಮತ್ತು ಇತರ ಆಯುರ್ವೇದೀ ಔಷಧಗಳು, ಸ್ಟೇಷನರಿ ವಗೈರೆ ಸುಲಭ ಬೆಲೆಯಲ್ಲಿ ದೊರೆಯುತ್ತವೆ.

ಎಂ. ಎಸ್. ವಿ. ಬ್ರದರ್ಸ್,

ತೇರು ಬೀದಿ, ಬಳ್ಳಾರಿ.

The Lakshmi Medical Stores.

Chemists & Druggists, Car Street, Bellary.

ದಿ ಲಕ್ಷ್ಮೀ ಮೆಡಿಕಲ್ ಸ್ಟೋರ್ಸ್

ಔಷಧಾಲಯ ತೇರು ಬೀದಿ, ಬಳ್ಳಾರಿ.

ನಮ್ಮಲ್ಲಿ ಇಂಗ್ಲೀಷ್ ಔಷಧಗಳು, ಇಂಜೆಕ್ಷನ್, ಆಂಪೂಲ್ಸ್, ಟಿಂಕ್ಚರ್ಸ್, ಶಸ್ತ್ರ ಚಿಕಿತ್ಸೆಗೆ ಬೇಕಾಗುವ ಶಸ್ತ್ರಗಳು, ಆಸ್ಪತ್ರೆಯ ಬೇಡಿಕೆಗಳು ಮತ್ತು ಅಸಂಬದ್ಧದ ಔಷಧಗಳೆಲ್ಲಾ ದೊರೆಯುತ್ತವೆ.

ವಿವಿಧ ವರ್ಗದ 'ಲಕ್ಷ್ಮೀ-ಸಿರಪ್' ಸಾನಗಳನ್ನು ನಾವು ತಯಾರಿಸುತ್ತೇವೆ ನಮ್ಮ ಔಷಧಾಲಯವು ದಿನ ರಾತ್ರಿಯೆಲ್ಲಾ ತೆಗೆದಿರುತ್ತದೆ. ದರಗಳು ಸುಲಭ ಪರೀಕ್ಷಿಸಿ ತೃಪ್ತಿ ಹೊಂದಿರಿ.

NAVA BHARAT, BELLARY.

(With which is incarporated 'Congress Bulletin')

The leading Nationalist Weekly.

'ನವ ಭಾರತ ಬಳ್ಳಾರಿ.

[ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.]

The Rates of Subscription.	ಚಂದಾ ವಿವರ
Annual	ವರ್ಷ
Local 1—8—0	ಸ್ಥಳದವರಿಗೆ 1-8-0
Moffusil 2—0—0	ಪರಸ್ಥಳದವರಿಗೆ 2-0-0
Half Yearly	6 ತಿಂಗಳು
Local 1—0—0	ಸ್ಥಳದವರಿಗೆ 1-0-0
Moffusil 1—4—0	ಪರಸ್ಥಳದವರಿಗೆ 2-0-0

Nava Bharat, Bellary.

REG. NO. M. 3937.

Sri ——

Printed at Vittal Press, Car Street Edited & Published by T. B. Keshava Rao
BELLARY.